# ಕರ್ನಾಟಕ ವಿಧಾನ ಪರಿಷತ್ತು

(158ನೆಯ ಮುಂದುವರೆದ ಅಧಿವೇಶನ)

ಮಂಗಳವಾರ, 10ನೇ ಮಾರ್ಚ್ 2026

## ವಿಷಯಾನುಕ್ರಮಣಿಕೆ (INDEX)

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

812 – **ಅವಳಿ ಜಿಲ್ಲೆಗಳಲ್ಲಿ ಪೂರಕ ಕೈಗಾರಿಕೆಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಿರುವ ಬಗ್ಗೆ.**
- ಶ್ರೀ ಪಿ.ಹೆಚ್. ಪೂಜಾರ್
- ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)
- ಶ್ರೀ ಶಿವಾನಂದ ಎಸ್ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

741 – **ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳಿಗೆ ಅತ್ಯಲ್ಪ ದರದಲ್ಲಿ ಸೈಟ್‌ಗಳನ್ನು ಮಂಜೂರು ಮಾಡಿರುವ ಬಗ್ಗೆ.**
- ಶ್ರೀ ಡಿ.ಎಸ್. ಅರುಣ್
- ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

806 – **ರಾಜ್ಯದಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳ ಬಗ್ಗೆ.**
- ಶ್ರೀ ಸಿ.ಟಿ. ರವಿ
- ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

731 – **ಹಜ್ ಇಲಾಖೆಯಿಂದ ಯಾತ್ರಿಕರ ಆಯ್ಕೆ ಮತ್ತು ಸೌಲಭ್ಯಗಳ ಕುರಿತು.**
- ಶ್ರೀ ಕೆ. ಅಬ್ದುಲ್ ಜಬ್ಬರ್
- ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

755 – **ಬೀದರ್ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ.**

– ಡಾ॥ ಎಂ.ಜಿ. ಮುಳೆ

– ಶ್ರೀ ಶರಣಬಸಪ್ಪ ದರ್ಶನಾಪೂರ (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು)

778 – **ಇಂದಿರಾ ಕ್ಯಾಂಟೀನ್‌ಗಳ ಸ್ಥಿತಿ ಅಯೋಮಯವಾಗಿರುವ ಬಗ್ಗೆ.**

– ಶ್ರೀ ಜಗದೇವ್ ಗುತ್ತೇದಾರ್

– ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)

771 – **ಬಳ್ಳಾರಿ ವಿಮಾನ ನಿಲ್ದಾಣ ಕುರಿತು.**

– ಶ್ರೀ ವೈ.ಎಂ. ಸತೀಶ್

– ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

864 – **ವಿಜಯಪುರ ಮಹಾನಗರದ ಸಂಚಾರ ದಟ್ಟಣೆ ಕುರಿತು.**

– ಶ್ರೀ ಕೇಶವ ಪ್ರಸಾದ್ .ಎಸ್

– ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)

813 – **ಕಲಬುರಗಿ ಮಹಾನಗರ ಪಾಲಿಕೆಯ ನೀರಿನ ಸರಬರಾಜು ಕಾಮಗಾರಿ ಕುರಿತು.**

– ಶ್ರೀ ಸುನೀಲ್ ವಲ್ಯಾಪುರ್

– ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)

842 – **ಸಿಂಧನೂರು ತಾಲ್ಲೂಕಿನಲ್ಲಿ " ಜವಳಿ ಪಾರ್ಕ್" ಅನ್ನು ನಿರ್ಮಿಸುವ/ಸ್ಥಾಪಿಸುವ ಬಗ್ಗೆ.**

– ಶ್ರೀ ಬಸನಗೌಡ ಬಾದರ್ಲಿ

– ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

835 – **ಬೆಳಗಾವಿ ನಗರದ ಬಸವನ ಕುಡಚಿಯ ದೇವರಾಜ್ ಅರಸ್ ಬಡಾವಣೆಯ ಮಹಾಲಕ್ಷ್ಮೀ ನಗರದ ಮೂಲಭೂತ ಸೌಕರ್ಯ ಅಭಿವೃದ್ಧಿ ಕುರಿತು.**

– ಡಾ॥ ತಳವಾರ್ ಸಾಬಣ್ಣ

– ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು)

747 – **ರಾಜ್ಯದಲ್ಲಿ ಹಲಸಿನ ಬೆಳೆ ಸಂರಕ್ಷಣೆ ಕುರಿತು.**

– ಶ್ರೀ ಸಿ.ಎನ್. ಮಂಜೇಗೌಡ

– ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

೨೨ – **ಕೌಶಿಕ ಗ್ರಾಮದ ಗ್ರಾಮಸ್ಥರಿಗೆ ಕುಡಿಯುವ ನೀರು ಕಲುಷಿತವಾಗಿರುವ ಬಗ್ಗೆ.**
- ಶ್ರೀ ಸೂರಜ್ ರೇವಣ್ಣ
- ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

೮೨೭ – **ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗವಕಾಶ ನೀಡದಿರುವ ಬಗ್ಗೆ.**
- ಶ್ರೀ ಎಂ.ಎಲ್. ಅನಿಲ್ ಕುಮಾರ್
- ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

೮೨೯ – **ತೆಂಗು ಬೆಳೆ ಕುರಿತು.**
- ಶ್ರೀ ರಮೇಶ್ ಬಾಬು
- ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ನಿಯಮ ೫೮ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು.**

**ಅ) ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹಾಳಾಗಿರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸುವ ಮೂಲಕ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಬಗ್ಗೆ.**
- ಶ್ರೀ ರಾಮೋಜಿ ಗೌಡ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಆ) ರಾಜ್ಯಾದ್ಯಂತ ಸರ್ಕಾರಿ ವೈದ್ಯರು ಮುಷ್ಕರ ನಡೆಸದಂತೆ ಅವರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ರೋಗಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸುವ ಬಗ್ಗೆ.**
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಇ) ಗ್ರಾಮ ಪಂಚಾಯಿತಿಗಳಿಗೆ ಪಂಚಾಯತ್ ರಾಜ್ ಕಾಯ್ದೆಯನ್ವಯ ತೆರಿಗೆ ಸಂಗ್ರಹಿಸಲು ಅನುವು ಮಾಡಿಕೊಡುವ ಬಗ್ಗೆ.**
- ಶ್ರೀ ಟಿ.ಎನ್. ಜವರಾಯಿಗೌಡ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಈ) ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಂದಿಗನ ಹಳ್ಳಕ್ಕೆ ಸೇರುತ್ತಿರುವ ಶೌಚಾಲಯ ಮತ್ತು ಕಲುಷಿತ ನೀರನ್ನು ತಡೆಗಟ್ಟಿ, ನೀರನ್ನು ವೈಜ್ಞಾನಿಕ ಕ್ರಮಗಳ ಮೂಲಕ ಶುದ್ಧೀಕರಿಸುವ ಬಗ್ಗೆ.**

– ಶ್ರೀ ಎಫ್.ಹೆಚ್. ಜಕ್ಕಪ್ಪನವರ್

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಉ) ರಾಜ್ಯದ ಕಾನೂನು–ಸುವ್ಯವಸ್ಥೆಯನ್ನು ಕಾಪಾಡುವ ಪೋಲೀಸರಿಗೆ ಬಾಕಿ ಉಳಸಿಕೊಂಡಿರುವ ಸಂಬಳವನ್ನು ಬಿಡುಗಡೆ ಮಾಡುವ ಬಗ್ಗೆ.**

– ಶ್ರೀ ಡಿ.ಎಸ್. ಅರುಣ್

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಊ) ಮಡಿಕೇರಿ ತಾಲ್ಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಕಾಡಾನೆ ದಾಳಿಗೆ ಬಲಿಯಾದವರಿಗೆ ಪರಿಹಾರ ಘೋಷಿಸುವ ಮತ್ತು ಕಾಡಾನೆಗಳನ್ನು ಸೆರೆ ಹಿಡಿಯುವ ಬಗ್ಗೆ.**

– ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)

– ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**ಋ) ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದಲ್ಲಿ ಕಾರ್ಖಾನೆಗಳ ಮಾಲಿನ್ಯದಿಂದ ಕಾಯಿಲೆಗೆ ತುತ್ತಾದವರಿಗೆ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ತಪಾಸಣೆಗೊಳಪಡಿಸುವ ಬಗ್ಗೆ.**

– ಶ್ರೀಮತಿ ಹೇಮಲತಾ ನಾಯಕ್

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಎ) ಮಂಗಳೂರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸಿ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ

**ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)**

**ಏ) ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಆಯವ್ಯಯದಲ್ಲಿ ಅನುದಾನವನ್ನು ಕಾದಿರಿಸುವ ಬಗ್ಗೆ**

– ಶ್ರೀ ಎಸ್ವ್.ವಿ. ಸಂಕನೂರ

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಐ) ಸಿಂಧನೂರು ತಾಲ್ಲೂಕಿನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮುಂಜಾಗ್ರತೆ ವಹಿಸಿ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ.**

– ಶ್ರೀ ಬಸನಗೌಡ ಬಾದರ್ಲಿ

– ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**೩. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಮತ್ತು ಅಧಿಕಾರಿಗಳ ಕುರಿತು.**

**೪. ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**೫. ನಿಯಮ ೫೯ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**“ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ ಮಂಡಳಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸುಮಾರು ೨.೮೫ ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.”**

– ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

**(ನಿಯಮ ೩೩೦ಕ್ಕೆ ಪರಿವರ್ತಿಸಲಾಯಿತು)**

**೬. ನಿಯಮ ೩೩೦ರ ಮೇರೆಗೆ ಚರ್ಚೆ.**

**ಅ) ರಾಜ್ಯ ರಾಜಧಾನಿಯಾದ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣವನ್ನು ಅಂತರಾಷ್ಟ್ರೀಯ ಬಸ್ ನಿಲ್ದಾಣದ ಮಾದರಿಯಲ್ಲಿ ಮರು ಅಭಿವೃದ್ಧಿಪಡಿಸುವ ಕುರಿತು.**

– ಶ್ರೀ ಎಂ. ನಾಗರಾಜು

– ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು)

**೭. ಗಮನ ಸೆಳೆಯುವ ಸೂಚನೆಗಳು.**

**ಅ) ಕರ್ನಾಟಕ ಗೇರು ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 7ನೇ ವೇತನ ಆಯೋಗದ ವರದಿ ಜಾರಿಯಾಗದ ಕಾರಣ ವೇತನ ಹಾಗೂ ಇತರೆ ಭತ್ಯೆಗಳು ಸಿಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕುರಿತು.**

– ಶ್ರೀ ಐವನ್ ಡಿ‘ಸೋಜಾ

– ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

**೮. ನೋಡಲ್ ತಾಲ್ಲೂಕುಗಳಲ್ಲಿ ನಡೆಯುವ ಸಮಿತಿ ಸಭೆಗಳಿಗೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರನ್ನು ಆಹ್ವಾನಿಸದಿರುವ ಬಗ್ಗೆ.**

– **ಶ್ರೀ ರಮೇಶ್ ಬಾಬು**

**೯. ವಿತ್ತೀಯ ಕಾರ್ಯಕಲಾಪ**

**೨೦೨೬–೨೭ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ.**

– ಶ್ರೀ ಐವನ್ ಡಿ‘ಸೋಜಾ

– ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

– ಶ್ರೀ ಕೆ.ಎಸ್. ನವೀನ್

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**10. ಗಮನ ಸೆಳೆಯುವ ಸೂಚನೆಗಳು**

**ಅ) ಆಸಿಡ್ ದಾಳಿಗೊಳಗಾದ ಸಂತ್ರಸ್ಥೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ, ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿಯನ್ನು ಒದಗಿಸುವ ಕುರಿತು.**

- ಶ್ರೀ ಕೆ. ಶಿವಕುಮಾರ್
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀಮತಿ ಹೇಮಲತಾ ನಾಯಕ್
- ಡಾ: ಉಮಾಶ್ರೀ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಡಾ॥ ಜಿ. ಪರಮೇಶ್ವರ್ (ಗೃಹ ಸಚಿವರು)
- ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)
- ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಪಿ.ಹೆಚ್. ಪೂಜಾರ್

**11. ನಿಯಮ ೩೩೦ರ ಮೇರೆಗೆ ಚರ್ಚೆ**

**ಅ) ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯ (ಮೈಸೂರು ಬ್ಯಾಂಕ್ ಬಳಿ) ಒಂದನೇ ತಿರುವಿನಲ್ಲಿ ಆಸ್ಪತ್ರೆ ರಸ್ತೆಗೆ ಹೋಗುವ ದಾರಿಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಕಾನೂನು ಬಾಹಿರವಾಗಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆಗಳ ಕುರಿತು.**

- ಶ್ರೀ ರಮೇಶ್ ಬಾಬು
- ಡಾ॥ ಜಿ. ಪರಮೇಶ್ವರ್ (ಗೃಹ ಸಚಿವರು)

**ಇ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ ದಟ್ಟಣೆ, ಕಾನೂನು ಸುವ್ಯವಸ್ಥೆ ಮತ್ತು ಕ್ರಿಮಿನಲ್ ಪ್ರಕರಣಗಳ ಸಮಸ್ಯೆಗಳ ಪರಿಹಾರಕ್ಕಾಗಿ ಪೊಲೀಸ್ ಆಯುಕ್ತರ ಮತ್ತೊಂದು ಹುದ್ದೆ ಹಾಗೂ ಇನ್ನಿತರ ಪೂರಕ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಪೊಲೀಸ್ ಇಲಾಖೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸುವ ಕುರಿತು.**

- ಡಾ॥ ಕೆ. ಗೋವಿಂದರಾಜ್
- ಡಾ॥ ಜಿ. ಪರಮೇಶ್ವರ್ (ಗೃಹ ಸಚಿವರು)

-------------

(257) 10.03.2026/11.10/ ಎಸ್‌ಕೆ.ಎಂಡಿ

ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 10ನೇ ಮಾರ್ಚ್ 2026

ಸದನವು ಬೆಂಗಳೂರಿನಲ್ಲಿ ವಿಧಾನ ಸೌಧದಲ್ಲಿರುವ

ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 11 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು

ಪೀಠದಲ್ಲಿ ಉಪಸ್ಥಿತರಾದರು.

## 1. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಮತ್ತು ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ನಿನ್ನೆ ಪ್ರಶ್ನೋತ್ತರ ವೇಳೆಗೆ ಎರಡು ಗಂಟೆ ಸಮಯ ತೆಗೆದುಕೊಂಡಿದ್ದು, ನಾನು ಬೆಲ್ ಮಾಡಿದಾಗ ಯಾರೂ ಸಹ ಕೇಳಿಸಿಕೊಳ್ಳುವುದಿಲ್ಲ. ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯಲ್ಲಿ ನಡೆಸಬೇಕೆಂಬುದು ಇದೆ. ಅದನ್ನು ನಾನು ಎಪ್ಪತ್ತೈದು ನಿಮಿಷಕ್ಕೆ ಮಾಡಿದ್ದೇನೆ. ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸದಸ್ಯರುಗಳು ಪ್ರಶ್ನೆಯನ್ನು ಕೇಳುವಾಗ, ನಾನು ಬೆಲ್ ಮಾಡಿದಾಗ, ಅವರು ನಿಲ್ಲಿಸಲಿಲ್ಲವೆಂದರೆ, ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಇಲ್ಲವೆಂದರೆ ನೀವು ಹೇಗೆ ಬೇಕೋ ಹಾಗೇ ಬಿಡಿ ಎಂದರೆ ನಾನು ಮೂರು ಗಂಟೆಗಳ ಕಾಲ ಸಮಯ ತೆಗೆದುಕೊಳ್ಳುತ್ತೇನೆ. ಒಬ್ಬೊಬ್ಬ ಸದಸ್ಯರು ಸುಮಾರು 13 ನಿಮಿಷ ಮತ್ತೊಬ್ಬ ಸದಸ್ಯರು 12 ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಈ ರೀತಿಯಾದರೆ ನಾನು ಸದನವನ್ನು ಹೇಗೆ ನಡೆಸಬೇಕು ಹೇಳಿ. ನಾನು ಹೇಳುವುದೇನೆಂದರೆ, ಬೆಲ್ ಮಾಡಿ ಮುಂದಿನ ಪ್ರಶ್ನೆಯನ್ನು ಕೇಳಿ ಎಂದಾಗ ಬೇರೆ ಸದಸ್ಯರು ಪ್ರಶ್ನೆಯನ್ನು ಕೇಳಬೇಕು. ಪ್ರಶ್ನೋತ್ತರ ವೇಳೆಯನ್ನು ಎಪ್ಪತ್ತೈದು ನಿಮಿಷಗಳಲ್ಲಿ ಮುಗಿಸುತ್ತೇನೆ. ಇಲ್ಲದಿದ್ದರೆ ಉಳಿದ ಸದಸ್ಯರು ಕೇಳಿರುವ ಪ್ರಶ್ನೆಗಳೆಲ್ಲವೂ ಲ್ಯಾಪ್ಸ್ ಆಗುತ್ತದೆ. ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ.

**ಪ್ರಶ್ನೆ ಸಂಖ್ಯೆ 812**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪಿಕೊಂಡಿದ್ದೇನೆ. ಅದಕ್ಕೆ ಪ್ರಶ್ನೆಯೇ ಇಲ್ಲ. ಮಾನ್ಯ ಸಚಿವರು ನೀಡಿರುವ ಉತ್ತರ ಹೇಗಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಮೂರುವರೆ ಗಂಟೆಗಳ ಕಾಲ ಬಜೆಟ್ ಭಾಷಣವನ್ನು ಓದಿದ ರೀತಿ ಇದೆ. ನಾನು ಮೂರು ಸಣ್ಣ ಪ್ರಶ್ನೆಯನ್ನು ಕೇಳಿದ್ದು, ಆ ಮೂರು ಪ್ರಶ್ನಗಳಿಗೆ ವಿಶೇಷವಾದಂತಹ ಉತ್ತರವನ್ನು ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಹದಿನೈದು ಪ್ಯಾರಾಗಳ ಉತ್ತರ ಇದೆ. ನನ್ನ ಆಪೇಕ್ಷೆ ಇರುವುದೇನೆಂದರೆ, ಉತ್ತರ ಕರ್ನಾಟಕ ಭಾಗದಲ್ಲಿ ಮುಳುಗಡೆಯಾಗಿರುವ ಬಾಗಲಕೋಟೆ, ವಿಜಯಪುರ ಜಿಲ್ಲೆಗಳ ಸಂತ್ರಸ್ತ ಜನರು ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಒಬ್ಬ ವ್ಯಕ್ತಿಯು ತನ್ನ ಜಮೀನು, ಮನೆಯನ್ನು ಕಳೆದುಕೊಂಡಿದ್ದಾನೆ. ಅವನು ಅದೇ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದು, ಆತನ ಜಮೀನು ಕೂಡಾ ಹೋಯಿತು. ಅದೆಲ್ಲವನ್ನೂ ಕಳೆದುಕೊಂಡಿದ್ದಾರೆ. ಸರ್ಕಾರದಿಂದ ಮಾತ್ರ ಹಣ ಕೊಟ್ಟಿದ್ದಾರೆಯೇ? ನಿರಾಶ್ರಿತರಿಗೆ ಹೊರಗಡೆಯಲ್ಲಿ ಶಿಬಿರಗಳನ್ನು ಮಾಡಿದ್ದು, ಅಲ್ಲಿ ಪುನರ್ವಸತಿ ಕೇಂದ್ರಗಳು ಕೂಡ ಇವೆ. ಅವರಿಗೆ ಯಾವುದೇ ಉದ್ಯೋಗ ಇಲ್ಲ. ಅಲ್ಲಿನ ಪರಿಸ್ಥಿತಿ ಯಾವ ರೀತಿ ಚಿಂತಾಜನಕವಾಗಿದೆ ಎಂದರೆ, ಎಲ್ಲರೂ ವ್ಯಸನಿಗಳಾಗುತ್ತಿದ್ದಾರೆ. ಅವರಿಗೆ ಉದ್ಯೋಗಾವಕಾಶ ಕೊಡುವಂತಹ ಜವಾಬ್ದಾರಿ ಆಗಬೇಕು. ಮೊನ್ನೆ ಧಾರವಾಡ ಜಿಲ್ಲೆಯಲ್ಲಿ Gen Z students and job aspirants protest ನಲ್ಲಿ ಎಪ್ಪತ್ತು ಸಾವಿರ ಜನ ಸೇರಿರುವುದನ್ನು ನಾನು ನೋಡಿದ್ದೇನೆ. ಉತ್ತರ ಕರ್ನಾಟಕ ಭಾಗದಲ್ಲಿ ಆ ನಿರಾಶ್ರಿತರ ಮಕ್ಕಳು ಮತ್ತು ಜಮೀನು ಕಳೆದುಕೊಂಡಿರುವಂತಹ ಮಕ್ಕಳೆಲ್ಲರಿಗೂ ಅದೇ ತರಹ ಪರಿಸ್ಥಿತಿ ಸೃಷ್ಟಿಯಾಗುವುದರಲ್ಲಿ ದೂರವಿಲ್ಲ ಎಂದು ನಾನು ಹೇಳುತ್ತೇನೆ. ನಮ್ಮ ಸರ್ಕಾರಗಳು ಇದೇ ರೀತಿ ಹಾರಿಕೆ ವ್ಯವಸ್ಥೆಯನ್ನು ಮಾಡುತ್ತಾ ಹೋದರೆ, ಅಲ್ಲಿನವರ ಪರಿಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆ. ನಾನು ತಮ್ಮನ್ನಷ್ಟೇ ದೂಷಣೆ ಮಾಡದೇ ಒಟ್ಟಾರೆಯಾಗಿ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಸ್ವಲ್ಪ ಕಾರ್ಯಕ್ರಮಗಳನ್ನು ಹಾಕಿಕೊಂಡು ನಿರ್ದಿಷ್ಟವಾದ ಉದ್ಯೋಗಾವಕಾಶವನ್ನು ಕೊಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಕಾರ್ಖಾನೆಗಳನ್ನು ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆ ರೀತಿ ರಿಪೋರ್ಟ್ ಕೊಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ನೀತಿ–ನಿರೂಪಣೆಗಳನ್ನು ಕೊಟ್ಟಿದ್ದಾರೆ ಹೊರತು ಅಲ್ಲಿನ ವಾಸ್ತವಿಕ ಸಂಗತಿಗಳನ್ನು ನೋಡಿಕೊಂಡು ಇಂತಿಂಥ ಕಾರ್ಖಾನೆಗಳಿಗೆ ಕೊಡುತ್ತಿದ್ದೇನೆ ಮತ್ತು ಇಂತಿಷ್ಟು ಉದ್ಯೋಗವಿದೆ, ವಾಸ್ತವಿಕವಾಗಿ ಕಾರ್ಖಾನೆಗಳನ್ನು ಮಾಡಿದ್ದಾದರೆ, ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಮಾನ್ಯ ಹಣಮಂತ ರುದ್ರಪ್ಪ ನಿರಾಣಿ ಎಂಬ ಮಹಾನುಭಾವರು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದರು. ಅಲ್ಲಿ ಅನೇಕ ಕಾರ್ಖಾನೆಗಳನ್ನು ಕೂಡ ಬಂದವು. ಅವುಗಳನ್ನು ಬಿಟ್ಟರೆ ಇನ್ಯಾವುದೇ ಕಾರ್ಖಾನೆಗಳು ಇಲ್ಲವೇ ಇಲ್ಲ.

ನಲವತ್ತು ವರ್ಷಗಳಿಂದ ಸಿಮೆಂಟ್ ಕಾರ್ಖಾನೆ ಎಂದರೆ ಅದು ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿ ಮಾತ್ರ. 50 ವರ್ಷಗಳ ಹಿಂದಿನಿಂದಲೂ ಕನ್ನಡ ಪಠ್ಯ ಪುಸ್ತಕದಲ್ಲಿ ಅದರ ಫೋಟೋವನ್ನು ನೋಡುತ್ತಾ ಬಂದಿದ್ದೇವೆ. ಅದೊಂದನ್ನು ಬಿಟ್ಟು ನಾವು ಬೇರೆ ಯಾವುದನ್ನೂ ಓದಿಲ್ಲ. ಇವತ್ತು ಅಂತಹ ಸ್ಥಿತಿ ಇಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಏನಾಗಬೇಕೆಂಬುದರ ಬಗ್ಗೆ ಹೇಳಿ.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಜನರಲ್ ಆಗಿ ನೀತಿ ನಿರೂಪಣೆಗಳ ಬಗ್ಗೆ ಹೇಳಿದ್ದಾರೆ. ಯಾವಾದಾದರೂ ವ್ಯವಸ್ಥೆಯೊಳಗೆ ಇಂತಿಂಥ ಕಾರ್ಖಾನೆಗಳು ಬಂದಿವೆಂದರೆ, ಅದು ಇಲ್ಲವೇ ಇಲ್ಲ. ತಮ್ಮ ಉತ್ತರದಲ್ಲಿ 50 ವರದಿಗಳನ್ನು ಹೇಳಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ 90 ಯೋಜನೆಗಳಿಗೆ ಅನುಮೋದನೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 52 ಯೋಜನೆಗಳಿಗೆ ಅನುಮೋದನೆ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಬಹು ಪಾಲು ಸಕ್ಕರೆ ಕಾರ್ಖಾನೆಗಳನ್ನು ಬಿಟ್ಟು ಬೇರೆ ಕಾರ್ಖಾನೆಗಳು ಇಲ್ಲವೇ ಇಲ್ಲ. ಅಲ್ಲಿ ಹುಡುಕಾಡಿದರೆ, ಬೇರೆ ಮೂರು–ನಾಲ್ಕು ಕಾರ್ಖಾನೆಗಳು ಸಿಗಬಹುದು. ಆ ಭಾಗದಿಂದ ಮಾನ್ಯ ಸಚಿವರಾಗಿ ಬಂದವರು ಇದಕ್ಕೆ ಮೂರ್ತರೂಪ ಕೊಡುವಂತಹ ತೀರ್ಮಾನಗಳನ್ನು ಮಾಡಬೇಕು. ಅಲ್ಲಿ ಬೇರೆ ಯಾವ ಕಾರ್ಖಾನೆಗಳು ಇವೆ ಎಂದು ಹೇಳಲಿ? ಸರ್ಕಾರದ ನೀತಿಗಳನ್ನು ಹೇಳುವುದಕ್ಕೆ ಹೋಗಬಾರದು.

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಜಯಪುರ, ಬಾಗಲಕೋಟೆ ಬಗ್ಗೆ ತಮಗೂ ಕೂಡ ಗೊತ್ತಿದೆ. ಮಾನ್ಯ ಸದಸ್ಯರು ಜಮೀನನ್ನು ಕಳೆದುಕೊಂಡ ಸಂತ್ರಸ್ತರ ಪರವಾಗಿ ಕಾಳಜಿಯನ್ನು ಇಟ್ಟುಕೊಂಡು ವಿಶೇಷವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ 2025–30ರ ಕೈಗಾರಿಕಾ ನೀತಿಯಲ್ಲಿ, ಏಕೆಂದರೆ 'Beyond Bengaluru' ಅಂತಾ ಹೇಳಿ ಹಿಂದೆಯೂ ಕೂಡ campaign ಇತ್ತು. ವಲಯ–1, ವಲಯ–2, ವಲಯ–3 ಎಂದು ಮೂರು ವಲಯಗಳನ್ನಾಗಿ ಮಾಡಿದ್ದೇವೆ. ವಲಯ–1 ರಲ್ಲಿ ಇವತ್ತಿನ ದಿವಸ ಹೆಚ್ಚಿಗೆ incentives, ರಿಯಾಯಿತಿಯನ್ನು ಕೊಡುತ್ತೇವೆ. ವಲಯ–2 ರಲ್ಲಿ ಇವತ್ತಿನ ದಿವಸ ಅದಕ್ಕಿಂತ ಕಡಿಮೆಯಾಗುತ್ತದೆ. ವಲಯ–3ರಲ್ಲಿ ಬೆಂಗಳೂರು ಬರುತ್ತದೆ. ಅಲ್ಲಿ ಬಹಳಷ್ಟು ಆಗುತ್ತದೆ ಅಲ್ಲಿ incentives ಇಲ್ಲ. ಮಾನ್ಯ ಸದಸ್ಯರು ಕೇಳಿರುವಂತೆ, ನಿರ್ದಿಷ್ಟವಾಗಿ ನಾನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವನಾಗಿ ಬಂದ ಮೇಲೆ ಈಗಾಗಲೇ ಸುಮಾರು ಒಂಭತ್ತು–ಹತ್ತು ಕಂಪನಿಗಳ ಜೊತೆ ಮಾತನಾಡುತ್ತಿದ್ದೇನೆ. Reliance ಅವರ 'Campa Cola' ಅವರು ಈಗಾಗಲೇ ನಾಳೆ ಭೂಮಿ ಪೂಜೆಯನ್ನು ಮಾಡುತ್ತಿದ್ದಾರೆ. ಅದರಿಂದ 1,600 ಜನರಿಗೆ ಉದ್ಯೋಗ ಸಿಗುತ್ತದೆ. ಅದೇ ರೀತಿ 'Viterra' ರವರ ಜೊತೆ ಮಾತುಕತೆ ನಡೆದಿದ್ದು, They are world leaders in pulse processing. ವಿಶೇಷವಾಗಿ ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ತೊಗರಿಬೇಳೆ ಎಲ್ಲವೂ ಸೇರಿದಂತೆ pulses ಗೆ ಏನೂ ಬರುತ್ತದೆ. ಅದಕ್ಕೆ ಅನುಕೂಲವಾಗುವಂತೆ

ಅವರು ಕೂಡ ಈಗ setup ಮಾಡುತ್ತಿದ್ದಾರೆ. Rotor blade manufacturer 'Suzlon Energy' Company, ಯ ಅತಿ ದೊಡ್ಡ ಫ್ಯಾನ್ ಏನು ಬರುತ್ತದೆ. ಅದು ಈಗ ಇರುವಂತಹ ಫ್ಯಾನ್ ಅಲ್ಲ. ಅತಿ ದೊಡ್ಡ ಫ್ಯಾನ್‌ಗೆ ಈಗಾಗಲೇ 'Suzlon Energy' ಅವರು ಸೇರಿದಂತೆ ಇನ್ನೂ ಒಂದೆರಡು-ಮೂರು ಕಂಪನಿಗಳು ಬರುತ್ತಿದ್ದಾವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ನೇತೃತ್ವದಲ್ಲಿ ಒಂದು ಸಮಿತಿ ಇದೆ. ವಿಶೇಷವಾಗಿ ಇವತ್ತಿನ ದಿವಸ ಟಾಟಾ ಅವರ project ಅಲ್ಲಿ ಕೂಡ ಇದೆ. ಇವತ್ತಿನ ದಿವಸ ಅದೆಲ್ಲೆವೂ Incentives ನ ಮೇಲೆ ಅವಲಂಬಿತವಾಗಿದೆ. ನಮ್ಮ ರಾಜ್ಯವೊಂದೇ ಅಲ್ಲ, ಬೇರೆ ಬೇರೆ ರಾಜ್ಯಗಳು incentives offer ಮಾಡಿದ್ದಾರೆ. ಉಪ ಸಚಿವ ಸಂಪುಟದಲ್ಲಿ ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ಇವತ್ತಿನ ದಿವಸ ಎಂಟು-ಒಂಭತ್ತು ಕಾರ್ಖಾನೆಗಳು ಸೇರಿದಂತೆ ಸ್ಟೀಲ್, ಸಿಮೆಂಟ್ ಮತ್ತು ಸಕ್ಕರೆ ಕಾರ್ಖಾನೆಗಳು ಈಗಾಗಲೇ natural ಆಗಿ ನಮ್ಮಲ್ಲಿ ಇವೆ.

**(ಮುಂದು)**

(258) 10.03.2026 11.20 TCH-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್ (ಮುಂದು)**

ಅದನ್ನು ಬಿಟ್ಟು ನಾವು ಸುಮಾರು 9 ರಿಂದ 10 industries ಗಳನ್ನು ನಾವು follow-up ಮಾಡುತ್ತಿದ್ದೇವೆ. ಒಟ್ಟು 3 industries ಈಗಾಗಲೇ confirmed ಆಗಿವೆ. ಈಗ ಅವರದ್ದು ಮಾಡುತ್ತಿದ್ದಾರೆ. ನಾಲ್ಕನೆಯದು Cabinet Sub-Committee ಯಿಂದ incentives ಆಗಬೇಕು. ಇದನ್ನು ಬಿಟ್ಟು ನಾವು ಮತ್ತೆ ಹೆಚ್ಚಿಗೆ ಒತ್ತು ಕೊಡಬೇಕೆಂದು ಡಾ: ಡಿ.ಎಂ.ನಂಜುಂಡಪ್ಪನವರ ವರದಿಯಲ್ಲಿ Zonal Concession ಗಿಂತ ಹೆಚ್ಚಿಗೆ ಅಂದರೆ ಏನು ಡಾ: ನಂಜುಂಡಪ್ಪನವರ ವರದಿಯಲ್ಲಿ 'Backward', 'More Backward' and 'Most Backward' taluks ಎಂದು ಇತ್ತು. 'More Backward' and 'Most Backward' taluks ಗೆ ಶೇ.3 ರಷ್ಟು ಮತ್ತು ಶೇ.5 ರಷ್ಟು ಮತ್ತೆ additional incentives ಕೊಡುತ್ತಿದ್ದೇವೆ. ನಾವು ಅಧಿಕಾರಕ್ಕೆ ಬಂದನಂತರ 'Beyond Bengaluru' ಗೆ encourage ಮಾಡಬೇಕೆಂದು ತೆಗೆದುಕೊಂಡಿದ್ದೇವೆ. We are giving 3% incentive for More Backward taluks apart from Zonal Incentives.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'Beyond Bengaluru' ಬಗ್ಗೆ ಮಾನ್ಯ ಸಚಿವರು explain ಮಾಡಿದರು. ಇದು ಕೇವಲ reports ನಲ್ಲಿ ಸರ್ಕಾರದ ತೀರ್ಮಾನಗಳಲ್ಲೇ ಮಾತ್ರ ಉಳಿದುಕೊಂಡಿದೆಯೇ ವಿನಹ ವಾಸ್ತವಿಕವಾಗಿ ಅಲ್ಲಿ ಇನ್ನೂ ಯಾವುದೂ ಆಗಲಿಲ್ಲ. ಈಗ ಮಾನ್ಯ ಸಚಿವರು ಹೇಳಿದರು. ಯಾವ factories ಜೊತೆಗೆ ಯಾವ ಕಂಪನಿಗಳ ಜೊತೆಗೆ ನೀವು ಒಡಂಬಡಿಕೆ ಮಾಡಿಕೊಂಡಿದ್ದೀರಿ, ಅದರಿಂದ ಎಷ್ಟು ಹಣ ಬಂದಿದೆ? ಏಕಗವಾಕ್ಷಿ ಯೋಜನೆಯಿಂದ ಸರಳೀಕರಣ

ಮಾಡಿಕೊಡುತ್ತೇವೆ ಎಂಬುದು ಇದೆ. ವಾಸ್ತವವಾಗಿ ರಿಪೋರ್ಟ್ ಏನಾಗಿದೆಯೆಂದರೆ area ಗಳಲ್ಲಿ ನಮ್ಮಲ್ಲಿ ಎಲ್ಲೆಲ್ಲಿ ಖಾಲಿ ಇವೆಯೋ ಅಲ್ಲಿ ಸುಮಾರು 5,000ಕ್ಕೆ, 6,000ಕ್ಕೆ ಮತ್ತು 3,000 ಕ್ಕೆ ಈ ರೀತಿ ನಮ್ಮ ಜಿಲ್ಲೆಗಳಲ್ಲಿದೆ.

**ಸಭಾಪತಿಯವರು:–** ಶ್ರೀ ಪಿ.ಹೆಚ್.ಪೂಜಾರ್ ರವರೇ, ಎಲ್ಲಿ ಖಾಲಿ ಇವೆ? ಕಬ್ಬು ಬೆಳೆಯುತ್ತಿದ್ದಾರೆ ಎಲ್ಲಿ ಖಾಲಿ ಇವೆ?

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, political ವ್ಯವಸ್ಥೆಯಿಂದ ಅಲ್ಲಿ ಎಲ್ಲಿಗೆ ಬೇಕಿದೆ ಎಂದು ಗೊತ್ತಾಗಿರುತ್ತದೋ ಆಗ political ವ್ಯವಸ್ಥೆ ಇದ್ದಂಥ ಸರ್ಕಾರದ ಪ್ರತಿನಿಧಿಗಳು... ನಾನು ಮಾನ್ಯ ಸಚಿವರಿಗೆ ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಶ್ರೀ ಪಿ.ಹೆಚ್.ಪೂಜಾರ್ ರವರೇ, ನೀವು ಪ್ರಶ್ನೆ ಕೇಳಿ. ಇಲ್ಲಿ ಎಲ್ಲಾ serious ವಿಚಾರವೇ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ಆ ಜಮೀನು ಎಲ್ಲಾ ಖರೀದಿಯಾಗಿ ಹೋಗುವುದು ಆಗುತ್ತಿದೆ. ಯಾವ ರಸ್ತೆ ಎಲ್ಲಿಂದ ಹೋಗುತ್ತದೆ. 'ಭಾರತ್ ಮಾಲ' ಕೇಂದ್ರ ಸರ್ಕಾರದ ಒಂದು ಯೋಜನೆ ಬರುತ್ತಿದೆ. ಸುತ್ತಮುತ್ತ ಎಲ್ಲೆಲ್ಲಿ ಬೇಕೋ ಅಲ್ಲಿ ಎಲ್ಲಾ ಈಗ ರಾಜಕಾರಣಿಯವರು ತೆಗೆದುಕೊಂಡುಬಿಟ್ಟಿದ್ದಾರೆ. ದೊಡ್ಡದೊಡ್ಡ ಅವಲಂಬಿತರು ಮತ್ತು ಅವರ ಪುಡಾರಿಗಳು ತೆಗೆದುಕೊಂಡುಬಿಟ್ಟಿದ್ದಾರೆ. ಈ ರೀತಿ ಆಗುವಂಥದ್ದಾಗಿದೆ. Free ಆಗಿ land ಸಿಗುವಂಥದ್ದು Land Bank ಮಾಡುವಂಥ ಕೆಲಸ ಮಾಡಬೇಕು. ಕೇಂದ್ರ ಸರ್ಕಾರದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದಿಂದ ರೈಲ್ವೇ ಬಂತು, ಡಿಫೆನ್ಸ್ ಬಂತು ಮತ್ತು fertilizer factory ಬಂತು. ಅಂತಹ ಫ್ಯಾಕ್ಟರಿಗಳನ್ನು ತರುವುದನ್ನು ಮಾಡಿ. ಕೇಂದ್ರ ಸರ್ಕಾರದ ಜೊತೆ ಸಂಘರ್ಷ ಮಾಡುವುದನ್ನು ಬಿಡಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳಿದಂತೆ ಮೊದಲನೆಯದಾಗಿ ಬಿಜಾಪುರ ಮತ್ತು ಬಾಗಲಕೋಟೆಯದ್ದು ಸುಮಾರು 9 ರಿಂದ 10 ಕಂಪನಿಗಳ ಜೊತೆಗೆ ಮಾತನಾಡುತ್ತಿದ್ದೇವೆ. ಎರಡನೆಯದಾಗಿ, Land Bank ಬಗ್ಗೆ ಹೇಳಿದರು. ಈ Land Bank ಸಾಕಷ್ಟಿವೆ. Land Bank ಏನೂ ಕೊರತೆ ಇಲ್ಲ. ಮೂರನೆಯದಾಗಿ ಕೇಂದ್ರ ಸರ್ಕಾರದ ಬಗ್ಗೆ ಅವರು ಹೇಳಿದರು. ಈಗ ಕೇಂದ್ರ ಸರ್ಕಾರ ನಮಗೆ ಸಹಕಾರ ಮಾಡಬೇಕು. ಸ್ವಲ್ಪ ಇಂಡಸ್ಟ್ರೀಸ್ ಕೇಂದ್ರ ಸರ್ಕಾರದ ಜೊತೆಗೆ ತೆಗೆದುಕೊಂಡು ಹೋಗಬೇಕು ಎನ್ನುವುದನ್ನು ಮಾಡಿ ಅದಕ್ಕೆ ಇವರು ಕೇಂದ್ರ ಸರ್ಕಾರವನ್ನು ಒಪ್ಪಿಸಲಿ. ಈ ಹಿಂದೆ ಶ್ರೀ ಅನಂತಕುಮಾರ್ ರವರು ಇದ್ದಾಗ ಅಲ್ಲಿಗೆ ಒಂದು ಕೆಮಿಕಲ್ factory ಬರಬೇಕೆಂದು ಇತ್ತು. ಆದರೆ ಅದು ಬೇರೆ ಜಿಲ್ಲೆಗೆ ಹೋಯಿತು. ಇದು ನಿಮಗೆ ಗೊತ್ತಿದೆ. ಅದಕ್ಕಾಗಿ ಇವರು ಕೇಂದ್ರ ಸರ್ಕಾರವನ್ನು ಒಪ್ಪಿಸಲಿ. ನಾವು land ಮತ್ತು ಎಲ್ಲಾ incentives ಕೊಡುತ್ತೇವೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, defence ಬಂತು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಇವರು ಒಂದು ಕೆಲಸ ಮಾಡಲಿ. ಈಗ Micron Semiconductor Company, ಇದೆಲ್ಲಾ ಮೂರ್ನಾಲ್ಕು semiconductor ಕಂಪನಿಗಳು ನಮ್ಮ ಹತ್ತಿರ ಬಂದರು. ಅವರು ತಮ್ಮ interest ಅನ್ನೂ ಕೂಡ ವ್ಯಕ್ತಪಡಿಸಿದರು. ಆದರೆ ಕೇಂದ್ರ ಸರ್ಕಾರದ P.L.I. (Production Linked Incentive) Scheme ಇದೆ. ಶೇ.50 concession ಅವರಿಗೆ ಹೋಗುತ್ತಿತ್ತು. ಅವರು ದೆಹಲಿಗೆ ಹೋದ ನಂತರ ಬೇರೆ ಕಡೆ divert ಆಗಿದ್ದಾರೆ. ಇದೆಲ್ಲಾ ನಾನು ಈಗ ರಾಜಕೀಯವಾಗಿ ಮಾತನಾಡುವುದಿಲ್ಲ. ಇವತ್ತಿನ ದಿವಸ chemical industry, fertilizer industry ಇದನ್ನೆಲ್ಲಾ ಹೇಳಿದರು. ಈ ಹಿಂದೆ ಕೂಡ ಅಂತಹ ಅವಕಾಶವಿತ್ತು. ಅಂತಹ ಅವಕಾಶವನ್ನು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಶಿವಾನಂದ ಪಾಟೀಲ್ ರವರೇ, ಮಾನ್ಯ ಅನಂತಕುಮಾರ್ ರವರು ಇದ್ದಾಗ ಈ ವಿಷಯ ತಮಗೂ ಗೊತ್ತಿದೆ. ಅದಕ್ಕೆ ಅವರು ಕೇಂದ್ರ ಸರ್ಕಾರವನ್ನು ಒಪ್ಪಿಸಲಿ. ಮಾನ್ಯ ಹೆಚ್.ಡಿ. ಕುಮಾರ ಸ್ವಾಮಿಯವರು ಮಂಡ್ಯದಲ್ಲಿ ಒಂದು Testing Facility ಮಾಡುತ್ತೇವೆ. ರಾಜ್ಯ ಸರ್ಕಾರ ಅದಕ್ಕೆ ಜಾಗ ಕೊಡಬೇಕೆಂದು ಹೇಳಿದರು. ಸುಮಾರು 100 ಎಕರೆ ಜಾಗದ ಅವಶ್ಯಕತೆ ಇದೆಯೆಂದು ಹೇಳಿದ್ದರು. ನಮ್ಮ ರಾಜ್ಯ ಸರ್ಕಾರ ತಕ್ಷಣವೇ ಅದಕ್ಕೆ ಸುಮಾರು 105 ಎಕರೆ ಜಾಗವನ್ನು ಕೊಟ್ಟಿದ್ದೇವೆ. ನಾವು ಜಾಗ ಕೊಡುತ್ತೇವೆ. ಇವತ್ತಿನ ದಿವಸ ನಾವು ಕೇಂದ್ರ ಸರ್ಕಾರದ ಜೊತೆಗೂಡಿ ಹೋಗಬೇಕು. ಕೇಂದ್ರ ಸರ್ಕಾರ industries ಮಾಡಿಕೊಟ್ಟರೆ, ಖಂಡಿತವಾಗಿಯು ಕೂಡ ಅವರಿಗೆ ಏನು ಬೇಕಾಗಿದೆಯೋ ಆ ಎಲ್ಲಾ ರಿಯಾಯಿತಿಯನ್ನು ಮತ್ತು ಭೂಮಿಯನ್ನು ಕೊಡುತ್ತೇವೆ.

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಜೊತೆ ಒಡಂಬಡಿಕೆ ಮಾಡಿ. . .

**ಸಭಾಪತಿಯವರು:–** ಮಾನ್ಯ ಶಿವಾನಂದ ಪಾಟೀಲ್ ರವರೇ, ತಾವು ಕುಳಿತುಕೊಳ್ಳಿ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ಮಾತನಾಡಿ ಮುಗಿಸುತ್ತೇನೆ. ಕೇಂದ್ರ ಸರ್ಕಾರದ ಜೊತೆ ಒಡಂಬಡಿಕೆ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದವರು ನಮ್ಮಲ್ಲಿ N.T.P.C. ತೆಗೆದುಕೊಂಡು ಬಂದರು.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಉದ್ಯೋಗ ಏನೂ ಕೊಟ್ಟಿಲ್ಲ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಶಿವಾನಂದ ಪಾಟೀಲ್‌ರವರೇ, ನೀವು ಹೇಳಿ. ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಶಿವಾನಂದ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಅವರಿಗೆ 3,500 ಎಕರೆ land ಮತ್ತು ನೀರು ಕೊಟ್ಟಿದ್ದೇವೆ. ಆದರೆ N.T.P.C. (National Thermal Power Corporation) ನವರು ಆ

ಭೂಮಿಗಳನ್ನು ಕಳೆದುಕೊಂಡವರಿಗೆ ಒಂದು job ಕೂಡ ಕೊಡಲಿಲ್ಲ. ಇದು ಕೇಂದ್ರ ಸರ್ಕಾರದ ಹಣೆಬರಹ. ನಾನು ಅದಕ್ಕೆ ನಿಮ್ಮ ಮುಖಾಂತರ ಮಾನ್ಯ ಸಚಿವರಿಗೆ request ಮಾಡುತ್ತೇನೆ. ಸರೋಜಿನಿ ಮಹಿಷಿ ವರದಿಯಲ್ಲಿ local ನಲ್ಲಿ 'B' and 'C' category ಗೆ employment ಕೊಡಬೇಕು. ದುರ್ದೈವವಶಾತ್ ಒಂದು employment ಕೊಡುವುದಿಲ್ಲ. ಎಲ್ಲಾ outsource ಮಾಡಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೂಡ ಕಳೆದ ಬಾರಿ ಕೂಡ ಹೇಳಿದ್ದೇನೆ. ರಿವ್ಯೂ ಮಾಡಿ at least, local employment ಯಾರು 3,400 ಎಕರೆ ಜಮೀನು ಕೊಟ್ಟಿದ್ದಾರೋ plus ಅದೇ ತಾಲ್ಲೂಕಿನಲ್ಲಿ K.I.A.D.B. (Karnataka Industrial Areas Development Board) ಗೆ ಸುಮಾರು 3,500 ಎಕರೆ ಜಾಗವನ್ನು ನಿಮಗೂ ಕೊಟ್ಟಿದ್ದಾರೆ. ಆದರೆ ಅಲ್ಲಿ ಒಂದು industry ಕೂಡ ಬಂದಿಲ್ಲ. ಆದ್ದರಿಂದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರೇ, ತಾವು review ಮಾಡಿ ಸ್ವಲ್ಪ help ಮಾಡಿ.

**ಸಭಾಪತಿಯವರು:–** ಮಾನ್ಯ ಡಿ.ಎಸ್.ಅರುಣ್ ರವರೇ, ತಾವು ಪ್ರಶ್ನೆ ಕೇಳಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಏನ್ರೀ ಹತ್ತತ್ತು ನಿಮಿಷ ಮಾತನಾಡುವುದೇ? ಈ ರೀತಿ ಆದಲ್ಲಿ ಸದನ ನಡೆಸುವುದು ಹೇಗೆ? ಮಾನ್ಯ ಸಚಿವರಾದವರು ತಿಳಿದುಕೊಳ್ಳಬೇಕು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮುಗಿಸಿಬಿಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್ ರವರು N.T.P.C. ಬಗ್ಗೆ ಮಾತನಾಡಿದರು. ಕೇಂದ್ರ ಸರ್ಕಾರದವರ ಹತ್ತಿರ ಅದರ ಬಗ್ಗೆ ನಾವು review ಮಾಡುತ್ತೇವೆ. ಅದಲ್ಲದೇ ಅವರೇನು ಮಳುವಾಡದ ಬಗ್ಗೆ ಹೇಳುತ್ತಿದ್ದಾರೆ. ಈಗಾಗಲೇ ಪೈಪ್‌ಲೈನ್‌ನಲ್ಲಿ ಸುಮಾರು 7 ರಿಂದ 8 factories ಇವೆ. ನಾಳೆ Reliance ಭೂಮಿ ಪೂಜೆಯನ್ನು ಕೂಡ ಮಾಡುತ್ತಿದ್ದೇವೆ. ನಾವು ಅವೊತ್ತು ಮಾನ್ಯ ಜವಳಿ ಸಚಿವರಾದ ಶ್ರೀ ಶಿವಾನಂದ ಪಾಟೀಲ್ ರವರಿಗೂ invite ಮಾಡುತ್ತೇವೆ. ಏಕೆಂದರೆ ಅವರು ಸ್ಥಳೀಯ ಶಾಸಕರಾಗಿದ್ದಾರೆ. ನಾವು ಎಲ್ಲಾ ಮಾಡುತ್ತಿದ್ದೇವೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:–** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಅವಕಾಶ ಕೊಡುವುದಿಲ್ಲ. ಮಾನ್ಯ ಡಿ.ಎಸ್.ಅರುಣ್ ರವರೇ ತಾವು ಪ್ರಶ್ನೆ ಕೇಳಿ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ಅರ್ಧಗಂಟೆ ಮಾತನಾಡುವುದಕ್ಕೆ ಕಾಲಾವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ಆಯಿತು ಬರೆದು ಕೊಡಿ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ಆಯಿತು.

**ಪ್ರಶ್ನೆ ಸಂಖ್ಯೆ.741**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ. ಇದು ಹಗಲು ದರೋಡೆಯೇ ಅಥವಾ ರಾತ್ರಿ ದರೋಡೆಯೋ ಅಥವಾ cabinet ದರೋಡೆಯೋ ಎಂದು ಅರ್ಥವಾಗುತ್ತಿಲ್ಲ. ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಭವನಕ್ಕೆ ಎಲ್ಲೆಲ್ಲಿ ಇವರು ಸಿ.ಎ. ನಿವೇಶನವನ್ನು ತೆಗೆದುಕೊಂಡಿದ್ದಾರೆ. ಮತ್ತೆ ಯಾವ ಮೌಲ್ಯಕ್ಕೆ ತೆಗೆದುಕೊಂಡಿದ್ದಾರೆ? ಅಲ್ಲಿಇಲ್ಲಿ ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದನ್ನು ಓದಿದಾಗ ನಾನು ಅಂದುಕೊಂಡಿದ್ದು ಏನೆಂದರೆ, ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಕಡೆ ಉಲ್ಲೇಖವನ್ನು ಕೂಡ ಮಾಡಿದ್ದಾರೆ. ಅದನ್ನೆಲ್ಲಾ ನೋಡಿದಾಗ ಇವರು ಸುಮಾರು 10 ಕಡೆ ಜಾಗ ತೆಗೆದುಕೊಂಡಿರಬಹುದು. ಒಟ್ಟಾರೆಯಾಗಿ ಸರ್ಕಾರದ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಂದ ಬಂದಿರತಕ್ಕಂಥ ಉತ್ತರದಲ್ಲಿ ಬಾಗಲಕೋಟೆ, ಧಾರವಾಡ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಕೊಪ್ಪಳ, ಮಂಡ್ಯ, ಚನ್ನರಾಯಪಟ್ಟಣ ಮತ್ತು ಬಾದಾಮಿಯಲ್ಲಿ ಒಂದೇ order ನಲ್ಲಿ 6 ಕಡೆ ತೆಗೆದುಕೊಂಡಿದ್ದಾರೆ. ಇನ್ನೊಂದು order ನಲ್ಲಿ ಸುಮಾರು 07 ಕಡೆ ತೆಗೆದುಕೊಂಡಿದ್ದಾರೆ. ಇನ್ನೊಂದು ತುಮಕೂರಿನ ವಿಚಾರದ್ದು ನಾನು ಉಲ್ಲೇಖ ಮಾಡಲೇಬೇಕು. ಸಿ.ಎ. ನಿವೇಶನ ದರ 1 ಎಕರೆಗೆ ಸುಮಾರು ರೂ.1.70 ಕೋಟಿಗಳಾಗುತ್ತದೆ. ಶೇ.5ಕ್ಕೆ Guidance Value/S.R.Value... ಏಕೆಂದರೆ ಮಾನ್ಯ ಸಭಾಪತಿಯವರೇ, ಈ ಹಿಂದೆ ಸಿ.ಎ. ಸೈಟ್‌ಗಳ ಚರ್ಚೆ ಬಂದಾಗ ನೀವೇ ನನಗೆ ಅವಕಾಶ ಕೊಟ್ಟಿದ್ದೀರಿ. ಏನೆಂದರೆ ಸಿ.ಎ. ಸೈಟ್‌ಗಳು ಇವತ್ತಿನ ಎಸ್.ಆರ್. ವ್ಯಾಲ್ಯೂಗೆ ತೆಗೆದುಕೊಂಡು ಸುಮಾರು 30 ವರ್ಷಗಳ ಕಾಲ lease ಗೆ ಹೇಗೆ ಕೊಡುತ್ತೀರಿ ಎಂದು ನಾನು ಕೇಳಿದ್ದೆನು. S.R.Value ಗೆ ಕೊಟ್ಟಿದ್ದೀರಿ ಅದನ್ನು ಹೇಗೆ ನೀವು ಸುಮಾರು 30 ವರ್ಷಗಳ ಕಾಲ lease ಗೆ ಕೊಡುತ್ತೀರಿ? ಮತ್ತೆ ನೀವು ಇನ್ನೊಂದು ಬಾರಿ ಏಕೆ renew ಮಾಡಿಕೊಳ್ಳುತ್ತೀರಿ ಎಂದು ಕೇಳಿದ್ದೆನು. ಆಗ ಕೂಡ ಇಡೀ ಸದನ ಇದರ ಬಗ್ಗೆ ಚರ್ಚೆ ಮಾಡಿತ್ತು. ಆಗಲೂ ಕೂಡ ಬಂಡತನದ answer ಬಂದಿತ್ತು. ಈಗ ಒಂದೇ order ನಲ್ಲಿ ಆರು-ಏಳು ಕಡೆ ರೂ.1.70 ಕೋಟಿಗೆ ಶೇ5ಕ್ಕೆ ಅಂದರೆ ಸುಮಾರು ರೂ.8.50 ಲಕ್ಷಕ್ಕೆ ಒಂದೊಂದು ಎಕರೆ ಜಾಗವನ್ನು ಕಾಂಗ್ರೆಸ್ ಭವನಕ್ಕೆ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಡಿ.ಎಸ್.ಅರುಣ್ ರವರೇ, ಪ್ರಶ್ನೆ ಕೇಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಯಾವ ಆಧಾರದ ಮೇಲೆ ನೀವು ಅದನ್ನು ಶೇ.5 ಕ್ಕೆ ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಉತ್ತರ ಕೊಡಲಿ. ನಾನು ಆಮೇಲೆ ಮತ್ತೆ ಮರು ಪ್ರಶ್ನೆ ಕೇಳುತ್ತೇನೆ.

**ಶ್ರೀ ಸುರೇಶ ಬಿ.ಎಸ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, 'ರಾಜ್ಯದಲ್ಲಿ ಕಾಂಗ್ರೆಸ್ ಕಚೇರಿಗಳಿಗೆ ಎಷ್ಟು ಜಾಗಗಳನ್ನು ಕೊಟ್ಟಿದ್ದೀರಿ' ಎಂದು ಪ್ರಶ್ನೆ ಕೇಳಿದ್ದರು. ಮಾನ್ಯ

ಸದಸ್ಯರೇ ಅದಕ್ಕೆ ಉತ್ತರ ಹೇಳಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಕಚೇರಿಗಳಿಗೆ ಅನುಬಂಧ-1 ರಲ್ಲಿ ಎಷ್ಟಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದೇವೆ.

**ಸಭಾಪತಿಯವರು:-** ಎಷ್ಟೆಷ್ಟು ಕೊಟ್ಟಿಲ್ಲ.

**ಶ್ರೀ ಸುರೇಶ ಬಿ.ಎಸ್:-** ಮಾನ್ಯ ಸಭಾಪತಿಯವರೇ, ಇದು cabinet decision. ಮತ್ತೆ ಇದರಲ್ಲಿ 'ತುಮಕೂರು, ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಕೊಟ್ಟಿದ್ದೀರಿ' ಎಂದು ಪ್ರಶ್ನೆ ಕೇಳಿದ್ದರು. ಆದರೆ ತುಮಕೂರಿನಲ್ಲಿ ಮಾತ್ರ ತೆಗೆದುಕೊಂಡಿರುವುದು. ಇನ್ನುಳಿದಂತೆ ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಾವುದೇ ನಾಗರಿಕ ಸೌಲಭ್ಯ ನಿವೇಶನ ಕೊಟ್ಟಿಲ್ಲ. ತುಮಕೂರಿನಲ್ಲಿ ಮಾತ್ರ ಒಂದು ಕೊಟ್ಟಿದ್ದೇವೆ. ಆಮೇಲೆ 'ನಿಯಮಗಳ ಪ್ರಕಾರ ಕಂದಾಯ ಇಲಾಖೆಯ ತಕರಾರಿದ್ದರೂ ಕೂಡ ನಿವೇಶನಗಳನ್ನು ಮಂಜೂರು ಮಾಡಿರುವುದರ ಉದ್ದೇಶವನ್ನು ತಿಳಿಸುವುದು' ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಇಲ್ಲಿಯವರೆಗೆ ಬಂದಿಲ್ಲ. ಕೊನೆಯದಾಗಿ 'ಈ ಮಂಜೂರಾತಿ ಪ್ರಕ್ರಿಯೆಯಲ್ಲಿ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ ಕೇಳಿಬಂದಿರುವ ದೂರಿನನ್ವಯ ಮಂಜೂರಾತಿಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು' ಎಂದು ಪ್ರಶ್ನೆ ಕೇಳಿದ್ದಾರೆ. ಮಂಜೂರಾತಿ ಪ್ರಕ್ರಿಯೆಯಲ್ಲಿ ಕಾನೂನು ಯಾವುದೇ ಉಲ್ಲಂಘನೆಯಾಗಿರುವುದಿಲ್ಲ. ಆದ್ದರಿಂದ ಇದರಲ್ಲಿ ಇದನ್ನು ರದ್ದುಪಡಿಸುವ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದ cabinet decision ಏನು ಮಾಡಿದ್ದೇವೋ ಅದರ ಪ್ರಕಾರ ಇಡೀ ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ನಾವು ಕಾಂಗ್ರೆಸ್ ಕಚೇರಿಗಳಿಗೆ ಜಾಗಗಳನ್ನು ಕೊಟ್ಟಿದ್ದೇವೆ.

**(ಮುಂದು)**

(259)10.3.2026/11.30/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ದೊಡ್ಡ ವಿಷಯ. ನೂರು ಕಾಂಗ್ರೆಸ್ ಭವನಗಳನ್ನು ಕಟ್ಟಬೇಕೆಂದು ಅವರು ತೀರ್ಮಾನ ಮಾಡಿದ್ದಾರೆ. ಒಂದೊಂದು ಕಡೆಯಲ್ಲಿಯೂ ಸೈಟುಗಳನ್ನು ಕೊಡುವ ಹಾಗಿಲ್ಲ. ಏಕೆಂದರೆ ಇವರು public ನಲ್ಲಿ announce ಮಾಡಬೇಕು. ಬೇರೆ ಬೇರೆಯವರು ಕೂಡ ಅದರಲ್ಲಿ ಅರ್ಜಿ ಹಾಕಿಕೊಳ್ಳಬಹುದು. ಇಲ್ಲಿ ಆಗಿರುವಂತಹದ್ದು ಏನೆಂದರೆ it is gross violation of rules. ಏನಾಗಿದೆಯೆಂದರೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿಯೇ ಇದೆ. ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಅಧಿಕಾರಿಗಳು ಬರೆದಿದ್ದಾರೆ. ಏಕೆಂದರೆ ಇದು ಒಂದು ರಾಜಕೀಯ ಪಕ್ಷ. ಇದು ಟ್ರಸ್ಟ್ ಅಲ್ಲ. ರಾಜಕೀಯ ಪಕ್ಷಕ್ಕೆ ಒಂದು ಸೈಟು ಕೊಡಬಹುದು. ಇಡೀ ರಾಜ್ಯದಲ್ಲಿ ನೂರು ಕಡೆಗಳಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆ ನಾವು ಈಗಾಗಲೇ ಪ್ರಶ್ನೆಯನ್ನೂ ಮಾಡಿದ್ದೇವೆ. ಈಗ ಕೊಟ್ಟಿರುವಂಥದ್ದು 1 ಕೋಟಿ ರೂಪಾಯಿ ಬೆಲೆ ಬಾಳುವಂತಹ ಆಸ್ತಿಯಾಗಿದ್ದರೆ ಅದನ್ನು ಕೇವಲ ಶೇ.5ರಷ್ಟು ಅಂದರೆ 5 ಲಕ್ಷ ರೂಪಾಯಿಗೆ ಕೊಡುವುದು. ಇದು ಹೇಗೆ? ನಿಮಗೆ ದೇವನಹಳ್ಳಿಯ ಒಂದು ವಿಷಯವನ್ನು ಹೇಳಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಎಲ್ಲರೂ ಮಾತನಾಡಬೇಕಾಗಿದೆ, ಚರ್ಚೆ ಮಾಡೋಣ. ಅರ್ಧ ಗಂಟೆ ಚರ್ಚೆಗೆ convert ಮಾಡಿ. ನಾವು ಮಾತನಾಡುತ್ತೇವೆ.

**ಸಭಾಪತಿಯವರು:–** ವಿರೋಧಪಕ್ಷದ ನಾಯಕರಿಗೆ ಅವಕಾಶ ಕೊಡಲೇಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾಡೋಣ.

**ಶ್ರೀ ಐವನ್ ಡಿಸೋಜಾ:–** ಬಿ.ಜೆ.ಪಿ. ಕಛೇರಿಗಳಿಗೆ ಎಷ್ಟು ಕೊಟ್ಟಿದ್ದಾರೆ, ಆರ್.ಎಸ್.ಎಸ್.ಗೆ ಎಷ್ಟು ಕೊಟ್ಟಿದ್ದಾರೆ (**ಗೊಂದಲ**) ವಿಶ್ವವಿದ್ಯಾಲಯಕ್ಕೆ ಎಷ್ಟು ಕೊಟ್ಟಿದ್ದಾರೆ. . .

**ಸಭಾಪತಿಯವರು:–** ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಹಗಲು ದರೋಡೆ. ಮಾನ್ಯ ಸಚಿವರು ಇದು ಕ್ಯಾಬಿನೆಟ್ ತೀರ್ಮಾನ ಎಂದು ಹೇಳುತ್ತಾರೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದರೆ illegal ಆಗಿರುವಂಥದ್ದು legal ಆಗುತ್ತದೆಯೇ?

**(ಗೊಂದಲ)**

**ಸಭಾಪತಿಯವರು:–** ಆಯಿತು ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ ತಕ್ಷಣ illegal ಆಗಿರುವಂಥದ್ದು legal ಆಗುತ್ತದೆಯೇ? ಅದು ಏಳು ಕೋಟಿ ತೊಂಭತ್ತೆರಡು ಲಕ್ಷ ಮೂರು ಸಾವಿರ ಬೆಲೆ ಬಾಳುವಂತಹ ಸೈಟು;

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಇದು ಪ್ರಶ್ನೋತ್ತರ ವೇಳೆ. ಈಗಾಗಲೇ ಹತ್ತು ನಿಮಿಷವಾಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ವೇಳೆಯೇ. ನಾನು ಒಪ್ಪಿಕೊಂಡೆ. ನಾನು ಎಲ್ಲದರಲ್ಲಿಯೂ ಮೂಗು ತೂರಿಸುವುದಿಲ್ಲ.

**ಸಭಾಪತಿಯವರು:–** ನಾನು ಪ್ರಶ್ನೋತ್ತರ ವೇಳೆಯನ್ನು 75 ನಿಮಿಷಕ್ಕೆ ಮುಕ್ತಾಯ ಮಾಡುತ್ತೇನೆ. ಉಳಿದವರ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ ಎಂದು ಈಗಲೇ ಹೇಳುತ್ತೇನೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಎಸ್. ಸುರೇಶ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇದು ಚರ್ಚೆಯಾಗಬೇಕು.

**ಸಭಾಪತಿಯವರು:–** ನಾನು ಸದನವನ್ನು ಹೇಗೆ ನಡೆಸಬೇಕು? (**ಗೊಂದಲ**) ಇದು ಪ್ರಶ್ನೋತ್ತರ ವೇಳೆ. ಬೇರೆ ರೂಪದಲ್ಲಿ ಕಳುಹಿಸಿ.

(ಗೊಂದಲ)

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಚರ್ಚೆ ಮಾಡೋಣ.

**ಸಭಾಪತಿಯವರು:-** ಒಂದು ನಿಮಿಷ, ನಿಮಗೆ ತಿಳುವಳಿಕೆ ಇದೆಯೋ ಇಲ್ಲವೋ? ಪ್ರಶ್ನೋತ್ತರ ವೇಳೆಯಲ್ಲಿ ನಡುವೆ ಎದ್ದೆದ್ದು ಮಾತನಾಡಿದರೆ ಇದು ಧರ್ಮಶಾಲೆಯೇ? ನಿಮಗೇತಕ್ಕೆ ಬೇಕದು?

**Sri IVAN D'SOUZA:** It is not the question of Congress Party. ಅವರು ಎಷ್ಟು ಮಾಡಿದ್ದಾರೆ ಅದರ ಬಗ್ಗೆ ಪ್ರಶ್ನೆ ಇದೆ.

**ಸಭಾಪತಿಯವರು:-** ಮಾನ್ಯ ಚೀಫ್ ವಿಪ್‌ರವರೇ, ನಾನು ಈಗಲೇ ಹೇಳುತ್ತಿದ್ದೇನೆ, 75 ನಿಮಿಷವಾದ ಮೇಲೆ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯ ಮಾಡುತ್ತೇನೆ, ಉಳಿದವರ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುತ್ತೇನೆ. ಆಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ. ನಾನು ಯೀಲ್ಡ್ ಆಗಿಲ್ಲ.

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, they can ask supplementary questions. ಸಿ.ಎ. ಸೈಟುಗಳನ್ನು ಸಂಘಸಂಸ್ಥೆಗಳಿಗೆ ಕೊಡುವುದು, ರಾಜಕೀಯ ಪಕ್ಷಗಳಿಗೆ ಕೊಡುವುದು ಆಗಿನಿಂದಲೂ ನಡೆದುಕೊಂಡು ಬಂದಿರುವುದು. ಇದೇನೂ ಹೊಸದಾಗಿ 2023ರಲ್ಲಿ ಪ್ರಾರಂಭವಾದುದಲ್ಲ. ಪ್ರಶ್ನೆ ಕೇಳಿದ ಮಾನ್ಯ ಸದಸ್ಯರಾದ ಅರುಣ್‌ರವರು ಸಂಘ-ಸಂಸ್ಥೆಗೆ ಎರಡು ಸಿ.ಎ. ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಅತ್ಯಂತ ರಿಯಾಯಿತಿ ದರದಲ್ಲಿ ಅವರೇ ತೆಗೆದುಕೊಂಡಿದ್ದಾರೆ. ಹಾಗಾದರೆ ತಮಗೆ ಒಂದು ನ್ಯಾಯ, ಇದಕ್ಕೊಂದು ನ್ಯಾಯವೇ? I will get the details. ನೀವು ಬಂದಾಗ ನಾನೇ ಕ್ಯಾಬಿನೆಟ್‌ನಲ್ಲಿ ಮಾಡಿಕೊಟ್ಟೆ.

**ಶ್ರೀ ಡಿ.ಎಸ್. ಅರುಣ್:-** ಇಲ್ಲ, ರಿಯಾಯಿತಿಯಲ್ಲಲ್ಲ. ತಪ್ಪು ಮಾಹಿತಿ ಕೊಡುತ್ತಿದ್ದಾರೆ.

**ಶ್ರೀ ಬಿ.ಎಸ್. ಸುರೇಶ:-** ನೀವು ತೆಗೆದುಕೊಂಡಿದ್ದು ಯಾವಾಗ?

**ಶ್ರೀ ಡಿ.ಎಸ್. ಅರುಣ್:-** 30 ವರ್ಷಗಳ ಹಿಂದೆ.

**ಶ್ರೀ ಬಿ.ಎಸ್. ಸುರೇಶ:-** 30 ವರ್ಷಗಳ ಹಿಂದೆ ರಿಯಾಯಿತಿ ದರದಲ್ಲಿ ನಿವೇಶನವನ್ನು ತೆಗೆದುಕೊಂಡಿದ್ದೀರೋ ಇಲ್ಲವೋ? ಆ ಬೆಲೆಯನ್ನು ಕೊಟ್ಟಿದ್ದೀರಾ?

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, . . .

**ಶ್ರೀ ಬಿ.ಎಸ್. ಸುರೇಶ:-** ಆ ಕಾಲದಲ್ಲಿಯೂ ಇವರು; ಇವರು ತಪ್ಪು ಹೇಳುತ್ತಿದ್ದಾರೆ. ನಾನು ತಪ್ಪಾಗಿ ಹೇಳುತ್ತಿಲ್ಲ.

**ಶ್ರೀ ಡಿ.ಎಸ್. ಅರುಣ್:-** ೩೦ ವರ್ಷದ ಹಿಂದೆ ಏನು ದರವಿತ್ತೋ . . .

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ ಕುಳಿತುಕೊಂಡು ಕೇಳಿ.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ತಪ್ಪು ಹೇಳುತ್ತಿಲ್ಲ. ಮಾನ್ಯ ಸದಸ್ಯರು ಜನಗಳ ಅನುಕೂಲಕ್ಕೋಸ್ಕರ ಮಾಡಿದರು ಅದನ್ನು ನಾನು ಅಲ್ಲಗಳೆಯುತ್ತಿಲ್ಲ. ಯಾವುದೋ ಸಂಘ-ಸಂಸ್ಥೆಗೆ ಅವರೂ ತೆಗೆದುಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಹಲವಾರು ಕಡೆ ಬಿ.ಜೆ.ಪಿ. ಕಛೇರಿಗಳಿಗೆ ಸಹ ನಗರಾಭಿವೃದ್ಧಿ ಇಲಾಖೆಯಿಂದ ಇಷ್ಟೇ ದರಕ್ಕೆ ಕೊಟ್ಟಿದ್ದೇವೆ. ಎಷ್ಟು ಪರ್ಸೆಂಟ್ ಎಂದು ಲೆಕ್ಕ ಹಾಕಿ ಕೊಡುತ್ತೇವೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಬಿ.ಜೆ.ಪಿ. ಕಛೇರಿಗೆ ಎಷ್ಟು ಪರ್ಸೆಂಟ್‌ಗೆ ತಗೆಗೆದುಕೊಂಡಿದೆ ಎಂಬುದನ್ನು ತಿಳಿಸಿ.

**ಶ್ರೀ ಕೇಶವ ಪ್ರಸಾದ್. ಎಸ್:-** ನಾವು ತೆಗೆದುಕೊಂಡಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ತರಹ ಶೇ.5ಕ್ಕೆ ತೆಗೆದುಕೊಂಡಿದ್ದೇವಾ? ಐದು ಲಕ್ಷ ರೂಪಾಯಿಗಳಿಗೆ ಒಂದು ಎಕರೆ ಭೂಮಿಯನ್ನು ತೆಗೆದುಕೊಂಡಿದ್ದೇವಾ ಹೇಳಿ?

**(ಗೊಂದಲ)**

**ಸಭಾಪತಿಯವರು:-** ಸಾಕು ಕುಳಿತುಕೊಳ್ಳಿ. ಸಿ.ಟಿ. ರವಿಯವರೇ ಪ್ರಶ್ನೆ ಕೇಳಿ.

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತಿದ್ದೇನೆ. ಬೆಳಗಾವಿಯಲ್ಲಿ 4,೦೦೦ ರೂಪಾಯಿಯ . . . 5೦೦ ರೂಪಾಯಿಗೆ ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** 5,೦೦೦ ರೂಪಾಯಿಗಳಿಗೆ ಒಂದು ಎಕರೆ ಜಾಗವನ್ನು ತೆಗೆದುಕೊಂಡಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕ್ಯಾಬಿನೆಟ್ ಮಾಡಿದೆ (**ಗೊಂದಲ**) ಇದು ಅನ್ಯಾಯವೇ.

**(ಗೊಂದಲ)**

**ಶ್ರೀ ಬಿ.ಎಸ್. ಸುರೇಶ:-** ಮಾನ್ಯ ಸಭಾಪತಿಯವರೇ, ಒಂದು ಚದರ ಅಡಿಗೆ 1೦,೦೦೦ ರೂಪಾಯಿ ಇರುವಂಥಹ ಜಾಗವನ್ನು 5೦೦ ರೂಪಾಯಿಗಳಿಗೆ . . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದು 5% ಇದೆ.

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೇ, ನಾನು ಎರಡನೇ ಪ್ರಶ್ನೆಯನ್ನು ಕೇಳಿಯೇ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಯಾವುದೂ ಕಡತಕ್ಕೆ ಹೋಗಬಾರದು. ನಾನು allow ಮಾಡುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶದಂತೆ ಈ ಹಂತದಲ್ಲಿಯ ನಡವಳಿಯನ್ನು ದಾಖಲಿಸಿರುವುದಿಲ್ಲ)**

ನಾನು ಹೇಳುತ್ತಿದ್ದೇನೆ ಕೇಳಿ. ಕಡತಕ್ಕೆ ಯಾವುದೂ ಹೋಗುವುದಿಲ್ಲ. ನೀವು ಏನೂ ಮಾತನಾಡಬೇಡಿ, ಮುಗಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡುತ್ತಿರುವುದು ಅನ್ಯಾಯ.

**ಸಭಾಪತಿಯವರು:–** ನಾನು ಏನು ಮಾಡಬೇಕು ಹೇಳಿ. ಇದು ಪ್ರಶ್ನೋತ್ತರ ವೇಳೆ. ಬೇರೆ ರೂಪದಲ್ಲಿ ಕಳುಹಿಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನಾವು ತಮ್ಮನ್ನು ಕೇಳಬೇಕು. ನೀವು ಸರ್ಕಾರಕ್ಕೆ ಹೇಳಬೇಕು. ನೀವು ಮಾತನಾಡುವುದೇ ಬೇಡ ಎಂದರೆ, ಇವರು ಲೂಟಿ ಮಾಡಲಾ?

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಸುಳ್ಳು ಹೇಳಬೇಡಿ.

**ಶ್ರೀ ಬಿ.ಎಸ್. ಸುರೇಶ:–** ಚಾಣಕ್ಯ ವಿಶ್ವವಿದ್ಯಾಲಯ ನಮ್ಮದೇ? ಸುಮ್ಮನೆ ಸುಳ್ಳು ಹೇಳಬೇಡಿ. ಬರೀ ಸುಳ್ಳು ಹೇಳುವುದೇ ಆಯಿತು.

**(ಗೊಂದಲ)**

**ಶ್ರೀ ಪಿ.ಹೆಚ್. ಪೂಜಾರ್:–** ನಾವು ಕೊಟ್ಟಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ಇದು ಪ್ರಶ್ನೋತ್ತರ ವೇಳೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ನಿಮಗೆ ಸಮಾಧಾನವಾಗದಿದ್ದರೆ ಬೇರೆ ರೂಪದಲ್ಲಿ ಕಳುಹಿಸಿ. ನಾನು allow ಮಾಡುತ್ತೇನೆ.

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೇ, ಎರಡನೇ ಪ್ರಶ್ನೆ . . .

**ಸಭಾಪತಿಯವರು:–** ಮಾನ್ಯ ಅರುಣ್‌ರವರೇ, ಕುಳಿತುಕೊಳ್ಳಿ. ನಿಮಗೆ ಏನಾದರೂ common sense ಇರಬೇಕು. ಸುಳ್ಳು ಹೇಳುತ್ತಾರೋ ಸತ್ಯವನ್ನು ಹೇಳುತ್ತಾರೋ, ಪ್ರಶ್ನೋತ್ತರ ವೇಳೆಯಲ್ಲಿ if you are not satisfied with the answer given by the minister, you can give it in another form

and I will take it up in the House. ನಿಮ್ಮ ಪ್ರಶ್ನೆ 11 ಗಂಟೆ 25 ನಿಮಿಷಕ್ಕೆ ಪ್ರಾರಂಭವಾಗಿದೆ. ಈಗ ಎಷ್ಟು ಸಮಯವಾಗಿದೆ ನೋಡಿ. ಬೇರೆ ರೂಪದಲ್ಲಿ ಕೊಡುವುದಾದರೆ ಕೊಡಿ.

**ಶ್ರೀ ಡಿ.ಎಸ್. ಅರುಣ್:–** ಇನ್ನೊಂದು ಪ್ರಶ್ನೆ ಕೇಳುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಕೇಳುವವರ ಸಮಯ ಲ್ಯಾಪ್ಸ್ ಆದರೆ ನನ್ನನ್ನು ಕೇಳಬೇಡಿ.

**ಶ್ರೀ ಡಿ.ಎಸ್. ಅರುಣ್:–** ಇನ್ನೊಂದು ಪ್ರಶ್ನೆ ಕೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಕೊಡಿ. ರೂಲ್ಸ್ ಅನ್ನು ಓದಿಕೊಳ್ಳಿ. ಸ್ವಲ್ಪವೂ ತಿಳುವಳಿಕೆ ಇಲ್ಲವೇ? ಈಗ ಸಿ.ಟಿ. ರವಿಯವರೇ ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ: ೮೦6**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಆಗಿರುವ ಹೂಡಿಕೆ ಒಪ್ಪಂದಗಳೆಷ್ಟು? ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹೂಡಿಕೆಯಾಗಿದೆ? ಹಾಗೆಯೇ ಅನುಮತಿ ನೀಡಿರುವ ಪ್ರಸ್ತಾವನೆಗಳು ಯಾವುವು ಎಂದು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ಉಳಿದ ಪ್ರಶ್ನೆಯನ್ನು ಕೇಳುತ್ತೇನೆ.

(ಮುಂದು)

(260) 10-03-2026 11-40 KH/RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ಹೇಳಬೇಕು.

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸದಸ್ಯರೇ, ಅದನ್ನು ಓದಿ ಹೇಳಬೇಕೇ? ಒಂದು ನಿಮಿಷ ಕುಳಿತುಕೊಳ್ಳಿ. "ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ರೂ.6,70,560 ಕೋಟಿ ಬಂಡವಾಳ ಹೂಡಿಕೆ ಮತ್ತು 2,47,571 ಉದ್ಯೋಗ ಸೃಜನೆಗಾಗಿ ಒಟ್ಟು 117 ಹೂಡಿಕೆ ಒಪ್ಪಂದಗಳು ಆಗಿವೆ" ಈ ವಿವರಗಳನ್ನು ಅನುಬಂಧ-1 ರಲ್ಲಿ ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ಎರಡನೆಯದಾಗಿ, ದಿನಾಂಕ:01-02-2026 ರವರೆಗೆ ಸರ್ಕಾರ ಅನುಮತಿ ನೀಡಿರುವ ಪ್ರಸ್ತಾವನೆಗಳು ಯಾವುವು? ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ, "ಒಡಂಬಡಿಕೆ ಮಾಡಿಕೊಂಡಿರುವ ಯೋಜನೆಗಳ ಪೈಕಿ ಒಟ್ಟು 57 ಯೋಜನೆಗಳು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಅನುಮೋದನೆ ಪಡೆದಿರುತ್ತವೆ. ಇವುಗಳಿಂದ ರೂ.79,907.94 ಕೋಟಿ ಬಂಡವಾಳ ಹೂಡಿಕೆ ಮತ್ತು 55,729 ಉದ್ಯೋಗ ಸೃಜನೆ ನಿರೀಕ್ಷಿಸಲಾಗಿದೆ. ಅನುಮೋದನೆಯಾಗಿರುವ 57 ಯೋಜನೆಗಳ ಪೈಕಿ 6 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ.6,900.14 ಕೋಟಿ ಬಂಡವಾಳ ಹೂಡಿಕೆಯಾಗಿದೆ ಮತ್ತು 6,654 ಉದ್ಯೋಗ ಸೃಜನೆಯಾಗಿದ್ದು, ಬಾಕಿ ಯೋಜನೆಗಳು ಅನುಷ್ಠಾನ ಹಂತದಲ್ಲಿರುತ್ತವೆ. ಇವುಗಳು ಬೃಹತ್ ಕೈಗಾರಿಕೆಗಳಾಗಿರುವುದರಿಂದ, ಅನುಷ್ಠಾನಕ್ಕೆ ಕನಿಷ್ಠ 3 ರಿಂದ 5 ವರ್ಷಗಳು ಬೇಕಾಗುತ್ತದೆ" ಎನ್ನುವ ವಿವರಗಳನ್ನು ಅನುಬಂಧ-2 ರಲ್ಲಿ ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಇದರ ಬಗ್ಗೆ ಉತ್ತರದಲ್ಲಿ ಇದೆಯಲ್ಲವೇ?

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಇದೆ. ಮಾನ್ಯ ಸದಸ್ಯರು ಓದಿ ಹೇಳಬೇಕೆಂದು ಹೇಳಿದರು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರದಲ್ಲಿ ವಿವರವಾಗಿ ಕೊಟ್ಟಿದ್ದಾರೆ. ಈಗ ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ತಾವು ಇದರಲ್ಲಿ ಕನ್ನಡಿಗರಿಗೆ ಮತ್ತು ಕರ್ನಾಟಕದವರಿಗೆ ಎಷ್ಟು ಉದ್ಯೋಗಗಳನ್ನು ಕೊಡಲಾಗಿದೆ. ಇದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆಯೇ? ಹಾಗೆಯೇ, ಒಪ್ಪಂದ, ಅನುಮೋದನೆ ಮತ್ತು ಅನುಷ್ಠಾನದಲ್ಲಿ ಅಗಾಧವಾದ ಅಂತರ ಇದೆ. 117 ಹೂಡಿಕೆ ಒಪ್ಪಂದಗಳು ಆಗಿದ್ದು, ಇದರಲ್ಲಿ 57 ಯೋಜನೆಗಳಿಗೆ ಅನುಮೋದನೆಯಾಗಿದೆ. ಹಾಗೆಯೇ 22 ಕಂಪನಿಗಳಿಗೆ ಜಮೀನನ್ನು ಕೊಟ್ಟು ಅನುಷ್ಠಾನ ನೀಡಲಾಗಿದೆ. ಈ ಅಂತರ ಏಕೆ? ನಾನು 3 ವರ್ಷಗಳ ಮಾಹಿತಿಯನ್ನು ಕೇಳಿದ್ದು, ಅನುಮೋದನೆಯಾಗಿರುವುದು, ಅದಕ್ಕೆ ಒಪ್ಪಂದ ಆಗಿರುವುದು ಮತ್ತು ಅನುಷ್ಠಾನಗೊಂಡಿರುವ ನಡುವೆ ಅಗಾಧವಾದ ಅಂತರ ಏಕೆ?

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ, ಅವರು MoU ಸಹಿ ಮಾಡಿ, ಇದಕ್ಕೆ ಅಪ್ಲೈ ಮಾಡುತ್ತಾರೆ. ಅನೇಕ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪಿ.ಎಲ್.ಐ., ಸ್ಕೀಮ್‌ಗಳು, incentives ಬರುತ್ತವೆ. ಹಾಗೆಯೇ ಭೂಮಿಯನ್ನು ಕೇಳುತ್ತಿರುತ್ತಾರೆ. ನಾವು ಕೊಡುತ್ತಿರುತ್ತೇವೆ. ಇದು ವಿವಿಧ ಹಂತಗಳಲ್ಲಿ ಇದೆ. ಬಹುಶಃ 2022 ರಲ್ಲಿ ಅವರ ಸರ್ಕಾರ ಇದ್ದಾಗ Global Investors' Meet ಆಗಿತ್ತು. ಆ ಪಟ್ಟಿ ನನ್ನ ಕಡೆ ಇದೆ. ನಾನು ಕೈಗಾರಿಕಾ ಸಚಿವನಾದ ಮೇಲೆ G.I.M ನಲ್ಲಿ conversion 10,27,000 ಕೋಟಿ ರೂಪಾಯಿಗಳು ಇತ್ತು. ಇದರಲ್ಲಿ ಈಗಾಗಲೇ we have reach… ಕೊನೆಯ 11 ತಿಂಗಳನದ್ದು ಕೊಡುತ್ತಿದ್ದೇವೆ. ಈಗ 12 ತಿಂಗಳಿಗೆ ಬಂದಿದೆ. ಇವತ್ತಿನ ದಿವಸ manufacturing ನಲ್ಲಿ ಶೇಕಡಾ 58 ರಷ್ಟು beyond Bengaluru conversion ಆಗುತ್ತಿದೆ. ಶೇಕಡಾ 48 ರಷ್ಟು overall conversion ಆಗಿದೆ. Historically, ಯಾವತ್ತು ಈ ರೀತಿ ಆಗಿಲ್ಲ. ಇವತ್ತು ಆಗಿದೆ. ನಾನು ಹಿಂದಿನ ವಿಚಾರಕ್ಕೆ ಹೋಗುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ 2022 ರಲ್ಲಿ ಎಷ್ಟು conversion ಆಗಿತ್ತು, ಏನೇನು MoU ಸಹಿ ಮಾಡಿದ್ದರು. ಅದು ಯಾವ ರೀತಿ ಇತ್ತು. ಅದರಲ್ಲಿ ಏನೇನಾಯಿತು ಎನ್ನುವ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಭೂಮಿ ಕೇಳಿದ್ದರು. ಅವರಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಭೂಮಿ ಕೊಟ್ಟಿಲ್ಲ ಎಂದು ಹೇಳಿದರು. ನಾವು ಭೂಮಿ ವಿಚಾರದಲ್ಲಿ ಯಾರು Industrialists ಭೂಮಿ ಕೇಳುತ್ತಾರೆ. ನಾವು ಯಾರಿಗೂ

deny ಮಾಡುವುದಿಲ್ಲ. We have been given ಅವರಿಗೆ ಎಷ್ಟು ಭೂಮಿ ಬೇಕು. ಅಷ್ಟು ನಮ್ಮ ಹತ್ತಿರ ಭೂಮಿ ಇದೆ. ನಾವು ಭೂಮಿಯನ್ನು ಕೊಡುತ್ತಿದ್ದೇವೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಕನ್ನಡಿಗರಿಗೆ ಮತ್ತು ಕರ್ನಾಟಕದವರಿಗೆ ಎಷ್ಟು ಉದ್ಯೋಗಗಳನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅವರು ಉತ್ತರವನ್ನು ಕೊಡಲಿಲ್ಲ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿ.ಟಿ.ರವಿ:–** ಮಾನ್ಯ ಸಚಿವರೇ, ಒಂದು ನಿಮಿಷ. ಎಲ್ಲಾ ಸೇರಿಸಿ ಹೇಳಿ. ಇನ್ನೊಂದು . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ Industrial Policy ಯಲ್ಲಿ ಯಾರು ನಮ್ಮ incentives, ರಿಯಾಯಿತಿ ತೆಗೆದುಕೊಳ್ಳುತ್ತಾರೆ. ಅವರಿಗೆ ಗ್ರೂಪ್–ಡಿ ನಲ್ಲಿ ಶೇಕಡಾ 100 ರಷ್ಟು ಮೀಸಲಾತಿ ಕೊಡಬೇಕು. Overall ಶೇಕಡಾ 70 ರಷ್ಟು ಕೊಡಬೇಕೆಂದು ಇದೆ. ಅದರ ಮಾಹಿತಿಯನ್ನು ಅವರಿಗೆ ಕೊಡುತ್ತೇನೆ. ಬಹಳಷ್ಟು industries ಆಗುತ್ತದೆ. ಬೇರೆ ಪ್ರಶ್ನೆ ಬಂದಾಗ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. Overall ಶೇಕಡಾ 70 ರಷ್ಟು, ಗ್ರೂಪ್–ಡಿ ನಲ್ಲಿ ಶೇಕಡಾ 100 ರಷ್ಟು ಇರುತ್ತದೆ. ಯಾವ ಯಾವ ಇಂಡಸ್ಟ್ರಿಗಳು ಏನೇನು ಮಾಹಿತಿಗಳು ಕೊಟ್ಟಿದ್ದಾರೆ. ಆ ಮಾಹಿತಿಗಳನ್ನು ಕೊಡುತ್ತೇನೆ. ಎಲ್ಲಾ ಮಾಹಿತಿಗಳು ನಮ್ಮ ಹತ್ತಿರ ಸಿದ್ಧವಾಗಿ ಇದೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಭೂಮಿ, ನೀರು, ವಿದ್ಯುತ್ ಅನ್ನು ಕಡಿಮೆ ದರದಲ್ಲಿ ಪಡೆದಿರುವಂತಹ ಎಲ್ಲಾ ಕೈಗಾರಿಕೆಗಳಿಗೂ ಒಂದು Social Audit ಮಾಡಿಸಬೇಕು. ಕರ್ನಾಟಕದವರಿಗೆ ಎಷ್ಟು ಉದ್ಯೋಗವನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಒಂದು Social Audit ಆದರೆ, ಅದರ ಆಧಾರದಲ್ಲಿ ನಾವು ಡಾ॥ ಸರೋಜಿನಿ ಮಹಿಷಿ ವರದಿ ಅನುಷ್ಠಾನಗೊಂಡಿದೆಯೋ, ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ವಿಷಯವೇನೆಂದರೆ, ದಿನಾಂಕ: 16–01–2026 ರಂದು ಮಾನ್ಯ ಕೈಗಾರಿಕಾ ಸಚಿವರ '11 ತಿಂಗಳಿನಲ್ಲಿ 4,71,000 ಕೋಟಿ ರೂಪಾಯಿಗಳ ಹೂಡಿಕೆ' ಎಂಬ ಹೇಳಿಕೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದೆ. ದಿನಾಂಕ: 18–01–2026 ರಂದು ಮಾನ್ಯ ಕೈಗಾರಿಕಾ ಸಚಿವರ 'ರಾಜ್ಯದಲ್ಲಿ ಒಂದು ವರ್ಷದಲ್ಲಿ 1,53,000 ಕೋಟಿ ರೂಪಾಯಿಗಳ ಹೂಡಿಕೆ' ಎಂಬ ಇನ್ನೊಂದು ಹೇಳಿಕೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಈ ಎರಡು ಹೇಳಿಕೆಗಳನ್ನು ಮಾನ್ಯ ಎಂ.ಬಿ.ಪಾಟೀಲ್‌ರವರೇ ನೀಡಿದ್ದು, ಇವುಗಳಲ್ಲಿ ಯಾವುದು ಸತ್ಯ? 4,71,000 ಕೋಟಿ ರೂಪಾಯಿಗಳು ಸತ್ಯವೇ ಅಥವಾ 1,53,000 ಕೋಟಿ

ರೂಪಾಯಿಗಳು ಸತ್ಯವೇ? ಎರಡೇ ದಿನಗಳ ಈ ಎರಡು ಹೇಳಿಕೆಗಳಲ್ಲಿ ಲಕ್ಷಗಳ ಮೊತ್ತದಲ್ಲಿ ಇಷ್ಟು ಅಗಾಧವಾದ ವ್ಯತ್ಯಾಸ ಏಕೆ? ಎರಡು ಹೇಳಿಕೆಗಳು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿಯೇ ಬಂದಿದ್ದು, ಎರಡೂ ಹೇಳಿಕೆಗಳನ್ನು ಮಾನ್ಯ ಸಚಿವರೇ ಹೇಳಿದ್ದಾರೆ. ಇದರಲ್ಲಿ ಯಾವುದನ್ನು ನಂಬಬೇಕು.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿಕೆಗಳನ್ನು ಓದಿರುವುದು ಸರಿಯಾಗಿ ಇದೆ. ಇದರಲ್ಲಿ ಎರಡು ಇದೆ. Global Investors' Meet ಸಹಿ ಮಾಡಿರುವುದು ಒಂದು ಹೇಳಿಕೆ. ಎರಡನೆಯದಾಗಿ ನಮ್ಮ Global Investors' Meet ಆದ ಮೇಲೆ ನಾವು ಸಹಿ ಮಾಡಿರುವಂತಹದ್ದು. ಹೀಗಾಗಿ ಗೊಂದಲ ಮಾಡಿಕೊಳ್ಳಬಾರದು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ಬಿ. ಪಾಟೀಲ:–** ದಯವಿಟ್ಟು, ನಾನು ಹೇಳುವುದನ್ನು ಕೇಳಬೇಕು. ತಾವು ಅದನ್ನು ನೋಡಿಕೊಂಡರೆ ಗೊತ್ತಾಗುತ್ತದೆ. ತಮಗೆ ಅಂಕಿ–ಅಂಶಗಳನ್ನು ಕೊಡುತ್ತೇನೆ. Global Investors' Meet ನಲ್ಲಿ 4,71,000 ಕೋಟಿ ರೂಪಾಯಿಗಳ ಹೂಡಿಕೆ ಆಗಿರುವಂತಹದ್ದು. Global Investors' Meet ಆದ ಮೇಲೆ, not restricted to Global Investors' Meet ಆಗಿದ್ದು, ಅದನ್ನು ಹೊರತುಪಡಿಸಿ ಎರಡನೆಯದು ಆಗಿರುವಂತಹದ್ದು. ತಮಗೆ ಈ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರು ಎರಡರಲ್ಲೂ ಒಂದು ವರ್ಷದ ಅಂಕಿ–ಅಂಶಗಳನ್ನೇ ಕೊಟ್ಟಿದ್ದು, ಅದರಲ್ಲಿ Global Investors' Meet ಎಂದು ಹೇಳಿದ್ದರೆ ಗೊಂದಲ ಸೃಷ್ಟಿಯಾಗುತ್ತಿರಲಿಲ್ಲ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸದಸ್ಯರೇ, ಇಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಎರಡರಲ್ಲೂ ಒಂದು ವರ್ಷದ್ದೇ . . .

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಚಿವರೇ, ನಾನು ಪ್ರತಿಯನ್ನು ಕಳುಹಿಸುತ್ತೇನೆ ನೋಡಿ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸದಸ್ಯರೇ, ಇದರ ಬಗ್ಗೆ ನನಗೆ ಗೊತ್ತಿದೆ. ನಾನು ಹೇಳುತ್ತೇನೆ ಕೇಳಿ. ತಾವು ಗೊಂದಲ ಮಾಡಿಕೊಳ್ಳಬೇಡಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಚಿವರೇ, ಇದರಲ್ಲಿ ಹೇಳಿಲ್ಲ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, Global Investors' Meet ಆಗಿರುವಂತಹದ್ದು ಒಂದು ಅಂಕಿ–ಅಂಶ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಚಿವರೇ, . . .

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸದಸ್ಯರೇ, ತಾವು ಸ್ವಲ್ಪ ಕೇಳಿಸಿಕೊಳ್ಳಿ. ತಮಗೆ ಯಾವ ರೀತಿ ಬೇಕೋ, ಆ ರೀತಿಯಲ್ಲಿಯೇ ತಮಗೆ ಬರೆದು ಕೊಡುತ್ತೇನೆ. Global Investors' Meet ನಲ್ಲಿ 4,71,000 ಕೋಟಿ

ರೂಪಾಯಿಗಳ ಹೂಡಿಕೆ ಆಗಿರುವಂತಹದ್ದು. ನಾನು ಆಗಲೇ ಶೇಕಡಾವಾರು ಹೇಳಿದ್ದೇನೆ. ಶೇಕಡಾ 48 ರಿಂದ 58 ರಷ್ಟು ಆಗಿದೆ. Beyond Bengaluru ಕೂಡ ಹೇಳಿದ್ದೇನೆ. ಕೇವಲ Global Investors' Meet ಅಷ್ಟೇ investment ಅಲ್ಲ. Global Investors' Meet ಆದ ಮೇಲೆ ಸುಮಾರು 1 ಲಕ್ಷದ ಇನ್‌ವೆಸ್ಟ್‌ಮೆಂಟ್ ಬಗ್ಗೆ ಹೇಳಿದ್ದೇನೆ. ಅವರಿಗೆ ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ಅಷ್ಟೇ ಅಲ್ಲದೇ ಇನ್ನು ಬಹಳಷ್ಟು pipeline ನಲ್ಲಿ ಇವೆ. ಒಂದು Global Investors' Meet, ಇನ್ನೊಂದು Global Investors' Meet ಆದಮೇಲೆ ಮತ್ತು ಇನ್ನು ಅನೇಕ ಯೋಜನೆಗಳು After Global Investors' Meet, after commitment ಗಳೆಂದು 3ನೇ ಪಟ್ಟಿ ಇದೆ. After Global Investors' Meet, ಏನು pipeline ಆಗಿದೆ. ಅದರ ಪ್ರತಿಯನ್ನು ತಮಗೆ ಕಳುಹಿಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಉಪ ಪ್ರಶ್ನೆಯೇನೆಂದರೆ, ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತ ಹೂಡಿಕೆಗೆ ತುಂಬಾ ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಾರೆ. ನಾನು ಪಟ್ಟಿ ತೆಗೆದು ನೋಡುತ್ತಿದ್ದೆ. ಬೆಂಗಳೂರು, ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಇದೆ. ರಾಜ್ಯದ ಉಳಿದ ಭಾಗಗಳಲ್ಲಿ ಕೈಗಾರಿಕೆ ಹೂಡಿಕೆಗೆ ಆ ರೀತಿಯ ನಿರೀಕ್ಷಿತ ಪ್ರಮಾಣದಲ್ಲಿ ಬರುತ್ತಿಲ್ಲ. ನಮಗೆ ಅಲ್ಲಿಂದ ಗುಳೆ ಹೋಗುವುದನ್ನು ತಪ್ಪಿಸಬೇಕೆಂದರೆ, comprehensive development ಗೆ ತಮ್ಮ ಹತ್ತಿರ ಇರುವ ಯೋಜನೆಗಳು ಏನು? ಬೇರೆ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಗೆ ಏನು ಕ್ರಮ ಕೈಗೊಂಡಿದ್ದಾರೆ?

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಪ್ರಥಮ ಬಾರಿಗೆ ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಾಗ `Beyond Bengaluru' ಎಂದು campaign ಮಾಡಿದ್ದರು, ಆಗ conversion ಆಗಿರಲಿಲ್ಲ. ಪ್ರಥಮ ಬಾರಿಗೆ ನಾವು Global Investors' Meet ನಲ್ಲಿ overall around 70% Beyond Bengaluru, including ಇದರಲ್ಲಿ ಕೋಲಾರ ಬರುತ್ತದೆ. ಮತ್ತೆ ಉತ್ತರ ಕರ್ನಾಟಕವನ್ನು ತೆಗೆದುಕೊಂಡರೆ ಶೇಕಡಾ 45 ರಷ್ಟು ಬರುತ್ತಿದ್ದು, ಉತ್ತರ ಕರ್ನಾಟಕದಲ್ಲಿ ಹೈದರಾಬಾದ್ ಕರ್ನಾಟಕ ಇರಬಹುದು, ಕಿತ್ತೂರು ಕರ್ನಾಟಕ ಇರಬಹುದು, ಮಧ್ಯ ಕರ್ನಾಟಕ ಇರಬಹುದು, ಈ ಬಾರಿ ಇದು ಕೂಡ ಆಗಿದೆ. ಈಗಿನ Industrial Policy 2025–2030 ಹಿಂದೆ ಕೂಡ ಇದ್ದು, ಇದರಲ್ಲಿ ಮೂರು ಝೋನ್‌ಗಳು ಇವೆ. ಝೋನ್–1, ಝೋನ್–2 ಮತ್ತು ಝೋನ್–3 ಎಂದು ಇದೆ. ವಿಜಯಪುರ, ಕಲುಬುರಗಿ ಎಲ್ಲಾ ಝೋನ್–1 ರಲ್ಲಿ ಬರುತ್ತದೆ. ಝೋನ್–1 ಗೆ higher incentive ಇದೆ. ಝೋನ್–2 ಗೆ ಅದಕ್ಕಿಂತ ಕಡಿಮೆ ಇದೆ. ಈಗ ಉದಾಹರಣೆಗೆ Industrial Policy 2025–2030 ರಲ್ಲಿ capital subsidy for large industry, ಝೋನ್–1 ರಲ್ಲಿ ವಿಜಯಪುರ, ಕಲುಬುರಗಿಗೆ ಶೇಕಡಾ 25 ರಷ್ಟು ಇದೆ. ಝೋನ್–2 ಗೆ ಶೇಕಡಾ 20 ರಷ್ಟು ಇದೆ. ಬೆಂಗಳೂರು ಸುತ್ತಮುತ್ತ ಮತ್ತು ಮಧ್ಯದಲ್ಲಿ ಬರುವ ಝೋನ್–3 ರಲ್ಲಿ ಬೆಂಗಳೂರು ರೂರಲ್‌ಗೆ ಶೇಕಡಾ 10 ರಷ್ಟು ಇದೆ. ಬೆಂಗಳೂರು

ಅರ್ಬನ್‌ಗೆ there is no incentive. Performance linked incentives and turnover subsidy ಎಂದು ಎರಡು ಕೊಟ್ಟಿದ್ದೇವೆ. They can choose from them. ಝೋನ್-1 ರಲ್ಲಿ ಶೇಕಡಾ 2.5 ರಷ್ಟು 7 ವರ್ಷಗಳಿಗೆ ಇದೆ. ಝೋನ್-2 ರಲ್ಲಿ ಶೇಕಡಾ 2 ರಷ್ಟು 7 ವರ್ಷಗಳಿಗೆ ಇದೆ. ಝೋನ್-3 ರಲ್ಲಿ ಶೇಕಡಾ 19 ರಷ್ಟು 7 ವರ್ಷಗಳಿಗೆ ಇದೆ.

(ಮುಂದು)

(261) 10-03-2026/11-50/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್(ಮುಂದು)**

ಈ ರೀತಿಯಲ್ಲಿ ನಾವು incentives ಅನ್ನು ಕೊಡುತ್ತಿದ್ದೇವೆ. ಇದಲ್ಲದೇ ಡಾ॥ ಡಿ.ಎಂ. ನಂಜುಂಡಪ್ಪನವರ ವರದಿ ಮೇಲೆ more backward ಇವತ್ತಿನ ದಿವಸ 3%, ಇದ್ದುದ್ದನ್ನು most backward ಗೆ 5% ಮಾಡಿದ್ದೇವೆ. ಅಮೇಲೆ for your kind formation, ನಮ್ಮ ಸರ್ಕಾರ ಬಂದ ಮೇಲೆ ಈ ಸಲ ಏನಾಗಿದೆ ಎಂದರೆ ಈಗ Beyond Bengaluru ಏನಿದೆ, ಉಳಿದ ಕಡೆ highest incentive ನಿಂದಾಗಿ ಇವತ್ತಿನ ದಿವಸ ಕೈಗಾರಿಕೆಗಳು ಬರುತ್ತಿವೆ. Amongst 70%, 48% conversion is in beyond Bengaluru.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಕೈಗಾರಿಕಾ ಪ್ರದೇಶದಲ್ಲಿ ಜಮೀನು ಪಡೆದು ಕೈಗಾರಿಕೆಯನ್ನು ಮಾಡದೇ ಇರುವವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದಕ್ಕೆ ಉತ್ತರವನ್ನು ಕೊಡಬೇಡಿ. ಮುಂದಿನ ಪ್ರಶ್ನೆ.

**ಪ್ರಶ್ನೆ ಸಂಖ್ಯೆ 731**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಅಬ್ದುಲ್ ಜಬ್ಬರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಸಹ ಹಜ್ ಯಾತ್ರೆಗೆ ಹೋಗಿ ಬಂದಿದ್ದೇನೆ. ಅಲ್ಲಿ ಸಣ್ಣಪುಟ್ಟ ಕೆಲವು ತೊಂದರೆಗಳಿವೆ. ಅದರ ಬಗ್ಗೆ ಸ್ವಲ್ಪ ಗಮನಹರಿಸಬೇಕೆಂದು ಹೇಳಿ ಮಾನ್ಯ ಸಚಿವರಿಗೆ ನಾನು ಹೇಳಿದ್ದೇನೆ. ಅದರ ಪ್ರಕಾರ ಹೇಳುವುದಾದರೆ, ವಯಸ್ಸಾದವರು ಏನು ಹಜ್ ಯಾತ್ರೆಗೆ ಹೋಗಿರುತ್ತಾರೆ, ಅವರುಗಳು ಆಕಸ್ಮಿಕವಾಗಿ ಅಲ್ಲಿ ತೀರಿಕೊಂಡರೆ ಅದಕ್ಕೆ ಏನು ಸೌಲಭ್ಯಗಳನ್ನು ಮಾಡಿದ್ದೀರಿ ಎನ್ನುವುದು ಒಂದು ವಿಚಾರ.

ಎರಡನೆಯದಾಗಿ, ಅಲ್ಲಿ ಡಾಕ್ಟರ್‌ಗಳ ಸೌಲಭ್ಯ ಬೇಕಾಗುತ್ತದೆ. ಏಕೆಂದರೆ, ಅಲ್ಲಿ ಲಕ್ಷಾಂತರ ಮಂದಿ ಇರುತ್ತಾರೆ. ಅಲ್ಲಿ ಯಾರಾದರೂ ನಮ್ಮ ಜನಕ್ಕೆ ಕಾಯಿಲೆ–ಕಸಾಯಿ, ಹಾರ್ಟ್–ಅಟ್ಯಾಕ್ ಆದಲ್ಲಿ ಅದಕ್ಕೆ ನೀವು ಏನು ಪರಿಹಾರ ಒದಗಿಸಿದ್ದೀರಿ, ಇಲ್ಲಿಂದ ಏನಾದರೂ ಅಲ್ಲಿಗೆ ಡಾಕ್ಟರ್‌ಗಳು ಹೋಗುತ್ತಾರೆಯೇ ಅಥವಾ ಅಲ್ಲಿನ ಡಾಕ್ಟರ್‌ಗಳ ಸವಲತ್ತನ್ನು ತೆಗೆದುಕೊಳ್ಳುತ್ತೀರಾ ಎನ್ನುವುದು ಗೊತ್ತಾಗಬೇಕು.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):–** ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ಸದಸ್ಯರು 3 ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯ ಪ್ರಶ್ನೆ ಏನೆಂದರೆ, ಎಷ್ಟು ಅರ್ಜಿಗಳನ್ನು ಸ್ವೀಕಾರ ಮಾಡುತ್ತೀರಿ ಎನ್ನುವುದಾಗಿದೆ. ಅದರ ವಿವರವನ್ನು ಕೊಡಲಾಗಿದೆ. ಈಗ ವಿಶೇಷವಾಗಿ ಡಾಕ್ಟರ್‌ಗಳ ಬಗ್ಗೆ ಮತ್ತು ಹಜ್ ಯಾತ್ರೆಗೆ ಹೋದಾಗ ಆಕಸ್ಮಿಕವಾಗಿ ತೀರಿಕೊಂಡಾಗ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಈಗಾಗಲೇ ಅದು ರಾಜ್ಯ ಸರ್ಕಾರಕ್ಕೆ ಬಂದಿದೆ. ಮತ್ತೆ ಸೌದಿ ಸರ್ಕಾರದಿಂದ ಒಂದು ಆದೇಶ ಇದೆ. ಅ ಪ್ರಕಾರ ನಮ್ಮ ರಾಜ್ಯದ ಹಜ್ ಕಮಿಟಿ ಮತ್ತು ರಾಜ್ಯ ಸರ್ಕಾರದವರು ಆ ಸುತ್ತೋಲೆಯನ್ನು ಅನುಸರಿಸಿ. ಮತ್ತೆ ಅವರಿಗೆ ಇಲ್ಲಿಯವರೆಗೆ ಯಾವುದೂ ಸಹ ಪರಿಹಾರ ಇರುವುದಿಲ್ಲ. ಅದರೂ ಸಹ ಹಜ್ ಕಮಿಟಿ ಯಾರು ತೀರಿ ಹೋಗುತ್ತಾರೆ, ಅವರ ಕುಟುಂಬದವರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದೆ. ಅಲ್ಲಿಯೇ ಅದನ್ನು ಹ್ಯಾಂಡ್‌ಓವರ್ ಮಾಡಬೇಕಾಗುತ್ತದೆ. ಅದನ್ನು ಇಲ್ಲಿಗೆ ತರಬೇಕಾದರೆ ತುಂಬಾ ಕಷ್ಟ ಇರುತ್ತದೆ. ಸುಮಾರು ಖರ್ಚು ಇರುತ್ತದೆ. ಅದರ ಸಲುವಾಗಿ ಅವರ ಕುಟುಂಬದವರಿಗೆ ಕರೆಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಕೆ. ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೆ, ನನ್ನ ಉಪ ಪ್ರಶ್ನೆ ಏನೆಂದರೆ 65 ವರ್ಷಗಳಿಗಿಂತ ಮೇಲ್ಪಟ್ಟವರು ಹಜ್ ಯಾತ್ರೆಗೆ ಹೋಗುವವರಿಗೆ ಒಬ್ಬರು ಮಾತ್ರ ಅವರ ಜೊತೆಗೆ ಹೋಗಲಿಕ್ಕೆ ಪರಿಗಣಿಸುತ್ತೇವೆಂದು ಹೇಳಿದ್ದೀರಿ. ಆಕಸ್ಮಾತ್ 3–4 ಜನರು ಅವರ ಜೊತೆಯಲ್ಲಿ ಇದ್ದರೆ ಏನು ಮಾಡಬೇಕೆಂದು ಹೇಳಬೇಕು.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೆ, ಅದೇ ವಿಚಾರವಾಗಿ ನಾನು ಹೇಳುವುದಾದರೆ ಸೌದಿ ಸರ್ಕಾರ ಮತ್ತು ನಮ್ಮ ಭಾರತ ಸರ್ಕಾರದವರು ಈಗಾಗಲೇ ಹೊರಡಿಸಿರುವ ಸುತ್ತೋಲೆ ಪ್ರಕಾರ ಒಬ್ಬರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇನ್ನು ಹೆಚ್ಚು ಬೇಕೆಂದರೆ ನಾವು ಅದಕ್ಕೆ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಪ್ರಶ್ನೆ ಸಂಖ್ಯೆ 755
(ಉತ್ತರನ್ನು ಒದಗಿಸಲಾಗಿದೆ)

**ಡಾ|| ಎಂ.ಜಿ. ಮುಳೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಗೆ ಸವಿಸ್ತಾರವಾದ ಉತ್ತರ ಸಿಕ್ಕಿದೆ. ನನ್ನ ಉಪ ಪ್ರಶ್ನೆ ಏನೆಂದರೆ ಬೀದರ್ ಜಿಲ್ಲೆಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ತಾವು ಉತ್ತರವನ್ನು ಕೊಟ್ಟಿರುವುದು ಸ್ಪಷ್ಟವಾಗಿದೆ. ಮಾನ್ಯ ಸಚಿವರ ಉತ್ತರದ ಅನುಬಂಧ–1 ರಲ್ಲಿ ಹೇಳಿರುವ ಪ್ರಕಾರ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕಾ ವಸಹಾತುಗಳ ಪಟ್ಟಿಯನ್ನು ನೋಡಿದಾಗ ಇದು 2007ಕ್ಕೆ ನಿಂತು ಹೋಗಿರುತ್ತದೆ. 2007 ರಿಂದ 2026ರವರೆಗೆ ಯಾವುದೇ ಒಂದು ಕೈಗಾರಿಕಾ ವಸಹಾತು ಆಗಿರುವುದಿಲ್ಲ. ಇದು ಮೊದಲು 1984 ರಲ್ಲಿ ಪ್ರಾರಂಭವಾಗಿ 2007 ರವರೆಗೂ ಮುಂದುವರೆದಿದೆ. 2007 ನಂತರ ಒಂದು ಸಹ ಕೈಗಾರಿಕಾ ವಸಹಾತು ಪ್ರಾರಂಭವಾಗಿರುವುದಿಲ್ಲ. ಇದರ ಬಗ್ಗೆ ತಮ್ಮ ಸ್ಪಷ್ಟೀಕರಣ ಬೇಕು. ಅನಂತರ ಅನುಬಂಧ –3 ರಲ್ಲಿ STATEMENT SHOWING DETAILS OF UNITS ESTABLIDHED LAST THREE YEARS. ಅದರ investment ಕಾಲಂ ಅನ್ನು ನೋಡಿದರೆ ಲಕ್ಷಗಳಲ್ಲಿ ಇರುತ್ತದೆ. ಔರಾದ್‌ಗೆ 107.79 ಲಕ್ಷಗಳು, ಬಸವಕಲ್ಯಾಣಕ್ಕೆ 30.93 ಲಕ್ಷಗಳು, ಬಾಲ್ಕಿಗೆ 105.18 ಲಕ್ಷಗಳು, ಬೀದರ್ 447.93 ಲಕ್ಷಗಳು. ಹುಮ್ನಾಬಾದ್‌ಗೆ 52.02 ಲಕ್ಷಗಳು ಇದ್ದು, ಇನ್ನುಳಿದ ಹುಲಸೂರ್, ಕಮಲ್‌ನಗರ ಹಾಗೂ ಚಿಟಗುಪ್ಪ ಇವುಗಳಿಗೆ ಪೂರ್ಣವಾಗಿ ಕಳೆದ 3 ವರ್ಷಗಳಿಂದ ಶೂನ್ಯ investment ಇರುತ್ತದೆ. PMEGP ಆ ಪ್ರಕಾರ ಇದೆ.

ಹೀಗಾಗಿ, ಈ ಪ್ರಕಾರ negligible amount ಹಣ ಹೂಡಿಕೆ ಆಗಿರುತ್ತದೆ. ಇದರಿಂದ ಗ್ರಾಮೀಣ ಭಾಗದಲ್ಲಿ ಹೇಗೆ ಉದ್ಯೋಗ ಸೃಷ್ಟಿ ಮಾಡುವುದು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಸಂಬಂಧ ನಾನು ಜಿಲ್ಲೆಯಲ್ಲಿ ಮುಚ್ಚಿಹೋಗಿರುವ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ಎಂದು ಕೇಳಿರುತ್ತೇನೆ ಮತ್ತು ಅವುಗಳ ಪುನಶ್ಚೇತಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆಂದರೆ ಮುಚ್ಚಿಹೋಗಿರುವ ಸಣ್ಣ ಕೈಗಾರಿಕಾ ಘಟಕಗಳ ಬಗ್ಗೆ ಮಾಹಿತಿ ಪಡೆಯುವ ವ್ಯವಸ್ಥೆಯು ಇಲಾಖೆಯಲ್ಲಿ ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ.

**ಶ್ರೀ ಶರಣಬಸಪ್ಪ ದರ್ಶನಾಪೂರ (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿರುತ್ತೇವೆ. ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ KSSIDC ಕಡೆಯಿಂದ ಯಾವುದೂ ಸಹ ಆಗಿರುವುದಿಲ್ಲ. ಇತ್ತೀಚೆಗೆ ಬೀದರ್ ಮತ್ತು ಕೋಲಾರದಲ್ಲಿ ಸುಮಾರು 32 ಎಕರೆ ಭೂಮಿಯನ್ನು ತೆಗೆದುಕೊಂಡು ಅಭಿವೃದ್ಧಿ ಮಾಡುವಂತಹದ್ದಕ್ಕೆ ಕೆಲಸ ಪ್ರಾರಂಭವಾಗಿದ್ದು, ಆ ಕೆಲಸವನ್ನೂ ಸಹ ನಾವು ಮಾಡುತ್ತೇವೆ. ತಮಗೆ ಇದರ ಬಗ್ಗೆ ಇನ್ನು ಏನಾದರೂ ಅವಶ್ಯಕತೆ ಇದ್ದು ಹೇಳಿದರೆ

ನಾವು ಅದಕ್ಕೆ Demand Survey ಹಾಕಿ ಮಾಡುತ್ತೇವೆ. ಏಕೆಂದರೆ, ಎಲ್ಲಾ ಕಡೆಯಿಂದ KSSIDC ನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿಯೇ ನಿಮ್ಮ ಬಸವಕಲ್ಯಾಣದಲ್ಲಿ KIADB ನವರು ಹುಮ್ನಾಬಾದ್, ಬೀದರ್‌ನಲ್ಲಿ ಮಾಡಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಉತ್ತರದಲ್ಲಿ ಹೇಳಿರುತ್ತೇವೆ. ಅದಕ್ಕೋಸ್ಕರ ಬಸವಕಲ್ಯಾಣ ಹಾಗೂ ಇನ್ನಿತರ ಕಡೆಗಳಲ್ಲಿ ಅವಕಾಶ ಇದ್ದಲ್ಲಿ ಅದರ ಪೈಕಿ ಸ್ಪೆಸಿಫಿಕ್ ಆಗಿ ಹೇಳಿ. ನಾವು ಅಲ್ಲಿ Demand Survey ಮಾಡಿ ಅಲ್ಲಿ ಭೂಮಿಯ ಲಭ್ಯತೆ ಇದ್ದರೆ ಅದನ್ನು ತೆಗೆದುಕೊಂಡು ಅಭಿವೃದ್ಧಿಪಡಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಡಾ|| ಎಂ.ಜಿ. ಮುಳೆ:–** ಮಾನ್ಯ ಸಭಾಪತಿಯವರೆ, RAMP ಯೋಜನೆಯಡಿಯಲ್ಲಿ 200 ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡಲಾಗಿತ್ತು. ಈ ತರಬೇತಿಯ ಹೊರತಾಗಿ ಅವರಿಗೆ ಏನಾದರೂ ಆರ್ಥಿಕ ನೆರವನ್ನು ಕೊಡಲಿಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಶರಣಬಸಪ್ಪ ದರ್ಶನಾಪೂರ:–**ಇದು RAMP(Raising and Accelerating MSME Performance) ಯೋಜನೆಯಡಿಯಲ್ಲಿ ಬಂದಿದ್ದು, ಈಗಾಗಲೇ ಬೀದರ್‌ನಲ್ಲಿ ಎರಡು ಕಾಲೇಜುಗಳಲ್ಲಿ ಈಗಾಗಲೇ 200 ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡುವಂತಹ ಕೆಲಸಗಳನ್ನು ಮಾಡಿದ್ದೇವೆ. ಅದೇ ರೀತಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿಯೂ ಸಹ ನಾವು ಕೆಲಸ ಮಾಡಿದ್ದೇವೆ. ನಾವು ತರಬೇತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆಯೇ ಹೊರತು, ಉಳಿದ ಹಣಕಾಸಿನ ನೆರವಿನ ವಿಚಾರವಾಗಿ ಈಗಾಗಲೇ ಮಾನ್ಯ ಸಚಿವರಾದ ಶ್ರೀ ಎಂ.ಬಿ. ಪಾಟೀಲ್ ರವರು ಹೇಳಿದ್ದಾರೆ. ನಮ್ಮ ಇಲಾಖೆಯಿಂದ ಏನು ಒಟ್ಟಾರೆ 25–30 ಪಾಲಿಸಿಗಳಿಗೆ ನಾವು ಏನು ವಿಶೇಷ ಅನುದಾನ ಕೊಡುವಂತಹ ಕೆಲಸವನ್ನು ಮಾಡುತ್ತೇವೆ, ಅದೆಲ್ಲವನ್ನು ನಾವು ಮಾಡುತ್ತೇವೆ.

**ಡಾ|| ಎಂ.ಜಿ. ಮುಳೆ:–** ಮಾನ್ಯ ಸಭಾಪತಿಯವರೆ, ನಾನು ಕೊನೆಯ ಪ್ರಶ್ನೆಯನ್ನು ಕೇಳುತ್ತೇನೆ. ಬೀದರ್ ಜಿಲ್ಲೆಯಲ್ಲಿ Jaggery Cluster ತರಬೇತಿಯಲ್ಲಿ 110 ಪ್ರತಿನಿಧಿಗಳಿಗೆ ತರಬೇತಿಯನ್ನು ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯಲ್ಲಿ Jaggery ಉದ್ಯಮ ಒಂದು ಸಾಂಪ್ರದಾಯಕ ಉದ್ಯಮವಾಗಿರುತ್ತದೆ. ಹೀಗಾಗಿ, ಈ ಒಂದು ತರಬೇತಿ ಹೊರತಾಗಿ ಈ Jaggery Cluster ಅನ್ನು ಅಭಿವೃದ್ಧಿ ಪಡಿಸಲಿಕ್ಕೆ ಜಾಗರಿ ಉದ್ಯಮ ಮಾಡಲಿಕ್ಕೆ ಪ್ರೋತ್ಸಾಹಧನ ಕೊಡಲಿಕ್ಕೆ ಸಾಧ್ಯತೆ ಇದೆಯೇ?

**ಶ್ರೀ ಶರಣಬಸಪ್ಪ ದರ್ಶನಾಪೂರ:** ಇದಕ್ಕೆ ಏನೇನು ಪ್ರೊತ್ಸಾಹಧನ ಕೊಡಲಿಕ್ಕೆ ಸಾಧ್ಯವಿದೆಯೋ ಅದರ ಬಗ್ಗೆ ನಿಮ್ಮ ಮೊದಲ ಪ್ರಶ್ನೆಗೆ ಸಂಬಂಧಪಟ್ಟಂತೆ ಸಂಪೂರ್ಣವಾಗಿ ನಿಮಗೆ ಎಲ್ಲಾ ಸೌಲಭ್ಯಗಳನ್ನು ಕೊಡುವಂತಹ ಕೆಲಸದ ಬಗ್ಗೆ ಹೇಳಿದ್ದೇವೆ. ಹಾಕಿದವರಿಗೆ ನಾವು ಸೌಲಭ್ಯಗಳನ್ನು ಕೊಡಲೇ ಬೇಕಾಗುತ್ತದೆ. ಈ ಸಂಬಂಧ ಎಸ್.ಸಿ–ಎಸ್.ಟಿ.ಯವರಿಗೆ ಏನು ಪ್ರಮಾಣ ಇದೆ, ಮತ್ತೆ ಉಳಿದವರಿಗೆ ಏನು ಪ್ರಮಾಣ ಇದೆ,

ಅವರುಗಳಿಗೆ ಇಲಾಖೆ ವತಿಯಿಂದ ಏನೇನು ಕೊಡಲಿಕ್ಕೆ ಸಾಧ್ಯವಿದೆಯೋ ಅದನ್ನು ನಾವು ಕೊಡುತ್ತೇವೆ. ಇದರಲ್ಲಿ ಪ್ರಶ್ನೆಯೇ ಇರುವುದಿಲ್ಲ.

**ಪ್ರಶ್ನೆ ಸಂಖ್ಯೆ 778**
**(ಉತ್ತರನ್ನು ಒದಗಿಸಲಾಗಿದೆ)**

**ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹೊಸ ಮೆನುವಿನ ರೀತ್ಯಾ ಆಹಾರ ವಿತರಣೆ ನಡೆಯುತ್ತಿದ್ದು, ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಸಂಬಂಧಿಸಿದಂತೆ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ ಎಂದು ಉತ್ತರವನ್ನು ನೀಡಿದ್ದಾರೆ.

**(ಮುಂದು)**

**(262) 10.03.2026 12.00 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜಗದೇವ್ ಗುತ್ತೇದಾರ್ (ಮುಂದು):-**

ಅಲ್ಲಿ ನೀಡುವ ಇಡ್ಲಿ, ಸಾಂಬಾರ್ ಹಾಗೂ ಇತರ ಆಹಾರಗಳ ಗುಣಮಟ್ಟವು ಚೆನ್ನಾಗಿರುವುದಿಲ್ಲ. ಆ ಕ್ಯಾಂಟೀನ್‌ಗಳಲ್ಲಿ ತುಂಬಾ ಕೊಳಕಾಗಿರುತ್ತದೆ. ಅಲ್ಲಿ ಶೌಚಾಲಯದ ಸೌಲಭ್ಯವಿದ್ದರೂ ಕೂಡ ಜನರಿಗೆ ಹೋಗುವುದಕ್ಕೆ ಅವಕಾಶವಿಲ್ಲ. ಸರ್ಕಾರವು ಮಾಡಿರುವ ಮೆನುವಿನಲ್ಲಿರುವಂತೆ ಗುಣಮಟ್ಟದ ತಿಂಡಿ, ಊಟ, ಸ್ವೀಟ್‌ಗಳು ಕಲಬುರಗಿಯ ಇಂದಿರಾ ಕ್ಯಾಂಟೀನ್‌ಗಳಲ್ಲಿ ಸಿಗುತ್ತಿಲ್ಲ.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಇಂದಿರಾ ಕ್ಯಾಂಟೀನ್ - 2 ಯೋಜನೆಯಡಿಯಲ್ಲಿ ಸುಮಾರು 165+20, ಒಟ್ಟು 185 ಇಂದಿರಾ ಕ್ಯಾಂಟೀನ್‌ಗಳನ್ನು ರಾಜ್ಯಾದ್ಯಂತ ಸ್ಥಾಪನೆ ಮಾಡಲಾಗಿದೆ. ಆಯಾ ಪ್ರದೇಶಕ್ಕೆ ಸಂಬಂಧಪಟ್ಟಂತೆ ಅಲ್ಲಿನ ಜನರಿಗೆ ಇಷ್ಟವಾಗುವ ಊಟ ಮತ್ತು ತಿಂಡಿಗಳನ್ನು ಕೊಡುವ ವ್ಯವಸ್ಥೆಯನ್ನು ನಮ್ಮ ಇಲಾಖೆಯಿಂದ ನಾವು ಮಾಡಿದ್ದೇವೆ. ಅದೇ ಪ್ರಕಾರವಾಗಿ ಕಲಬುರಗಿಯಲ್ಲಿಯೂ ನಾವು ಇದೇ ವ್ಯವಸ್ಥೆಯನ್ನು ಮಾಡಿದ್ದೇವೆ. ಬೆಳಗಿನ ಉಪಾಹಾರಕ್ಕೆ ರೂ.5, ಮಧ್ಯಾಹ್ನ ಹಾಗೂ ರಾತ್ರಿಯ ಊಟಕ್ಕೆ ತಲಾ ರೂ.10 ರಂತೆ ಒಟ್ಟು ರೂ.25. ಒಟ್ಟು ರೂ.62 ಖರ್ಚಾಗುತ್ತಿದ್ದು, ಉಳಿದ ಹಣವನ್ನು ಸರ್ಕಾರ ಕೊಡುತ್ತದೆ. ನಮಗೆ ಇರುವಂಥ ಮಾಹಿತಿ ಪ್ರಕಾರ ಅವರು ಹೇಳುತ್ತಿರುವ ಜಾಗದಲ್ಲಿಯೂ ಸಹ ಕಾಲ ಕಾಲಕ್ಕೆ ತಕ್ಕಂತೆ, ಆಯಾ ಪ್ರದೇಶಕ್ಕನುಗುಣವಾಗಿ ಇಡ್ಲಿ, ರೊಟ್ಟಿ ಮುಂತಾದವುಗಳನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರು ಇಲ್ಲಿ ಸಮಸ್ಯೆಯಿದೆ ಎಂದು ಹೇಳುತ್ತಿದ್ದಾರೆ. ಆದರೆ ನನ್ನ ಗಮನಕ್ಕೆ ಇದ್ಯಾವುದೇ ದೂರು ಬಂದಿರುವುದಿಲ್ಲ. ನಮ್ಮ ಆಯುಕ್ತರೊಂದಿಗೆ ಇಡೀ ರಾಜ್ಯದಲ್ಲಿ ನಾವು ಎಲ್ಲೆಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ನಡೆಸುತ್ತಿದ್ದೇವೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಇದರ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಈಗ ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಅಲ್ಲಿ ಏನಾದರೂ ಸಮಸ್ಯೆಯಿದ್ದಲ್ಲಿ ನಮ್ಮ ಕಾರ್ಯದರ್ಶಿಯವರ ಮೂಲಕ ವಿಚಾರಣೆಯನ್ನು ಮಾಡಿಸಿ, ಸರಿ ಪಡಿಸುವ ಕೆಲಸವನ್ನು ಮಾಡುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್:–** ಇಡೀ ಜಗತ್ತಿನಲ್ಲಿಯೇ digital payment ವ್ಯವಸ್ಥೆ ಇದ್ದು, ಆದರೆ ಇಂದಿರಾ ಕ್ಯಾಂಟೀನ್‌ಗಳಲ್ಲಿ digital payment ವ್ಯವಸ್ಥೆಯಿರುವುದಿಲ್ಲ. ಮಾನ್ಯ ಸಚಿವರು ಜಿಲ್ಲಾಧಿಕಾರಿಯವರಿಗೆ ಅಗತ್ಯ ಕ್ರಮ ವಹಿಸಲು ನಿರ್ದೇಶನ ನೀಡುವುದಾಗಿ ತಿಳಿಸಿದ್ದಾರೆ. ಇದು ಸಂತೋಷದ ವಿಷಯ ಮತ್ತು ಸ್ವಾಗತಾರ್ಹವಾದುದು. ಇಂದಿರಾ ಕ್ಯಾಂಟೀನ್ ಅತ್ಯುತ್ತಮ ಯೋಜನೆಯಾಗಿದ್ದು, ಬಡ ಜನರಿಗೆ ಇದರಿಂದ ಬಹಳ ಅನುಕೂಲವಾಗಿದ್ದು, ಅದು ಚೆನ್ನಾಗಿ ನಡೆಯಬೇಕು. ಆಗಾಗ ಕ್ಯಾಂಟೀನ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಅಲ್ಲಿ ನಡೆಯುವ ಅವ್ಯವಸ್ಥೆಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಬಿ.ಎಸ್.ಸುರೇಶ:–** ಮಾನ್ಯ ಸದಸ್ಯರು ಹೇಳಿರುವಂತೆ ಸ್ಥಳೀಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ಕೊಡುತ್ತೇನೆ. ಕ್ಯಾಂಟೀನ್ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಪ್ರಶ್ನೆ ಸಂಖ್ಯೆ 771**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಬಳ್ಳಾರಿ ವಿಮಾನ ನಿಲ್ದಾಣದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಬಳ್ಳಾರಿ ವಿಮಾನ ನಿಲ್ದಾಣಕ್ಕಾಗಿ 2009ರಲ್ಲಿ ಸುಮಾರು 900 ಎಕರೆ ಭೂ ಸ್ವಾಧೀನ ಮಾಡಿಕೊಳ್ಳಲಾಯಿತು. How the Government and the Bureaucracy functions and how it should not function ಎನ್ನುವುದಕ್ಕೆ ಇದೊಂದು classic example, 900 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. But, to approach that airport land, ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ಅಲ್ಲಿದ್ದಂಥ ಅಧಿಕಾರಿಗಳಿಗೆ ಒಂದು ಪ್ರಶಸ್ತಿಯನ್ನು ಕೊಡಬೇಕೆಂದು ನನಗನ್ನಿಸುತ್ತದೆ.

**ಶ್ರೀ ಎಂ.ಬಿ.ಪಾಟೀಲ್:–** ಆಗ ಜನಾರ್ಧನ ರೆಡ್ಡಿಯವರು ಇದ್ದರು.

**ಶ್ರೀ ವೈ.ಎಂ.ಸತೀಶ್:–** ಅದನ್ನು ಯಾರು ಮಾಡಿದರೆಂದು ನನಗೆ ತಿಳಿದಿದೆ. ನನ್ನ ಪ್ರಶ್ನೆಯಿಷ್ಟೆ. ದಿನಾಂಕ 14.09.2022ರಲ್ಲಿ ಬಳ್ಳಾರಿ ವಿಮಾನ ನಿಲ್ದಾಣದ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆನು. ಆಗ ಉತ್ತರ ಬಂದಿತ್ತು. ಅದರಲ್ಲಿ earlier agency ಯವರು 9–10 ವರ್ಷಗಳಿಂದ ಮಾಡಿಲ್ಲ. ಅವರನ್ನು ನಾವು terminate ಮಾಡಿ ಮತ್ತೊಬ್ಬರಿಗೆ ಕೊಡುತ್ತೇವೆಂದು ಹೇಳಿದ್ದರು. ಬಹಳ ಧನ್ಯವಾದಗಳು. ಅದರ ಪ್ರಕಾರವೇ ದಿನಾಂಕ 16.11.2022ರಂದು ಕೆ.ಎಸ್.ಎಸ್.ಐ.ಡಿ.ಸಿ. ಮುಖಾಂತರ ಪ್ರಾಜೆಕ್ಟ್ ಮಾಡಬೇಕೆಂದು ನೀವು ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. Agreed. ನನ್ನ ಪ್ರಶ್ನೆಯಿಷ್ಟೇ, ಮಾನ್ಯ ಸಚಿವರೆ. ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಬರುತ್ತದೆಯೇ ಇಲ್ಲವೆ? Yes or No ಅಷ್ಟೆ. ನನಗೆ ಇನ್ನೇನೂ ಉಪ ಪ್ರಶ್ನೆಯೇ ಇಲ್ಲ. ಬಂದಿಲ್ಲ ಎಂದರೆ ಆ ಭೂಮಿಯನ್ನು ಏನು ಮಾಡುತ್ತೀರಿ ಎನ್ನುವುದಷ್ಟೇ ನನ್ನ ಉಪ ಪ್ರಶ್ನೆ.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಬಳ್ಳಾರಿ ವಿಮಾನ ನಿಲ್ದಾಣ ಹಾಗೂ ನಮ್ಮ ವಿಜಯಪುರ ವಿಮಾನ ನಿಲ್ದಾಣಗಳೆರಡನ್ನೂ M/s Marg Sri Krishnadevaraya Airport Private Limited ಎನ್ನುವವರಿಗೆ ಪಿ.ಪಿ.ಪಿ ಮಾದರಿಯಲ್ಲಿ ನೀಡಲಾಗಿತ್ತು. ಅವರು 8–9 ವರ್ಷ ಇಟ್ಟುಕೊಂಡು ಮಾಡಲಿಲ್ಲ. ನಂತರ ಇದನ್ನು ಕೆ.ಎಸ್.ಎಸ್.ಐ.ಡಿ.ಸಿ. ಯ ವತಿಯಿಂದ ತೆಗೆದುಕೊಂಡು Airports Authority of India ಯಿಂದ ಮಾಡಬೇಕೆಂದು ನಿರ್ಧರಿಸಿ ಈಗಾಗಲೇ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಅದರಲ್ಲಿ ಎರಡು ಮಾತಿಲ್ಲ. ಡಿ.ಪಿ.ಆರ್ ಮಾಡುವುದಕ್ಕೂ ನಾವು ಕೊಟ್ಟಿದ್ದೇವೆ. ಡಿ.ಪಿ.ಆರ್‌ನಲ್ಲಿ ಕೂಡ ಒಳ್ಳೆಯ ಉದ್ಯಮಿಗಳು participate ಮಾಡಿದ್ದಾರೆ.

ಮಾನ್ಯ ಸಭಾಪತಿಯವರೆ, ಈಗ ತಾವು ಕಲಬುರಗಿ ವಿಮಾನ ನಿಲ್ದಾಣವನ್ನು ನೋಡಿದ್ದೀರಿ. ಎಲ್ಲಾ ವಿಮಾನ ನಿಲ್ದಾಣಗಳು ಉಡಾನ್ ಇರುವವರೆಗೆ ಮೂರು ವರ್ಷಗಳ ಕಾಲ ನಡೆಯುತ್ತದೆ. ಉಡಾನ್ ಅವಧಿ ಮುಗಿದ ಮೇಲೆ ಸ್ಥಗಿತಗೊಳ್ಳುತ್ತದೆ. ಬೀದರ್ ವಿಮಾನ ನಿಲ್ದಾಣವೂ ಹಾಗೆಯೇ ಆಗಿದೆ. Throughout the Country, ಎಲ್ಲಾ ಕಡೆಯೂ ಬಹಳಷ್ಟು ಈ ರೀತಿಯಾಗುತ್ತಿದೆ. ಬಳ್ಳಾರಿಯಲ್ಲಿ ಭೂಮಿ ಇದೆ. Airports Authority of India ದವರಿಗೆ ಕೊಟ್ಟರೆ ಅವರು ಅದನ್ನು ವಿಮಾನ ನಿಲ್ದಾಣ ಮಾಡುತ್ತೇವೆಂದು ಹೇಳಿದ್ದಾರೆ. ಆ ಒಂದು ನಿರ್ಣಯವನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಅದಕ್ಕಿಂತ ಮುಂಚಿತವಾಗಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿ, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಎಲ್ಲಾ ಶಾಸಕರನ್ನು ಆಹ್ವಾನಿಸುತ್ತೇವೆ. ಈಗ ಏನಾಗಿದೆಯೆಂದರೆ ಕೊಪ್ಪಳ ಜಿಲ್ಲೆಯವರು ಒಂದು ವಿಮಾನ ನಿಲ್ದಾಣ ಕೇಳುತ್ತಾರೆ, ವಿಜಯನಗರ ಜಿಲ್ಲೆಯವರು ಒಂದು ವಿಮಾನ ನಿಲ್ದಾಣ ಕೇಳುತ್ತಾರೆ ಹಾಗೂ ಬಳ್ಳಾರಿ ಜಿಲ್ಲೆಯವರು ಒಂದು ವಿಮಾನ ನಿಲ್ದಾಣ ಕೇಳುತ್ತಾರೆ. Feasibility ಎಲ್ಲಿರುತ್ತದೆ? ಅದಕ್ಕಾಗಿ ವಿಜಯನಗರದಲ್ಲಿಯೂ ಕೂಡ ಒಂದೆರಡು ಕಡೆ ಭೂಮಿಯನ್ನು ಗುರುತಿಸಲಾಗಿದೆ.

**ಸಭಾಪತಿಯವರು:–** ಅವರು ಬಳ್ಳಾರಿ ವಿಮಾನ ನಿಲ್ದಾಣ ಆಗುತ್ತದೆಯೋ ಇಲ್ಲವೋ ಎಂದು ಕೇಳುತ್ತಿದ್ದಾರೆ. ಅದನ್ನು ಹೇಳಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರೆಲ್ಲರೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡುತ್ತೇವೆ. ಮಾನ್ಯ ಸತೀಶ್ ಅವರೇ, ವಿಶೇಷವಾಗಿ ನಿಮ್ಮನ್ನೂ ಆಹ್ವಾನಿಸುತ್ತೇವೆ. ಆ ವಿಮಾನ ನಿಲ್ದಾಣ feasible ಆಗಬೇಕು, viable ಆಗಬೇಕು. ಸುಮ್ಮನೆ ವಿಮಾನ ನಿಲ್ದಾಣ ಮಾಡಿ ಮೂರು ವರ್ಷ ಉಡಾನ್ ಯೋಜನೆ ಇರುವವರೆಗೂ ನಡೆಯುತ್ತದೆ, ಉಡಾನ್ ಯೋಜನೆ ನಂತರ ವಿಮಾನ ನಿಲ್ದಾಣಗಳು ಮುಚ್ಚುತ್ತವೆ. ಈಗ ಕಲಬುರಗಿ ವಿಮಾನ ನಿಲ್ದಾಣದ ಪರಿಸ್ಥಿತಿ ಹಾಗಾಗಿದೆ. ಅದಕ್ಕಾಗಿ ಇದನ್ನು ಡಿ.ಪಿ.ಆರ್ ಮಾಡುವುದಕ್ಕೆ ನಾವು ಈಗ ಕೊಟ್ಟಿದ್ದೇವೆ. ಡಿ.ಪಿ.ಆರ್ ಮಾಡಲು ಮುಂದೆ ಬಂದಿದ್ದಾರೆ. Road acquisition ಮಾಡುತ್ತೇವೆ. ಹಿಂದೆ ಅದನ್ನು ಯಾರು ಮಾಡಿದ್ದಾರೆ, ಬಿಟ್ಟಿದ್ದಾರೆ ಎನ್ನುವುದು ಪ್ರಶ್ನೆಯಲ್ಲ. ಆ ರಸ್ತೆಗೆ ಭೂ ಸ್ವಾಧೀನ ಮಾಡುವುದೇನು ದೊಡ್ಡ ಕೆಲಸವಲ್ಲ. ಅದನ್ನು ಮಾಡುತ್ತೇವೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಾನು consciously ಮಾಡಿ ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲೆಗಳ ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸುತ್ತೇವೆ. ನನ್ನ ಉದ್ದೇಶವೇನೆಂದರೆ ಅದು feasible ಆಗಬೇಕು, viable ಆಗಬೇಕು. ವಿಮಾನ ನಿಲ್ದಾಣ ಪ್ರಾರಂಭ ಮಾಡಿ ಉಡಾನ್ ಯೋಜನೆಯಡಿಯಲ್ಲಿ ನಡೆಯುತ್ತದೆ. ಸ್ವಲ್ಪ ದಿನದ ನಂತರ ಬಂದ್ ಆಗುತ್ತದೆ.

**ಸಭಾಪತಿಯವರು:–** ಮಾಡುತ್ತೀರಾ, ಇಲ್ಲವಾ? ಅಷ್ಟನ್ನು ಹೇಳಿ.

**ಶ್ರೀ ಎಂ.ಬಿ.ಪಾಟೀಲ್:–** ಆ ಕೆಲಸ ಮಾಡುತ್ತೇವೆ.

**ಶ್ರೀ ವೈ.ಎಂ.ಸತೀಶ್:–** ಅದು ತಮ್ಮ ಹಾಗೂ ಸರ್ಕಾರದ ವಿವೇಚನೆಗೆ ಬಿಟ್ಟದ್ದು. ನೀವು ಎಲ್ಲಿ ಮಾಡುತ್ತೀರೋ ಬಳ್ಳಾರಿಯೋ, ಕೊಪ್ಪಳವೋ ಅಥವಾ ವಿಜಯನಗರವೋ ಅದು ನಮಗೆ ತೊಂದರೆಯಿಲ್ಲ. Don't create the white elephant and don't waste the natural resources. ಅದು ಮಾತ್ರ ನನ್ನ ಮನವಿ. ಕೊನೆಯದಾಗಿ ನಮ್ಮ ರೈತರ ಪರವಾಗಿ ನನ್ನದೊಂದೇ ಒಂದು ಬೇಡಿಕೆಯಿದೆ. ಈಗ suppose ಇಲ್ಲಿ ವಿಮಾನ ನಿಲ್ದಾಣ ಬರಲಿಲ್ಲ ಎಂದರೆ, the specific cases of where the land acquisition has happened towards industry… I would like to quote the Arcelor Mittal, Kudithini as an example for this airport. ಆ ಭೂಮಿಯನ್ನು ಏನು ಮಾಡುತ್ತೀರಿ? ರೈತರಿಗೆ return ಮಾಡುತ್ತೀರಾ? ನಮ್ಮ ರೈತರ ಪರವಾಗಿ ನನ್ನ ಬೇಡಿಕೆಯಿಷ್ಟೆ. Specific acquisition ಆಗಿದ್ದರೆ ಆ ಭೂಮಿಯನ್ನು ಹಿಂತಿರುಗಿಸಿ. General acquisition ಆಗಿದ್ದರೆ ನಾನು ಅದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾಡುತ್ತೇವೋ, ಇಲ್ಲವೋ – ಇದು hypothetical question. ನಾವು ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಮಾನ್ಯ ಸತೀಶ್ ಅವರೆ, ಬಿಳಿಯಾನೆಯನ್ನು ಸೃಷ್ಟಿಸಬೇಡಿ ಎಂದು ತಾವು ಹೇಳಿರುವುದಕ್ಕೆ ನನ್ನ ಪೂರ್ಣ ಸಹಮತವಿದೆ. ದೇಶದಲ್ಲಿ ಎಲ್ಲಾ ವಿಮಾನ ನಿಲ್ದಾಣಗಳ ಪರಿಸ್ಥಿತಿ ಗಂಭೀರವಾಗಿದೆ. ಉಡಾನ್ ಯೋಜನೆಯಲ್ಲಿ ನಡೆಯುತ್ತವೆ, ನಂತರ ಮುಚ್ಚಿ ಹೋಗುತ್ತವೆ. ಉಡಾನ್ ಯೋಜನೆಯ ಬಗ್ಗೆ ನಾವು ಕೇಂದ್ರ ನಾಗರಿಕ ವಿಮಾನ ಯಾನ ಸಚಿವರನ್ನು ಭೇಟಿ ಮಾಡಿ ಮೂರು ವರ್ಷ ಇರುವುದನ್ನು ಐದು ವರ್ಷ ಮಾಡುವಂತೆ ಹಾಗೂ ಅದರ ಮುಂದಿನ ಐದು ವರ್ಷ 50:50 sharing ಮಾಡುವಂತೆ ಹೇಳಿದ್ದೇವೆ. ಅಷ್ಟೇ ಅಲ್ಲ. We are evolving a Civil Aviation Policy also. ನಮ್ಮ ರಾಜ್ಯದ್ದೇ ಆದ ಒಂದು ಪಾಲಿಸಿಯನ್ನು ಮಾಡುತ್ತಿದ್ದೇವೆ. ಈಗಾಗಲೇ ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶಗಳಲ್ಲಿ ಇವೆ. ಆ ಪಾಲಿಸಿಗಳನ್ನು ತರಿಸಿ, ನಿನ್ನೆಯೇ ಚರ್ಚೆ ಮಾಡಿದ್ದೇವೆ. ಬಿಳಿಯಾನೆ ಮಾಡುವುದಕ್ಕೆ ಬಿಡುವುದಿಲ್ಲ, ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಮಾಡುವುದೂ ಇಲ್ಲ ಎಂದು ನಾವು ಹೇಳುವುದಿಲ್ಲ. ಎಲ್ಲರೊಡನೆ ಸಭೆ ಮಾಡಿ ನಮ್ಮ viability and view ನಾವು ಹೇಳುತ್ತೇವೆ. Ultimately the Hon'ble Chief Minister and ತಾವೆಲ್ಲರೂ ಕೂಡಿ ಸಭೆ ಮಾಡಿದಾಗ ಏನಾಗುತ್ತದೆಯೋ, we will abide by that. ಈಗಾಗಲೇ ನಾವು ಭೂಸ್ವಾಧೀನ ಮಾಡಿದ್ದರೆ ಅದನ್ನು ವಾಪಸ್ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ನಾವು ಅವರಿಗೆ ಪರಿಹಾರವನ್ನು ನೀಡಿರುತ್ತೇವೆ. ನಿಮ್ಮ hypothetical question ಗೆ ಉತ್ತರವೇನೆಂದರೆ ನಾವು ಆ ಭೂಮಿಯನ್ನು Industrial use ಅಥವಾ ಮತ್ತೊಂದು ಬಳಕೆಗೋ ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಒಮ್ಮೆ ರೈತರಿಂದ ಭೂಮಿಯನ್ನು ಪಡೆದು ಪರಿಹಾರವನ್ನು ಕೊಟ್ಟ ಮೇಲೆ ಆ ಭೂಮಿಯನ್ನು ವಾಪಸ್ ರೈತರಿಗೆ ಕೊಡುವ ಪ್ರಶ್ನೆ ಬರುವುದಿಲ್ಲ. But this is a hypothetical question and I am not denying that.

ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಮಾಡುವುದಿಲ್ಲ ಎಂದು ನಾನು ಹೇಳುತ್ತಿಲ್ಲ. There is a possibility that the airport may happen in Bellary also.

**(ಮುಂದು)**

(263) 10.03.2026, 12.10, **ಕೆಜಿ : ವಿಕೆ** **(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಸಭಾಪತಿಯವರು:–** ಶ್ರೀ ಎಸ್.ಕೇಶವ ಪ್ರಸಾದ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ಲ್ಯಾಂಡ್ acquisition ಆಗಬೇಕಾದರೆ, ಅವರಿಗೆ ಬೇರೆ purpose ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬರುವುದಿಲ್ಲ. ನಾನು ಅದನ್ನು ಹೇಳಿದ್ದೇನೆ.

**ಸಭಾಪತಿಯವರು:–** ಶ್ರೀ ಪೂಜಾರ್‌ರವರೇ, ತಾವು ಏಕೆ ಮಧ್ಯೆ ಎದ್ದುನಿಂತು ಮಾತನಾಡುತ್ತೀರಿ? ಶ್ರೀ ಎಸ್.ಕೇಶವ ಪ್ರಸಾದ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ

**ಪ್ರಶ್ನೆ ಸಂಖ್ಯೆ 864**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾದಂತಹ ಪ್ರಶ್ನೆಗಳನ್ನು ಕೇಳಿದ್ದೇನೆ. ವಿಜಯಪುರದ ನಗರದ ಒಳಗೆ ಇರುವಂತಹ ರಸ್ತೆಗಳು ಬಹಳ ಕಿರಿದಾಗಿವೆ, ನಗರದಿಂದ ಹೊರಗಡೆ ಹೋಗುವಂತಹ ರಸ್ತೆಗಳನ್ನು ಕೆಲವಾರು ಮೀಟರ್‌ಗಳಲ್ಲಿ ವಿಸ್ತರಣೆ ಮಾಡಿದ್ದಾರೆ. ಆದರೆ, ನಗರದ ಬಳಗೆ ಇರುವಂತಹ ರಸ್ತೆಗಳನ್ನು ಹಾಗೂ ವಿಜಯಪುರವನ್ನು ಒಟ್ಟಾರೆಯಾಗಿ ಗಮನದಲ್ಲಿಟ್ಟುಕೊಂಡು ಏನು ಕ್ರಮತೆಗೆದುಕೊಳ್ಳಲಾಗಿದೆ ಎಂಬುದಾಗಿ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರಿಂದ ಸರಿಯಾದಂತಹ ಉತ್ತರ ಇದರಲ್ಲಿ ಇಲ್ಲ. ಮತ್ತೆ ಇದರಲ್ಲಿ master plan ಎಂದು ಇದೆ. ಆ master plan ಅನ್ನು ಕಾರ್ಯಗತಗೊಳಿಸುವಂತಹ ಕೆಲಸ ಎಲ್ಲಿಯವರೆಗೆ ಬಂದಿದೆ; Master plan ಪರವಾಗಿ ಕಾರ್ಯಗತಗೊಳಿಸಿರುವಂತಹ ಕೆಲಸ ಎಷ್ಟು percent ಆಗಿದೆ, ಇನ್ನು ಎಷ್ಟು percent ಬಾಕಿ ಉಳಿದಿದೆ ಎಂಬುದು ನನ್ನ ಮೂಲ ಪ್ರಶ್ನೆಯಾಗಿದೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲನೆಯದಾಗಿ, ವಿಜಯಪುರ ಮಹಾನಗರದಲ್ಲಿ ಸಂಚಾರ ದಟ್ಟಣೆಯಿಂದ ತೊಂದರೆಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ ಸರ್ಕಾರ ಕೈಗೊಂಡಿರುವಂತಹ ಕ್ರಮಗಳು ಯಾವುದು ಎಂಬುದಾಗಿ ಪ್ರಶ್ನೆ ಕೇಳಿದ್ದಾರೆ. ಇದು "ಸರ್ಕಾರದ ಗಮನಕ್ಕೆ ಬಂದಿದೆ" ಎಂದು ಉತ್ತರ ನೀಡಿದ್ದೇನೆ. ಈಗಾಗಲೇ ಸುಮಾರು 6 ರಸ್ತೆಗಳು ನಮ್ಮ ನಗರಾಭಿವೃದ್ಧಿ ಇಲಾಖೆಯಿಂದ, ಅಂದರೆ, ಮಹಾತ್ಮ ಗಾಂಧಿ ರಸ್ತೆ, ಇಂಡಿ ರಸ್ತೆ, ಆಜಾದ್ ರಸ್ತೆ, ನವಭಾಗ ರಸ್ತೆ, ಹುಡ್ಕೋ ರಸ್ತೆ ಮತ್ತು ಜೆ.ಎಮ್ ರಸ್ತೆಗಳನ್ನು ಸುಮಾರು 36.12 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಸ್ತೆ ಅಗಲೀಕರಣ ಮಾಡಿ, ಈಗಾಗಲೇ ಸಾರ್ವಜನಿಕರ ಸಂಚಾರಕ್ಕೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಮುಂದುವರೆದು ಮುಂದೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಕೇಳಿದ್ದಾರೆ. ಅದಕ್ಕೂ ಸಹ ಸೋಲ್ಲಾಪುರ ರಸ್ತೆ, ರಾಮನಗರ ರಸ್ತೆ, ಮನಗೊಳಿ ರಸ್ತೆ ಮತ್ತು ನಗರದ ರಿಂಗ್ ರಸ್ತೆಗಳಗೂ ಸಹ ಸುಮಾರು 49.00 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಈ ರಸ್ತೆಗಳನ್ನು ಸಹ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಜಯಪುರದ ಒಳಗೆ ಇರುವಂತಹ ರಸ್ತೆಗಳನ್ನು ಏನು ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಈಗಾಗಲೇ ವಿಜಯಪುರ ಪಟ್ಟಣಕ್ಕೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸುಮಾರು 150 ಕೋಟಿ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು

ಇಲ್ಲಿ ಇದ್ದಾರೆ. ಆ ಹಣದಲ್ಲಿ ಸಿಟಿ ಒಳಗಡೆ., (ಗೊಂದಲ) ಆಯಿತು. ತಾವು ಇದ್ದೀರಿ. ಆ ಜಿಲ್ಲೆಗೆ ಸಂಬಂಧಪಟ್ಟ ಇಬ್ಬರು ಸಚಿವರು ಇಲ್ಲಿ ಇದ್ದಾರೆ. ಈಗ 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು 15–20 ದಿವಸಗಳಲ್ಲಿ ಕೆಲಸಗಳನ್ನು ಮಾಡಿ ಅಲ್ಲಿನ ಸಂಚಾರ ದಟ್ಟಣೆಯನ್ನು ಮುಕ್ತ ಮಾಡುವುದಕ್ಕೆ ನಮ್ಮ ಇಲಾಖೆಯಿಂದ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಆ ಕೆಲಸಗಳನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮುಂದುವರೆದು ವಿಜಯಪುರ ಮಹಾನಗರಕ್ಕೆ ಮೆಟ್ರೋ ರೈಲು ಯೋಜನೆ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಇದ್ದರೆ, ಸರ್ಕಾರ ಕೈಗೊಂಡ ಕ್ರಮಗಳು ಯಾವುವು ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ, ಪ್ರಸ್ತುತವಾಗಿ ವಿಜಯಪುರಕ್ಕೆ ಮೆಟ್ರೋ ರೈಲು ಯೋಜನೆ ಕಲ್ಪಿಸುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಶ್ರೀ ಕೇಶವ ಪ್ರಸಾದ್.ಎಸ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಪ್ರಶ್ನೆಯನ್ನು ವಿಜಯಪುರಕ್ಕೆ ಸೀಮಿತವಾಗಿ ಕೇಳಿದ್ದರೂ ಸಹ, ನಮ್ಮ ರಾಜ್ಯಾದ್ಯಂತ ಈ ಎಲ್ಲಾ Tier 2 and Tier 3 Cities ಗಳಿಗೆ ಈ ಸಮಸ್ಯೆ ಇದ್ದೇ ಇದೆ. ನಾನು ಇದೊಂದನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನೆ ಮಾಡಿಲ್ಲ. ಒಟ್ಟಾರೆಯಾಗಿ ವಿಜಯನಗರವನ್ನು ಗಮನಿಸಿದಂತೆ, ಮೂರು ಲಕ್ಷ ಜನಸಂಖ್ಯೆಗಿಂತ ಹೆಚ್ಚಿಗೆ ಇರುವಂತಹ ಎಲ್ಲಾ ಮಹಾನಗರಗಳಲ್ಲಿ ಸರ್ಕಾರದ ಯೋಜನೆ ಏನಿದೆ: ಏಕೆಂದರೆ, ಮುಂದೆ ಬರುವಂತಹ ದಿವಸಗಳಲ್ಲಿ ಈ ಎಲ್ಲಾ ಮಹಾನಗರಗಳು ಇದೇ ರೀತಿಯ ಸಮಸ್ಯೆಯನ್ನು ಎದುರಿಸುತ್ತವೆ. ಹಾಗಾಗಿ, ಮೂರು ಲಕ್ಷ ಜನಸಂಖ್ಯೆಗಿಂತ ಮೇಲ್ಪಟ್ಟ ಎಲ್ಲಾ ಮಹಾನಗರಗಳಿಗೆ ಒಂದು master plan ಅನ್ನು ತಯಾರು ಮಾಡುವಂತಹ ಯೋಜನೆ ಇದೆಯೇ: ಇಲ್ಲದಿದ್ದರೆ, ಇದನ್ನು ಮಾಡಬೇಕು. ಈಗ ಮಾನ್ಯ ಸಚಿವರು ಮೆಟ್ರೋ ಯೋಜನೆಯನ್ನು ತರುವುದಿಲ್ಲವೆಂದು ಹೇಳಿದರು. ಮೆಟ್ರೋ ಯೋಜನೆ feasible ಇಲ್ಲವೇ ಎಂಬುದು ಚರ್ಚೆಯಾಗಬೇಕು ಮತ್ತು ಅದಕ್ಕೆ ಒಂದು ಕಮಿಟಿಯಾಗಬೇಕು. ಜೊತೆಗೆ ಒಳಗಡೆ ಇರುವಂತಹ ರಸ್ತೆಗಳಲ್ಲಿ ಆ ತರಹ ಮೆಟ್ರೋ ಯೋಜನೆ ಬರುವುದಿಲ್ಲ, ಬೇರೆ ಬರುವುದಿಲ್ಲವೆಂದರೆ, ಅಲ್ಲಿ ಹೇಗೆ ಸರಿಮಾಡುವುದು, ಅಲ್ಲಿ ಹೇಗೆ ಸುಧಾರಣೆ ಮಾಡುವುದು? ಅಲ್ಲಿನ ಕಿರಿದಾದಂತಹ ರಸ್ತೆಗಳನ್ನು ಏಕ ಮುಖ ಸಂಚಾರದ ರಸ್ತೆಗಳನ್ನಾಗಿ ಮಾಡಬೇಕೇ ಅಥವಾ ಇನ್ನೊಂದು ಏನಾದರೊಂದು parallel ರಸ್ತೆಗಳನ್ನು ನಿರ್ಮಾಣ ಮಾಡಬೇಕೇ: ಯಾವ ರಸ್ತೆಗಳಲ್ಲಿ ಅತ್ಯಂತ ಜನಸಂದಣಿ ಹೆಚ್ಚಿಗೆ ಇದೆ, ಮತ್ತೆ ನಗರದೊಳಗೆ ಜನರು ಆರಾಮವಾಗಿ ಓಡಾಡಬೇಕೆಂದರೆ, ಮೋಟಾರು ವಾಹನಗಳನ್ನು ಎಲ್ಲಿ ನಿಯಂತ್ರಿಸಬೇಕು, ಬರಿ ದ್ವಿಚಕ್ರ ವಾಹನಗಳನ್ನು ಕೊಡಬೇಕೇ? ಈ ಎಲ್ಲದ್ದಕ್ಕೂ ಒಂದು ಕ್ರಿಯಾ ಯೋಜನೆ ತಯಾರು ಮಾಡುವಂತಹದ್ದಕ್ಕೆ ಪೂರಕವಾದಂತಹ ನನ್ನ ಮೂಲ ಪ್ರಶ್ನೆಯಾಗಿದೆ. ಹಾಗಾಗಿ, ಸರ್ಕಾರ ಅದರ ಬಗ್ಗೆ ಗಮನ ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರಿಂದ ನನಗೆ ಸ್ವಲ್ಪ ಉತ್ತರ ಬೇಕು. ಈಗ ಸದನದಲ್ಲಿ ಮಾನ್ಯ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು ಹಾಗೂ ಶ್ರೀ ಶಿವಾನಂದ ಪಾಟೀಲ್‌ರವರು ಇದ್ದಾರೆ.

ಹಾಗಾಗಿ, ಅವರಿಬ್ಬರನ್ನು consult ಮಾಡಿದ್ದರೆ, ಈ ಉತ್ತರ ಇನ್ನೂ ಚೆನ್ನಾಗಿ ಬಂದಿರುವುದು ಎಂದು ನನಗೆ ಅನಿಸುತ್ತದೆ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಡೀ ರಾಜ್ಯಾದ್ಯಂತ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಕೇಳಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಸುಮಾರು 2,600 ಕೋಟಿ ರೂಪಾಯಿಗಳನ್ನು 13 ಮಹಾನಗರ ಪಾಲಿಕೆಗಳಿಗೆ ಕೊಟ್ಟಿದ್ದೇವೆ. ಈಗಾಗಲೇ ಕೆಲವು ಮಹಾನಗರ ಪಾಲಿಕೆಗಳಲ್ಲಿ ಕೆಲಸ ಪ್ರಾರಂಭವಾಗಿದೆ. ಇನ್ನೂ ವಿಜಯಪುರ ಒಳಗೊಂಡಂತೆ ಹಲವಾರು ನಗರಗಳಲ್ಲಿ ಇನ್ನೊಂದು ತಿಂಗಳಲ್ಲಿ ಅಂದರೆ, ಈ ಅಧಿವೇಶನ ಮುಗಿದ ತಕ್ಷಣ ಕೆಲಸ ಪ್ರಾರಂಭ ಮಾಡಿ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ನಗರಗಳಲ್ಲಿ ಸಮಸ್ಯೆಗಳು ಇವೆ, ಆ ಎಲ್ಲಾ ನಗರಗಳಲ್ಲಿ maximum traffic ಏನು ಹೆಚ್ಚಿಗೆ ಸಮಸ್ಯೆ ಆಗುತ್ತಿದೆ, ಅದನ್ನು ಪರಿಹಾರ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇವೆ. ಈಗಾಗಲೇ 2,600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಹಣವನ್ನು ಖರ್ಚು ಮಾಡಿ ಇಡೀ ರಾಜ್ಯದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಹೇಳುತ್ತೇನೆ.

**ಸಭಾಪತಿಯವರು:-** ಶ್ರೀ ಎಂ.ಬಿ.ಪಾಟೀಲ್‌ರವರೇ, ತಾವು ಮಧ್ಯೆ ಮಾತನಾಡುವುದು ಬೇಡ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, Traffic management ಗೆ S.P ರವರು ಒಂದು ಮಾಡಿಕೊಟ್ಟಿದ್ದಾರೆ.

**ಸಭಾಪತಿಯವರು:-** ಈ ರೀತಿ ಎಲ್ಲಾ ಸಚಿವರು ಮಧ್ಯೆ ಎದ್ದುನಿಂತು ಹೇಳಿದರೆ ಹೇಗೆ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು traffic ಬಗ್ಗೆ ಹೇಳುತ್ತಿದ್ದೇನೆ. Traffic component ಅನ್ನು S.P ರವರು specialized ಆಗಿ ಮಾಡಿಕೊಟ್ಟಿದ್ದಾರೆ. ಇದನ್ನು Vijayapura Urban Development Authority ದಲ್ಲಿಯೂ ಸಹ ಮಾಡಿದ್ದೇವೆ. That is the part of this.

**ಸಭಾಪತಿಯವರು:-** ಸಚಿವರೇ, ಆಯಿತು. ಶ್ರೀ ಸುನೀಲ್ ವಲ್ಯಾಪುರ್‌ರವರ ಪರವಾಗಿ ಶ್ರೀ ಶಶೀಲ್ ಜಿ.ನಮೋಷಿಯವರೇ ತಾವು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ ೮13**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ. ನಮೋಷಿ (ಶಿಕ್ಷಕರ ಕ್ಷೇತ್ರ) (ಶ್ರೀ ಸುನೀಲ್ ವಲ್ಯಾಪುರ್‌ರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಕಲಬುರಗಿ ನಗರದ 4 ರಿಂಗ್ ರಸ್ತೆಗಳ ಸರ್ಕಲ್‌ನಲ್ಲಿ over bridge ಮಾಡುವಂತಹ ಒಂದು ಯೋಜನೆಯನ್ನು ನಮ್ಮ ಸರ್ಕಾರ ಇದ್ದಾಗ ಅಥವಾ ಅದಕ್ಕಿಂತ ಮೊದಲು ಆಗಲಿ ಅಥವಾ ಆ ಮೇಲೆಯಾಗಲಿ ಒಟ್ಟಾರೆಯಾಗಿ ತೆಗೆದುಕೊಂಡಿದ್ದಾರೆ. ಒಟ್ಟು 25.52 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಅದು ಕಲಬುರಗಿ ನಗರದಲ್ಲಿ ಖರ್ಗೆ ಪ್ರೆಟ್ರೋಲ್ ಬಂಕ್ ಎಂದು ಪ್ರಸಿದ್ಧಿ ಆಗಿದ್ದಂತಹ ಸರ್ಕಲ್ ಆಗಿತ್ತು. ಆ ಸರ್ಕಲ್‌ನಲ್ಲಿ ಈ ಯೋಜನೆಯು ದಿನಾಂಕ 27-05-2021 ರಲ್ಲಿ sanction ಆಗಿತ್ತು. ಅಂದರೆ, ದಿನಾಂಕ 10-05-2022 ರಲ್ಲಿ ಅದಕ್ಕೆ additional sanctions ಏನೇನು ಬೇಕಾಗಿತ್ತು, ಅವುಗಳನ್ನು ಮಾಡಲು ಎಲ್ಲಾ ಕೆಲಸಗಳನ್ನು ನಿಯಮದ ಪ್ರಕಾರ clearance ಅನ್ನು ಪಡೆದುಕೊಂಡಿದ್ದಾರೆ. ಅದು ಆರ್ಡರ್ ಆಗಿದೆ. ಆದರೆ, subsequently ಯಾರೋ ನ್ಯಾಯಾಲಯಕ್ಕೆ ಹೋಗಿದ್ದಾರೆ. ಅದು ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ ಎಂದು ಸರ್ಕಾರ ಅದನ್ನು ಇಷ್ಟು ದಿವಸ ಹಾಗೆಯೇ ಬಿಡುತ್ತಾರೆ? How long? ಅಲ್ಲಿ ಸುಮಾರು 20 ನಿಮಿಷಗಳ ಕಾಲ ಆ ಸಿಗ್ನಲ್‌ನಲ್ಲಿ ಒಂದು ವಾಹನ ಹೋಗುವುದಿಲ್ಲ. ನಾವು ಯಾರು ಸಹ ಆ ಸರ್ಕಲ್‌ನಲ್ಲಿ ಹೋಗುವುದಿಲ್ಲ. ಏಕೆಂದರೆ, ಅದು ಮುಖ್ಯ ರಸ್ತೆಯಾಗಿದೆ. ಅದು ರಿಂಗ್ ರಸ್ತೆ. ಅಲ್ಲಿ ಎಲ್ಲಾ ಟ್ರಕ್‌ಗಳು ಬಂದು ನಿಂತಿರುತ್ತವೆ. ಅಲ್ಲಿ ಅಷ್ಟು congestion ಇದೆ, and we cannot move at all. ಅಂತಹ ಜಾಗದಲ್ಲಿ ತೆರವುಗೊಳಸಲಿಲ್ಲ, ಅದು ನ್ಯಾಯಾಲಯದಲ್ಲಿ ಇದೆ ಎಂದು ಹೇಳಿ ಎಷ್ಟು ದಿವಸಗಳ ಕಾಲ ಅದನ್ನು ಮುಂದಕ್ಕೆ ಹಾಕುತ್ತಾರೆ? What are the efforts done by the Government to see that the case is dismissed? ಅದು ಸರ್ಕಾರಿ ಜಾಗ. ಅದು ನ್ಯಾಯಾಲಯದಲ್ಲಿ ಇದೆ ಎಂದು ಎಷ್ಟು ದಿವಸ ಮುಂದಕ್ಕೆ ಹಾಕುತ್ತಾರೆ? ಇದು ಬಹಳ ದೊಡ್ಡ ತಪ್ಪು ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳಲಿ ಬಿಡಿ. ತಾವು ಆಮೇಲೆ ಕೇಳಿ.

**ಶ್ರೀ ಶಶೀಲ್ ಜಿ. ನಮೋಶಿ :–** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯ ಇದೆ. ಕಲಬುರಗಿಯಲ್ಲಿ ಕುಡಿಯುವ ನೀರಿನ ಯೋಜನೆಯು ಅನೇಕ ವರ್ಷಗಳ ಹಿಂದೆ sanction ಆಗಿದ್ದು, ಈ ಕಾಮಗಾರಿಯನ್ನು L&T Company ಗೆ ಕೊಟ್ಟಿದೆ. ಈ ಕಂಪನಿಯನ್ನು ಬಹಳ ದೊಡ್ಡ ಕಂಪನಿ ಎಂದು ಹೇಳುತ್ತೇವೆ. ಇದನ್ನು ಆ ಕಂಪನಿಗೆ 2020ರಲ್ಲಿ ವಹಿಸಿ ಆದೇಶ ಆಗಿದೆ. 2020ರಲ್ಲಿ ಇದು ಸುಮಾರು 837.43 ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿಯಾಗಿತ್ತು. Penalty clause ಎಲ್ಲವನ್ನು ಒಟ್ಟು ಸೇರಿ ದಿನಾಂಕ 09-06-2025 ಕ್ಕೆ ಮುಗಿಸುತ್ತೇವೆಂದು ಹೇಳಿದ್ದರು. ಆದರೆ, ಇಲ್ಲಿಯವರೆಗೆ ಅನೇಕ ಕಡೆಗಳಲ್ಲಿ

ಕಾಮಗಾರಿ ಪ್ರಾರಂಭ ಆಗಿಲ್ಲ. ಅಲ್ಲದೇ, major fault ಎಂದರೆ, HDPE 90mm pipe ಇವೆ, ಅಲ್ಲದೇ 104 kilometers pipe lay ಮಾಡುತ್ತಾರೆ, and that pipe is of not that standard. ಇದನ್ನು ಮೊದಲೇ ಏಕೆ ಪರೀಕ್ಷೆ ಮಾಡಿಲ್ಲ? C.I.P.E.T. ಎನ್ನುವಂತಹ ಒಂದು ಕಂಪನಿಗೆ ಪರೀಕ್ಷೆ ಸಲುವಾಗಿ ಕೊಟ್ಟರೆ, ಅದು it cannot withstand that much pressure ಎಂದು ವರದಿಯನ್ನು ಕೊಟ್ಟಿದ್ದಾರೆ. ಇವರು ಪೈಪ್ ಹಾಕುವುದಕ್ಕೂ ಮೊದಲು ಪರೀಕ್ಷೆ ಮಾಡುತ್ತಾರೋ ಅಥವಾ ಆಮೇಲೆ ಮಾಡುತ್ತಾರೋ? ಆ corporation ನವರು ಆ ವರದಿಯನ್ನು ಮುಚ್ಚಿಟ್ಟುಕೊಂಡು ಹಾಗೆಯೇ ಮುಂದಕ್ಕೆ ಹೋಗುತ್ತಿದ್ದಾರೆ. ಆ ವರದಿ ಗಮನಕ್ಕೆ ಬಂದ ಮೇಲೆ ಆ ಪೈಪ್‌ಗಳನ್ನು ಬದಲಾವಣೆ ಮಾಡುವುದಕ್ಕೆ ಹೇಳುತ್ತಾರೆ. ಇದು ಎಲ್ಲಿ ನ್ಯಾಯ? What the Corporation is doing?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಾಕು ಬಿಡಿ. ಮಾನ್ಯ ಸಚಿವರು ಉತ್ತರ ಹೇಳಲಿ. ಆಮೇಲೆ ತಮಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಲಬುರಗಿ ನಗರದ ಖರ್ಗೆ ಪೆಟ್ರೋಲ್ ಬಂಕ್, ರಾಮ ಮಂದಿರ ವೃತ್ತ, ಹುಮನಾಬಾದ ರಿಂಗ್ ರಸ್ತೆ ಹಾಗೂ ಅಳಂದ ಚೆಕ್ ಪೋಸ್ಟ್ ಈ ನಾಲ್ಕು ಕಡೆ ಮೇಲ್ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಾಗ ಯಾವಾಗ ಕಾಮಗಾರಿ ಪ್ರಾರಂಭಿಸಿ ಜನರಿಗೆ ಸಂಚಾರ ದಟ್ಟಣೆಯಿಂದ ಮುಕ್ತಿ ನೀಡಲಾಗುವುದು ಎಂದು ಮೊದಲನೆಯದಾಗಿ ಪ್ರಶ್ನೆ ಕೇಳಿದ್ದಾರೆ. 2021ನೇ ಸಾಲಿನಲ್ಲಿ ಸುಮಾರು 25.52 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಾಮಗಾರಿಗೆ ಅನುಮೋದನೆ ಕೊಟ್ಟಿದ್ದೇವೆ. ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸಹ ಕೊಟ್ಟಿದ್ದೇವೆ. ಈ ಕಾಮಗಾರಿಯನ್ನು ಪ್ರಾರಂಭ ಮಾಡುವ ಸಮಯದಲ್ಲಿ ಇದರ ಬಗ್ಗೆ ನ್ಯಾಯಾಲಯಕ್ಕೆ ಹೋಗಿದ್ದಾರೆ. ನಮ್ಮ ಇಲಾಖೆಯಿಂದ ತಡೆಯಾಜ್ಞೆಯನ್ನು ತೆರವುಗೊಳಸಬೇಕೆಂದು ನಾವು ಸತತವಾಗಿ ಪ್ರಯತ್ನ ಪಡುತ್ತಿದ್ದೇವೆ. ತಮಗೂ ಗೊತ್ತಿದೆ. ನ್ಯಾಯಾಲಯಕ್ಕೆ ಹೋದ ಮೇಲೆ ಅದು ನಮ್ಮ ಕೈಯಲ್ಲಿ ಇರುವುದಿಲ್ಲ.

(ಮುಂದು)

**(264) 10.03.2026/12.20/ಎಂವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಎಸ್.ಸುರೇಶ್ (ಮುಂದು):-**

ಕೋರ್ಟ್‌ನವರು ದಿನಾಂಕಗಳನ್ನು ಹಾಕಿಕೊಂಡು ಆ ಕೇಸ್ ನಡೆದುಕೊಂಡು ಹೋಗುತ್ತಿದೆ. ಆದರೆ, ನಮ್ಮ ಇಲಾಖೆಯಿಂದ ನಾವು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದೇವೆ. ಮತ್ತೆ ನಾವು ಕೋರ್ಟ್‌ನಲ್ಲಿ ಹೋರಾಡುತ್ತಿದ್ದೇವೆ. ಅದು ಯಾವಾಗ ತೆರವು ಆಗುತ್ತದೆ, ಆ ಕೂಡಲೇ ಕಾಮಗಾರಿಗಳನ್ನು ಪ್ರಾರಂಭ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಅದಾದಮೇಲೆ ಕಲಬುರಗಿ ನಗರದಲ್ಲಿ L&T ಕಂಪನಿಗೆ ಸುಮಾರು 837 ಕೋಟಿ ರೂಪಾಯಿಗಳಿಗೆ

ಸಮಗ್ರ ಕುಡಿಯುವ ನೀರಿನ ಯೋಜನೆಗೆ ಕೆಲಸವನ್ನು ಕೊಟ್ಟಿದ್ದೆವು. ಆದರೆ, ಅವರಿಗೆ ಕೊಟ್ಟ ಮೇಲೆ ಕೆಲವೊಂದು ಸಮಸ್ಯೆಗಳಿಂದ ಅದು ವಿಳಂಬವಾಗಿದೆ. ಮೊದಲನೆಯದಾಗಿ, ಕೋವಿಡ್-19 ಸಮಸ್ಯೆ ಬಂತು. 2020-21ರಲ್ಲಿ ಕೋವಿಡ್-19 ನಿಂದ ತಡವಾಯಿತು. ಅದೇ ರೀತಿ ಕೊಳವೆ ಮಾರ್ಗ ಅಳವಡಿಸುವುದಕ್ಕೆ ರಾಷ್ಟ್ರೀಯ ಹೆದ್ದಾರಿ ಮತ್ತೆ ರೈಲ್ವೆ ಇಲಾಖೆಯಿಂದ ಸಹ ಬೇಗ ಅನುಮತಿ ಸಿಕ್ಕಿರಲಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ಈಗ ಏನು ಮಾಡುತ್ತೀರಿ ಎನ್ನುವುದನ್ನು ಹೇಳಿ.

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಈಗ ಭೌತಿಕವಾಗಿ ಶೇಕಡಾ 55ರಷ್ಟು ಮತ್ತು ಆರ್ಥಿಕವಾಗಿ ಶೇಕಡಾ 40ರಷ್ಟು ಹಣವನ್ನು ವೆಚ್ಚ ಮಾಡಿದ್ದೇವೆ. ಮಾನ್ಯ ಸದಸ್ಯರು ಈಗಾಗಲೇ ತಡವಾಗಿದೆ ಎಂದು ಹೇಳಿದ್ದಾರೆ. ಆದರೆ, ಅವರಿಗೆ ಸುಮಾರು 604.95 ಕೋಟಿ ರೂಪಾಯಿ ಹಣ ಮಂಜೂರಾಗಿತ್ತು. ಅದರಲ್ಲಿ ಸುಮಾರು 241.90 ಕೋಟಿ ರೂಪಾಯಿಗಳ ಕೆಲಸ ಮಾಡಿ, ಪ್ರಗತಿ ಸಾಧಿಸಿದ್ದೇವೆ. ಅದೇ ರೀತಿ ಈ ಕಾಮಗಾರಿ ತಡವಾಗಿದೆ ಎಂದು L&T ಕಂಪನಿಯವರಿಗೆ ಸುಮಾರು 60 ಕೋಟಿ ರೂಪಾಯಿ ದಂಡ ಹಾಕಿ, ಅವರ ಬಳಿ ಅದನ್ನು ವಸೂಲಿಯನ್ನು ಸಹ ಮಾಡಿದ್ದೇವೆ. ಈ ಕಾಮಗಾರಿ 2025ಕ್ಕೆ ಮುಗಿಯಬೇಕಾಗಿತ್ತು. ಅದಕ್ಕೆ ಸುದೀರ್ಘವಾದ ಐದಾರು ಕಾರಣಗಳು ಇದ್ದುದ್ದರಿಂದ ಕಾಮಗಾರಿಯ ಕೆಲಸ ತಡವಾಗಿದೆ. ಆದುದರಿಂದ, ಇದನ್ನು 2027ರ ಒಳಗಡೆ ಮುಗಿಸಬೇಕೆಂದು ಅವರಿಗೆ ತಿಳಿಸಿದ್ದೇವೆ. ಮತ್ತೆ ತಡವಾದರೆ, ಅವರಿಗೆ ದಂಡ ಹಾಕುತ್ತೇವೆ. ಏಕೆಂದರೆ, ಇದನ್ನು ಹಿಂದಿನ ಸರ್ಕಾರದಲ್ಲಿ ಕೊಟ್ಟಂಥದ್ದು. ಇದನ್ನು ನಾವು ಕೊಟ್ಟಿದ್ದು ಅಲ್ಲ. ಆದರೂ ಸಹ ನಾನು ಇದರ ಮೇಲ್ವಿಚಾರಣೆ ಮಾಡಿ, ಈಗಾಗಲೇ ಸುಮಾರು ನಾಲ್ಕು ಸಭೆಗಳನ್ನು ಮಾಡಿದ್ದೇನೆ. ನಾವು ಆಗಾಗ್ಗೆ ಕಂಪನಿಯವರನ್ನು ಕರೆದು ಮಾತನಾಡುತ್ತಿರುತ್ತೇವೆ. ಅವರು ಕೆಲಸ ಮಾಡುತ್ತಿದ್ದಾರೆ. ಆದರೆ, ಸ್ವಲ್ಪ ತಡವಾಗಿದೆ. ಆದುದರಿಂದ, ನಾವು 2027ರ ಒಳಗಡೆ ಈ ಕಾಮಗಾರಿಯ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ over bridge ಸಂಬಂಧ ಸರ್ಕಾರದಿಂದ ಯಾವುದೇ ರೀತಿಯ efforts ಕಾಣಿಸುತ್ತಿಲ್ಲ. ಸುಮಾರು ನಾಲ್ಕು ವರ್ಷ ಸರ್ಕಾರಿ ರಸ್ತೆಯ ಮೇಲೆ over bridge ಮಾಡಬೇಕೆಂದಿರುವಾಗ ಯಾರೋ ಕೋರ್ಟ್‌ಗೆ ಹೋಗಿದ್ದಾರೆಂದು ಅದನ್ನು ಹಾಗೆಯೇ ತಳ್ಳಿ ಹಾಕುವುದು ಅಲ್ಲ. ಅಲ್ಲಿ ಅದರ efforts zero ಇದೆ. There are no efforts at all. ಆದುದರಿಂದ, ಅದನ್ನು ತೆರವುಗೊಳಿಸುವುದಕ್ಕೆ ಏನು ಪ್ರಯತ್ನ ಮಾಡುತ್ತಾರೆ, ಅವರು ಅದನ್ನು ಮಾಡಲಿ. ಏಕೆಂದರೆ, ಇದು ಬಹಳ ವಿಳಂಬವಾಗಿದೆ. ಅಂತಹ junction ನಲ್ಲಿ ಮಾಡಲಿಲ್ಲವೆಂದರೆ, ಮತ್ತೆಲ್ಲಿ ಮಾಡುತ್ತಾರೆ. ಆಮೇಲೆ ಪೈಪ್ ಸರಿಯಿಲ್ಲವೆಂದು ಮೊದಲೇ ನೋಡಿ, ಅದನ್ನು ಟೆಸ್ಟ್ ಮಾಡಿಸಿಯೇ ಹಾಕಿಸಬೇಕಾಗಿತ್ತು. ಅದಕ್ಕೆ ಇಲಾಖೆಯವರು ತಪ್ಪು ಮಾಡಿದ್ದಾರೆ. What action has been taken on them? ಅದಕ್ಕೆ ಏನಾದರೂ

ಕ್ರಮ ಕೈಗೊಳ್ಳಬೇಕಲ್ಲವೇ? It is not a small issue. ಅವರು 104 ಕಿಲೋಮೀಟರ್‌ಗೆ ಪೈಪ್‌ಗಳನ್ನು ಹಾಕಿದ್ದಾರೆ. ಆದರೆ, ಪೈಪ್‌ಗಳ ಗುಣಮಟ್ಟ ಸರಿಯಿಲ್ಲವೆಂದು ಆಮೇಲೆ ಅದರ ವರದಿ ಬೆಳಕಿಗೆ ಬಂದಿದೆ. ಅದನ್ನು ಟೆಸ್ಟ್ ಮಾಡಿದ್ದಾರೆ, ಅದು ಸರಿಯಿಲ್ಲವೆಂದು ಹೇಳಿದ್ದಾರೆ. ಅದರ ವರದಿಯನ್ನು ಬಂದಿದೆ. ಇದು ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರಿಗೆ ಚೆನ್ನಾಗಿ ಗೊತ್ತಿದೆ. ಸುಮಾರು 10 ಕಡೆಗಳಲ್ಲಿ ಊರಿನ ಎಲ್ಲಾ ಕಡೆಗಳಲ್ಲಿ roads open ಮಾಡುತ್ತಾರೆ. ಆದರೆ, restore ಮಾಡುವುದಿಲ್ಲ. ಸ್ವಲ್ಪ ಶುರು ಮಾಡಿ, ಅದನ್ನು ಹಾಗೆಯೇ ಬಿಡುತ್ತಾರೆ. ಈಗ ನಮ್ಮ ಮನೆಯ ಎದುರುಗಡೆಯಲ್ಲಿ ಸುಮಾರು ಆರು ತಿಂಗಳಿನಿಂದ ಪೈಪ್‌ಗಳನ್ನು ಮುಚ್ಚಿಲ್ಲ. ನಾನು ಸುಮಾರು ಬಾರಿ Commissioner ರವರಿಗೆ ಹೇಳಿದರೂ ಸಹ ಅದರ ಕೆಲಸವೇ ಆಗಿಲ್ಲ. ಆದರೆ, ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಮನೆಯ ಬಳಿ ಕೆಲಸ ಪ್ರಾರಂಭ ಮಾಡಿ, ಅದನ್ನು ಬೇಗನೆ ಮುಗಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ ರವರು ಹೇಳಬೇಕು. ಅಂದರೆ, ಕೆಲವು ಕಡೆಗಳಲ್ಲಿ ಆ ರೀತಿ, ಮತ್ತೆ ಕೆಲವು ಕಡೆಗಳಲ್ಲಿ ಈ ರೀತಿ ಇದೆ. ಈ ರೀತಿ ಏಕೆ? Major areas ಆದ Anand Nagar, Khuba plot, Gold Hub ಹತ್ತಿರ Ward No.5, Ward No.50, more than ಹತ್ತಾರು ಕಡೆ open ಮಾಡುತ್ತಾರೆ ಮತ್ತೆ ಹಾಗೆಯೇ ಬಿಡುತ್ತಾರೆ. ಆದರೆ, ಈಗ ಮಳೆಗಾಲ ಪ್ರಾರಂಭವಾಗುತ್ತದೆ. ಅಲ್ಲಿನ ಕೆಸರಿನಲ್ಲಿ ಓಡಾಡಬೇಕೆಂದು ಅದನ್ನು ಎಲ್ಲಿಯವರೆಗೆ ಹಾಗೆಯೇ ಬಿಡುತ್ತಾರೆ. ಈಗ ಕಾರ್ಪೋರೇಷನ್‌ನಲ್ಲಿ that company should be blacklisted ಎಂದು resolution ಪಾಸ್ ಮಾಡಿದ್ದಾರೆ. ಅವರು ಎಲ್ಲರಿಗೂ sublet ಮಾಡಿದ್ದಾರೆ, sub contract ಕೊಟ್ಟಿದ್ದಾರೆ. ಅವರು ಎಲ್ಲಿಯೂ ಏನನ್ನೂ ಮಾಡುತ್ತಿಲ್ಲ. ಅವರ ವಿರುದ್ಧ ಏನು action ತೆಗೆದುಕೊಳ್ಳುತ್ತಾರೆ?

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೈಪ್‌ಗಳ ಸಮಸ್ಯೆ ಇದೆ ಎಂದು ಹೇಳಿದರು. ಈಗ ಅಲ್ಲಿ ಪೈಪ್‌ಗಳನ್ನು ಬದಲಾವಣೆ ಮಾಡಿದ್ದಾರೆ. ಈಗ ಪೈಪ್‌ಗಳನ್ನು ಹಾಕಿ, ಅದನ್ನು check ಮಾಡಿದ ಮೇಲೆ ಅದರ pressure ಅನ್ನು ತಡೆದುಕೊಳ್ಳುತ್ತದೆಯೇ ಎಂದು ಗೊತ್ತಾಗುತ್ತದೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, what action has been taken?

**ಶ್ರೀ ಬಿ.ಎಸ್.ಸುರೇಶ್:-** ಮಾನ್ಯ ಸಭಾಪತಿಯವರೇ, ಪೈಪ್‌ಗಳನ್ನು ಬದಲಾವಣೆ ಮಾಡಿರುವುದೇ action. ಈಗ ಹಾಕಿರುವಂತಹ ಪೈಪ್‌ಗಳನ್ನು ಬದಲಾಯಿಸಿ ಹೊಸದಾಗಿ ಹಾಕಿರುವಂಥದ್ದೆ action. ಅದಕ್ಕೆ ಇನ್ನೇನು ಮಾಡುವುದಕ್ಕೆ ಆಗುತ್ತದೆ? ಹಿಂದೆ ಹಾಕಿದ್ದ ಪೈಪ್, ಅದು ಕಿತ್ತು ಹೋಯಿತು ಅದಕ್ಕೆ ಮತ್ತೆ ಪೈಪ್‌ಗಳನ್ನು ವಾಪಸ್ಸು ಹಾಕಿದ್ದಾರೆ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ತಾವು ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಬಿಡಿ.

**ಶ್ರೀ ಬಿ.ಎಸ್.ಸುರೇಶ್:–** ಮಾನ್ಯ ಸಭಾಪತಿಯವರೇ, ಇದು ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಬಹಳ ದೊಡ್ಡ ಯೋಜನೆ. ಅಂದರೆ, ಇದು ಸುಮಾರು ೮೦೦ ಕೋಟಿ ರೂಪಾಯಿಗಳ ಯೋಜನೆ. ಇದು ಸಮಗ್ರವಾಗಿ ಆಗಬೇಕೆಂದರೆ ಸ್ವಲ್ಪ ತಡವಾಗುತ್ತದೆ ಮತ್ತೆ ಸಮಸ್ಯೆಗಳಾಗುತ್ತವೆ. ಈಗ ಯಾರ್‍ಯಾರ ಮನೆಗಳು ಎಲ್ಲಿವೆ ಎಂದು ಇಲಾಖೆಗೆ ಗೊತ್ತಿಲ್ಲ. ಅಂದರೆ, ಶ್ರೀ ಮಲ್ಲಿಕಾರ್ಜುನ ಖರ್ಗೆ ಸಾಹೇಬರ ಮನೆ ಎಲ್ಲಿದೆ ಮತ್ತು ಮಾನ್ಯ ಸದಸ್ಯರ ಮನೆ ಎಲ್ಲಿದೆ ಎಂದು ಗೊತ್ತಿಲ್ಲ. ಅಲ್ಲಿ ಬೇಗ ಆಯಿತು, ಇಲ್ಲಿ ತಡವಾಗಿದೆ ಎಂದು ನಮಗೆ ಗೊತ್ತಿಲ್ಲ. ಇದನ್ನು ಮಾನ್ಯ ಸದಸ್ಯರ ಸರ್ಕಾರ ಇದ್ದಾಗ ಕೊಟ್ಟಿರುವುದು. ಇದರ contract ಅನ್ನು ನಾವು ಕೊಟ್ಟಿದ್ದು ಅಲ್ಲ. 2021ರಲ್ಲಿ ಹಿಂದಿನ ಸರ್ಕಾರ ಕೊಟ್ಟಿರುವುದು.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಕೊಟ್ಟಿರುವುದು, ನಮ್ಮ ಸರ್ಕಾರ ಇದ್ದಿದ್ದರೆ ಅದನ್ನು ಮುಗಿಸುತ್ತಿದ್ದೆವು. ಆದರೆ ಅವರ ಸರ್ಕಾರ ಬಂದಾಗ ಅದರ ಕೆಲಸ ಆಗಬೇಕು.

**ಸಭಾಪತಿಯವರು:–** ಶ್ರೀ ಶಶೀಲ್ ಜಿ. ನಮೋಶಿಯವರೆ, ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡಲಿ ಬಿಡಿ.

**ಶ್ರೀ ಬಿ.ಎಸ್.ಸುರೇಶ್:–** ಮಾನ್ಯ ಸಭಾಪತಿಯವರೇ, ಆಗ ಏನಾಗಿದೆ ಎಂದು ನಮಗೆ ಗೊತ್ತಿಲ್ಲ. ಈಗ ಇದನ್ನು ನನ್ನ ಮೇಲ್ವಿಚಾರಣೆಯಲ್ಲಿ ಕೆಲಸವನ್ನು ಮಾಡಿ, 2027ರ ಒಳಗಡೆ ಕಲಬುರಗಿ ಜನರಿಗೆ ಸಮಗ್ರವಾಗಿ ಕುಡಿಯುವ ನೀರು ಕೊಡುವಂತಹ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: ೮42**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು ರಾಯಚೂರು ಜಿಲ್ಲೆ ಹತ್ತಿ ಉತ್ಪಾದನೆಯಲ್ಲಿ ರಾಜ್ಯದಲ್ಲಿಯೇ ಪ್ರಮುಖ ಸ್ಥಾನವನ್ನು ಹೊಂದಿದೆ. ಇಂತಹ ಕೃಷಿ ಆಧಾರಿತ ಪ್ರದೇಶದಲ್ಲಿ ಜವಳಿ ಪಾರ್ಕ್ ಸ್ಥಾಪನೆಯಾದರೆ, ರೈತರಿಗೆ ಉತ್ತಮ ಮಾರುಕಟ್ಟೆ, ಸ್ಥಿರ ಬೆಲೆ ಹಾಗೂ ಮೌಲ್ಯವರ್ಧನೆ ಸಾಧ್ಯವಾಗುತ್ತದೆ. ಕಚ್ಚಾ ಹತ್ತಿಯನ್ನು ಹೊರ ರಾಜ್ಯಗಳಿಗೆ ರಫ್ತು ಮಾಡುವುದರ ಬದಲು, ಸ್ಥಳೀಯವಾಗಿಯೇ ಸಂಸ್ಕರಣೆ ಮತ್ತು ಉತ್ಪಾದನೆ ಮಾಡಿದರೆ, ಜಿಲ್ಲೆಗೆ ಆರ್ಥಿಕವಾಗಿ ಬಲ ಬಂದಂತೆ ಆಗುತ್ತದೆ. ಇವತ್ತು ಪ್ರೊ.ಡಿ.ಎಂ.ನಂಜುಂಡಪ್ಪನವರ ವರದಿಯಂತೆ ಹಿಂದುಳಿದ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು....

**ಸಭಾಪತಿಯವರು:–** ತಾವು ಪ್ರಶ್ನೆ ಕೇಳಿ. ಅದನ್ನು ಓದಬೇಡಿ.

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ನಾನು ಅದನ್ನೇ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಈಗ ನಿಮಗೆ ಏನಾಗಬೇಕೆಂದು ಹೇಳಿ.

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಕೇಂದ್ರ ಸರ್ಕಾರದ ಜಾಗವಿದೆ. ಅದಕ್ಕೆ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ, ಅಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿಯವರು ಕೇಳಿರುವಂತಹ ಪ್ರಶ್ನೆಗೆ ಸವಿಸ್ತಾರವಾಗಿ ಉತ್ತರ ನೀಡಿದ್ದೇನೆ. ಮತ್ತೆ ಅವರು ನನಗೂ ಸಹ ಜನವರಿ ೨೦೨೫ರಲ್ಲಿ ಒಂದು ಪತ್ರ ಬರೆದಿದ್ದರು. ಅಲ್ಲಿ ೨೦೨೫ಕ್ಕೆ ತ್ವರಿತವಾಗಿ ಜವಳಿ ಪಾರ್ಕ್ ಮಾಡಬೇಕೆಂದು ಅಲ್ಲಿ ಸರ್ವೆ ಮಾಡಿದಾಗ, land availability ಇರಲಿಲ್ಲ. ಈಗ land availability ಇಲ್ಲವೆಂದಾಗ ಅಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ಒಂದು Central State Farm ಇದೆ. ಅದಕ್ಕೆ ಈ ಹಿಂದೆ ಸುಮಾರು ೭,೫೦೦ ಎಕರೆ ಜಮೀನನ್ನು ನೀಡಿದ್ದಾರೆ. ಅದು ಉಪಯೋಗವಾಗಿದೆಯೋ ಇಲ್ಲವೋ ಅದು ಅವರಿಗೆ ಬಿಟ್ಟಿದ್ದು. ಅಲ್ಲಿಂದ ಜಮೀನು ಕೊಡಿಸಿ ಎಂದು ನಾನೇ ಒಂದು

ಪತ್ರ ಬರೆದಿದ್ದೇನೆ. ಅಂದರೆ, ಸಿಂಧನೂರಿನಲ್ಲಿ ಬೇರೆ ಎಲ್ಲೂ 15 ಎಕರೆಯಷ್ಟು ಜಮೀನು ಸಿಗುತ್ತಿಲ್ಲ. At least ಅದನ್ನು ಅಲ್ಲಿಂದ ಕೊಡಿಸಿದರೆ ಅದನ್ನು P.P.P. model ನಲ್ಲಿ ಮಾಡಿಕೊಡುತ್ತೇನೆಂದು ಹೇಳಿದ್ದೆ. ಅದನ್ನು ಸರ್ಕಾರದ ಸ್ವಾಮ್ಯದಲ್ಲಿ ಆಗುವುದಿಲ್ಲ. ಏಕೆಂದರೆ, ರಾಜ್ಯ ಸರ್ಕಾರದ ವತಿಯಿಂದ ಇಲ್ಲಿಯವರೆಗೆ ಯಾವುದೇ ರೀತಿಯ ಜವಳಿ ಪಾರ್ಕ್ ಅನ್ನು ಮಾಡಿಲ್ಲ. ಆದರೆ, ಕಲಬುರಗಿ ಜಿಲ್ಲೆಯಲ್ಲಿ ಮಾತ್ರ P.M. MITRA Park ಎಂದು ಮಾಡುತ್ತಿದ್ದೇವೆ. ಅದು ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳ ಪಕ್ಕದಲ್ಲಿಯೇ ಇದೆ. ಅಲ್ಲಿ ಮೆಗಾ ಪಾರ್ಕ್ ಬರುತ್ತಿದೆ. ಅಲ್ಲಿಯೂ ಕೂಡ ಹತ್ತಿಯನ್ನು processing ಮಾಡುವಂಥದ್ದು. Yard to fabric ವರೆಗೆ process ಮಾಡತಕ್ಕಂತಹ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಇಲ್ಲಿಯೂ ಕೂಡ ಮಾಡಬೇಕೆಂಬುದು ಮಾನ್ಯ ಸದಸ್ಯರ ಅಭಿಲಾಷೆ. ಆದಷ್ಟು ಬೇಗ ಏನು 7,500 ಎಕರೆ ಜಮೀನು ಕೇಂದ್ರ ಸರ್ಕಾರ ಸ್ವಾಮ್ಯದಲ್ಲಿ ಇದೆ, ಅದು ಉಪಯೋಗ ಕೂಡ ಆಗುತ್ತಿಲ್ಲ. ಅವರು ಪ್ರಯತ್ನ ಮಾಡಿ ಅದರಲ್ಲಿ 15 ಎಕರೆಯನ್ನು ಕೊಡಿಸಿದರೆ ಮತ್ತೆ ನಾನು ಸಹ ಪ್ರಯತ್ನ ಮಾಡುತ್ತೇನೆ. ನಾನು ಕೇಂದ್ರ ಸರ್ಕಾರದವರಿಗೆ ಪತ್ರ ಕೂಡ ಬರೆದಿದ್ದೇನೆ. ಅದನ್ನು ಬಿಟ್ಟುಕೊಟ್ಟರೆ ಅದನ್ನು ಮಾಡಿಕೊಡುವುದಕ್ಕೆ ಕ್ರಮ ವಹಿಸುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೇ, ಇವತ್ತು ಅಲ್ಲಿನ ಅನೇಕ ಯುವಕರಿಗೆ ನಿರುದ್ಯೋಗಿತನ ಹೆಚ್ಚಾಗುತ್ತಿದೆ. ಅದಕ್ಕಾಗಿ ಮಾನ್ಯ ಸದಸ್ಯರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆಂದು ಹೇಳುತ್ತಿದ್ದಾರೆ, ಅದಕ್ಕೆ ಅವರು ಕೇಂದ್ರ ಸರ್ಕಾರ ಮತ್ತು ಕೇಂದ್ರ ಸಚಿವರ ಮೇಲೆ ಒತ್ತಡ ಹಾಕಿ ಕೂಡಲೇ ಅದನ್ನು ಮಾಡಿಸಿಕೊಡುವಂತಹ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಲೋಕಸಭಾ ಸದಸ್ಯರಿಗೂ ಸಹ ವಿನಂತಿ ಮಾಡಲಿ. ನಾನೂ ಸಹ ಅವರಿಗೆ ಪತ್ರ ಬರೆಯುತ್ತೇನೆ. ಅದನ್ನು ಆದಷ್ಟು ಬೇಗ ಕೊಡಿಸಿದರೆ, ನಾನು ಖಂಡಿತ ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: ೮೩೫**
**(ಉತ್ತರವನ್ನು ಲಗತ್ತಿಸಿದೆ)**

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಾಮಾನ್ಯವಾಗಿ ಮಾನ್ಯ ಸಚಿವರು ಈ ರೀತಿಯಾಗಿರುವಂತಹ ಹಾರಿಕೆಯ ಉತ್ತರವನ್ನು ಕೊಡುವುದಿಲ್ಲ. ಆದರೂ ಸಹ ಏಕೋ ಈ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಆದುದರಿಂದ, ನನಗೆ ಅವರು ನೀಡಿರುವ ಉತ್ತರ ಸಮಾಧಾನವಿಲ್ಲ. ಈ ಪ್ರಶ್ನೆ ಬೆಳಗಾವಿ ನಗರದ ಬಸವನ ಕುಡುಚಿಯ ಹತ್ತಿರ ಇರುವ ದೇವರಾಜ ಅರಸ್ ಕೆ.ಹೆಚ್.ಬಿ. ಬಡಾವಣೆಯ ಮಹಾಲಕ್ಷ್ಮೀ ನಗರಕ್ಕೆ ಸಂಬಂಧಪಟ್ಟಂತೆ. ಇದು ೨೦೨೦ರಲ್ಲಿ ಕೆ.ಹೆಚ್.ಬಿ.ಯಿಂದ ನಿರ್ಮಾಣಗೊಂಡು ಬೆಳಗಾವಿ ಮಹಾನಗರ ಪಾಲಿಕೆಗೆ ವರ್ಗಾವಣೆಯಾಗಿದೆ. ಆದರೆ, ೨೦೨೦ ರಿಂದ ಇಲ್ಲಿಯವರೆವಿಗೂ ಮೂಲಭೂತ ಸೌಕರ್ಯಗಳು ಇಲ್ಲದೇ ಅದು ಸರಿಯಾಗಿ ಅಭಿವೃದ್ಧಿಯಾಗಿಲ್ಲ.

**(ಮುಂದು)**

(೨೬೫) ೧೦.೦೩.೨೦೨೬ ೧೨.೩೦ LL-BNS (ಸಭಾಪತಿಯವರ ಉಪಸ್ಥಿತಿ)

**ಡಾ|| ತಳವಾರ್ ಸಾಬಣ್ಣ(ಮುಂದು):-**

ಕನಿಷ್ಠ ಮೂಲಭೂತ ಸೌಕರ್ಯಗಳು ಸಿಗದೇ ಇರುವ ಕಾರಣಕ್ಕಾಗಿ ಅಲ್ಲಿನ ನಿವಾಸಿಗಳು ತೊಂದರೆಗೆ ಒಳಗಾಗುತ್ತಿದ್ದಾರೆ. ಅವರೂ ತೆರಿಗೆ ಕಟ್ಟುತ್ತಿದ್ದು, ಅವರಿಗೆ ಸರಿಯಾದ ಮೂಲಭೂತ ಸೌಲಭ್ಯಗಳು ಸಿಗುತ್ತಿಲ್ಲ. ಹಾಗಾಗಿ, ನನ್ನ ಪ್ರಶ್ನೆಗೆ ಉತ್ತರ ಬಯಸುತ್ತೇನೆ. ನಂತರ, ನನ್ನ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಸುರೇಶ್ ಬಿ.ಎಸ್. (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ|| ತಳವಾರ್ ಸಾಬಣ್ಣನವರು ಕೆ.ಹೆಚ್.ಬಿ. ಬಡಾವಣೆ, ಮಹಾಲಕ್ಷ್ಮೀ ನಗರ ಕಾಲೋನಿ, ಬೆಳಗಾವಿ. ಇದು ಬೆಳಗಾವಿ ಮಹಾನಗರ ಪಾಲಿಕೆಯ ಅಧೀನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದು, ಅದು ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಿರುತ್ತದೆ. ಎರಡನೆಯದಾಗಿ, ೨೦೨೦ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಗೆ ಇದನ್ನು ವರ್ಗಾಯಿಸಿದ್ದರೂ, ಸದರಿ ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸದೇ ಇರುವುದಕ್ಕೆ ಕಾರಣಗಳೇನು ಎಂದು ಪ್ರಶ್ನೆ ಕೇಳಿದ್ದಾರೆ. ಬೆಳಗಾವಿ ನಗರ ದೇವರಾಜ ಅರಸು ಕೆ.ಹೆಚ್.ಬಿ. ಬಡಾವಣೆಯನ್ನು ೨೦೨೦ರಲ್ಲಿ ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ಬಡಾವಣೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇದ್ದವು ಎನ್ನುವ ಕಾರಣಕ್ಕಾಗಿಯೇ ನಾವು ಅದನ್ನು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿಕೊಂಡಿರುತ್ತೇವೆ. ಅದಾದ ನಂತರ, ಈಗ ಯು.ಜಿ.ಡಿ., ವಿದ್ಯುತ್ ಮತ್ತು ಮೂಲಭೂತ ಸೌಕರ್ಯಗಳು ಇಲ್ಲವೆಂದು ದೂರುಗಳು ಇವೆ. ಈಗಾಗಲೇ ಸದರಿ ಬಡಾವಣೆಯಲ್ಲಿ ಮೂಲಭೂತ

ಸೌಕರ್ಯಗಳಾದ ರಸ್ತೆ, ಯು.ಜಿ.ಡಿ., ವಿದ್ಯುತ್ ಸಂಪರ್ಕಕ್ಕೆ ರೂ.1,500 ಲಕ್ಷಗಳ ಹಣ ಬೇಕಾಗುತ್ತದೆ ಎಂದು ಅಂದಾಜು ಪಟ್ಟಿಯನ್ನು ಮಹಾನಗರ ಪಾಲಿಕೆಗೆ ಕೊಟ್ಟಿರುತ್ತೇವೆ. ಆದರೆ, ಪಾಲಿಕೆಯಲ್ಲಿರುವ ಹಣದ ಲಭ್ಯತೆಯ ಆಧಾರದ ಮೇರೆಗೆ ಹಂತ ಹಂತವಾಗಿ ಅಲ್ಲಿಗೆ ಮೂಲಭೂತ ಸೌಕರ್ಯಗಳೇನು ಇವೆ, ಅವುಗಳನ್ನು ಕೊಡುತ್ತೇವೆ. ಆದಾಗ್ಯೂ, ಅಲ್ಲಿ ಮೂಲಭೂತ ಸೌಕರ್ಯಗಳು ಇವೆ. ಅವುಗಳನ್ನು ಇನ್ನಷ್ಟು upgradation ಮಾಡಲಿಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕು, ಅದನ್ನು ಹಣದ ಲಭ್ಯತೆಯ ಅನುಗುಣವಾಗಿ ಈ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ ಕೆ.ಹೆಚ್.ಬಿ. ಕಾಲೋನಿಯನ್ನು 2020ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಗೆ ವರ್ಗಾವಣೆ ಮಾಡುವಾಗ ಸುಸಜ್ಜಿತ ಸ್ಥಿತಿಯಲ್ಲಿ ಕೊಟ್ಟಿದ್ದರು. ಆದರೆ, ಅದು ಮಹಾನಗರ ಪಾಲಿಕೆಗೆ ವರ್ಗಾವಣೆಯಾದ ನಂತರ, ಅಲ್ಲಿನ ರಸ್ತೆಗಳೆಲ್ಲವೂ ಕೆಟ್ಟು ಹೋಗಿರುತ್ತವೆ. ಸಹಜವಾಗಿ ಬೆಳಗಾವಿ ಜಿಲ್ಲೆಯಲ್ಲಿ ಮಳೆ ಹೆಚ್ಚು ಇರುವುದರಿಂದ, ರಸ್ತೆಗಳು ಹಾಳಾಗಿ ಹೋಗಿರುತ್ತವೆ. ಆ ರಸ್ತೆಗಳ ರಿಪೇರಿ ಆಗಿರುವುದಿಲ್ಲ. ಇದರ ಜೊತೆಗೆ, ಸದರಿ ಕೆ.ಹೆಚ್.ಬಿ. ಕಾಲೋನಿಯಲ್ಲಿ ವಿದ್ಯುತ್ ಕಂಬಗಳು ಇದ್ದು, ಬಲ್ಬ್‌ಗಳು ಉರಿಯುತ್ತಿಲ್ಲ. ಅಲ್ಲದೇ, ಯು.ಜಿ.ಡಿ. ಬಗ್ಗೆ ಹೇಳುವುದಾದರೆ, ಈಗಾಗಲೇ ಇರುವಂತಹ ಚರಂಡಿಗಳಲ್ಲಿ ಕಸ-ಕಡ್ಡಿ ತುಂಬಿಕೊಂಡು ನೀರು ಮುಂದೆ ಹರಿದು ಹೋಗುತ್ತಿಲ್ಲ. ಮಳೆ ಬಂದಂತಹ ಸಂದರ್ಭದಲ್ಲಿ ಗಟಾರ್‌ಗಳು ತುಂಬುತ್ತಿರುತ್ತವೆ. ಅದೇ ರೀತಿಯಾಗಿ, L&T ವತಿಯಿಂದ ಬೆಳಗಾವಿಗೆ ಯಶಸ್ವಿಯಾಗಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ, ಈ ಏರಿಯಾಕ್ಕೆ ಬರುತ್ತಿರುವುದಿಲ್ಲ. ಆದುದರಿಂದ, ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಮಾನ್ಯ ಸಚಿವರು ಸರ್ಕಾರದಲ್ಲಿ ಪ್ರಭಾವಿಯಾಗಿರುವಂತಹ ಮಂತ್ರಿಗಳಾಗಿರುತ್ತಾರೆ. ಹಾಗಾಗಿ, ನಮ್ಮ ಬೆಳಗಾವಿ ಜಿಲ್ಲೆಗೆ ರೂ.15 ಕೋಟಿಗಳ ಹಣ ಕೊಟ್ಟರೆ, ಅದು ಬಹಳ ಕಡಿಮೆಯಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ಪ್ರಭಾವಿ ಮಂತ್ರಿಗಳು ಎಂದು ತಮಗೆ ಹೇಗೆ ಗೊತ್ತಾಯಿತು?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆ ವಿಚಾರ ಇಡೀ ಸರ್ಕಾರಕ್ಕೆ ಹಾಗೂ ಇಡೀ ಕರ್ನಾಟಕ್ಕಕೆ ಗೊತ್ತಿರುತ್ತದೆ. ಹೀಗಾಗಿ, ಮಾನ್ಯ ಸಚಿವರಿಗೆ ನಾನು ಕೇಳುವುದೇನೆಂದರೆ, ಸದರಿ ಕೆ.ಹೆಚ್.ಬಿ. ಕಾಲೋನಿಯಲ್ಲಿ ರಸ್ತೆ ರಿಪೇರಿ ಮಾಡಿಸುವುದು, ಸಂಪರ್ಕ ರಸ್ತೆ ಕಲ್ಪಿಸುವುದು ಮತ್ತು ಯು.ಜಿ.ಡಿ. ಗಳನ್ನು ದುರಸ್ತಿಗೊಳಿಸುವುದು ಮತ್ತು ಅಲ್ಲಿ ವಿದ್ಯುತ್ ಕಂಬಗಳಿದ್ದು ಆ ಕಂಬಗಳಿಗೆ ದೀಪಗಳು ಇಲ್ಲ ಎನ್ನುವುದು ಎಷ್ಟು ಸರಿ? ಅಥವಾ ಆ ಕಂಬಗಳಿಗೆ ದೀಪಗಳನ್ನು ಅಳವಡಿಸುವುದಕ್ಕೆ ಗತಿ ಇಲ್ಲವೆಂದರೆ, ಮಹಾನಗರ ಪಾಲಿಕೆಗೆ ಮತ್ತು ಇಲಾಖೆಗೆ ಕೆಲಸ/ಜವಾಬ್ದಾರಿ ಏನಿರುತ್ತದೆ? ಹಾಗೂ ಆ ಕಾಲೋನಿಗೆ L&T ವತಿಯಿಂದ ನೀರು ಪೂರೈಕೆ ಮಾಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ತಮ್ಮನ್ನು ಪ್ರಭಾವಿ ಮಂತ್ರಿಗಳೆಂದು ಹೇಳಿರುತ್ತಾರೆ. ಹಾಗಾಗಿ, ಅದರ ಸಲುವಾಗಿ ಆದರೂ ಮಾನ್ಯ ತಳವಾರ್ ಸಾಬಣ್ಣನವರ ಕೆಲಸವನ್ನು ಮಾಡಿಕೊಡಿ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಮಾನ್ಯ ತಳವಾರ್ ಸಾಬಣ್ಣನವರು ಬೆಳಗಾವಿಗೆ ರೂ.15 ಕೋಟಿಗಳ ಹಣವನ್ನು ಮಾತ್ರ ಕೊಟ್ಟಿದ್ದಾರೆಂದು ಹೇಳಿರುತ್ತಾರೆ. ಅದು ತಪ್ಪು ಮಾಹಿತಿ. ಪೂರ್ಣ ಮಾಹಿತಿಯನ್ನು ನಾನು ಹೇಳುತ್ತೇನೆ. ಅದೇನೆಂದರೆ, ರೂ.170 ಕೋಟಿಗಳ ಹಣವನ್ನು ಬೆಳಗಾವಿ ಮಹಾನಗರ ಪಾಲಿಕೆಗೆ ಕೊಟ್ಟಿರುತ್ತೇವೆ. ಅದರಲ್ಲಿಯೂ, ರೂ.15 ಕೋಟಿಗಳ ಹಣವನ್ನು ಕೆ.ಹೆಚ್.ಬಿ. ಕಾಲೋನಿಯ ಅಭಿವೃದ್ಧಿಗೆ ಕೊಟ್ಟಿರುತ್ತೇವೆ. ಆದುದರಿಂದ, ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಹಣ ಇದೆ. ಅಲ್ಲದೇ, ಈ ವಿಷಯಕ್ಕೆ ಸಂಬಂಧಿಸಿದಂತೆ, ಡಿ.ಪಿ.ಆರ್. ಕೂಡ ತಯಾರಿದೆ. ಹಾಗಾಗಿ, ಈ ಬಗ್ಗೆ ನಾನು ನಮ್ಮ ಇಲಾಖೆಯ ಕಾರ್ಯದರ್ಶಿಯವರ ಜೊತೆ ಮಾತನಾಡಿ, ಆದಷ್ಟು ಶೀಘ್ರವಾಗಿ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅಲ್ಲಿನ ನಿವಾಸಿಗಳಿಗೆ ಅನುಕೂಲ ಮಾಡಿಕೊಡುವಂತಹ ಕೆಲಸವನ್ನು ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ: 747

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ ವಾರ್ಷಿಕವಾಗಿ 29,756 ಮೆಟ್ರಿಕ್ ಟನ್ ಹಲಸಿನ ಹಣ್ಣು ಉತ್ಪಾದನೆಯಾಗುತ್ತದೆ. ಅದರಲ್ಲಿ ಕೇವಲ 726.41 ಹೆಕ್ಟೇರ್ ಪ್ರದೇಶದಲ್ಲಿ ಕೆಲವೇ ಜಿಲ್ಲೆಗಳಲ್ಲಿ ಹಲಸಿನ ಹಣ್ಣು ಬೆಳೆಯುತ್ತಾರೆಂದು ಮಾಹಿತಿ ನೀಡಿರುತ್ತಾರೆ. ಹೀಗಾದರೆ, ಇತರೆ ಜಿಲ್ಲೆಗಳ ಮಾಹಿತಿ ಲಭ್ಯವಿರುವುದಿಲ್ಲವೇ? ಎರಡನೆಯದಾಗಿ, ಮಾನ್ಯ ಸಚಿವರು ನೀಡಿರುವ ಉತ್ತರದ ಪ್ರಕಾರ ಶೇಕಡ 40 ರಿಂದ 50 ರಷ್ಟು ಹಲಸಿನ ಹಣ್ಣು ವ್ಯರ್ಥವಾಗುತ್ತಿದೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಇದನ್ನು ಸರಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳಿದರೆ, ಅದಕ್ಕೆ ಹಲಸಿನ ಮೇಳವನ್ನು ಮಾಡುತ್ತೇವೆಂದು ಹೇಳಿರುತ್ತಾರೆ. ಈ ರೀತಿ ಬೃಹತ್ ಪ್ರಮಾಣದಲ್ಲಿ ಆಗುತ್ತಿರುವಂತಹ ನಷ್ಟವನ್ನು ಹಲಸಿನ ಮೇಳವನ್ನು ಮಾಡಿದರೆ, ಅದನ್ನು ಸರಿಹೋಗಿಸಬಹುದೇ ಎಂಬುದು ನನ್ನ ಪ್ರಶ್ನೆಯಾಗಿದೆ.

ಮೂರನೆಯದಾಗಿ, ಕಾಫಿ, ಚಹಾ ಮತ್ತು ಸಾಂಬಾರ ಪದಾರ್ಥಗಳ ಅಭಿವೃದ್ಧಿಗೆ ಮಂಡಳಿಗಳು ಇರುವ ಮಾದರಿಯಲ್ಲಿ ಹಲಸಿನ ಮಂಡಳಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ, ಹಲಸಿನ ಹಣ್ಣನ್ನು ಭವಿಷ್ಯದ ಆಹಾರ ಎಂದು ಪರಿಗಣಿಸುತ್ತಿರುವಾಗ, ಈ ಹಣ್ಣಿನ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಯನ್ನು ಸ್ಥಾಪನೆ ಮಾಡದೇ ಹೋದರೆ, ಹಲಸಿನ ಹಣ್ಣಿಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆಯನ್ನು ಹೇಗೆ ಒದಗಿಸುತ್ತಾರೆ?

**ಸಭಾಪತಿಯವರು:–** ಮಾನ್ಯ ಮಂಜೇಗೌಡರವರೇ, ತಾವು ಉತ್ತರವನ್ನು ಓದಬೇಡಿ. ಬದಲಾಗಿ, ಈ ವಿಷಯದಲ್ಲಿ ಏನು ಆಗಬೇಕೆಂಬುದನ್ನು ಮಾತ್ರ ಹೇಳಿ.

**ಶ್ರೀ ಸಿ.ಎನ್. ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಲಸಿನ ಮಂಡಳಿ ಸ್ಥಾಪನೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಹಾಗಾದರೆ, ಹಲಸಿನ ಮೇಳವನ್ನು ಹೇಗೆ ಮಾಡುತ್ತೀರಿ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ.

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡರವರು ಏನು ಪ್ರಶ್ನೆ ಕೇಳಿದ್ದಾರೆ, ಅದರಲ್ಲಿ ಮುಖ್ಯವಾಗಿ ಹಲಸಿನ ಹಣ್ಣನ್ನು ಬೆಳೆಯುವಂತಹ ಜಿಲ್ಲೆಗಳ ಮಾಹಿತಿಯನ್ನು ಕೇಳಿದ್ದು, ಅದಕ್ಕೆ ಉತ್ತರವನ್ನು ನೀಡಿರುತ್ತೇವೆ. ಇತರೆ ಜಿಲ್ಲೆಗಳ ಮಾಹಿತಿ ಇರುವುದಿಲ್ಲವೇ ಎನ್ನುವ ಪ್ರಶ್ನೆಗೆ ಕೂಡ ನಮ್ಮ ಇಲಾಖೆ ವತಿಯಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಆಗಬೇಕೋ ಅದನ್ನು ಮಾಡಿ, ಒಟ್ಟಿನಲ್ಲಿ ರೈತರ ಮನ ಗೆಲ್ಲುವ ನಿಟ್ಟಿನಲ್ಲಿ ಕೆಲಸ ಮಾಡಿ

ಎಂದು ನಮ್ಮ ಅಧಿಕಾರಿಗಳಿಗೆ ಹೇಳಬಹುದು. ಮಾನ್ಯ ಸದಸ್ಯರು ಮುಖ್ಯವಾಗಿ ಕೇಳಿರುವ ಪ್ರಶ್ನೆ ಏನೆಂದರೆ, ಹಲಸಿನ ಮಂಡಳಿಯನ್ನು ಸ್ಥಾಪನೆ ಮಾಡಿ ಎನ್ನುವುದಾಗಿದೆ. ಆ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ನಂತರ ಮಾಹಿತಿ ನೀಡುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಹಲಸಿನ ಹಣ್ಣು ಕೇವಲ ಹಣ್ಣಲ್ಲ. ಇದೊಂದು ಕಲ್ಪವೃಕ್ಷ. ಯಾವುದೇ ಕೆಮಿಕಲ್ ಇಲ್ಲದೇ ಬೆಳೆಯುವಂತಹ ಹಣ್ಣು ಇದು. ಮಧುಮೇಹ, ಕ್ಯಾನ್ಸರ್, ಏಡ್ಸ್‌ನಂತಹ ಕಾಯಿಲೆಗಳಿಗೆ ಔಷಧಿಯಾಗತಕ್ಕಂತಹ ಒಂದು ಮೆಡಿಸಿನ್ ಕೂಡ ಆಗಿರುತ್ತದೆ. ಅಲ್ಲದೇ, ಹಲಸಿನ ಹಣ್ಣು ಯಾವುದೇ ರಾಸಾಯನಿಕ ಇಲ್ಲದೇ ಬೆಳೆಯುವಂತಹ ಹಣ್ಣು ಆಗಿರುವುದರಿಂದ, ಮುಂದಿನ ದಿನಮಾನಗಳಲ್ಲಿ ಈ ಹಲಸಿನ ಹಣ್ಣು ಬೇಗ ಹಾಳಾಗದೇ ಇರುವಂತೆ ಕೋಲ್ಡ್ ಸ್ಟೋರೇಜ್ ಸೆಂಟರ್(ಶೀತಲೀಕರಣ ಕೇಂದ್ರ) ಅಥವಾ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿರುತ್ತೀರಿ. ಅದರಂತೆ, ಪ್ರಸ್ತುತ ನಮ್ಮ ರಾಜ್ಯದಲ್ಲಿ 262 ಶೀತಲೀಕರಣ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ. ಆದರೆ, ಈ 262 ಶೀತಲೀಕರಣ ಕೇಂದ್ರಗಳಲ್ಲಿ ಹಲಸಿನ ಹಣ್ಣನ್ನು ಎಲ್ಲಿಯೂ ಇಡುತ್ತಿಲ್ಲ. ಹಾಗಾಗಿ, ನಾನು ಹೇಳುವುದೇನೆಂದರೆ, ಗ್ರಾಮೀಣ ಭಾಗದಲ್ಲಿ ಏನು ಸ್ವಸಹಾಯ ಸಂಘಗಳು ಇವೆ, ಈ ಸಂಘಗಳಲ್ಲಿ ಮಹಿಳೆಯರು ಏನು ಇದ್ದಾರೆ, ಅವರುಗಳ ಮುಖಾಂತರ ಹಲಸಿನ ಹಣ್ಣಿನಿಂದ ಹಪ್ಪಳ ಮಾಡುವುದು, ಚಿಪ್ಸ್ ಮಾಡುವುದಕ್ಕೆ, ಜಾಮ್ ಮಾಡುವುದಕ್ಕಾಗಿ ಅವರಿಗೆ ತರಬೇತಿ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಎರಡನೆಯದಾಗಿ, ಹಲಸಿನ ಹಣ್ಣಿನಿಂದ ಬರುವಂತಹ ಉಪ ಉತ್ಪನ್ನಗಳು ಏನಿವೆ, ಇವುಗಳನ್ನು ಗೋಧಿ ಹಿಟ್ಟು, ಅಕ್ಕಿ ಇದರ ಬದಲಾಗಿ, ಈ ಉತ್ಪನ್ನಗಳಿಗೆ ಬೆಲೆ ಕೊಟ್ಟಿದ್ದೇ ಆದರೆ, ಮುಂದಿನ ದಿನಮಾನಗಳಲ್ಲಿ ಆಹಾರದಲ್ಲಿ ಬಹಳ ದೊಡ್ಡ ಕ್ರಾಂತಿಯೇ ಆಗುತ್ತದೆ. ಅದಾದ ನಂತರ, ಇಲಾಖೆಯ ವತಿಯಿಂದ ಸರ್ಕಾರಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಉದಾಹರಣೆಗೆ, ವಸತಿ ಶಾಲೆಗಳಿಗೆ ಕೊಡತಕ್ಕಂತಹ ಆಹಾರದ ಪಟ್ಟಿಯಲ್ಲಿ ಈ ಹಲಸಿನ ಹಣ್ಣಿನ ಉತ್ಪನ್ನಗಳನ್ನು ಸೇರಿಸಿದರೆ, ಹಲಸಿನ ಹಣ್ಣಿನ ಮಾರುಕಟ್ಟೆಗೆ ಬಹಳ ಉತ್ತೇಜನ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ, ಈ ವಿಚಾರವನ್ನು ಸಣ್ಣ ಗಾತ್ರದ ಉದ್ದಿಮೆಗಳಿಗೆ ರೆಫರ್ ಮಾಡಿಸುತ್ತೇನೆ. ಜೊತೆಗೆ, ಹಲಸಿನ ಹಣ್ಣಿನ ಉಪ ಉತ್ಪನ್ನಗಳು ಏನು ಇವೆ, ಇದರ ಬಗ್ಗೆ ಪರಿಶೀಲನೆ ಮಾಡಿ ಎಂದು ನಮ್ಮ ಇಲಾಖೆಯ ಅಧಿಕಾರಿಗಳಿಗೆ ತಿಳಿಸುತ್ತೇನೆ. ಬಹಳ ಮುಖ್ಯವಾಗಿ ಶೀತಲೀಕರಣ ಕೇಂದ್ರಗಳನ್ನು ಸಹ ಸಾಕಷ್ಟು ಸಂಖ್ಯೆಯಲ್ಲಿ ಕೊಡುತ್ತಿದ್ದೇವೆ. ಅದು ನಮ್ಮ ಇಲಾಖೆ ಆಗಿರಬಹುದು ಅಥವಾ ಎ.ಪಿ.ಎಂ.ಸಿ. ಆಗಿರಬಹುದು. ಇದರ ಜೊತೆಗೆ, ಮಾನ್ಯ ಸದಸ್ಯರದ್ದು ಏನಾದರೂ ಬೇಡಿಕೆ ಇದ್ದು, ಅದನ್ನು ಹೇಳಿದರೆ, ಅದನ್ನು ಕೂಡ ಮಾಡಿಸುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಡುತ್ತಿರುವಂತಹ ಸಬ್ಸಿಡಿ ಸಾಕಾಗುತ್ತಿರುವುದಿಲ್ಲ.

**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೇ, ಸಬ್ಸಿಡಿಯನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಹಣವನ್ನು ಸೇರಿಸಿ ಒಟ್ಟಾರೆ ಕೊಡುತ್ತೇವೆ. ಅದರ ಜೊತೆಗೆ, ಈ ಸಬ್ಸಿಡಿ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.

(ಮುಂದು)

(266) 10.03.2026 ವೈಎಲ್-ಕೆಎಸ್ 12.40 (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 992**
**(ಲಿಖಿತ ಉತ್ತರ ಒದಗಿಸಿರುವುದಿಲ್ಲ)**

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸೂರಜ್ ರೇವಣ್ಣನವರೇ, ತಾವು ಕೇಳಿರುವ ಪ್ರಶ್ನೆ ವರ್ಗಾವಣೆಯಾಗಿದೆ ಎಂದು ಮಾಹಿತಿ ಬಂದಿದೆ. ಹಾಗಾಗಿ, ಅಧಿವೇಶನದ ಕೊನೆಯ ದಿವಸದಲ್ಲಿ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದು. ಮಾನ್ಯ ಸಚಿವರೇ, ಅಷ್ಟರೊಳಗೆ ಉತ್ತರ ತರಿಸಿ.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಗಮನಕ್ಕೆ ತರುವುದೇನೆಂದರೆ, ಈಗಾಗಲೇ Karnataka State Pollution Control Board (K.S.P.C.B.) ರವರು ತಪಾಸಣೆ ನಡೆಸಿ, ಅದರ ವರದಿಯನ್ನು ನೀಡಿ ಕಾರ್ಯಗತಗೊಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟೀಸ್ ನೀಡಲಾಗಿದೆ. ಹಾಗಾಗಿ, ಇದು Karnataka State Pollution Control Board ರವರಿಗೆ ಸಂಬಂಧಿಸಿದ ವಿಚಾರವಾಗಿದ್ದು, ಇದರಲ್ಲಿ ಅರಣ್ಯ ಇಲಾಖೆಯವರ ಪಾತ್ರ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರೇ, ಇದರ ಬಗ್ಗೆ ಸ್ಪಷ್ಟನೆ ನೀಡಬೇಕು.

**ಶ್ರೀ ಈಶ್ವರ್ ಬಿ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯದ ಕುರಿತು ಈಗಾಗಲೇ ಪರಿವೀಕ್ಷಣೆ ಮಾಡಲಾಗಿದೆ. ಈ ಹಿಂದೆಯೇ ನಮ್ಮ ಅಧಿಕಾರಿಗಳು ಹೋಗಿ ಪರಿವೀಕ್ಷಣೆ ಮಾಡಿದ ನಂತರ ಏನೇನು ನ್ಯೂನತೆಗಳಿವೆ, ಆ ಕೈಗಾರಿಕೆಗಳೆಲ್ಲವನ್ನೂ ಸರಿಪಡಿಸಲಾಗಿದೆ. ಮತ್ತೆ ನೀರಿನ ಮಾದರಿಯನ್ನು laboratory ಯಲ್ಲಿ ಪರಿವೀಕ್ಷಣೆ ಮಾಡಲಾಗಿದ್ದು, ಇವತ್ತು ಏನು ನಿಯಮ ಇದೆ, ಆ ನಿಯಮಾನುಸಾರ, ವಿಶ್ಲೇಷಣೆ ವರದಿ ಪ್ರಕಾರ ಬೋರ್‌ವೆಲ್ ನೀರಿನ ಮಟ್ಟವು drinking water standards ನ ಅನುಮತಿಯ ಮಿತಿಯೊಳಗೆ ಇರುವುದು ಎಂದು ಕಂಡು ಬಂದಿದೆ. ಆದ್ದರಿಂದ ಎಲ್ಲವನ್ನೂ ಸರಿಪಡಿಸಲಾಗಿದ್ದು, ಸದ್ಯಕ್ಕೆ ಯಾವುದೇ ರೀತಿಯ ತೊಂದರೆ/ಸಮಸ್ಯೆ ಇರುವುದಿಲ್ಲ.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ನಾನು ಆ ನೀರನ್ನು ತಂದಿದ್ದು, ಅದು ಈ ರೀತಿ ಇದೆ.

**(ಈ ಹಂತದಲ್ಲಿ ಕಲುಷಿತ ನೀರಿನ ಬಾಟಲ್ ಅನ್ನು ಪ್ರದರ್ಶಿಸಿದರು)**

ಕೈಗಾರಿಕೆಗಳಿಂದ ಹೊಸಕೆರೆಗೆ effluents ಬರುತ್ತಿದೆ, ಅದು ಇನ್ನೊಂದು inner water table ಗೆ

ಹೋಗಿ ಬೋರ್‌ವೆಲ್‌ನಿಂದ ಈ ರೀತಿಯಾದ ನೀರು ಬರುತ್ತಿದೆ. ಶ್ರೀರಾಮ್ ನಗರ, ದೇವಮ್ಮ ಬಡಾವಣೆ, ಸಂಬಂಧಪಟ್ಟ ಎಲ್ಲಾ ನಿವಾಸಿಗಳು ಒಳಗೊಂಡ ಹಾಗೆ ಸುಮಾರು ಎರಡೂವರೆ ಸಾವಿರದಿಂದ ಮೂರು ಸಾವಿರ ಜನ ಸೇರಿಕೊಂಡು ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಸಚಿವರ ಇಲಾಖೆಗೆ ಅರ್ಜಿಯನ್ನು ನೀಡಿದ್ದಾರೆ. ಆದರೆ, ಇಲ್ಲಿಯವರೆಗೂ ಯಾವುದೇ ರೀತಿಯ ಕ್ರಮಕೈಗೊಂಡಿಲ್ಲ. ಈ ಸಂಬಂಧ ಕರ್ನಾಟಕ ಮಾಲಿನ್ಯ ಮಂಡಳಿಯವರು ಯಾವ್ಯಾವ ಕೈಗಾರಿಕೆಗಳು ಏನೇನು ಕ್ರಮಕೈಗೊಳ್ಳಬೇಕು; ಸಿ.ಸಿ.ಟಿ.ವಿ. ಅಳವಡಿಸಬೇಕು ಎನ್ನುವಂಥ ಮಾರ್ಗಸೂಚಿಯನ್ನು ಹಾಕಿಕೊಟ್ಟಿದ್ದಾರೆ. ಆ effluents ಅನ್ನು ಈ ಕ್ಷಣಕ್ಕೂ ಬಿಡುತ್ತಿದ್ದು, ರಾತ್ರಿ ವೇಳೆ ಜಾಸ್ತಿಯೇ ಬಿಡುತ್ತಿದ್ದಾರೆ. Drinking water is an essential right for every citizen. ಆದರೆ, ಕುಡಿಯುವ ನೀರಿನ ಪರಿಸ್ಥಿತಿ ಈ ರೀತಿ ಇದೆ ಎಂದು ಹೇಳಬಯಸುತ್ತೇನೆ.

**ಶ್ರೀ ಈಶ್ವರ ಬಿ.ಖಂಡ್ರೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರ ದೂರಿನನ್ವಯ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಹೋಗಿ ಪರಿವೀಕ್ಷಣೆ ಮಾಡಿದ್ದು, ಅದರ ವರದಿ ಸಹ ನಮ್ಮ ಹತ್ತಿರ ಇದೆ. ಮಾನ್ಯ ಸದಸ್ಯರಿಗೆ ಆ ವರದಿಯನ್ನು ಕಳುಹಿಸಿಕೊಡುತ್ತೇನೆ. ಸದರಿ ವರದಿಯಲ್ಲಿ ಬಹಳ ಸ್ಪಷ್ಟವಾಗಿ pH value, Dissolved Solids, Chloride, Alkalinity, Total Hardness, Calcium, Magnesium, Sulphate, Nitrate, Boron and Fluoride ಎಲ್ಲವೂ ಒಳಗೊಂಡ ಹಾಗೆ ಪರಿವೀಕ್ಷಣೆ ಮಾಡಲಾಗಿದೆ. ಅವೆಲ್ಲವೂ standard ಎಷ್ಟು ಇರಬೇಕು, ಅದರ ಮಿತಿಯೊಳಗೆ ಇದೆ. ಅದರ ವರದಿಯನ್ನು ಕೊಟ್ಟ ಮೇಲೆ ಏನೋ ಶಂಕೆ ಇದೆ, ಅದು ಸರಿಯಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹಾಗಾಗಿ, ರಾಜ್ಯ ಮಟ್ಟದಿಂದ ಮತ್ತೊಂದು ತಂಡವನ್ನು ಕಳುಹಿಸಿ, ಪರಿವೀಕ್ಷಣೆ ಮಾಡಿಸಿ, ಅದರ ವರದಿ ತಂದು ಏನಾದರೂ ನ್ಯೂನತೆಗಳಿದ್ದರೆ, ಅಂಥವರ ಮೇಲೆ ಕ್ರಮ ಜರುಗಿಸಿ, ಸರಿಪಡಿಸುವಂಥ ಕೆಲಸ ಮಾಡಲಾಗುವುದು.

**ಪ್ರಶ್ನೆ ಸಂಖ್ಯೆ: 827**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್ ಕೈಗಾರಿಕಾ ಪ್ರದೇಶಗಳಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪಿಸಲಾಗಿದೆ; ಅದರ ವಿವರ ನೀಡಬೇಕೆಂದು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 26 ಬೃಹತ್ ಕೈಗಾರಿಕೆಗಳು ಮತ್ತು 12 ಮಧ್ಯಮ ಕೈಗಾರಿಕೆಗಳು ಇವೆ ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ಅದಲ್ಲದೇ ಕೋಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್‌ನಲ್ಲಿ ಇರತಕ್ಕಂಥ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸಲು ಅಲ್ಲಿಯ ಸ್ಥಳೀಯರಿಗೆ ಹೆಚ್ಚು ಉದ್ಯೋಗಾವಕಾಶವನ್ನು ಒದಗಿಸುತ್ತಿಲ್ಲ ಎನ್ನುವಂಥ ಪ್ರಶ್ನೆ ಇದ್ದು, ಅದಕ್ಕೂ ಬಹಳ ಸವಿಸ್ತಾರವಾದ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ಅನುಬಂಧ 1 ಮತ್ತು 2 ನ್ನು ನೋಡಿದಾಗ ಬಹುತೇಕ ಎಲ್ಲಾ ಕೈಗಾರಿಕೆಗಳಲ್ಲಿಯೂ ಸರ್ಕಾರದ ಮಾರ್ಗಸೂಚಿಯಂತೆ ಕೈಗಾರಿಕಾ ನೀತಿ 2020-25 ಹಾಗೂ 2025-30 ರನ್ವಯ ರಿಯಾಯಿತಿ ಹಾಗೂ ಉತ್ತೇಜನ ಪಡೆಯಲು ಕೈಗಾರಿಕೆಗಳಲ್ಲಿ ಒಟ್ಟು ಕನಿಷ್ಠ 70 ರಷ್ಟು ಉದ್ಯೋಗಾವಕಾಶ ಕನ್ನಡಿಗರಿಗೆ ನೀಡಬೇಕಾಗಿತ್ತು, ಅದನ್ನು ಕೊಟ್ಟಿದ್ದಾರೆ. ಆದರೆ, ಎರಡು ಬೃಹತ್ ಕೈಗಾರಿಕೆಗಳಾದ Honda Motorcycle & Scooter India Private Limited and Wistron Infocomm Manufacturing (India) Private Limited ಇವೆ. Wistron Infocomm Manufacturing (India) Private Limited ಈಗ Tata Electronics Private Limited ಎಂದಾಗಿದೆ. ಆ ಹೊಂಡಾ ಕಂಪನಿಯಲ್ಲಿ ಸ್ಥಳೀಯರಿಗೆ ನೀಡಬೇಕಾದ ಅವಕಾಶ ನೀಡಿದ್ದಾರೆ. ಅದೇ ರೀತಿ ಟಾಟಾದಲ್ಲಿ ಕೈಗಾರಿಕಾ ನೀತಿರನ್ವಯ ಕನಿಷ್ಟ ಶೇಕಡ 70 ರಷ್ಟು ಏನು ಕೊಡಬೇಕಾಗಿತ್ತು, ಅದನ್ನು ನೋಡಿದಾಗ ಮಾನ್ಯ ಸಚಿವರು ಕೊಟ್ಟಿರುವಂತಹ ಮಾಹಿತಿಯಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿಯು ದಿನಾಂಕ: 27.03.2024 ರಂದು ವಿಸ್ಟ್ರಾನ್ ಇನ್ಫೋಕಾಮ್ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಅನ್ನು ಸ್ವಾಧೀನಪಡಿಸಿಕೊಂಡಿದ್ದು, ಪ್ರಸ್ತುತ ಕಂಪನಿಯಲ್ಲಿ ಒಟ್ಟು 23,968 ಜನರು ಕೆಲಸ ನಿರ್ವಹಿಸುತ್ತಿದ್ದು, ಈ ಪೈಕಿ 13,384 ಸ್ಥಳೀಯರು ಇರುತ್ತಾರೆ. ಆ ಸ್ಥಳೀಯರಲ್ಲಿ ಒಟ್ಟು 5,781 ಜನರು ಕೋಲಾರ ಜಿಲ್ಲೆಯವರಾಗಿರುತ್ತಾರೆ ಎಂದು ತಿಳಿಸಿದ್ದಾರೆ. 13,384 ಸ್ಥಳೀಯರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದಾದರೆ, ಶೇಕಡ 70 ರಷ್ಟು ಆಗುವುದಿಲ್ಲ, ಕೇವಲ ಶೇಕಡ 55 ರಷ್ಟಾಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ನೀಡಿದ್ದು, ವಿಸ್ಟ್ರಾನ್ ಇನ್ಫೋಕಾಮ್

ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಅನ್ನು ಟಾಟಾ ಎಲೆಕ್ಟ್ರಾನಿಕ್ ಕಂಪನಿಯವರು ಸ್ವಾಧೀನಪಡಿಸಿಕೊಂಡಿದ್ದು, ಪ್ರಸ್ತುತ ಕಂಪನಿಯಲ್ಲಿ ಒಟ್ಟು 23,968 ಜನರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪೈಕಿ 13,384 ಸ್ಥಳೀಯರು ಇದ್ದು, ಅದರಲ್ಲಿ 5,781 ಮಂದಿ ಕೋಲಾರ ಜಿಲ್ಲೆಯವರಾಗಿರುತ್ತಾರೆ. ಆದರೆ, ಮಾನ್ಯ ಸದಸ್ಯರು ಅದು ಶೇಕಡ 70 ರಷ್ಟಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ವಿಸ್ಟ್ರಾನ್ ಇನ್ಫೋಕಾಮ್ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಎಂಬುದು ಟಾಟಾ ಎಲೆಕ್ಟ್ರಾನಿಕ್ ಕಂಪನಿ ಎಂದು ಏನು ಬದಲಾವಣೆಯಾಗಿದೆ, ಅದು Apple's iPhones and iPads manufacturing ಮಾಡುವಂಥ ಕಂಪನಿಯಾಗಿದೆ. ಸಂಬಂಧಪಟ್ಟ ಸಂಸ್ಥೆಯವರಿಗೂ ಸಹ ಏತಕ್ಕಾಗಿ ಶೇಕಡ 70 ರಷ್ಟು ಉದ್ಯೋಗಾವಕಾಶ ಕನ್ನಡಿಗರಿಗೆ ನೀಡಿಲ್ಲ ಎನ್ನುವಂಥ ಮಾಹಿತಿ ಕೇಳಿದ್ದು, ಅವರು ನಾವೆಲ್ಲವನ್ನೂ due process ಮಾಡಿದ್ದೇವೆ ಎಂದಿದ್ದಾರೆ. ಹಾಗೆಯೇ, ನಮ್ಮ ಉತ್ತರದಲ್ಲಿ ತಿಳಿಸಿರುವಂತೆ, Successful completion of training period, Consistent performance against role-specific targets... ಎಂದಿದೆ. These are all specified jobs. ಆ ರೀತಿ ನೌಕರರು ಬಾರದೇ ಇರುವುದರಿಂದ ಶೇಕಡ 70 ರಷ್ಟು ನೇಮಕ ಮಾಡಲು ಆಗಿಲ್ಲ ಎಂದು ಹೇಳಿದ್ದಾರೆ. ಅದಕ್ಕಾಗಿ ನಾವು ಹೇಳುವುದೇನೆಂದರೆ, ಮತ್ತಷ್ಟು ಟ್ರೈನಿಂಗ್ ನೀಡಿ, ಅದರ ಪ್ರಮಾಣವನ್ನು ಹೆಚ್ಚಿಸಿ ಎನ್ನುವಂಥ ಸೂಚನೆಯನ್ನು ಕೊಟ್ಟಿದ್ದೇವೆ. Employable ಆಗುವುದಕ್ಕೆ ಏನಾಗಬೇಕು ಆ ರೀತಿ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇವೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಆದರೆ, ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಲಾಗುತ್ತಿದ್ದು, ಅದೆಲ್ಲವನ್ನೂ ಕೂಡ company ಯಲ್ಲಿ appointment ಮಾಡಿಕೊಳ್ಳುತ್ತಿಲ್ಲ. ಜೊತೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿದ್ದು, ಕೇವಲ 11 ತಿಂಗಳ ಅವಧಿಗಳಂತೆ 3 ವರ್ಷಗಳವರೆಗೂ ಸೇವೆಗೆ ನೇಮಿಸಿಕೊಂಡು, 3 ವರ್ಷಗಳ ತರುವಾಯ ಸಂಪೂರ್ಣವಾಗಿ ಕರ್ತವ್ಯದಿಂದ ವಜಾಗೊಳಿಸುತ್ತಿದ್ದಾರೆ. ಆತ ಆ ಕಂಪನಿಯಲ್ಲಿ 3 ವರ್ಷಗಳವರೆಗೂ ಸೇವೆ ಸಲ್ಲಿಸಿದ ನಂತರ ಉದ್ಯೋಗದಿಂದ ವಜಾಗೊಳಿಸಿದರೆ, ಆತ ಎಲ್ಲಿಗೆ ಹೋಗಬೇಕು? ಇದರಿಂದ ಆ ಕುಟುಂಬದವರು ಬೀದಿಪಾಲಾಗಿದ್ದಾರೆ. ಹೊಂಡಾ ಕಂಪನಿಯಲ್ಲಿ ಸಹ ತೆಗೆದುಕೊಳ್ಳುತ್ತಿದ್ದು, ಅವರು ಆ ರೀತಿ ಮಾಡುತ್ತಿಲ್ಲ. ಹೊಂಡಾ ಕಂಪನಿಯಲ್ಲಿ 3 ವರ್ಷಗಳು, 10 ವರ್ಷಗಳು, 12 ವರ್ಷಗಳವರೆಗೂ ಸೇವೆ ಸಲ್ಲಿಸಿದ್ದು, ಅವರ ಕಾರ್ಯಕ್ಷಮತೆ ನೋಡಿಕೊಂಡು ಕಂಪನಿಯೇ appointment ಕೊಡುತ್ತಿದ್ದರು. ಆದರೆ, ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿಯವರು ತಮ್ಮ ಕಂಪನಿಯಲ್ಲಿ appointment ಕೊಡುತ್ತಿಲ್ಲ, ಗುತ್ತಿಗೆ ಆಧಾರದ ಮೇಲೆ 3 ವರ್ಷಗಳವರೆಗೂ ನೇಮಕಗೊಳಿಸಿ, ಮತ್ತೆ ಕೆಲಸದಿಂದ ವಜಾಗೊಳಿಸುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿ ಏನಿದೆ, ಇದು CapEx (Capital Expenditure) investment ಆಗಿ plant and machinery ನಲ್ಲಿ ಸುಮಾರು ರೂ.1,490

ಕೋಟಿಗಳಿದ್ದು, it was to generate about 1,150 jobs. ಆದರೆ, ಇದರಲ್ಲಿ ಸುಮಾರು 23,968 jobs create ಮಾಡಿದ್ದಾರೆ. ಇದು E.S.D.M. (Electronics System Design and Manufacturing) policy ರಡಿ ಬರುತ್ತದೆ. ಹಾಗೆಯೇ ಮಾನ್ಯ ಸದಸ್ಯರು ಹೇಳಿದ ಹಾಗೆ ಆ ನೌಕರರು 11 ತಿಂಗಳುಗಳಂತೆ 3 ವರ್ಷಗಳವರೆಗೂ ತರಬೇತಿ ಅವಧಿಯಲ್ಲಿರುತ್ತಾರೆ. ನೌಕರರು 3 ವರ್ಷಗಳವರೆಗೂ ತರಬೇತಿಯನ್ನು ಪೂರ್ಣಗೊಳಿಸಿ, if they are eligible and successful, ನಂತರ ಅವರುಗಳ ಸೇವೆಯನ್ನು ಮುಂದುವರೆಸಲಾಗುತ್ತದೆ. ಆದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 3 ವರ್ಷಗಳ ಬಳಿಕ ಕರ್ತವ್ಯದಿಂದ ವಜಾಗೊಳಿಸುತ್ತಾರೆ ಎಂಬುದು ಸರಿಯಾದ ಮಾಹಿತಿಯಾಗಿಲ್ಲ. ನಮಗೆ ಆ ರೀತಿಯಾಗಿ ಯಾವುದೇ ದೂರು ಸಹ ಬಂದಿಲ್ಲ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಕೋಲಾರದಲ್ಲಿರತಕ್ಕಂಥ ಜನ ಪ್ರತಿನಿಧಿಗಳೆನಿದ್ದಾರೆ, ಅವರೆಲ್ಲರಿಗೂ '3 ವರ್ಷಗಳ ಬಳಿಕ ಕೆಲಸದಿಂದ ವಜಾಗೊಳಿಸಲಾಗುತ್ತಿದೆ' ಎಂದು ದೂರು ಬರುತ್ತಿದೆ. ಯಾವುದೇ ಜನ ಪ್ರತಿನಿಧಿಗಳಾದರೂ ಕಂಪನಿಯ ಮೇಲ್ವಿಚಾರಕರನ್ನು contact ಮಾಡಿ, `ಏತಕ್ಕೆ 3 ವರ್ಷಗಳ ಬಳಿಕ ವಜಾಗೊಳಿಸಲಾಗಿದೆ? ಮತ್ತೆ 11 ತಿಂಗಳ `Terms and Conditions' ಏನಿದೆ ಅದನ್ನು ವಿಧಿಸಿ, ಮುಂದುವರೆಸಬಹುದು. ಅದನ್ನು ಬಿಟ್ಟು ನೇರವಾಗಿ ಕೆಲಸದಿಂದ ವಜಾಗೊಳಿಸಲಾಗಿದೆ. ಅವರ ಕಾರ್ಯಕ್ಷಮತೆ ಯಾವುದನ್ನೂ ನೋಡುತ್ತಿಲ್ಲ. ಈ ರೀತಿ ಮಾಡಿದರೆ, ಅವರು ಎಲ್ಲಿಗೆ ಹೋಗಬೇಕು ಎಂಬುದನ್ನು ಸಹ ಗಮನಿಸುತ್ತಿಲ್ಲ. 11 ತಿಂಗಳುಗಳಂತೆ 3 ವರ್ಷಗಳು ಕಾರ್ಯನಿರ್ವಹಿಸಬೇಕೆಂದು ಏನೇನು Terms and Conditions ಇವೆ, ಅದೇ ರೀತಿ ಮಾಡಲಿ ತೊಂದರೆ ಇಲ್ಲ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, contract conclusion ಮಾಡಿದರೆ, ಅದು dismissal ಆಗುವುದಿಲ್ಲ. Contract terms ನಲ್ಲಿ 3-years tenure ಎಂದು agreed terms ಇರುತ್ತದೆ. ಮಾನ್ಯ ಸದಸ್ಯರು ಒಂದು ವಿಚಾರವನ್ನು ಗಮನಿಸಬೇಕಾಗಿದೆ. ಏಕೆಂದರೆ, these are all prestigious investments. E.S.D.M. policy ಪ್ರಕಾರ ಸ್ಥಳೀಯರಿಗೆ 1,150 jobs ಕೊಡಬೇಕಾಗಿದ್ದು. ಆದರೆ, ಅವರು 23,968 jobs create ಮಾಡಿದ್ದಾರೆ. E.S.D.M. policy is monitored by I.T. (Informational Technology) and B.T. (Bio-technology) Department. The Company has given the jobs beyond the prescribed limit. Prescribed employment ಏನಿದೆ, ಅದಕ್ಕಿಂತ ಬಹಳಷ್ಟು ಜಾಸ್ತಿ ಇದೆ. Employable ಮಾಡಲು ಏನಾದರೂ ಸಮಸ್ಯೆ ಇದ್ದ ಪಕ್ಷದಲ್ಲಿ ಅವರನ್ನು ಕರೆಸಿ ಅದನ್ನು settle ಮಾಡಿಸೋಣ. ಆದರೆ, contractual period ಮುಗಿದ ನಂತರ, ಅಂದರೆ 3 ವರ್ಷಗಳ ಬಳಿಕ ಕೆಲಸದಿಂದ ತೆಗೆದು ಹಾಕುತ್ತಿರುವುದೇನಿದೆ, that is not the right thing.

(ಮುಂದು)

(267) 10.03.2026/12.50/ ಎಸ್‌ಕೆ. ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ 829**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಹಜ ಕೃಷಿಗೆ ಸಂಬಂಧಪಟ್ಟಂತೆ, ನಾನು ಹಲವಾರು ಪ್ರಶ್ನೆಗಳನ್ನು ಕೇಳಿದ್ದೇನೆ. ಮಾನ್ಯ ಸಚಿವರು ಅದಕ್ಕೆ ಹಲವಾರು ಉತ್ತರಗಳನ್ನು ಒದಗಿಸಿದ್ದಾರೆ. ಸುಮಾರು 30 ಜಿಲ್ಲೆಗಳಲ್ಲಿ 64 ಗುಚ್ಛಗಳಲ್ಲಿ 32,000 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಗೆ ಪರಿವರ್ತನೆ ಮಾಡಿದ್ದೇವೆ ಎಂಬ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಇವತ್ತು ವಿಷಮುಕ್ತ ಆಹಾರ ಪದ್ಧತಿಯನ್ನು ಮಾಡಬೇಕೆಂಬ ದೃಷ್ಟಿಯಲ್ಲಿ ಎಲ್ಲಾ ಕಡೆಗಳಲ್ಲಿ ಸಹಜ ಕೃಷಿಗೆ ಒತ್ತು ಕೊಡುವಂತಹದ್ದಕ್ಕೆ ಮತ್ತು ಸಹಜ ಕೃಷಿಯನ್ನು ಜಾರಿಗೆ ತರುವ ಕೆಲಸವನ್ನು ಮಾಡುತ್ತಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಯೋಜನೆಗಳಿಗೆ ಅನುದಾನವನ್ನು ಕೊಟ್ಟಿದ್ದೇವೆ ಎಂಬ ವಿಚಾರವನ್ನು ಹೇಳಿದ್ದಾರೆ. ಬಹಳ ಪ್ರಮುಖವಾಗಿ ಸಹಜ ಕೃಷಿಯಲ್ಲಿ ತೆಂಗು ಬೆಳೆ ಹೆಚ್ಚು ಇಳುವರಿ ನೀಡುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ ಇದನ್ನು ಪ್ರೋತ್ಸಾಹಿಸಲು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಇವತ್ತು export ಗೆ ಸಂಬಂಧಪಟ್ಟಂತೆ ದೀರ್ಘವಾದ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ನೇರವಾಗಿ ತೆಂಗು ಬೆಳೆಯನ್ನು export ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿಲ್ಲ. ತೆಂಗು ಬೆಳೆಯ product ಗಳನ್ನು ಅಂದರೆ ತೆಂಗು ಪೌಡರ್‌ಗಳನ್ನಾಗಿ ಪರಿವರ್ತನೆ ಮಾಡುವಂತಹದ್ದು. Coconut ನಲ್ಲಿ ಬೇರೆ ಬೇರೆ ರೀತಿಯಲ್ಲಿ ಉತ್ಪಾದನೆ ಮಾಡಿ, ಅದನ್ನು export ಮಾಡುವಂತಹ ಕೆಲಸವನ್ನು ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದಲ್ಲಿ ಸ್ಪಷ್ಟವಾದಂತಹ ನೀತಿಯಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ತೆಂಗಿಗೆ ಇವತ್ತು ಬೆಲೆಯಲ್ಲಿ variation ಮತ್ತು fluctuation ಇರುವಂತಹದ್ದು ಸ್ವಾಭಾವಿಕ. ವಿಶೇಷವಾಗಿ ತೆಂಗು ಮತ್ತು ಕೊಬ್ಬರಿ ಇವೆರಡನ್ನು export ಮಾಡುವುದಕ್ಕೆ ಒಂದು ಪಾಲಿಸಿಯನ್ನು ತರಬೇಕಾಗುತ್ತದೆ ಎಂದು ನಾನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡುತ್ತೇನೆ. ಇದನ್ನು ವಿಶೇಷವಾಗಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 27 ಗ್ರಾಮ ಪಂಚಾಯಿತಿಗಳಲ್ಲಿ ಸಹಜ ಕೃಷಿ ಮೂಲಕ ತೆಂಗು ಬೆಳೆಗೆ ಹೆಚ್ಚು ಒತ್ತು ಕೊಡುವಂತಹ ಕೆಲಸವಾಗಿದೆ. ಅದನ್ನು ಒಂದು ಕಾರ್ಯಕ್ರಮ ರೀತಿಯಲ್ಲಿ ರಾಜ್ಯದಲ್ಲಿ ಜಾರಿಗೆ ತರಬೇಕು. ಮೂವತ್ತು ಜಿಲ್ಲೆಗಳಲ್ಲಿ ಮಾಡುತ್ತಿದೇವೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ನನ್ನ ಒತ್ತಾಯವೇನೆಂದರೆ, ಗ್ರಾಮ ಪಂಚಾಯಿತಿಗಳ ಮೂಲಕ ಇದನ್ನು awareness ಆಗಿ ಸಹಜ ಕೃಷಿಗೆ ಒತ್ತನ್ನು ಕೊಟ್ಟರೆ ವಿಷಮುಕ್ತ ಆಹಾರ

ನೀತಿ ಏನಿದೆಯೋ, ಅದಕ್ಕೆ ಪೂರಕವಾಗಿರುತ್ತದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಸರ್ಕಾರ ಒಂದು ಪಾಲಿಸಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ಕೊಟ್ಟಿದ್ದೇನೆ. Organic manure ಮತ್ತು organic farming ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ನಾವು ಸಾಕಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಇನ್ನೂ ಹೆಚ್ಚಿನದಾಗಿ ಇದನ್ನು ಗ್ರಾಮ ಮಟ್ಟದಿಂದಲೇ ಪ್ರಾರಂಭ ಮಾಡಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಹೇಳುವುದಾದರೆ, ತೆಂಗಿಗೆ ಸಾಕಷ್ಟು ನುಸಿ ರೋಗ ಬಂದು ಬಿಡುತ್ತದೆ. ಇದಕ್ಕೆ ಕಾರಣ ಆ nature ನಾವು ಅಲ್ಲ ನೀವು ಅಲ್ಲ. ಸರಿಯಾದ ಸಮಯಕ್ಕೆ ಮಳೆ ಬಂದರೆ ಅದು automatic ಆಗಿ ಹೋಗುತ್ತದೆ. ಇದರ ಬಗ್ಗೆ ಸಾಕಷ್ಟು ಸಂಶೋಧನೆ ಕೂಡ ನಡೆಯುತ್ತಿದೆ. ಅದೊಂದು ಆಯಿತು ಎಂದರೆ, ಇನ್ನೂ ಒಳ್ಳೆಯ ರೀತಿಯ ಗುಣಮಟ್ಟ ಉತ್ಪನ್ನ ಬರುತ್ತದೆ. ಈಗ graph ಹೆಚ್ಚು ಕಡಿಮೆ ಆಗುತ್ತದೆ. ಕೊಬ್ಬರಿ ಮತ್ತು ಕೊಬ್ಬರಿ ಎಣ್ಣೆಗೆ ಒಳ್ಳೆಯ ಬೆಲೆ ಇದೆ. ಇದಕ್ಕೆ ಏನಾಗಬೇಕೆಂಬುದರ ಬಗ್ಗೆ ಇಲಾಖೆ ಸರಿಯಾದ ಸಮಯಕ್ಕೆ ಸೂಕ್ತ ನಿರ್ಧಾರವನ್ನು ಈ ನಿಟ್ಟಿನಲ್ಲಿ ತೆಗೆದುಕೊಳ್ಳುತ್ತಿದೆ. ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಮತ್ತು ಉದಾಹರಣೆಗೆ ಹೇಳುವುದಾದರೆ, germination ಬಗ್ಗೆ ಹೇಳುವುದಾದರೆ, ನಾವು South Korea ಕ್ಕೆ ಹೋಗಿದ್ದಾಗ, ಜೇನು ಯಾವ ರೀತಿ ಸಾಕಬಹುದು ಎಂಬುದನ್ನು ನೋಡಿದೆವು. ಅದೊಂದು ಪೆಟ್ಟಿಗೆಯಲ್ಲಿ ಜೇನು ಸಾಕುತ್ತಾರೆ. ಅದಕ್ಕೆ ಬಹಳಷ್ಟು investment ಇರುವುದಿಲ್ಲ. ಅದಕ್ಕೆ technology ಬೇಕು. ಆ technology ಅನ್ನು ತೆಗೆದುಕೊಂಡು ಬಂದು ಮೊನ್ನೆತಾನೇ ಪ್ರಾರಂಭ ಮಾಡಿದ್ದೇವೆ. ಈಗ ಸಾಕಷ್ಟು ಜನ ರೈತರಿಗೆ ಕೊಡುತ್ತಿದ್ದೇವೆ. ಬೆಳಗಾವಿ ಜಿಲ್ಲೆ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಅದನ್ನು ಅಳವಡಿಸುತ್ತಿದ್ದೇವೆ. ಅದು ಬಂದ ಮೇಲೆ ಹೆಚ್ಚು ಜೇನು ತುಪ್ಪ, ಜೇನು ನೋಣಗಳು ಜೇನುಗೂಡು ಕಟ್ಟುವುದು ಒಂದು ಒಳ್ಳೆಯ ಸಂಪ್ರದಾಯವಾಗಿ ಬೆಳೆಯುತ್ತಿದೆ. ಹಾಗೆಯೇ technology–wise ಕೂಡ develop ಆಗುತ್ತಿದ್ದೇವೆ. ಮಾನ್ಯ ಸದಸ್ಯರು ಮುಖ್ಯವಾಗಿ ತೆಂಗಿನ ಬೆಳೆಯ ಬಗ್ಗೆ ಕೇಳಿದ್ದಾರೆ. ಇದರ ಬಗ್ಗೆ ನಮಗೆ ಸಂಪೂರ್ಣ ಅರಿವು ಇದೆ. ಇದರ ಬಗ್ಗೆ ಏನಾಗಬೇಕೆಂಬುದರ ಬಗ್ಗೆ ಆದಷ್ಟು ಬೇಗ ಪರಿಶೀಲನೆ ಮಾಡಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಸಹಜ ಕೃಷಿ ಏನಿದೆ, ವಿಶೇಷವಾಗಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 27 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಯ ಮೂಲಕ ರೈತ voluntary ಆಗಿ ಮಾಡುತ್ತಿದ್ದಾರೆ. ಸಮಸ್ಯೆ ಇರುವುದೇನೆಂದರೆ, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಅವರಿಗೆ ಸಹಕಾರವನ್ನು ಕೊಡುತ್ತಿಲ್ಲ. ನಮ್ಮ ಭಾಗದಲ್ಲಿ ಕಪ್ಪು ತಲೆ ಹುಳುಗಳು ಈಗ ಕಡಿಮೆಯಾಗಿದೆ. ಬಿಳಿ ನೋಣದ ಕಾಟ ಜಾಸ್ತಿಯಾಗಿದೆ. ಅದನ್ನು

ತಡೆಯುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖಾ ಅಧಿಕಾರಿಗಳು headquarters ನಲ್ಲಿ ಇರುವುದಿಲ್ಲ. ಈ ತರಹ ಸಮಸ್ಯೆ ಇದೆ. ದಯವಿಟ್ಟು, ಎಲ್ಲೆಲ್ಲಿ ಇದೆಯೋ, ಅದಕ್ಕೆ ಕ್ರಮ ತೆಗೆದುಕೊಳ್ಳುವಂತಹದ್ದಕ್ಕೆ ಕೆಲಸ ಆಗಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹದ್ದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಕೇಳಿ. ಪ್ರಶ್ನೋತ್ತರ ವೇಳೆಯು ಸುಮಾರು ಹನ್ನೊಂದೂವರೆ ಗಂಟೆಗೆ ಪ್ರಾರಂಭವಾಗಿದೆ. ಈಗ ಹನ್ನೆರಡೂವರೆ ಗಂಟೆಗೆ ಮುಗಿಯಬೇಕಾಗಿತ್ತು. ಮಾನ್ಯ ಪಿ.ಹೆಚ್. ಪೂಜಾರ್‌ರವರ ಪ್ರಶ್ನೆಗೆ ಹತ್ತು ನಿಮಿಷ ಸಮಯ ತೆಗೆದುಕೊಂಡಿದ್ದಾರೆ. ಮಾನ್ಯ ಡಿ.ಎಸ್. ಅರುಣ್‌ರವರ ಪ್ರಶ್ನೆ ಹದಿನೈದು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಅಬ್ದುಲ್ ಜಬ್ಬರ್‌ರವರ ಪ್ರಶ್ನೆ ಐದು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಸಿ.ಟಿ. ರವಿಯವರ ಪ್ರಶ್ನೆ ಹದಿನೈದು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಮುಳೆಯವರ ಪ್ರಶ್ನೆ ಐದು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಉಳಿದ ಮಾನ್ಯ ಸದಸ್ಯರು ಪ್ರಶ್ನೆಗಳಿಗೆ ಐದೈದು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಸುನೀಲ್ ವಲ್ಯಾಪುರ್‌ರವರ ಪ್ರಶ್ನೆ ಹತ್ತು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ತಾವು ಇದರ ಬಗ್ಗೆ ಹೇಳಿ. ಪ್ರಶ್ನೋತ್ತರ ವೇಳೆಗೆ ಇಂತಿಷ್ಟು ಸಮಯ ಬೇಕೆಂದು ಕೇಳಿದರೆ, ನಾನು ಅಲ್ಲಿಯ ತನಕ ಸಮಯವನ್ನು ಕೊಡುತ್ತೇನೆ. ಇಲ್ಲವೆಂದರೆ, ನಾನು ಒಂದೂವರೆ ಗಂಟೆಗಳ ಅವಧಿಯಲ್ಲಿ ಪ್ರಶ್ನೋತ್ತರವನ್ನು ಮುಕ್ತಾಯ ಮಾಡುತ್ತೇನೆ. ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಹೇಳುತ್ತೇನೆ. ತಾವು ಏನು ಮಾಡುತ್ತೀರಾ ಮಾಡಿ. ಮಾನ್ಯ ಮಂತ್ರಿಗಳು ಹತ್ತು-ಹನ್ನೆರಡು ನಿಮಿಷಗಳ ಕಾಲ ಮಾತನಾಡಿದ್ದಾರೆ. ಇದಕ್ಕೆ ಎಲ್ಲರಿಗೂ apply ಆಗುತ್ತದೆ. ದಯವಿಟ್ಟು, ಸದನದಲ್ಲಿ ಎಲ್ಲರೂ ಇದನ್ನು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 10.03.2026, ಸಮೂಹ–2 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 41 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

(ಉತ್ತರಗಳನ್ನು ಲಗತ್ತಿಸಲಾಗಿದೆ)

## 2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು.

### ಅ) ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹಾಳಾಗಿರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸುವ ಮೂಲಕ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಬಗ್ಗೆ.

– – – – –

**ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಸ್ತಾಪಸಿದಂತೆ, ಬೇಸಿಗೆ ಶುರವಾಗುತ್ತಿದ್ದು, ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಭಾಗಗಳಲ್ಲಿ  ನೀರಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಕೊಳವೆ ಬಾವಿಗಳ ದುರಸ್ತಿಗೆ ಮುಂದಾಗಿಲ್ಲ ಎನ್ನುವ ಅಸಮಾಧಾನ ಸಾರ್ವಜನಿಕರಲ್ಲಿ ವ್ಯಕ್ತವಾಗಿರುತ್ತದೆ. ಕಾವೇರಿ 5ನೇ ಹಂತದ ಯೋಜನೆ ಜಾರಿಯಾದ ನಂತರ ನಗರಕ್ಕೆ ಸರಬರಾಜು ಆಗುವ ನೀರಿನ ಪ್ರಮಾಣ ಹೆಚ್ಚಾಗಿದೆ. ಆದರೂ ಕೊಳವೆ ಬಾವಿಗಳ ಮೇಲಿನ ಅವಲಂಬನೆ ತಗ್ಗಿರುವುದಿಲ್ಲ. ಮಳೆಗಾಲದಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಲಿದ್ದು, ಆ ನಂತರ ನಾಲ್ಕೈದು ತಿಂಗಳು ಕೊಳವೆ ಬಾವಿಗಳ ನೀರಿನ ಅಗತ್ಯ ಬೀಳುವುದಿಲ್ಲ. ಆದರೆ ಬೇಸಿಗೆ ಬಂದಾಗ ಕೊಳವೆ ಬಾವಿಗಳ ನೀರಿನ ಮೇಲೆ ಅವಲಂಬನೆ ಆಗುವವರ ಸಂಖ್ಯೆ ಅಧಿಕವಾಗಿದೆ. ನಗರದಲ್ಲಿ 15,761 ಸಾರ್ವಜನಿಕ ಕೊಳವೆ ಬಾವಿಗಳಿದ್ದು, ಇದರಲ್ಲಿ 14,940 ನಿರ್ವಹಣೆಯಲ್ಲಿವೆ. ಇವುಗಳಲ್ಲಿ ಬೇಸಿಗೆ ವೇಳೆ 3,000 ಕೊಳವೆ ಬಾವಿಗಳು ಸಂಪೂರ್ಣ ಬತ್ತುತ್ತವೆ. ಶೇಕಡಾ 50 ರಷ್ಟರಲ್ಲಿ ಮಾತ್ರ ಅಂತರ್ಜಲದ ಕಾರಣದಿಂದ ನೀರಿನ ಲಭ್ಯತೆ ಇರಲಿದೆ. ಬೇಸಿಗೆ ವೇಳೆ ಕೊಳವೆ ಬಾವಿಗಳಿಂದಲೇ ಸುಮಾರು 500 ಎಂ.ಎಲ್.ಡಿ. ನೀರನ್ನು ಪಡೆದು ಸರಬರಾಜು ಮಾಡಲಾಗುತ್ತದೆ. ಅಗತ್ಯ ಬಿದ್ದಾಗ ಈ ಕೊಳವೆ ಬಾವಿಗಳಿಂದಲೂ 950 ಎಂ.ಎಲ್.ಡಿ. ನೀರನ್ನು ಹಿಂದಿನ ವರ್ಷಗಳಲ್ಲಿ ಬಳಸಲಾಗಿದೆ. ಎರಡು ವರ್ಷದ ಹಿಂದೆ ಬೇಸಿಗೆಯಲ್ಲಿ ತೊಂದರೆ ಉಂಟಾಗಿದ್ದರಿಂದ, ಆಗ ಕೊಳವೆ ಬಾವಿಗಳನ್ನು ದುರಸ್ತಿ ಮಾಡಲಾಗಿತ್ತು. ಇದರಲ್ಲಿ ಕೆಲವು ಹಾಳಾಗಿವೆ. ನಿರ್ವಹಣೆ ಇಲ್ಲದ ಕಾರಣ, ಕೆಲವೊಂದು ಬಳಕೆಯಾಗುತ್ತಿಲ್ಲ. ಹಾಳಾಗಿರುವ ಕೊಳವೆ ಬಾವಿಗಳ ಕುರಿತು ಆಗಾಗ ದೂರು ಬರುತ್ತಿರುತ್ತವೆ. ಬೇಸಿಗೆ ಆರಂಭವಾಗುತ್ತಿರುವುದರಿಂದ ಕೂಡಲೇ ಹಾಳಾಗಿರುವ ಕೊಳವೆ ಬಾವಿಗಳನ್ನು ದುರಸ್ತಿ ಮಾಡಿಸಿ, ಕುಡಿಯುವ ನೀರಿನ ಪ್ರಮಾಣವನ್ನು ಹೆಚ್ಚು ಮಾಡುವ ಸಂಬಂಧಪಟ್ಟ ಮಾನ್ಯ ಉಪ ಮುಖ್ಯಮಂತ್ರಿಗಳ ಬಳಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಆ) ರಾಜ್ಯಾದ್ಯಂತ ಸರ್ಕಾರಿ ವೈದ್ಯರು ಮುಷ್ಕರ ನಡೆಸದಂತೆ ಅವರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ರೋಗಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸುವ ಬಗ್ಗೆ.**

– – – – –

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ನಾಳೆಯಿಂದ (ಮಾರ್ಚ್ 11) ರಾಜ್ಯಾದ್ಯಂತ ಸರ್ಕಾರಿ ವೈದ್ಯರು ಹೊರ ರೋಗಿ ಸೇವೆ (ಓ.ಪಿ.ಡಿ.) ಬಂದ್ ಮಾಡಲು ನಿರ್ಧರಿಸುವುದು ಅತ್ಯಂತ ಆತಂಕಕಾರಿ ವಿಷಯವಾಗಿರುವ ಬಗ್ಗೆ ಇಂದಿನ ದಿನಾಂಕ 10.03.2026ರ "ಕನ್ನಡಪ್ರಭ" ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಮತ್ತು ಅತ್ಯಗತ್ಯ ಔಷಧಗಳ ಕೊರತೆ ಎದುರಾಗಿದ್ದು, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (K.S.M.S.C.L.) ಔಷಧಗಳನ್ನು ಸಮರ್ಥವಾಗಿ ಪೂರೈಸುವಲ್ಲಿ ಸಂಪೂರ್ಣ ವಿಫಲವಾಗಿದೆ. ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡಲು ಬಯಸಿದರೂ ಕೈಯಲ್ಲಿ ಔಷಧಗಳಿಲ್ಲದ ಸ್ಥಿತಿ ನಿರ್ಮಾಣವಾಗಿದೆ ಎಂಬುದನ್ನು ಪತ್ರಿಕಾ ವರದಿ ಉಲ್ಲೇಖಿಸಿರುತ್ತದೆ.

ಜೇಷ್ಠತಾ ಪಟ್ಟಿ, ಪರಿಷ್ಕರಣೆ, ವರ್ಗಾವಣೆ ನೀತಿಯಲ್ಲಿನ ಗೊಂದಲ ಮತ್ತು ಖಾಲಿ ಇರುವ ವೈದ್ಯಕೀಯ ಹುದ್ದೆಗಳ ಭರ್ತಿಯ ಬಗ್ಗೆ ವೈದ್ಯರ ಸಂಘವು ಕಳೆದ ಒಂದು ತಿಂಗಳಿನಿಂದ ಮನವಿ ಸಲ್ಲಿಸುತ್ತಿದ್ದರೂ, ಸರ್ಕಾರವು ಅವರನ್ನು ಸಂಧಾನಕ್ಕೆ ಕರೆಯದೇ ಉದಾಸೀನತೆ ತೋರುತ್ತಿದೆ. ಅಲ್ಲದೇ ಔಷಧ ಖರೀದಿಸದ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರ ಆದೇಶ ಹೊರಡಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದ್ದು, ವ್ಯವಸ್ಥೆಯ ತಪ್ಪುಗಳಿಗೆ ವೈದ್ಯರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ ಎಂಬುದು ವೈದ್ಯರ ಆತಂಕಕ್ಕೆ ಕಾರಣವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾರ್ಚ್ 15 ರವರೆಗೆ ಒ.ಪಿ.ಡಿ. ಸೇವೆ ಬಂದ್ ಆಗಲಿದ್ದು, ಮಾರ್ಚ್ 16 ರಿಂದ ತುರ್ತು ಸೇವೆಗಳನ್ನೂ ಸ್ಥಗಿತಗೊಳಿಸುವುದಾಗಿ ವೈದ್ಯರು ಎಚ್ಚರಿಸಿದ್ದಾರೆ. ಇದರಿಂದ ಬಡ ರೋಗಿಗಳ ಮತ್ತು ಗ್ರಾಮೀಣ ಭಾಗದ ಜನರ ಪ್ರಾಣಕ್ಕೆ ಸಂಚಕಾರ ಬರಲಿದೆ.

ಸರ್ಕಾರ ಈ ಕೂಡಲೇ ವೈದ್ಯರ ಸಂಘದ ಪದಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು. ಆಸ್ಪತ್ರೆಗಳಿಗೆ ಕೂಡಲೇ ಔಷಧಗಳನ್ನು ಪೂರೈಸಿ ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಶೂನ್ಯವೇಳೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**(ಮುಂದು)**

(268) 10.03.2026 1.00 TCH-MD (KS) (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ನಿಮ್ಮ matter ಕೂಡ same ಇದೆ. ಅದೇನೆಂದರೆ, ರಾಜ್ಯದ ಜನತೆಗೆ ಆರೋಗ್ಯ ಸೇವೆ ಸಲ್ಲಿಸುವುದರಲ್ಲಿ ಸೌಲತ್ತು ನೀಡದಿರುವುದರಿಂದ ಇಂದು ರಾಜ್ಯಾದ್ಯಂತ ವೈದ್ಯರೆಲ್ಲರೂ ಸಹ ಬೀದಿಗಿಳಿದು ಹೋರಾಟ ಮಾಡುತ್ತಾರೆ. ನಿಮ್ಮ ವಿಷಯ ಮತ್ತು ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರ ವಿಷಯ ಎರಡೂ same ಇದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೂಡ ಓದುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರೇ, ಓದುವುದು ಬೇಡ. ಅದನ್ನೂ ಸೇರಿಸಲಾಗುವುದು ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕಾಗಿರುವ ವಿಷಯವನ್ನು ಕೂಡ record ನಲ್ಲಿ ಸೇರಿಸಲಾಗುವುದು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ರಾಜ್ಯದ ಜನತೆಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ನಮ್ಮ ರಾಜ್ಯದ ವೈದ್ಯರಿಗೆ ಸರ್ಕಾರದಿಂದ ನೀಡಬೇಕಾದ ಸೂಕ್ತವಾದ ಸವಲತ್ತುಗಳನ್ನು ನೀಡದೇ ಇರುವುದರಿಂದ ಇಂದು ರಾಜ್ಯದ ವೈದ್ಯರೆಲ್ಲರೂ ಸಹ ಬೀದಿಗಿಳಿದು ಹೋರಾಟ ಮಾಡುವ ದುಸ್ಥಿತಿಗೆ ವೈದ್ಯರನ್ನು ತಂದಿರುವುದು ದುರ್ದೈವದ ಸಂಗತಿಯಾಗಿದೆ.

"ವೈದ್ಯೋ ನಾರಾಯಣೋ ಹರಿಃ" ಎಂದು ಹೇಳುತ್ತಿರುತ್ತಾರೆ. ಅಂದರೆ ವೈದ್ಯನು ಸಾಕ್ಷಾತ್ ನಾರಾಯಣವೆಂದೂ, ರಕ್ಷಕನೆಂದೂ ಮತ್ತು ದೇವರ ಸಮಾನನೆಂದೂ ಅರ್ಥ. ಆದ್ದರಿಂದಲೇ ಅವರಿಗೆ ದೇವರ ಸ್ಥಾನ ಕೊಡಲಾಗಿದೆ. ಸಮಾಜದ ಆರೋಗ್ಯ ರಕ್ಷಣೆಯಲ್ಲಿ ವೈದ್ಯರು ವಹಿಸುವ ತ್ಯಾಗ, ಬದ್ಧತೆ ಹಾಗೂ ಕರುಣೆಯನ್ನು ಗುರುತಿಸಿ ಅವರನ್ನು ದೈವಸಮಾನವಾಗಿ ನೋಡಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಹಾಗೂ ನೌಕರರ ಬೇಡಿಕೆಗಳನ್ನು ಈಡೇರಿಸದೇ ನಿರ್ಲಕ್ಷ್ಯ ವಹಿಸುತ್ತಿರುವುದು ಇಲಾಖಾ ನೌಕರರ ಕೆಂಗಣ್ಣಿಗೆ ಗುರಿಯಾಗಿದೆ ಹಾಗೂ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘವು ನೌಕರರುಗಳ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಇದೇ ಮಾರ್ಚ್ 11 ನೇ ತಾರೀಖಿನಿಂದ ವೈದ್ಯರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ತೀರ್ಮಾನಿಸಿರುವುದು ತಿಳಿದು ಬಂದಿದೆ. ವೈದ್ಯರು ಮುಷ್ಕರಕ್ಕೆ

ಹೋಗದಂತೆ ಅವರುಗಳ ಸೂಕ್ತವಾದ ಮತ್ತು ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವುದು ಸೂಕ್ತವಾಗಿದೆ ಎಂದೆನಿಸುತ್ತದೆ.

ಒಂದುವೇಳೆ ವೈದ್ಯರು ಮುಷ್ಕರಕ್ಕೆ ಇಳಿದರೆ ನಮ್ಮ ರಾಜ್ಯದ ರೋಗಿಗಳ ಪರಿಸ್ಥಿತಿ ಏನಾಗಬಹುದೆಂದು ಸರ್ಕಾರವು ಚಿಂತಿಸಿದೆಯೇ? ಇದರಿಂದಾಗಿ ಜನರಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರಕದೇ ಸಾವು-ನೋವುಗಳು ಆಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಸದರಿ ನೌಕರರ ಬೇಡಿಕೆಗಳಾದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, 13 ವರ್ಷಗಳಿಂದ ತಡೆಹಿಡಿದಿರುವ ಜೇಷ್ಠತಾ ಪಟ್ಟಿಯ ಪ್ರಕಟಣೆ, ಮುಂಬಡ್ತಿ ಪ್ರಕ್ರಿಯೆ, ಸೇವಾನಿರತ ವೈದ್ಯರ ಉನ್ನತ ವ್ಯಾಸಂಗಕ್ಕೆ ಇತರೆ ಆರೋಗ್ಯ ಸಂಸ್ಥೆಗಳಂತೆಯೇ ಸಮಾನ ಸೌಲಭ್ಯ ಒದಗಿಸುವುದು. ವರ್ಗಾವಣೆ ಕಾಯ್ದೆ ತಿದ್ದುಪಡಿ ಮಾಡುವುದು, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತದ ಮೂಲಕ ನಿಯಮಿತ ಮತ್ತು ಸಮರ್ಪಕ ಔಷಧಿ ಹಾಗೂ ಸಲಕರಣೆಯ ಪೂರೈಕೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳುವುದು. 1998ನೇ ಇಸವಿಯ ಮಾನದಂಡದ ಆಧಾರದ ಮೇಲೆ ಹುದ್ದೆಗಳ ಬದಲು ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಹೊಸ ಹುದ್ದೆಗಳನ್ನು ಸೃಷ್ಟಿಸಿ ಶೇ.40 ರಷ್ಟು ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವುದು. ಗುತ್ತಿಗೆ ನೌಕರರನ್ನು ಖಾಯಂಗೊಳಿಸುವುದು. ಹೀಗೆಯೆ ನಮ್ಮ ರಾಜ್ಯದ ವೈದ್ಯರ ಮತ್ತು ಸಿಬ್ಬಂದಿಗಳ ಹಲವಾರು ಬೇಡಿಕೆಗಳನ್ನು ರಾಜ್ಯ ಸರ್ಕಾರವು ತಕ್ಷಣವೇ ಈಡೇರಿಸಿ ನ್ಯಾಯ ಒದಗಿಸಿಕೊಡಬೇಕಾಗಿರುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಆದ್ದರಿಂದ ರಾಜ್ಯ ಸರ್ಕಾರವು ಈ ಕೂಡಲೇ ಎಚ್ಚೆತ್ತುಕೊಂಡು ರಾಜ್ಯದ ವೈದ್ಯರುಗಳ/ ಸಿಬ್ಬಂದಿಗಳು ಮುಷ್ಕರ ಕೈಗೊಳ್ಳುವ ಮುನ್ನವೇ ಅವರುಗಳ ನ್ಯಾಯಯುತವಾದ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಈಡೇರಿಸುವಂತೆ ಶೂನ್ಯ ವೇಳೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ಗ್ರಾಮ ಪಂಚಾಯಿತಿಗಳಿಗೆ ಪಂಚಾಯತ್ ರಾಜ್ ಕಾಯ್ದೆಯನ್ವಯ ತೆರಿಗೆ ಸಂಗ್ರಹಿಸಲು ಅನುವು ಮಾಡಿಕೊಡುವ ಬಗ್ಗೆ.**

-----

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳ-ಗ್ರಾಮ ಪಂಚಾಯಿತಿಗಳ ನಡುವೆ ತೆರಿಗೆ ಸಮರ ಎಂಬ ಶಿರೋನಾಮೆಯಡಿಯಲ್ಲಿ ದಿನಾಂಕ ೦6.೦3.2026ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ರಾಜ್ಯದ ವಿವಿಧ ಕೈಗಾರಿಕೆಗಳ ಆಸ್ತಿ ತೆರಿಗೆ ಸಂಗ್ರಹ ವಿಚಾರ ಕೆ.ಐ.ಎ.ಡಿ.ಬಿ. ಮತ್ತು ಗ್ರಾಮ ಪಂಚಾಯಿತಿಗಳ ನಡುವಿನ ಸಮರಕ್ಕೆ ಕಾರಣವಾಗಿದ್ದು, ಕಂಪನಿಗಳು ತೆರಿಗೆಯನ್ನು ಯಾರಿಗೆ ಪಾವತಿಸಬೇಕೆಂದು ಗೊತ್ತಾಗದೇ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿವೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಿಂದ ತೆರಿಗೆ ಸಂಗ್ರಹಕ್ಕೆ ಮುಂದಾಗಿದೆ. ಮತ್ತೊಂದೆಡೆ ತೆರಿಗೆಯನ್ನು ಕೆ.ಐ.ಎ.ಡಿ.ಬಿ.ಗೆ ಪಾವತಿಸಬೇಕೆಂದು ವರ್ಷದ ಹಿಂದೆಯೇ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಕಳೆದ ಆರ್ಥಿಕ ವರ್ಷದವರೆಗೂ ತೆರಿಗೆ ಸಂಗ್ರಹದಲ್ಲಿ ಯಾವುದೇ ಗೊಂದಲ ಇರಲಿಲ್ಲ. ತಮ್ಮ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಿಂದ ಗ್ರಾಮ ಪಂಚಾಯಿತಿಗಳೇ ತೆರಿಗೆ ಸಂಗ್ರಹಿಸುತ್ತಿದ್ದವು. ಬೃಹತ್ ಹೂಡಿಕೆ ಪ್ರದೇಶಗಳು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು, ಸರ್ಕಾರ ವಿಶೇಷ ಹೂಡಿಕೆ ಪ್ರದೇಶ (ಎಸ್.ಐ.ಆರ್) ಕಾಯ್ದೆ ಜಾರಿಗೆ ತಂದು ರಾಜ್ಯದಲ್ಲಿ ಹೆಚ್ಚು ಆದಾಯ ತರುವ ಸುಮಾರು 17 ಕೈಗಾರಿಕಾ ಪ್ರದೇಶಗಳನ್ನು ಎಸ್.ಐ.ಆರ್ ಕಾಯ್ದೆ ವ್ಯಾಪ್ತಿಗೆ ತಂದು ಸಂಪೂರ್ಣ ಜವಾಬ್ದಾರಿಯನ್ನು ಕೆ.ಐ.ಎ.ಡಿ.ಬಿ.ಗೆ ವಹಿಸಲಾಗಿದೆ. ಸಂಗ್ರಹವಾಗುವ ಒಟ್ಟು ತೆರಿಗೆಯಲ್ಲಿ ಶೇಕಡ 3೦ ರಷ್ಟನ್ನು ಗ್ರಾಮ ಪಂಚಾಯಿತಿಗಳಿಗೆ ನೀಡುವುದಾಗಿ ಕೆ.ಐ.ಎ.ಡಿ.ಬಿ. ಕಾಯ್ದೆಯಲ್ಲಿ ತಿಳಿಸಲಾಗಿತ್ತು. ಆದರೆ ಇದ್ಯಾವುದೂ ಜಾರಿಗೆ ಬರಲಿಲ್ಲ. ಒಂದುಕಡೆ ಸರ್ಕಾರ ಪಂಚಾಯಿತಿಗಳಿಗೆ ಅನುದಾನ ನೀಡುತ್ತಿಲ್ಲ. ಇನ್ನೊಂದುಕಡೆ ಸ್ಥಳೀಯವಾಗಿ ಗ್ರಾಮ ಪಂಚಾಯಿತಿಗಳೇ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕು ಎಂದು ಹೇಳುತ್ತದೆ. ಪಂಚಾಯತ್ ರಾಜ್ ಕಾಯ್ದೆಯ ಅನುಸಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆಸ್ತಿಗಳಿಂದ ತೆರಿಗೆ ಸಂಗ್ರಹ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. ಆದ್ದರಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಹಿಂದಿನಂತೆ ಪಂಚಾಯತ್ ರಾಜ್ ಕಾಯ್ದೆಯಂತೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆ ಪ್ರದೇಶಗಳಿಂದ ತೆರಿಗೆಯನ್ನು ಸಂಗ್ರಹಿಸಲು ಗ್ರಾಮ ಪಂಚಾಯಿತಿಗಳಿಗೆ ಅಧಿಕಾರಿ ನೀಡಿ, ಈ ಸಂದಿಗ್ಧ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರ ತಕ್ಷಣವೇ ಕ್ರಮ ವಹಿಸಬೇಕು ಎಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಟಿ.ಎನ್.ಜವರಾಯಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರ ಕೊಡಿಸಿ.

**ಸಭಾಪತಿಯವರು:–** ಶ್ರೀ ಟಿ.ಎನ್.ಜವರಾಯಿ ಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಈ) ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂದಿನಗಹಳ್ಳಕ್ಕೆ ಸೇರುತ್ತಿರುವ ಶೌಚಾಲಯ ಮತ್ತು ಕಲುಷಿತ ನೀರನ್ನು ತಡೆಗಟ್ಟಿ, ನೀರನ್ನು ವೈಜ್ಞಾನಿಕ ಕ್ರಮಗಳ ಮೂಲಕ ಶುದ್ಧೀಕರಿಸುವ ಬಗ್ಗೆ.**

-----

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ನಾವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ನಾವಳ್ಳಿ ಗ್ರಾಮದ ಹತ್ತಿರ ಹರಿಯುವ ಈ ಹಂದಿಗನ ಹಳ್ಳಕ್ಕೆ ನಾವಳ್ಳಿ, ಕುರಹಟ್ಟಿ, ಅಡ್ನೂರು ಮತ್ತು ಕಿತ್ತೂರು ಗ್ರಾಮಗಳ ಶೌಚಾಲಯದ ವಿಷಪೂರಿತ ನೀರು ನೇರವಾಗಿ ಸೇರುತ್ತಿದೆ. ಇದರಿಂದಾಗಿ ಹಳ್ಳದ ನೀರಿನಲ್ಲಿ ಅಪಾಯಕಾರಿ 'ಕೋಲಿ ಫಾರ್ಮ್' (Coliform) ಬ್ಯಾಕ್ಟೀರಿಯಾಗಳು ಉತ್ಪತ್ತಿಯಾಗುತ್ತಿವೆ. ಈ ಕಲುಷಿತ ನೀರು ಅಂತರ್ಜಲವನ್ನು ಸೇರುತ್ತಿರುವುದರಿಂದ ಗ್ರಾಮದ ಕುಡಿಯುವ ನೀರಿನ ಕೊಳವೆ ಬಾವಿಗಳು ಸಹ ವಿಷಪೂರಿತವಾಗುತ್ತಿವೆ. ಇದರಿಂದ ಈ ಭಾಗದ ಜನರ ಆರೋಗ್ಯದ ಮೇಲೆ ತೀವ್ರ ತರಹದ ಪರಿಣಾಮಗಳು ಉಂಟಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ.

ಆದ್ದರಿಂದ ಸರ್ಕಾರವು ಈ ಕೂಡಲೇ ಮಧ್ಯೆ ಪ್ರವೇಶಿಸಿ ಹಂದಿಗನ ಹಳ್ಳಕ್ಕೆ ಸೇರುತ್ತಿರುವ ಶೌಚಾಲಯದ ನೀರನ್ನು ತಡೆಗಟ್ಟಲು ಮತ್ತು ಕಲುಷಿತ ನೀರನ್ನು ಶುದ್ದೀಕರಿಸಲು ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕು. ಈ ಮೂಲಕ ನಾವಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಹಾಗೂ ಉತ್ತಮ ಆರೋಗ್ಯ ಕಾಪಾಡಲು ತುರ್ತು ಕ್ರಮ ವಹಿಸಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಪೊಲೀಸರಿಗೆ ಬಾಕಿ ಉಳಿಸಿಕೊಂಡಿರುವ ಸಂಬಳವನ್ನು ಬಿಡುಗಡೆ ಮಾಡುವ ಬಗ್ಗೆ.**

-----

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಪ್ರಮುಖ ಹೊಣೆಗಾರಿಕೆ ಹೊತ್ತಿರುವ ಪೊಲೀಸ್ ಸಿಬ್ಬಂದಿಯೇ ಇಂದು ಸಂಕಷ್ಟದಲ್ಲಿರುವುದು ಅತ್ಯಂತ ದುಃಖಕರ ಮತ್ತು ಚಿಂತಾಜನಕ ಸಂಗತಿಯ ಬಗ್ಗೆ 'ಅನುದಾನ ಕೊರತೆಯ ಕಾಟ, ಪೊಲೀಸರಿಗೆ ಸಂಬಳವೇ ಇಲ್ಲ; ಸಂಕಷ್ಟದಲ್ಲಿರುವ ಸಿಬ್ಬಂದಿ' ಎಂಬ ಶಿರೋನಾಮೆಯಡಿ ಹಲವಾರು ದಿನಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿರುತ್ತದೆ.

ಇತ್ತೀಚಿನ ವರದಿಗಳ ಪ್ರಕಾರ ಅನುದಾನ ಕೊರತೆಯಿಂದಾಗಿ ಕೆಲವು ಕಡೆ ಪೊಲೀಸ್ ಸಿಬ್ಬಂದಿಗೆ ಸಂಬಳ ಪಾವತಿಸುವಲ್ಲಿ ವಿಳಂಬವಾಗುತ್ತಿರುವುದು ತಿಳಿದು ಬಂದಿದೆ. ಇದು ಸಾರ್ವಜನಿಕ ಭದ್ರತೆಯನ್ನು ಕಾಪಾಡುವ ಕಾರ್ಯದಲ್ಲಿ ತೊಡಗಿರುವ ಪೊಲೀಸರ ಮನೋಬಲ ಕುಗ್ಗಿಸುವಂತಹ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ.

ಹಗಲು-ರಾತ್ರಿ ಭೇದವಿಲ್ಲದೇ ಜನರ ರಕ್ಷಣೆಗಾಗಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಸಮಯಕ್ಕೆ ಸರಿಯಾಗಿ ಸಂಬಳ ನೀಡದಿರುವುದು ಸರ್ಕಾರದ ಆಡಳಿತಾತ್ಮಕ ವೈಫಲ್ಯವನ್ನು ತೋರಿಸುತ್ತದೆ. ತಮ್ಮ ಕುಟುಂಬಗಳ ಜೀವನೋಪಾಯಕ್ಕೂ ಕಷ್ಟ ಎದುರಿಸುತ್ತಿರುವ ಸ್ಥಿತಿ ನಿರ್ಮಾಣವಾಗಿರುವುದು ಅತ್ಯಂತ ವಿಷಾದನೀಯ ಸಂಗತಿ. ರಾಜ್ಯದ ರಕ್ಷಕರಾಗಿರುವ ಪೊಲೀಸರೇ, ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದು ಒಳ್ಳೆಯ ಬೆಳವಣಿಗೆ ಅಲ್ಲ.

ಆದ್ದರಿಂದ ಈ ವಿಷಯವನ್ನು ಸರ್ಕಾರ ತಕ್ಷಣವೇ ಗಂಭೀರವಾಗಿ ಪರಿಗಣಿಸಿ, ಪೊಲೀಸ್ ಇಲಾಖೆಗೆ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡಿ, ಬಾಕಿ ಉಳಿದಿರುವ ಸಂಬಳವನ್ನು ಶೀಘ್ರದಲ್ಲಿ ಪಾವತಿಸುವ ಕ್ರಮ ಕೈಗೊಳ್ಳಬೇಕು. ಜೊತೆಗೆ ಭವಿಷ್ಯದಲ್ಲಿ ಇಂತಹ ಪರಿಸ್ಥಿತಿ ಮರುಕಳಿಸದಂತೆ ಸಮರ್ಪಕ ಹಣಕಾಸು ವ್ಯವಸ್ಥೆ ರೂಪಿಸಲು ಸರ್ಕಾರ ಮುಂದಾಗಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಊ) ಮಡಿಕೇರಿ ತಾಲ್ಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಕಾಡಾನೆ ದಾಳಗೆ ಬಳಯಾದವರಿಗೆ ಪರಿಹಾರ ಘೋಷಿಸುವ ಮತ್ತು ಕಾಡಾನೆಗಳನ್ನು ಸೆರೆ ಹಿಡಿಯುವ ಬಗ್ಗೆ.**

-----

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಜನ ಮಿತ್ರ ದಿನ ಪತ್ರಿಕೆಯಲ್ಲಿ ಕಾಡಾನೆ ದಾಳಗೆ ವಿದ್ಯಾರ್ಥಿನಿ ಬಲಿ, ರಸ್ತೆ ತಡೆ" ಎಂಬ ಶೀರ್ಷಿಕೆಯಡಿಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಮಡಿಕೇರಿ ತಾಲ್ಲೂಕಿನಲ್ಲಿ ಬೆಟ್ಟತ್ತೂರು ಗ್ರಾಮದಲ್ಲಿ ಕಾಡಾನೆ ದಾಳಗೆ 17 ವರ್ಷದ ವಿದ್ಯಾರ್ಥಿನಿ ಪೂಜಾ ಬಲಿಯಾಗಿದ್ದಾರೆ. ನಿನ್ನೆಯಷ್ಟೇ ವಾಲ್ನೂರು ತ್ಯಾಗತ್ತೂರು ಗ್ರಾಮದಲ್ಲಿ ಕಾಡಾನೆ ದಾಳಗೆ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯೆ ಜಲಜಾಕ್ಷಿ ಅವರು ಬಲಿಯಾಗಿರುವುದು ಆತಂಕಕಾರಿ ಘಟನೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ತೀವ್ರ ಪ್ರತಿಭಟನೆ ನಡೆಸಿ ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಕೊಡಗು ಮತ್ತು ಮಲೆನಾಡು ಭಾಗದಲ್ಲಿ ಆನೆ ದಾಳಯಿಂದಾಗಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಆದರೂ ಸಹ ಸರ್ಕಾರ ಎಚ್ಚೆತ್ತುಕೊಳ್ಳದೇ, ಸೂಕ್ತ ಕ್ರಮಗಳನ್ನು ಕೈಗೊಳ್ಳದೇ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರುವುದು ಖಂಡನೀಯವಾಗಿದೆ. ಮಾನವ-ಆನೆಗಳ ಸಂಘರ್ಷ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸರ್ಕಾರ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನರ ಸುರಕ್ಷತೆಗೆ ಸೂಕ್ತ ಕ್ರಮಗಳನ್ನು ಜಾರಿಗೆ ತರಬೇಕು.

ಇನ್ನೂ ಬದುಕಿನ ಕನಸುಗಳನ್ನು ಕಟ್ಟಿಕೊಳ್ಳಬೇಕಿದ್ದ 17 ವರ್ಷದ ವಿದ್ಯಾರ್ಥಿನಿ ಪೂಜಾ ಮತ್ತು ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯೆ ಜಲಜಾಕ್ಷಿ ಅವರ ಅಕಾಲಿಕ ಮರಣದಿಂದ ಕುಟುಂಬ ಮಾತ್ರವಲ್ಲ, ಸಮಸ್ತ ಸಮಾಜವೇ ಕಳವಳಗೊಂಡಿದೆ.

ಆದ್ದರಿಂದ ಕೂಡಲೇ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆನೆಗಳನ್ನು ಸೆರೆಹಿಡಿದು, ಎರಡೂ ಕುಟುಂಬಗಳಗೆ ಪರಿಹಾರ ಘೋಷಿಸಿ; ವಿದ್ಯಾರ್ಥಿನಿ ಪೂಜಾ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನವ-ಪ್ರಾಣಿ ಸಂಘರ್ಷ ದಿನೇ ದಿನೇ ಜಾಸ್ತಿಯಾಗುತ್ತಿದೆ. ಅದಕ್ಕೆ ಬಹಳಷ್ಟು ಕಾರಣಗಳವೆ, ಪ್ರಾಣಿಗಳ ಸಂಖ್ಯೆಯಲ್ಲಿ ಜಾಸ್ತಿ ಆಗುತ್ತಿದೆ ಮತ್ತು ನಗರೀಕರಣ ಕೂಡ ಜಾಸ್ತಿ ಆಗುತ್ತಿದೆ. ಈ ಎರಡೂ ಪ್ರಕರಣಗಳಲ್ಲಿ ಸುಮಾರು 17 ವರ್ಷದ ಮಗು ಆನೆ ತುಳತಕ್ಕೆ ಬಲಿ ಆಗಿದ್ದಾರೆ ಮತ್ತು tribal woman ಒಬ್ಬರು ದಿನಾಂಕ 09.03.2026ರಂದು ಆನೆ ತುಳತಕ್ಕೆ ಬಲಿಯಾಗಿರುವುದು ಅತ್ಯಂತ ದುಃಖದ ಸಂಗತಿ ಮತ್ತು ಅತ್ಯಂತ ನೋವಿನ ಸಂಗತಿಯಾಗಿದೆ. ಜೀವ ಅತ್ಯಮೂಲ್ಯವಾಗಿರುತ್ತದೆ. ಅತ್ಯಮೂಲ್ಯವಾದಂತಹ ಜೀವಕ್ಕೆ ಯಾವುದೇ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಜೀವ

ಸಂರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿ ಇದೆ. ಅರಣ್ಯ ಇಲಾಖೆ ಇವತ್ತಿನ ದಿವಸ ಮಾನವ ಜೀವ ಸಂರಕ್ಷಣೆ ಮಾಡುವುದಕ್ಕೆ ನಮ್ಮ ಇಲಾಖೆಯವರು ಎಲ್ಲಾ ರೀತಿಯ ಪ್ರಯತ್ನಗಳು ಮಾಡುತ್ತಿದ್ದಾರೆ. ಇವತ್ತಿನ ದಿವಸ ಈ ಪ್ರಕರಣ ಏನಿದೆ, ಸುಮಾರು 17 ವರ್ಷದ ಮಗು ಆನೆ ತುಳಿತಕ್ಕೆ ಬಲಿಯಾಗಿದೆ. ಇದು ಅರಣ್ಯದ ಅಂಚಿನಲ್ಲಿರುವಂಥ ಒಂದು ಮನೆ. ಸುಮಾರು 200-300 ಮೀಟರ್ ಪಕ್ಕದಲ್ಲೇ ಬಹಳ isolated ಮನೆ ಇದೆ. ಅವೊತ್ತಿನ ದಿವಸ ತಂದೆ-ತಾಯಿ ಮತ್ತು ಮಗಳು ಒಟ್ಟಿಗೆ ಹೋಗುಂತಹ ಸಂದರ್ಭದಲ್ಲಿ, ಅದು ಬಹಳ steep area ಇದೆ. ಆ ಏರಿಯಾ ಯಾವ ರೀತಿ ಇದೆಯೆಂದರೆ ಸರಳವಾಗಿಲ್ಲ. ಅಲ್ಲಿ ಸಮತಟ್ಟು ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಮಗುವನ್ನು ಬಿಟ್ಟು, ತನ್ನ ಪತ್ನಿಯನ್ನು ಬಿಟ್ಟು ಬರುವಂತಹ ಸಂದರ್ಭದಲ್ಲಿ ಅರ್ಧ ತಾಸಿನಲ್ಲೇ ಅಲ್ಲಿಗೆ ಆನೆ ಬಂದು ತುಳಿತ ಆಗಿದೆ. ಇನ್ನೊಂದು ಪ್ರಕರಣದಲ್ಲಿ ಏನಾಗಿದೆಯೆಂದರೆ, ಅರಣ್ಯದ ಒಳಗಡೆಯೇ ಇನ್ನೂ ಅರಣ್ಯವಾಸಿಗಳಾದ tribal ಇದ್ದಾರೆ. Tribals ಇರುವಂಥ ಸಂದರ್ಭದಲ್ಲಿ ಆನೆ ಜೊತೆಯಲ್ಲೇ ಸಹಬಾಳ್ವೆ ಮಾಡುವುದು ರೂಢಿಯಾಗಿರತಕ್ಕಂಥದ್ದು. ಅಲ್ಲಿ ಸುಮಾರು 55 ವರ್ಷದ ಜಲಜಾಕ್ಷಿ ಎಂಬ ಮಹಿಳೆ ಕೂಡ ಮೃತಪಟ್ಟಿದ್ದಾರೆ.

**(ಮುಂದು)**

(269)10.3.2026/1.10/ಎಂ.ಎಂ-ಎಂ.ಡಿ[ಕೆ.ಎಸ್] (ಸಭಾಪತಿಯವರ ಉಪಸ್ಥಿತಿ)

**ಶ್ರೀ ಈಶ್ವರ್ ಬಿ. ಖಂಡ್ರೆ (ಮುಂದು):-**

ಅಲ್ಲಿ 55 ವರ್ಷದ ಜಲಜಾಕ್ಷಿ ಎನ್ನುವ ಮಹಿಳೆ ಮೃತ ಪಟ್ಟಿದ್ದಾರೆ. ಇವತ್ತು ಅಲ್ಲಿ ಎರಡು ಆನೆ ಕಾರ್ಯಪಡೆ ಕೆಲಸ ಮಾಡುತ್ತಿದೆ. ಸತತವಾಗಿ ಆನೆಗಳ ಚಲನ-ವಲನಗಳ ಬಗ್ಗೆ ನಿಗಾ ಇಡುತ್ತಿದ್ದಾರೆ. ಅಲ್ಲಿ ಶಾಶ್ವತವಾಗಿ ಒಂದು ಕ್ಯಾಂಪ್ ಮಾಡಬೇಕೆಂಬ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಮಾಹಿತಿ ಬಂದ ತಕ್ಷಣ ಆನೆಯನ್ನು ಸೆರೆ ಹಿಡಿಯುವುದಕ್ಕೆ ಆದೇಶವನ್ನು ಕೊಡುತ್ತಿದ್ದೇವೆ. ಅದರ ಜೊತೆಯಲ್ಲಿ ಆನೆಯಿಂದ ಮೃತಪಟ್ಟಿರುವ ಪರಿವಾರಕ್ಕೆ ಈಗಾಗಲೇ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಇನ್ನೂ 15 ಲಕ್ಷ ರೂಪಾಯಿಗಳನ್ನು ಒಂದು ವಾರದೊಳಗಾಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಅಲ್ಲಿ ಹೆಚ್ಚಿನ ನಿಗಾ ಇಡಬೇಕಾಗಿದೆ. ಏಕೆಂದರೆ ಈಗಾಗಲೇ ಅಲ್ಲಿ ಸುಮಾರು 7 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಮಾಡುವುದಕ್ಕೆ ಅನುಮೋದನೆ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ 22 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಮಾಡುವುದಕ್ಕೆ ಮಡಿಕೇರಿ ವಿಭಾಗದಲ್ಲಿಯೂ, 20 ಕಿ.ಮೀ. ನಾಗರಹೊಳೆಯಲ್ಲಿ ಮಾಡುವುದಕ್ಕೆ ಅನುಮೋದನೆ ಕೊಟ್ಟಿದ್ದೇವೆ. ಆ ಕಾಮಗಾರಿ ಪ್ರಾರಂಭವಾಗುವ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ಎಲ್ಲಾ ರೀತಿಯ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಇಂತಹ ಪ್ರಕರಣಗಳು ಆಗದ ರೀತಿ ನೋಡಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಶ್ರಮವನ್ನು ನಮ್ಮ ಇಲಾಖೆಯ ಅಧಿಕಾರಿಗಳು ವಹಿಸುತ್ತಿದ್ದಾರೆ.

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಬೇಡಿಕೆ ಇದೆ. 17 ವರ್ಷದ ಮಗು ಶೇ.92 ರಷ್ಟು ಎಸ್.ಟಿ. ವರ್ಗಕ್ಕೆ ಸೇರಿದವಳು ಎಂದು ತಿಳಸಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಕುಶಾಲಪ್ಪನವರೇ, no discussion. ನಿಮಗೆ ತಿಳಿಯುತ್ತದೆಯೋ ಇಲ್ಲವೋ? Discussion ಇಲ್ಲ ಎಂದು ಹೇಳುತ್ತಿದ್ದೇನೆ ಮತ್ತೆ ಮಾತನಾಡುತ್ತಿದ್ದೀರಿ.

**ಋ) ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದಲ್ಲಿ ಕಾರ್ಖಾನೆಗಳ ಮಾಲಿನ್ಯದಿಂದ ಕಾಯಿಲೆಗೆ ತುತ್ತಾದವರಿಗೆ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ತಪಾಸಣೆಗೊಳಪಡಿಸುವ ಬಗ್ಗೆ.**

- - - - -

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ 8.3.2026ರ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ. ಗ್ರಾಮಸ್ಥರ ಬಾಧಿಸುವ ಗಂಭೀರ ಕಾಯಿಲೆ. ಕೊಪ್ಪಳ ಹಿರೇಬಗನಾಳ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಸರ್ವೆ, ಮಾಲಿನ್ಯದಿಂದ ಅನಾರೋಗ್ಯ, ಕಾರ್ಖಾನೆಗಳು ಕೇಂದ್ರೀಕೃತವಾಗಿರುವ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಸುತ್ತಲಿನ ಪರಿಸರ ಮಾಲಿನ್ಯವಾಗಿದ್ದು, ಗ್ರಾಮದ ಜನರಲ್ಲಿ ಗಂಭೀರ ಕಾಯಿಲೆಗಳು ಪತ್ತೆಯಾಗಿವೆ. ಕಾರ್ಖಾನೆಗಳು ಹೊರಸೂಸುವ ಕಪ್ಪುಕಣಗಳ ಧೂಳಿನಿಂದ ಮಾಲಿನ್ಯ ಆಗುತ್ತಿದೆ. ನಿತ್ಯ ಯಾತನೆ ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು ದೂರುತ್ತಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಿರೇಬಗನಾಳ ಗ್ರಾಮದಲ್ಲಿ ಇದೇ ವರ್ಷದ ಫೆಬ್ರವರಿಯಲ್ಲಿ ಜನರ ಆರೋಗ್ಯ ತಪಾಸಣೆ ನಡೆಸಿದೆ. ಗ್ರಾಮದಲ್ಲಿ 208 ಮಕ್ಕಳು ಸೇರಿ 2,333 ಜನಸಂಖ್ಯೆಯಿದೆ. ಈ ಪೈಕಿ ಹಿರೇಬಗನಾಳದಲ್ಲಿ ನಡೆದ ಸಭೆಯಲ್ಲಿ ಅನಾರೋಗ್ಯಪೀಡಿತ ಮಗುವಿನೊಂದಿಗೆ ತಾಯಿ ಕಣ್ಣೀರು ಹಾಕಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಉಸಿರಾಟ ಸಂಬಂಧಿ ಕಾಯಿಲೆಯಿಂದ 124 ಜನರು ಬಳಲುತ್ತಿದ್ದಾರೆ. ಚರ್ಮ ಕಾಯಿಲೆಯಿಂದ 49, ಒಬ್ಬರು ಗರ್ಭಕಂಠ ಕ್ಯಾನ್ಸರ್‌ನಿಂದ ಹಾಗೂ ಬಾಯಿ ಕ್ಯಾನ್ಸರ್‌ನಿಂದ 25 ಜನರು, ಟಿ.ಬಿ., ಕಾಯಿಲೆಯಿಂದ 58 ಜನ, ಬಿ.ಪಿ. ಇಂದ 40 ಜನ ಮತ್ತು ಮಧುಮೇಹದಿಂದ 42 ವ್ಯಕ್ತಿಗಳಲ್ಲಿ ದೃಷ್ಟಿದೋಷ ಹಾಗೂ ಮೂವರಿಗೆ ಪಾರ್ಶ್ವವಾಯು (ಸ್ಟ್ರೋಕ್) ಆಗಿದೆ ಎನ್ನುವುದು ಗೊತ್ತಾಗಿದೆ.

ಬಗನಾಳ, ಅಲ್ಲಾನಗರ, ಹಾಲವರ್ತಿ, ಕುಣಿಕೇರಿ, ಗಿಣಿಗೇರಿ, ಮುದ್ದಾಬಳ್ಳಿ, ಕಾಸನಕಂಡಿ, ಬೇವಿನಹಳ್ಳಿ, ಬಸಾಪುರ, ಕನಕಾಪುರ, ಲಾಚನಕೇರಿ ಗ್ರಾಮಸ್ಥರಿಂದ ಅನಾರೋಗ್ಯದ ಬಗ್ಗೆ ನಿರಂತರವಾಗಿ ದೂರುಗಳು ಬಂದಿದ್ದರಿಂದ ಆರೋಗ್ಯ ಇಲಾಖೆ ಗ್ರಾಮದಲ್ಲಿ ತಪಾಸಣೆ ಮಾಡಿದ್ದು, ನೆರೆಯ ಹಾಲವರ್ತಿ, ಅಲ್ಲಾನಗರ ಸೇರಿದಂತೆ ವಿವಿಧೆಡೆಯೂ ತಪಾಸಣೆಗೆ ಮುಂದಾಗಿದೆ.

ಕಾರ್ಖಾನೆಗಳ ಮಾಲಿನ್ಯ ನಿಯಂತ್ರಿಸಬೇಕು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಜಿಲ್ಲಾ ಬಚಾವೊ ಆಂದೋಲನ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ 128 ದಿನಗಳಿಂದ ಜಿಲ್ಲಾ ಕೇಂದ್ರದಲ್ಲಿ ಧರಣಿ ನಡೆಸುತ್ತಿದೆ.

ಮಾಲಿನ್ಯದಿಂದ ಕಾರ್ಖಾನೆಗಳ ಸುತ್ತಲೂ ಇರುವ ಗ್ರಾಮಗಳ ಜನರ ಬದುಕು ಅಸಹನೀಯವಾಗಿದೆ. ಆದ್ದರಿಂದ ಮಾಲಿನ್ಯದಿಂದ ಬಾಧಿತ ಗ್ರಾಮಗಳ ಜನರನ್ನು ಭಾರತೀಯ ವೈದ್ಯಕೀಯ ಸಂಸ್ಥೆಯಿಂದಲೇ ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಬೇಕು. ಆಗ ಇನ್ನಷ್ಟು ಸಮಸ್ಯೆಗಳು ಗೊತ್ತಾಗುತ್ತವೆ. ಈ ಬಗ್ಗೆ ಆರೋಗ್ಯ ಇಲಾಖೆ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಎ) ಮಂಗಳೂರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸಿ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಬಗ್ಗೆ.**

– – – –

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಹೆಚ್ಚುತ್ತಿರುವ ಧಗೆಗೆ ಅಣೆಕಟ್ಟುಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಸಾಧ್ಯತೆ, ಮುಂಜಾಗ್ರತೆಗೆ ಮಂಗಳೂರು ಮಹಾನಗರ ಪಾಲಿಕೆ ಅಣಿಯಾಗಲಿ ಎಂದು 'ಉದಯವಾಣಿ' ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಬೇಸಿಗೆಯ ಬಿಸಿ ಏರುತ್ತಿದ್ದಂತೆ ಮಂಗಳೂರಿನಲ್ಲಿ ಕುಡಿಯುವ ನೀರಿನ ತಲೆ ಬಿಸಿ ಶುರುವಾದಂತಿದೆ. ಈ ಬಾರಿ ಮಳೆ ಕಡಿಮೆ ಎಂಬ ವರ್ತಮಾನದ ಹಿನ್ನೆಲೆಯಲ್ಲಿ ಮೇ, ಜೂನ್ ತಿಂಗಳಿನಲ್ಲಿ ಮಳೆಯಾಗದಿದ್ದರೆ ನಗರಕ್ಕೆ ಕುಡಿಯುವ ನೀರಿನ ಆತಂಕ ಎದುರಾಗಲಿದೆ.

ಕಳೆದ ಸಾಲಿನಲ್ಲಿ ಪಾಲಿಕೆಗೆ ಕುಡಿಯುವ ನೀರು ಪೂರೈಕೆಯಲ್ಲಿ ಹೆಚ್ಚಿನ ಸಮಸ್ಯೆ ತಲೆದೋರಿರಲಿಲ್ಲ. ಆದರೆ ಈ ಬಾರಿ 'ನೇತ್ರಾವತಿ' ನದಿಯಲ್ಲಿ ಪ್ರಸ್ತುತ ಇರುವ ನೀರಿನ ಒಳಹರಿವಿನ ಸ್ಥಿತಿ ಎಚ್ಚರಿಕೆಯ ಗಂಟೆಯನ್ನು ಬಾರಿಸಿದೆ. ಸದ್ಯ ತುಂಬೆ ವೆಂಟೆಡ್ ಡ್ಯಾಂನ ಎಲ್ಲ ಗೇಟ್‌ಗಳನ್ನು ಮುಚ್ಚಿ 6 ಮೀಟರ್ ನೀರು ನಿಲ್ಲಿಸಲಾಗಿದೆ. 10.49 ಎಂ.ಸಿ.ಎಂ. ನೀರು ಸಂಗ್ರಹವಿದೆ. ಇದನ್ನು ಅಂದಾಜು 39 ದಿನಗಳ ಅವಧಿಗೆ ಪೂರೈಕೆ ಮಾಡಬಹುದಾಗಿದೆ. ಇದಕ್ಕೂ ಮುನ್ನ ಮಳೆಯಾದರೆ ಸಮಸ್ಯೆ ಇಲ್ಲ. ಒಂದು ವೇಳೆ ಮಳೆಯಾಗದಿದ್ದರೆ ತೀವ್ರ ಸಮಸ್ಯೆ ಎದುರಿಸಬೇಕಾಗುತ್ತದೆ.

ಹಾಗಾದರೆ ಮುಂದೇನು ಎಂಬ ಪ್ರಶ್ನೆಗೆ ಈಗಿಂದಲೇ ಉತ್ತರ ಹುಡುಕುವ ಪ್ರಯತ್ನ ಮಾಡಬೇಕಿದೆ. ಮಳೆಯಾಗದಿದ್ದರೆ ನೀರಿನ ಸರಬರಾಜಿಗೆ ಏನು ಕ್ರಮ ಎಂಬ ಬಗ್ಗೆ ಆದ್ಯತೆಯನ್ನು ಈಗಲೇ ಯೋಚಿಸಬೇಕಿದೆ. ಸಾಧ್ಯಾಸಾಧ್ಯತೆಗಳ ಪೈಕಿ ತುಂಬೆ ಡ್ಯಾಂನಲ್ಲಿ ನೀರು ಕಡಿಮೆ ಆದಾಗ ಅದರ ಕೆಳಭಾಗದಿಂದ (ಅಡ್ಯಾರ್ ಡ್ಯಾಂ) ಪ್ರತಿದಿನ ಗರಿಷ್ಠ 50 ಎಂ.ಎಲ್.ಡಿ. ನೀರನ್ನು ತುಂಬೆ ಡ್ಯಾಂಗೆ ಹರಿಸಿ ಡ್ಯಾಂನಲ್ಲಿ ನೀರು ಕಾಯ್ದುಕೊಳ್ಳುವುದು, ಎಲ್ಲ ವಾರ್ಡಿನಲ್ಲಿರುವ 140 ಬೋರ್‌ವೆಲ್‌ಗಳ ಹಾಗೂ ಬಾವಿಗಳ ಸ್ವಚ್ಛತೆ, ದುರಸ್ತಿ ಮಾಡುವುದು, ಎ.ಎಂ.ಆರ್. ಡ್ಯಾಂನಿಂದ ನೀರು ಹರಿಸುವುದು ಎಂಬಿತ್ಯಾದಿ ಪೂರಕ ಕ್ರಮಗಳು ಇದೆಯಾದರೂ, ಎತ್ತರ ಪ್ರದೇಶಗಳಿಗೆ ಎದುರಾಗುವ ನೀರಿನ ಸಮಸ್ಯೆಗೆ ಪರಿಹಾರ ನೀಡಬೇಕಾದ ಗುರುತರ ಜವಾಬ್ದಾರಿಯ ಬಗ್ಗೆ ಪಾಲಿಕೆ ಚಿಂತನೆ ನಡೆಸಬೇಕಾಗಿದೆ.

ಪ್ರಸ್ತುತ ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ 86 ಸಾವಿರ ನೀರಿನ ಸಂಪರ್ಕ ಹೊಂದಿಕೊಂಡಿದ್ದು, ಅದೇ ರೀತಿ ಅಕ್ರಮವಾಗಿ ಸರಿ ಸುಮಾರು 20 ಸಾವಿರಕ್ಕೂ ಹೆಚ್ಚು ನೀರಿನ ಸಂಪರ್ಕವನ್ನು ಹೊಂದಿದೆ. ವೆಂಟೆಡ್ ಡ್ಯಾಂ ನಗರಪಾಲಿಕೆ ಶುದ್ಧೀಕರಣ ಘಟಕಕ್ಕೆ ಆಗಮಿಸುವ ದಾರಿಯಲ್ಲಿ ಅಕ್ರಮವಾಗಿ ನೀಡಲಾಗಿದೆ. ಇದನ್ನು

ಕೂಡಲೇ ಸರಿಪಡಿಸುವ ಹೊಣೆಗಾರಿಕೆ ನಗರಪಾಲಿಕೆ ಮೇಲಿದೆ. ಅಲ್ಲದೆ ನಗರಪಾಲಿಕೆ ಒಳಗಡೆ ಇರುವ ಬಾವಿಗಳನ್ನು ಸ್ವಚ್ಛಗೊಳಿಸಿ ಕುಡಿಯುವ ನೀರಿನ ಮಟ್ಟ ಶುದ್ಧೀಕರಣಗೊಳಿಸುವ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕು. ದಿನಕ್ಕೆ 170 ಎಂ.ಎಲ್.ಡಿ. ನೀರು ಬೇಕಾಗುವುದರಿಂದ ನೀರಿನ ಅಭಾವ ಉಂಟಾಗದಂತೆ ನಗರಾಭಿವೃದ್ಧಿ ಇಲಾಖೆ ಸಭೆ ನಡೆಸಿ ಕೂಡಲೇ ಈ ಪರಿಹಾರ ಕಂಡುಕೊಳ್ಳುವ ಅವಶ್ಯಕತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. 2019ರಲ್ಲಿ ಪ್ರಾರಂಭಗೊಂಡ ಜಲಶ್ರೀ 24X7 ನೀರು ಸರಬರಾಜು ಯೋಜನೆ 2025ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಇನ್ನೂ 5 ವರ್ಷ ಕಳೆದರೂ 24X7 ನೀರು ನೀಡುವ ಹಂತದಲ್ಲಿ ಕಾಮಗಾರಿ ಸಾಗುತ್ತಿಲ್ಲ. ಈ ಬಗ್ಗೆಯು ನಗರಾಭಿವೃದ್ಧಿ ಇಲಾಖೆ ಸಭೆಯನ್ನು ಕರೆದು ನೀರು ಸರಬರಾಜು ವ್ಯವಸ್ಥೆಯಲ್ಲಿ ಆಗಿರುವ ಲೋಪವನ್ನು ಸರಿಪಡಿಸಿ ಕುಡಿಯುವ ನೀರಿನ ವಿತರಣೆ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸದೇ ಇದ್ದಲ್ಲಿ ಅದು ನಿರೀಕ್ಷಿತ ಫಲಿತಾಂಶ ನೀಡದು. ಇದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ನಗರಾಭಿವೃದ್ಧಿ ಇಲಾಖೆಯು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ., ಕೆ.ಯು.ಐ.ಡಿ.ಎಫ್.ಸಿ ಸೇರಿದಂತೆ) ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಕೇಳಿರುವ ಪ್ರಶ್ನೆ ಸಮಂಜಸವಾಗಿದೆ. ನಮ್ಮ ಇಲಾಖೆಯು ಕುಡಿಯುವ ನೀರಿಗೆ ತತ್ವಾರ ಬರದ ರೀತಿಯಲ್ಲಿ ಯಾವ ರೀತಿ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಇಲಾಖೆಯಿಂದ ಅವರಿಗೆ ಸುದೀರ್ಘವಾದ ಉತ್ತರವನ್ನು ಕೊಡುತ್ತೇನೆ. ಮೌಖಿಕವಾಗಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಯಾವುದೇ ಸಮಸ್ಯೆ ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ನಿಮ್ಮ ಶೂನ್ಯವೇಳೆ ಪ್ರಸ್ತಾವದ ಸೂಚನೆಯು ಒಂದೂವರೆ page ಇದೆ. ಯಾವಾಗಲೂ ಒಂದು page ಇರಬೇಕು. ಈಗ ಇದನ್ನು ತೆಗೆದುಕೊಂಡಿದ್ದೇನೆ. ಇನ್ನೊಂದು ಬಾರಿ ಶೂನ್ಯವೇಳೆ ಪ್ರಸ್ತಾವವನ್ನು ಕೊಡುವಾಗ ಒಂದು page ಒಳಗಡೆ ಇರಬೇಕು.

**ಏ) ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಆಯವ್ಯಯದಲ್ಲಿ ಅನುದಾನವನ್ನು ಕಾದಿರಿಸುವ ಬಗ್ಗೆ.**

– – – – –

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಐದು ಕೃಷಿ ವಿಶ್ವವಿದ್ಯಾಲಯಗಳಿದ್ದು, ಇವುಗಳಲ್ಲಿ ಸುಮಾರು ಅರ್ಧದಷ್ಟು ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಾಗೂ ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಹಿನ್ನಡೆಯಾಗಿದೆ ಎಂದು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಕೇವಲ ಪದವಿ ನೀಡುವ ಕೇಂದ್ರಗಳಾಗಿವೆ ಎಂದು ಹೊಸ ದಿಗಂತ ಪತ್ರಿಕೆಯಲ್ಲಿ ವರದಿಯಾಗಿದೆ.

ಕಳೆದ ಹತ್ತು ವರ್ಷಗಳಲ್ಲಿ ನಿವೃತ್ತಿ, ನಿಧನ ಮತ್ತು ಇತರೆ ಕಾರಣಗಳಿಂದ ಸಾಕಷ್ಟು ಹುದ್ದೆಗಳು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಖಾಲಿಯಾಗಿದ್ದು ಅರೆಕಾಲಿಕ ಪ್ರಾಧ್ಯಾಪಕರು ಇದ್ದರೂ ಕೂಡ ಬೋಧಕರ ಮೇಲೆ ಕೆಲಸದ ಒತ್ತಡ ಹೆಚ್ಚಾಗಿರುವುದು ಮತ್ತು ಸಂಶೋಧನೆಗೆ ಮಾರ್ಗದರ್ಶನ ಮಾಡಲು ಪ್ರಾಧ್ಯಾಪಕರ ಕೊರತೆ ಎದುರಾಗಿದೆ. ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ 595 ಮಂಜೂರಾದ ಹುದ್ದೆಗಳಲ್ಲಿ 283 ಭರ್ತಿಯಾಗಿದ್ದು, 312 ಹುದ್ದೆಗಳು ಖಾಲಿ ಇವೆ. ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ 517 ಹುದ್ದೆಗಳಲ್ಲಿ 258 ಹುದ್ದೆಗಳು ಭರ್ತಿಯಾಗಿದ್ದು, 261 ಹುದ್ದೆಗಳು ಖಾಲಿ ಇವೆ. ಅದರಂತೆ ಮಂಡ್ಯ ಕೃಷಿ ವಿಶ್ವವಿದ್ಯಾಲಯದಲ್ಲಿ 250 ಮಂಜೂರಾದ ಹುದ್ದೆಗಳಲ್ಲಿ 136 ಭರ್ತಿಯಾಗಿದ್ದು 114 ಖಾಲಿ ಇವೆ. ಒಟ್ಟಾರೆಯಾಗಿ 5 ಕೃಷಿ ವಿಶ್ವವಿದ್ಯಾಲಯಗಳಲ್ಲಿ ಮಂಜೂರಾದ 2,232 ಹುದ್ದೆಗಳಲ್ಲಿ 1,205 ಹುದ್ದೆಗಳು ಭರ್ತಿಯಾಗಿದ್ದು 949 ಹುದ್ದೆಗಳು ಖಾಲಿ ಇವೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬೋಧಕರ ಹುದ್ದೆಗಳು ಖಾಲಿ ಇದ್ದಾಗ ಕೂಡ 2026–27ನೇ ಸಾಲಿನ ಆಯವ್ಯಯದಲ್ಲಿ ಒಂದೂ ಹುದ್ದೆಯನ್ನು ತುಂಬಿಕೊಳ್ಳುವ ಬಗ್ಗೆ ಪ್ರಸ್ತಾಪವಿಲ್ಲದಿರುವುದು ಒಂದು ರೀತಿಯಲ್ಲಿ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದಂತಾಗಿದೆ.

ಆದ್ದರಿಂದ ಸದ್ಯದ ಬಜೆಟ್‌ನಲ್ಲಿ ಕನಿಷ್ಠ 500 ಪ್ರಾಧ್ಯಾಪಕರ ಹುದ್ದೆಗಳನ್ನು ತುಂಬಿಕೊಳ್ಳಲು ಬೇಕಾಗುವ ಅನುದಾನವನ್ನು ಕಾಯ್ದಿರಿಸಲು ಸೂಕ್ತ ಕ್ರಮ ಜರುಗಿಸಲು ಮಾನ್ಯ ಕೃಷಿ ಸಚಿವರನ್ನು ಒತ್ತಯಿಸುವೆನು.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

(270) 10-03-2026 1-20 KH/AK

(ಸಭಾಪತಿಯವರ ಉಪಸ್ಥಿತಿ)

**ಐ) ಸಿಂಧನೂರು ತಾಲ್ಲೂಕಿನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮುಂಜಾಗ್ರತೆ ವಹಿಸಿ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ.**

---------

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ:08-03-2026 ರಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟಗೊಂಡ 'ತಳ ಕಾಣುತ್ತಿರುವ ಕೆರೆ ನೀರು' ಎಂಬ ಶೀರ್ಷಿಕೆಯಡಿ ದಿನ ಕಳೆದಂತೆ ಬೇಸಿಗೆ ಬಿಸಿಲು ಹೆಚ್ಚುತ್ತಿರುವಂತೆಯೇ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ನೀರಿನ ಚಿಂತೆ ಶುರುವಾಗಿದೆ. ಗ್ರಾಮೀಣ ಭಾಗದಲ್ಲಿರುವ ಬಹುತೇಕ ಕೆರೆಗಳು ಶೇಕಡಾ 50 ರಷ್ಟು ಖಾಲಿಯಾಗಿದ್ದು, ಕೆರೆಗಳು ತಳ ಕಾಣುತ್ತಿವೆ. ಸಿಂಧನೂರು ತಾಲ್ಲೂಕಿನ 30 ಗ್ರಾಮ ಪಂಚಾಯಿತಿಗಳಲ್ಲಿ 160 ಕ್ಕೂ ಅಧಿಕ ಸರ್ಕಾರಿ ಕೆರೆಗಳು ಇದ್ದು, ಈ ಕೆರೆಗಳಲ್ಲಿ ತಿಂಗಳ ಹಿಂದೆ ಭರ್ತಿ ಮಾಡಿದ್ದ ನೀರು, ಈಗ ಅರ್ಧಕ್ಕೆ ಬಂದು ನಿಂತಿದೆ. ತುಂಗಾಭದ್ರ ಜಲಾಶಯದ ಕ್ರಸ್ಟ್‌ಗೇಟ್ ನಿರ್ಮಾಣ ಕಾಮಗಾರಿ ಕೈಗೊಂಡಿರುವ ನಡುವೆಯೇ ಕೆರೆಗಳಲ್ಲಿ ನೀರಿನ ಪ್ರಮಾಣ ಕುಸಿತಗೊಂಡಿದ್ದು, ಕೆರೆ ನೀರು ಭರ್ತಿ ಹೇಗೆ ಎಂಬ ಚರ್ಚೆ ಶುರುವಾಗಿದೆ. ಇದಲ್ಲದೆ ಗ್ರಾಮೀಣ ಭಾಗಗಳಲ್ಲಿ ನಿತ್ಯ ಮನೆಗಳಿಗೆ ನೀರು ಪೂರೈಕೆ ಮಾಡದೇ ದಿನ ಬಿಟ್ಟು ದಿನ ನೀರು ಪೂರೈಕೆ ಮಾಡಲಾಗುತ್ತಿದೆ. ತುರವಿಹಾಳ, ಸಿಂಧನೂರು ನಗರದಲ್ಲಿ ಕರೆಗಳು ಇದ್ದರೂ ನೀರಿನ ಸಮಸ್ಯೆ ತಪ್ಪಿಲ್ಲ. ಈ ಮೊದಲು ಐದು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿತ್ತು. ಆದರೆ ಬೇಸಿಗೆ ಇರುವುದರಿಂದ ಸದ್ಯ 8 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲು ನಗರಸಭೆ ಅಧಿಕಾರಿಗಳು ಮುಂದಾಗಿದ್ದಾರೆ. ವಾರಕ್ಕೊಮ್ಮೆ ನೀರು ಬಿಡುವುದರಿಂದ ನೀರು ಶೇಖರಿಸಿಟ್ಟುಕೊಳ್ಳುವುದೇ ಜನರಿಗೆ ದೊಡ್ಡ ಸವಾಲಾಗಿದೆ ಎಂಬುದಾಗಿ ವರದಿಯಾಗಿರುತ್ತದೆ.

ಆದುದರಿಂದ, ಪ್ರಸಕ್ತ ಬೇಸಿಗೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗುವ ಸಂಭವವಿದ್ದು, ಸಿಂಧನೂರು ತಾಲ್ಲೂಕಿನ ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯುಂಟಾಗದ ರೀತಿಯಲ್ಲಿ ಆಗತ್ಯ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ, ಕುಡಿಯುವ ನೀರಿಗಾಗಿ ತುಂಗಾಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಬರುವಂತಹ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಕೆನಾಲ್‌ನಲ್ಲಿ ಈಗಾಗಲೇ ಜನವರಿ ತಿಂಗಳಿನಲ್ಲಿ ಕುಡಿಯುವ ನೀರನ್ನು ತುಂಬಿಸುವಂತಹ ಕೆಲಸವನ್ನು ಮಾಡಿದ್ದಾರೆ ಮತ್ತು ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಈ ಮೂರು ಜಿಲ್ಲೆಗಳಿಗೆ ಬೇಕಾಗಿರುವಂತಹ ನೀರು reservoir ನಲ್ಲಿ stock ಇದೆ. ಈಗಾಗಲೇ ರಾಯಚೂರು ಮತ್ತು ಕೊಪ್ಪಳ ಜಿಲ್ಲಾಧಿಕಾರಿಗಳು ಗುಲ್ಬರ್ಗಾ Regional Commissioner ಮುಖಾಂತರ

ತುಂಗಾಭದ್ರಾ ಪ್ರಾಜೆಕ್ಟ್ ಮುಖ್ಯ ಇಂಜಿನಿಯರ್‌ಗೆ ಮಾಹಿತಿ ಕೊಟ್ಟಿದ್ದಾರೆ. ಅವರ ಮಾಹಿತಿ ಪ್ರಕಾರ ಮಾರ್ಚ್–20 ನೇ ತಾರೀಖಿನಿಂದ ಏಪ್ರಿಲ್–2ನೇ ತಾರೀಖಿನವರೆಗೆ ನೀರು Left Bank Canal ಮುಖಾಂತರ ಈಗಾಗಲೇ ಅಚ್ಚುಕಟ್ಟಿನಲ್ಲಿ ಬರುವಂತಹ ಎಲ್ಲಾ ಕೆರೆಗಳಗೂ ಕುಡಿಯುವ ನೀರನ್ನು ತುಂಬಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ.

೩. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಹಾಗೂ ಅಧಿಕಾರಿಗಳ ಕುರಿತು.

**ಸಭಾಪತಿಯವರು:–** ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳೆಂದರೆ:

1. ಶ್ರೀ ರಾಮಲಿಂಗ ರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
2. ಶ್ರೀ ಸತೀಶ್ ಜಾರಕಿಹೊಳಿ, ಮಾನ್ಯ ಲೋಕೋಪಯೋಗಿ ಸಚಿವರು
3. ಶ್ರೀ ಎನ್.ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು
4. ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು (ಇವರು ಅನುಮತಿ ಪಡೆದಿದ್ದಾರೆ)
5. ಶ್ರೀ ಡಿ.ಸುಧಾಕರ್, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು
6. ಶ್ರೀ ಸಂತೋಷ್ ಎಸ್ ಲಾಡ್, ಮಾನ್ಯ ಕಾರ್ಮಿಕ ಸಚಿವರು
7. ಶ್ರೀ ಕೆ.ವೆಂಕಟೇಶ್, ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು
8. ಶ್ರೀ ಮಂಕಾಳ ಎಸ್ ವೈದ್ಯ, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು
9. ಶ್ರೀ ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಇಲಾಖಾಧಿಕಾರಿಗಳೆಂದರೆ:

1. ಶ್ರೀಮತಿ ರೋಹಿಣಿ ಸಿಂಧೂರಿ ದಾಸರಿ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂ.ಎಸ್.ಎಂ.ಇ., & ಗಣಿ), ಬೆಂಗಳೂರು
2. ಶ್ರೀಮತಿ ಪೂವಿತ ಎಸ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆ.ಯೂ.ಐ.ಡಿ.ಎಫ್.ಸಿ), ಬೆಂಗಳೂರು
3. ಶ್ರೀ ಶಿವಶಂಕರ್ ಎಸ್, ಐ.ಎಫ್.ಎಸ್., ಅರಣ್ಯ ಸಂರಕ್ಷಣಾಧಿಕಾರಿಗಳು, ವನವಿಕಾಸ, ಬೆಂಗಳೂರು
4. ಶ್ರೀ ವಿಜಯ್ ಬಿ.ಪಿ., ಕೆ.ಎ.ಎಸ್., ನಿರ್ದೇಶಕರು (ಮಾನವ ಸಂಪನ್ಮೂಲ), ಕರ್ನಾಟಕ ವಿದ್ಯುತ್ ಸಾರಿಗೆ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್), ಬೆಂಗಳೂರು
5. ಶ್ರೀ ಆರ್.ಗಿರೀಶ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು
6. ಶ್ರೀ ಎಂ.ಬಿ.ರಾಜೇಶ್‌ಗೌಡ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಲಿಮಿಟೆಡ್, ಬೆಂಗಳೂರು
7. ಶ್ರೀ ಕುಮಾರ್ ಪುಷ್ಕರ್, ಐ.ಎಫ್.ಎಸ್., ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ), ಬೆಂಗಳೂರು
8. ಶ್ರೀಮತಿ ಅನ್ನಪೂರ್ಣ.ಕೆ, ಕೆ.ಎ.ಎಸ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಕಾರ್ಯಾಚರಣೆಗಳು), ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್, ಕೌಶಲ್ಯಾಭಿವೃದ್ಧಿ ಇಲಾಖೆ, ಬೆಂಗಳೂರು.

ಇವರುಗಳು ಸದನದಲ್ಲಿ ಹಾಜರಿರಬೇಕೆನ್ನುವ ಬಗ್ಗೆ ಸದನದ ಗಮನಕ್ಕೆ ತಂದಿದ್ದೇನೆ. ಉಳಿದಿರುವವರು ಎಲ್ಲೆಲ್ಲಿ ಹೋಗಿದ್ದಾರೆ, ಅವರಿಗೆ ಸ್ವಲ್ಪ ಹೇಳಿ.

## 4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ,

1. ಭಾರತ ಸಂವಿಧಾನದ ಅನುಚ್ಛೇದ 243(i) ಮತ್ತು (y) ರ ಮೇರೆಗೆ ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಕುರಿತಾದ ಐದನೇ ರಾಜ್ಯ ಹಣಕಾಸು ಆಯೋಗದ 2026–2030ನೇ ಸಾಲಿನ ವರದಿಯನ್ನು ಸಭೆಯ ಮುಂದಿಡುವುದು;
2. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪ್ರದೇಶ ವ್ಯಾಪ್ತಿಯ ಬೆಂಗಳೂರು ಪಶ್ಚಿಮ, ದಕ್ಷಿಣ, ಉತ್ತರ, ಪೂರ್ವ ಮತ್ತು ಕೇಂದ್ರ ನಗರ ಪಾಲಿಕೆಗಳ 2026–2030ನೇ ಸಾಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಸಭಾಪತಿಯವರು:–** ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, . .

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರುಗಳು ಇವತ್ತು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ನಿಲುವಳಿ ಸೂಚನೆಯಲ್ಲಿ 'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ–ಮಂಡಳಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸುಮಾರು 2.85 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ' ಇದೆ. ಇದು ದಿನನಿತ್ಯ ಇರುವಂತಹ ನಿರ್ದಿಷ್ಟವಾದ ವಿಚಾರವಾಗಿರುವುದರಿಂದ, ನಿರುದ್ಯೋಗ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಇದನ್ನು ನಾನು ದಿನಪತ್ರಿಕೆಯಲ್ಲಿ ಓದಿದ್ದೇನೆ. ಆದ್ದರಿಂದ, ಇದನ್ನು ನಿಯಮ–330 ಅಡಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ ಮೇಲೆ ಅದನ್ನು ಯಾವುದಕ್ಕಾದರೂ ಕೊಡಬಹುದು. ಅದು ತಮ್ಮ ಅಧಿಕಾರ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನು ನಾನು ಓದಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಓದಿರುತ್ತೀರಿ. ತಾವು ಓದದೇ ನಮ್ಮನ್ನು allow ಮಾಡುತ್ತೀರಿಯೇ? Allow ಮಾಡುವುದಿಲ್ಲ. ಆದರೆ, ನಾನು ಏನು ಮಾಡಿದ್ದೇನೆ ಎನ್ನುವುದು ಸದನಕ್ಕೂ ಮತ್ತು ಜನರಿಗೂ ಗೊತ್ತಾಗಬೇಕಲ್ಲವೇ? ಈ ನಿಲುವಳಿ ಸೂಚನೆಯನ್ನು ಓದಿದ ಮೇಲೆ ತಮ್ಮ ಇಚ್ಛಾನುಸಾರ ಮಾಡಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಪರಿಸ್ಥಿತಿ ಏನಾಗಿದೆ ಎಂದರೆ, ನಾನು ನಿಲುವಳಿ ಸೂಚನೆ ಕೊಟ್ಟ ಮೇಲೆ ಅದು ನಿಲುವಳಿ ಸೂಚನೆ ಆಗುವುದಿಲ್ಲ. ಅದು ಬೇರೆನೇ ಆಗುತ್ತದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ಓದಿ. ತಾವು ಹೇಳಿದ್ದು ಕೇಳಬೇಕಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದನದ ಪದ್ಧತಿಯೇನೆಂದರೆ, ಅವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ತಾವು ಕನ್‌ವರ್ಟ್ ಮಾಡಿದ್ದೀರಿ. ಅವರು ನಿಯಮ–330 ಅಡಿ ಪ್ರಸ್ತಾಪ ಮಾಡಬಹುದು. ಈಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಎಲ್ಲಿದೆ ಹೇಳಿ. ತಾವು ಕನ್‌ವರ್ಟ್ . . .

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಮಂಡಿಸಲೇ ಇಲ್ಲ. ಅದು ಹೇಗೆ ಆಗುತ್ತದೆ?

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮದೇ ಆದಂತಹ . . .

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ತಾವು ಮಂಡಿಸಿರಲಿಲ್ಲ. ತಾವು ನೋಟೀಸ್ ಕೊಟ್ಟರೆ ಅದು ಮಂಡಿಸಿದಂತೆಯೇ ಆಗುತ್ತದೆ. ಅದನ್ನು ನಾನು ನೋಡಿರುತ್ತೇನೆ. ಇದನ್ನು ನೋಡಿದ ಮೇಲೆ ಏನು ಮಾಡಬೇಕೆಂಬ ತೀರ್ಮಾನವನ್ನು ಅನೇಕ ಬಾರಿ ಮಾಡಿದ್ದೇನೆ. ತಾವು ಕುಳಿತುಕೊಳ್ಳಿ. ಇವತ್ತು ಹೊಸದಾಗಿ ಕೇಳುತ್ತಿದ್ದೀರಿಯೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸವೂ ನಾನು ಕೇಳಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನು ನಾನು ನೋಡಿದ್ದೇನೆ ಮತ್ತು ಇದನ್ನು ಓದಿದ್ದೇನೆ. ಇದರ ಬಗ್ಗೆ ನನಗೆ ಗೊತ್ತಾಗಿದೆ. ಹೆಚ್ಚು ಚರ್ಚೆ ಮಾಡುವುದಕ್ಕೋಸ್ಕರ ನಿಯಮ–330 ಗೆ ಕನ್‌ವರ್ಟ್ ಮಾಡಿದ್ದೇನೆ ಎಂದು ತಮಗೆ ಹೇಳಿದೆ. ನಿಯಮ–330ಕ್ಕೆ ಏಕೆ ಕನ್‌ವರ್ಟ್ ಮಾಡಿದ್ದೇನೆಂದರೆ, ಚರ್ಚೆಗೆ ಸ್ವಲ್ಪ ಹೆಚ್ಚು ಸಮಯ ಕೊಡುವುದಕ್ಕೆ ಮಾಡಿದ್ದೇನೆ; with good intention. ತಾವು ಓದುತ್ತೇನೆ ಎಂದರೆ, ಓದಿ. ನಾನೇನು ಮಾಡುವುದಕ್ಕೆ ಆಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಹೊಸ ಸಂಪ್ರದಾಯಕ್ಕೆ ಅವಕಾಶ ಕೊಡಬೇಡಿ. ನಾಳೆ ನಿಯಮ-330 ರಡಿ ಬಂದಾಗ ಅವರು ವಿವರವಾಗಿ ಮಾತನಾಡಲಿ. ಇದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ಏನು ತೊಂದರೆ ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾನಾಯಕರೇ, ಇದು ಹೊಸ ಸಂಪ್ರದಾಯ ಅಲ್ಲ. ಸದನದಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಬೇಕು. ಇದರಲ್ಲಿ ಏನಿದೆಯೆಂದರೆ, . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಓದಿ. ಸುಮ್ಮನೆ ಏಕೆ ಗುದ್ದಾಡುತ್ತೀರಾ. ನಾವು ಹೇಳಿದರೆ, ನಮ್ಮ ಮಾತನ್ನು ಕೇಳಬೇಕು.

5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**(ಚರ್ಚೆಗೆ ಅನುಮತಿ ಕೋರಿಕೆ)**

**"ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸುಮಾರು 2.85 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ."**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 59ನೇ ನಿಯಮದ ಮೇರೆಗೆ ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತಿದ್ದೇನೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ–ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸುಮಾರು 2.85 ಲಕ್ಷ ಹುದ್ದೆಗಳನ್ನು ಭರ್ತಿ ಮಾಡದೇ, ರಾಜ್ಯ ಸರ್ಕಾರವು ವಿಳಂಬ ನೀತಿಯನ್ನು ಅನುಸರಿಸುತ್ತಿದೆ. ಕಳೆದ ಹಲವಾರು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿರುವುದರಿಂದ, ರಾಜ್ಯದ ಲಕ್ಷಾಂತರ ಪದವೀಧರರು ಮತ್ತು ಉದ್ಯೋಗಾಕಾಂಕ್ಷಿಗಳ ವಯೋಮಿತಿ ಮೀರುತ್ತಿರುವ ಆತಂಕದಲ್ಲಿದ್ದಾರೆ. ಇದು ಯುವ ಜನತೆಯ ಭವಿಷ್ಯದ ಮೇಲೆ ಕೊಡಲಿ ಪೆಟ್ಟು ನೀಡಿದಂತಾಗಿದೆ. ರಾಜ್ಯ ಸರ್ಕಾರದ ಇಲಾಖೆಗಳಾದ ಕಂದಾಯ, ಶಿಕ್ಷಣ, ಆರೋಗ್ಯ, ಪೊಲೀಸ್, ಲೋಕೋಪಯೋಗಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೇರಿದಂತೆ, ಒಟ್ಟು 43 ಪ್ರಮುಖ ಇಲಾಖೆಗಳಲ್ಲಿ ಹಾಗೂ 100 ಕ್ಕೂ ಹೆಚ್ಚು ನಿಗಮ ಮಂಡಳಿಗಳಲ್ಲಿ 37 ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಸರ್ಕಾರದ ಕೆಲಸ ಕಾರ್ಯಗಳು ಕುಂಠಿತಗೊಂಡಿವೆ. ಒಬ್ಬರೇ ನೌಕರರು ಮೂರ್ನಾಲ್ಕು ಜನರ ಕೆಲಸ ನಿರ್ವಹಿಸುತ್ತಿರುವುದರಿಂದ, ಸಾರ್ವಜನಿಕರ ಕೆಲಸದಲ್ಲಿ ವಿಳಂಬ ಮತ್ತು ಗುಣಮಟ್ಟದ ಕೊರತೆ ಎದ್ದು ಕಾಣುತ್ತಿದೆ ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳು ಸಕಾಲಕ್ಕೆ ನಡೆಯದೆ ಜನ ಸಾಮಾನ್ಯರು ದಿನಗಟ್ಟಲೆ ಅಲೆಯುವಂತಾಗಿದೆ. ಜನಸಾಮಾನ್ಯರಿಗೆ ಸಿಗಬೇಕಾದ ಸೌಲಭ್ಯಗಳು ತಲುಪುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಆಡಳಿತ ವಿಫಲತೆಗೆ ಸಾಕ್ಷಿಯಾಗಿದೆ. ಸರ್ಕಾರಿ ನಿಗಮ ಮಂಡಳಿಗಳು ಮತ್ತು ಸ್ವಾಯತ್ತ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಕೊರತೆಯಿಂದಾಗಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸಮರ್ಪಕ ಮಾರ್ಗದರ್ಶನ ಸಿಗದಂತಾಗಿದೆ. ಆದ್ದರಿಂದ, ಈ ವಿಷಯವು ಅತ್ಯಂತ ಜರೂರಾದ ಹಾಗೂ ಸಾರ್ವಜನಿಕ ಹಿತಾಸಕ್ತಿ ಇರುವುದರಿಂದಾಗಿ ಈ ಗಂಭೀರ ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ನಿಲುವಳಿ ಸೂಚನೆಯಡಿ ಅವಕಾಶ ಮಾಡಿಕೊಡಬೇಕೆಂದು ಸದನದಲ್ಲಿ ಮಂಡಿಸುತ್ತಿದ್ದೇವೆ".

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳಿದ ಹಾಗೆ ನಿಯಮ–330 ಕ್ಕೆ ಕನ್‌ವರ್ಟ್ ಮಾಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ, ಈಗ ತಾವು ನಿಯಮ–330 ಕ್ಕೆ ಚರ್ಚೆಗೆ ಅವಕಾಶ ಕೊಡದೇ, ನಿಲುವಳಿ ಸೂಚನೆಯಲ್ಲಿಯೇ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ, ನಮಗೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ಅನೇಕ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ದಯಮಾಡಿ, ತಾವು ಯೋಚನೆ ಮಾಡಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ದಿನಪತ್ರಿಕೆಯಲ್ಲಿ ಬಂದಿದೆ. ಹಾಗೆಯೇ ಶೂನ್ಯವೇಳೆಯಲ್ಲಿ ಬಂದಿದೆ. ಹೀಗಾಗಿ ಇದನ್ನು ನಿಯಮ–330ಕ್ಕೆ ಕನ್‌ವರ್ಟ್ ಮಾಡಿದ್ದೇನೆ. ಇದಕ್ಕೆ ಸಾಕಷ್ಟು ಸಮಯವನ್ನು ಕೊಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ತಮಗೆ ಬಿಟ್ಟಿದ್ದು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಗಮನ ಸೆಳೆಯುವ ಸೂಚನೆ . . .

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಷಯವಾಗಿರುವುದರಿಂದ, ಅದರದೇ ಆದಂತಹ importance ಬರಬೇಕೆಂದರೆ, ನಿಯಮ–330 ರಡಿ ಚರ್ಚೆ ಮಾಡುವುದು ಬೇಡ. ನಿಯಮ–330 ರಡಿ ಆದರೆ . . .

**ಸಭಾಪತಿಯವರು:–** ಮಾನ್ಯ ಶಶೀಲ್ ಜಿ.ನಮೋಶಿಯವರೇ, ಹಾಗಾದರೆ, ನಿಯಮ–430 ಮಾಡಲೇ . . .

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಸಭಾಪತಿಯವರೇ, ನಿಯಮ–430 ಬೇಡ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ–430 ಯಾವುದು?

(ಮುಂದು)

(271) 10.3.2026 1.30 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಶಶಿಲ್ ಜಿ.ನಮೋಶಿ:–** ಇದು ಮಹತ್ವದ ವಿಷಯವಾಗಿದೆ. ನಿಯಮ 330ರ ಅಡಿ ತೆಗೆದುಕೊಳ್ಳುವುದು ಬೇಡ.

**ಸಭಾಪತಿಯವರು:–** ಈ ವಿಷಯ ದಿನನಿತ್ಯ ಬರುತ್ತಿದೆ. ಈ ಕುರಿತು ಸರ್ಕಾರ ಹೇಳಿಕೆ ಕೊಟ್ಟಿದೆ. ನಿಯಮ 330ರ ಅಡಿಯಲ್ಲಿ ಆದಷ್ಟು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವ ಪ್ರಯತ್ನ ಮಾಡುತ್ತೇನೆ. ಮಾನ್ಯ ಸಭಾನಾಯಕರೆ, ಗಮನ ಸೆಳೆಯುವ ಸೂಚನೆ ಅಡಿ ಮೊದಲನೆಯದಾಗಿ ಮಾನ್ಯ ಐವನ್ ಡಿ'ಸೋಜಾ ಅವರ ವಿಷಯ ಇದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ಇನ್ನೂ ಉತ್ತರ ಬಂದಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಉತ್ತರ ಒದಗಿಸಿ ಕೊಡುತ್ತೇವೆ.

**ಸಭಾಪತಿಯವರು:–** ಇದು ಗಮನ ಸೆಳೆಯುವ ಸೂಚನೆ ಆಗಿರುವುದರಿಂದ ಉತ್ತರವನ್ನು ಓದಬೇಕಾಗುತ್ತದೆ.

**ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು):–** ಮಾನ್ಯ ಸಭಾಪತಿಗಳೆ, ಉತ್ತರ ರೆಡಿಯಾಗುತ್ತಿದೆ.

**ಸಭಾಪತಿಯವರು:–** ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ರಮೇಶ್‌ಬಾಬು ಅವರದ್ದಾಗಿದೆ. ಆದರೆ ಉತ್ತರ ಬಂದಿಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಕೆ.ಶಿವಕುಮಾರ್ ಅವರದ್ದು.

**ಶ್ರೀ ಸಲೀಂ ಅಹ್ಮದ್:–** ಮಾನ್ಯ ಸಭಾಪತಿಗಳೆ, ಇದು ವರ್ಗಾವಣೆಯಾಗಿದೆ.

**ಸಭಾಪತಿಯವರು:–** ವರ್ಗಾವಣೆ ಆಗಿರುವುದನ್ನು ನಮಗೆ ತಿಳಿಸಬೇಕು. ಇದು ನನ್ನ ಗಮನಕ್ಕೂ ಬಂದಿಲ್ಲ. ಮಾನ್ಯ ಶಿವಕುಮಾರ್‌ರವರೇ, ಇದಕ್ಕೆ ಉತ್ತರ ಬಂದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಶಿವಕುಮಾರ್:–** ಮಾನ್ಯ ಸಭಾಪತಿಗಳೆ, ನಾನು ಹೋದ ಅಧಿವೇಶನದಲ್ಲಿ ಈ ಕುರಿತು ಪ್ರಶ್ನೆ ಕೇಳಿದಾಗ 15 ದಿವಸಗಳ ಸಮಯವನ್ನು ತೆಗೆದುಕೊಂಡಿದ್ದರು. ಮತ್ತೆ ಇದೇ ರೀತಿಯಾದರೆ ಆಸಿಡ್ ದಾಳಿಗೆ ಒಳಗಾದವರಿಗೆ ನ್ಯಾಯ ಸಿಗುವುದು ಬೇಡವೇ? ಕಳೆದ ಸಲ ತಾವೇ, 15 ದಿವಸ ಸಮಯ ಕೇಳಿದ್ದಾರೆ ಎಂದು ಹೇಳಿದ್ದೀರಿ. ಆದರೆ ಈ ಸಲವೂ ಅದೇರೀತಿಯಾದರೆ ನಾನು ಯಾವಾಗ ಕೇಳಬೇಕು. ಸಂತ್ರಸ್ತರು ಆಚೆ ಇದ್ದಾರೆ, ಬೇಕಾದರೆ ಅವರನ್ನು ಕರೆದುಕೊಂಡು ಬಂದು ತೋರಿಸುತ್ತೇನೆ. ನೀವು ಅವರನ್ನು ನೋಡಿದರೆ ಕಣ್ಣಲ್ಲಿ ನೀರು ಹಾಕಿಕೊಳ್ಳುತ್ತೀರಿ. ಮುಖದ ಮೇಲೆ ಮೂಗು ಒಂದು ಕಡೆ ಇದೆ; ಕಣ್ಣು ಇನ್ನೊಂದು ಕಡೆ ಇದೆ. 2009ನೇ ಇಸವಿಯಿಂದ ಅವರಿಗೆ ಮನೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅವರಿಗೆ ವಾಸಿಸಲು ಬಾಡಿಗೆ ಮನೆ ಕೂಡ ಸಿಗುತ್ತಿಲ್ಲ. ನನಗೆ ವಿಷಯ ಮಂಡನೆ ಮಾಡಲು ಅವಕಾಶ ಮಾಡಿಕೊಡಬೇಕು. ಉತ್ತರವನ್ನು ಬೇಕಾದರೆ ನಂತರ ಕೊಡಿಸಿ. ಸಂತ್ರಸ್ತರಿಗೆ ಬಹಳ ತೊಂದರೆಯಾಗುತ್ತಿದೆ. ಇರಿ ಎಂದರೆ ಇರುತ್ತಾರೆ; ಬೇಡ ಎಂದರೆ ಸತ್ತು ಹೋಗುತ್ತಾರೆ. ನನಗೆ ವಿಷಯ ಮಂಡನೆಗೆ ಅವಕಾಶ ಕೊಡಿ; ಉತ್ತರ ನಂತರ ಕೊಡಿಸಿ. ಎಷ್ಟು ಸಲ ಈ ವಿಷಯವನ್ನು ಮುಂದಕ್ಕೆ ಹಾಕುತ್ತೀರಿ?

**ಸಭಾಪತಿಯವರು:–** ಮಧ್ಯಾಹ್ನ ಉತ್ತರ ಕೊಡಿಸುತ್ತೇನೆ. ಮಾನ್ಯ ಸಭಾನಾಯಕರೆ, ಗೃಹ ಮಂತ್ರಿಗಳನ್ನು ಮಧ್ಯಾಹ್ನ ಸದನದಕ್ಕೆ ಬರಲು ತಿಳಿಸಿ.

**ಶ್ರೀ ಎನ್.ಎಸ್.ಬೋಸರಾಜು–** ತಿಳಿಸುತ್ತೇನೆ.

**ಸಭಾಪತಿಯವರು:–** ನಿಯಮ ೩೩೦ರ ಅಡಿಯಲ್ಲಿ ಮೊದಲ ವಿಷಯ ಡಾ: ಕೆ. ಗೋವಿಂದರಾಜ್ ಅವರದ್ದಾಗಿದೆ. ಅವರು ಸದನದಲ್ಲಿ ಇಲ್ಲ. ಮುಂದಿನ ವಿಷಯ ಮಾನ್ಯ ಎಸ್. ಕೇಶವ ಪ್ರಸಾದ್ ಅವರದ್ದಾಗಿದೆ. ಮಾನ್ಯ ಕಂದಾಯ ಸಚಿವರು ಉತ್ತರ ಕೊಡಬೇಕಿದೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ವಿಧಾನಸಭೆಯಲ್ಲಿದ್ದಾರೆ. ಈ ಸದನಕ್ಕೆ ಬರುವುದಕ್ಕೆ ಹೇಳಿದ್ದೇನೆ.

**ಸಭಾಪತಿಯವರು:–** ಈ ವಿಷಯ ನನಗೆ ತಿಳಿಸಬೇಕಲ್ಲವೇ? ಮಧ್ಯಾಹ್ನ ಉತ್ತರ ಕೊಡಿಸುತ್ತೀರಾ?

**ಶ್ರೀ ಎನ್.ಎಸ್.ಬೋಸರಾಜು:–** ಕೊಡಿಸುತ್ತೇನೆ.

## 6. ನಿಯಮ 330ರ ಮೇರೆಗೆ ಚರ್ಚೆ

**ಅ) ರಾಜ್ಯ ರಾಜಧಾನಿಯಾದ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣವನ್ನು ಅಂತರಾಷ್ಟ್ರೀಯ ಬಸ್ ನಿಲ್ದಾಣದ ಮಾದರಿಯಲ್ಲಿ ಮರು ಅಭಿವೃದ್ಧಿಪಡಿಸುವ ಕುರಿತು.**

– – – – –

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ನಗರದಲ್ಲಿ ಕೆಂಪೇಗೌಡ ಬಸ್ ನಿಲ್ದಾಣದ ಜಾಗ ಸುಮಾರು 40 ಎಕರೆಯಲ್ಲಿದೆ. ಬಿ.ಎಂ.ಆರ್.ಸಿ.ಎಲ್., ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ಇವರಿಗೆ ಸೀಮಿತವಾದ ಜಾಗವಾಗಿದೆ. ಇದು ಸಾರ್ವಜನಿಕ ಸೇವೆಗೆ ಸೀಮಿತವಾಗಿದ್ದು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ.ಗಳು ಅತ್ಯುತ್ತಮವಾದ ಕೆಲಸ ಮಾಡುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆ ಒಂದು ಜಾಗ ಬೆಂಗಳೂರಿಗೆ ಪ್ರಮುಖವಾಗಿರುವಂಥದ್ದು ಮತ್ತು ಜೀವನಾಡಿಯಂತೆ ಕೆಲಸ ಮಾಡುತ್ತಿದೆ. ಬೆಂಗಳೂರಿನಲ್ಲಿ ಇರುವ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದರೆ ಬಿ.ಎಂ.ಆರ್.ಸಿ.ಎಲ್., ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ. ವ್ಯವಸ್ಥೆಗಳನ್ನು ಸದೃಢಗೊಳಸಬೇಕು, ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ಮಾನ್ಯ ಸಚಿವರು ಕೈಗೊಳ್ಳುತ್ತಿರುವಂತಹ ಕ್ರಮಗಳನ್ನು ಸ್ವಾಗತ ಮಾಡುತ್ತೇನೆ. ನಿಯಮ 330ರ ಅಡಿಯಲ್ಲಿ ಈ ಪ್ರಶ್ನೆ ಏಕೆ ಕೇಳುತ್ತಿದ್ದೇನೆ ಎಂದರೆ, ಅಲ್ಲಿರುವ ಒಟ್ಟು 40 ಎಕರೆ ಜಾಗದಲ್ಲಿ ಬಿ.ಎಂ.ಆರ್.ಸಿ.ಎಲ್.ನವರಿಗೆ 8 ಎಕರೆ ಜಾಗವನ್ನು ಕೊಡಲಾಗಿದೆ. 20 ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಟ್ಟಿದ್ದೇವೆ. 12 ಎಕರೆ ಜಾಗವನ್ನು ಬಿ.ಎಂ.ಟಿ.ಸಿ.ಗೆ ಕೊಟ್ಟಿದ್ದೇವೆ. ಇದು ಕೇವಲ ಬಸ್ ನಿಲ್ದಾಣಕ್ಕೆಂದು ಉಪಯೋಗವಾಗುತ್ತಿದೆ ಮತ್ತು ಕೆಲವು ವಾಣಿಜ್ಯ ಚಟುವಟಿಕೆಗಳು ಮಾತ್ರ ನಡೆಯುತ್ತಿವೆ. 1 ಕೋಟಿ 40 ಲಕ್ಷ ಜನಸಂಖ್ಯೆ ಇರುವಂತಹ ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯನ್ನು ಅತ್ಯುತ್ತಮಗೊಳಸಬೇಕಾದ ಅನಿವಾರ್ಯತೆ ಇದೆ. ನಾನೂ ಕೂಡ ಆ ಸಂಸ್ಥೆಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಕೆ.ಎಸ್.ಆರ್.ಟಿ.ಸಿ.ಯ ಡೈರೆಕ್ಟರ್ ಆಗಿ ಕೆಲಸ ಮಾಡಿರುವುದರಿಂದ ಈ ಜಾಗದ ಪ್ರಾಮುಖ್ಯತೆಯ ಬಗ್ಗೆ ಸದನದ ಗಮನ ಸೆಳೆಯಬಯಸುತ್ತೇನೆ. ಈ ಸ್ಥಳದಲ್ಲಿ ಒಂದು ಅಡಿಗೆ ಕನಿಷ್ಠ 1 ಲಕ್ಷ ರೂಪಾಯಿಗಳಿಂದ 1 ಲಕ್ಷ 20 ಸಾವಿರಗಳವರೆಗೆ ಬೆಲೆ ಇದೆ. ಇಂತಹ ಜಾಗವನ್ನು ನಾವು ಕೇವಲ ಬಸ್ ನಿಲ್ದಾಣಕ್ಕೆಂದು ಬಳಸದೆ, ಆ ಸಂಸ್ಥೆಗೆ ಬರಬೇಕಾದ non-ticketing revenue increase ಮಾಡುವುದಕ್ಕೋಸ್ಕರ ಆ ಜಾಗವನ್ನು ಒಂದು commercial hub ಆಗಿ integrated transport hub ಆಗಿ ಬೆಳಸುವಂಥದ್ದು ರಾಜ್ಯ ಸರ್ಕಾರದ ಕೆಲಸವಾಗಿದೆ. 6,500-7000 ಬಿ.ಎಂ.ಟಿ.ಸಿ. ಬಸ್ಸುಗಳು ಬಂದು

ಹೋಗುತ್ತವೆ. 2,500 ಕೆ.ಎಸ್.ಆರ್.ಟಿ. ಬಸ್ಸುಗಳು ಬಂದು ಹೋಗುತ್ತವೆ. ಅಲ್ಲದೇ ಅಲ್ಲಿ ಮೆಟ್ರೋ ಕನೆಕ್ಷನ್ ಕೂಡ ಇದೆ. ಬೆಂಗಳೂರು ನಗರ ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿದೆ. 1 ಕೋಟಿ 40 ಲಕ್ಷ ಜನಸಂಖ್ಯೆ ಇರುವ ಈ ನಗರಕ್ಕೆ ಉತ್ತಮವಾದ ಸಾರಿಗೆ ವ್ಯವಸ್ಥೆಯ ಅವಶ್ಯಕತೆ ಇರುತ್ತದೆ. ಆದರೆ ಈಗಿರುವ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿವೆ. ಇಂತಹ ಸಂಸ್ಥೆಗಳು ಹೆಚ್ಚು ಲಾಭ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ನಾವು non-ticketing revenue increase ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. 25-30 ಸಾವಿರ ಕೋಟಿ ಬೆಲೆ ಬಾಳುವ ಜಮೀನನ್ನು monetize ಮಾಡಿಕೊಳ್ಳುವ ಅನಿವಾರ್ಯತೆ ಇದೆ. ಆ ಜಾಗದಲ್ಲಿರುವ ಬಸ್ ನಿಲ್ದಾಣದ ಜೊತೆಗೆ, 32 ಎಕರೆ ಜಮೀನನ್ನು ಅಭಿವೃದ್ಧಿಗೊಳಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಪಿ.ಪಿ.ಪಿ. ಮಾದರಿಯಲ್ಲಿ ಪ್ರಯತ್ನ ಮಾಡುತ್ತಿದ್ದು ಇದಕ್ಕೆ ಒಂದು ಏಜೆನ್ಸಿಯನ್ನು ಗುರುತು ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಹಿಂದೆ ಮಾನ್ಯ ಖರ್ಗೆಯವರು ಸಾರಿಗೆ ಮಂತ್ರಿಯಾಗಿದ್ದಾಗ, ಆ ಜಾಗದಲ್ಲಿ ಸಿಂಗಾಪುರ ಮಾದರಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಬಸ್ ನಿಲ್ದಾಣವನ್ನಾಗಿ ಮಾಡಬೇಕೆಂದು ಯೋಜನೆ ಮಾಡಿದ್ದರು. Commercial hub ಕಟ್ಟಬೇಕು, ಅಲ್ಲಿ ಸರ್ಕಾರಿ ಕಚೇರಿಗಳು ಬರಬೇಕು, shopping complex ಬರಬೇಕು, Star hotel ನಿಂದ ಹಿಡಿದು common hotel ಸ್ಥಾಪನೆ ಮಾಡುವಂಥದ್ದು ಮಾಡಬೇಕಾಗುತ್ತದೆ. ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ನಗರಗಳ ಪೈಕಿ ಉತ್ತಮವಾದ transport hub ಮಾಡಬೇಕು. ಸಿಂಗಾಪುರ, ಹಾಂಕಾಂಗ್, ಟೋಕಿಯೋ ನಗರಗಳಲ್ಲಿರುವಂತೆ ವ್ಯವಸ್ಥೆ ಮಾಡಬೇಕು. ಆದರೆ ಇವತ್ತು ಬಿ.ಎಂ.ಟಿ.ಸಿ. ನೂರಾರು ಕೋಟಿ ನಷ್ಟದಲ್ಲಿ ನಡೆಯುತ್ತಿದೆ. ಇಂತಹ ಸಾರಿಗೆ ಸಂಸ್ಥೆಗಳಿಂದ ಸರ್ಕಾರ ವರಮಾನ ಪಡೆದುಕೊಳ್ಳುವುದು ಕಷ್ಟದ ಕೆಲಸ ಆಗಿರುತ್ತದೆ. ನಿಗಮಗಳು ಸ್ವಂತ non-ticketing revenue ಪಡೆದುಕೊಳ್ಳಬೇಕಾದರೆ ನಾವು ಆ ಜಾಗವನ್ನು monetize ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ರೂ. 30,000 ಕೋಟಿ ಬೆಲೆ ಬಾಳುವ ಜಾಗದಲ್ಲಿ ಕೇವಲ ನಾಲ್ಕೈದು commercial complex, hotel ಕಟ್ಟಿ, ಬಸ್ ಟಿಕೆಟ್‌ನ ಆದಾಯದಲ್ಲಿ ನಡೆಸುವುದಾದರೆ ಸಂಸ್ಥೆಗಳಿಗೆ ವರಮಾನ ಬರುವುದಕ್ಕೆ ಸಾಧ್ಯವಿಲ್ಲ. ಈ ಸಂಸ್ಥೆಗಳಿಗೆ ವರಮಾನ ಬರಬೇಕು ಎನ್ನುವುದಾದರೆ ಅಲ್ಲಿ ವರ್ಷಕ್ಕೆ ರೂ. 5,000-10,000 ಕೋಟಿ ವರಮಾನ ಬರುವ ಹಾಗೆ monetize ಮಾಡುವ ಅನಿವಾರ್ಯತೆ ಇದೆ. Transit oriented development ಮಾಡುವುದರ ಜೊತೆಗೆ ಅಲ್ಲಿ public connectivity ಗೆಂದು ಮೆಟ್ರೋ ಇದೆ, ಮೆಟ್ರೋ ಜೊತೆ ಬಿ.ಎಂ.ಟಿ.ಸಿ., ಇದರ ಜೊತೆ ಕೆ.ಎಸ್.ಆರ್.ಟಿ.ಸಿ. ಮತ್ತು ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಇದೆ.

(ಮುಂದು)

(272) 10-3-2026 1.40 ಡಿಎಸ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):-** ಅಲ್ಲಿ ನೋಡಿದರೆ ಇಡೀ ರಾಜ್ಯದ ಜನ ಬರತಕ್ಕಂಥ ಬೆಂಗಳೂರು ನಗರದ ಜಾಗದಲ್ಲಿ, ಮಲೇಷಿಯಾದಲ್ಲಿ Twin Towers ನೋಡುವುದಕ್ಕೆ ಇಡೀ ವಿಶ್ವದ ಜನರು ಬರುತ್ತಾರೆ. ನಾವು 4

ಟವರ್‌ಗಳನ್ನು ನಿರ್ಮಾಣ ಮಾಡಿ, ಅಲ್ಲಿ ಸರ್ಕಾರಿ ಕಛೇರಿಗಳನ್ನು ತರುವಂಥದ್ದು ಇರಬಹುದು ಅಥವಾ ಐ.ಟಿ. ಹಬ್‌ಗಳನ್ನು ಮಾಡುವಂತಹ ವಿಚಾರ ಇರಬಹುದು ಅಥವಾ commercial entertainment centres ಮಾಡತಕ್ಕಂಥ ವಿಚಾರ ಇರಬಹುದು, ಜನಗಳಿಗೆ connectivity ಆಗುವಂತಹ ಆ ಒಂದು ಹೃದಯ ಭಾಗದಲ್ಲಿರುವಂತಹ ಮೆಜಿಸ್ಟಿಕ್ ಅನ್ನು ನಾವು ಅಭಿವೃದ್ಧಿಗೊಳಿಸಿದ್ದೇ ಆದರೆ P.P.P (Private Public Participation) model ನಲ್ಲಿ ಮಾಡಿದ್ದೇ ಆದಲ್ಲಿ ಖಂಡಿತವಾಗಿಯೂ ಕೂಡ ಕಾರ್ಪೋರೇಶನ್‌ಗಳಿಗೆ, ಬಿ.ಎಂ.ಟಿ.ಸಿ.,ಗೆ ಮತ್ತು ಕೆ.ಎಸ್.ಆರ್.ಟಿ.ಸಿ.,ಗೆ ಉತ್ತಮವಾದ ವರಮಾನ ಬರುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಕೇವಲ ಅದನ್ನು ಒಂದು ಬಸ್ ನಿಲ್ದಾಣವಾಗಿ ಅಭಿವೃದ್ಧಿಪಡಿಸುವುದು ಅಥವಾ ಸಣ್ಣ ಕಮರ್ಷಿಯಲ್ ಹಬ್ ಆಗಿ ಮಾಡುವಂಥದ್ದನ್ನು ಬಿಟ್ಟು ಅದನ್ನು ಉತ್ತಮವಾಗಿರುವಂತಹ ಅಂತರರಾಷ್ಟ್ರೀಯ ಮಟ್ಟದ ಒಂದು ಟ್ರಾನ್ಸ್ ಪೋರ್ಟ್ ಹಬ್ ಆಗಿ ಮಾಡುವಂತಹ ಕೆಲಸ ಮಾಡಬೇಕು. That should become another finest model in the Country ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ, ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಅತಿಯಾದ ಅನುಭವ ಇರುವಂತಹ ಸಂದರ್ಭದಲ್ಲಿ ಅವರ ಕಾಲದಲ್ಲಿ ಕೆಲಸ ಆಗಬೇಕೆನ್ನುವ ಕಾಳಜಿಯಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೇವಲ ಅಲ್ಲಿ commercial entertainment, non–ticketing drive ಮಾತ್ರ ಅಲ್ಲ, ಅಲ್ಲಿ digital advertisements ನಿಂದ ಹಣ ಬರುವುದಕ್ಕೆ ಸಾಧ್ಯವಾಗುತ್ತದೆ. ಮಲ್ಟಿ–ಲೆವಲ್ ಕಾರ್ ಪಾರ್ಕಿಂಗ್‌ಗಳನ್ನು ಕೂಡ ಮಾಡಬಹುದು. ಏಕೆಂದರೆ, ಮೆಜಿಸ್ಟಿಕ್‌ನಲ್ಲಿರುವ ಅಕ್ಕಪಕ್ಕ ರಸ್ತೆಗಳೆಲ್ಲವೂ ಜನಜಂಗುಳಿಯಿಂದ ತುಂಬಿರುವಂತಹ ಸಂದರ್ಭದಲ್ಲಿ ಟ್ರಾಫಿಕ್ ಜಾಮ್ ಆಗುವಂಥದ್ದನ್ನು ದಿನನಿತ್ಯ ನೋಡುತ್ತಿದ್ದೇವೆ. ಅವೆಲ್ಲವನ್ನು ನಾವು ರೆಗ್ಯುಲರೈಸ್ ಮಾಡಬೇಕು, ಸರಿ ಮಾಡಬೇಕು ಎನ್ನುವುದಾದರೆ ನಾವು ಸರಿಯಾದಂತಹ ಪಾರ್ಕಿಂಗ್ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಪಾರ್ಕಿಂಗ್ ವ್ಯವಸ್ಥೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಸಾವಿರಾರು, ಲಕ್ಷಾಂತರ ಜನರು ಬರುತ್ತಾರೆ. ಸುಮಾರು 6 ಲಕ್ಷದಿಂದ 8 ಲಕ್ಷದವರೆಗೂ ಜನರು ಅಲ್ಲಿ footfalls ಇರುವಂತಹ ಸಂದರ್ಭದಲ್ಲಿ ನಾವು ಸರಿಯಾದ ಮಲ್ಟಿ–ಲೆವಲ್ ಪಾರ್ಕಿಂಗ್ ವ್ಯವಸ್ಥೆಗಳನ್ನು ಮಾಡಿಕೊಡಬೇಕು ಎನ್ನುವ ಮನವಿ ಮಾಡುತ್ತಿದ್ದೇನೆ. ಒಂದು ಕಡೆ ಪಾರ್ಕಿಂಗ್ ವಿಚಾರ ಇರಬಹುದು, ಮತ್ತೊಂದು ಕಡೆ ಕಛೇರಿಗಳು ಇರಬಹುದು. ಈಗ ಕರ್ನಾಟಕ ರಾಜ್ಯದ ರಾಜಧಾನಿಯಲ್ಲಿ ನಾವು ನೋಡಿದ್ದೇವೆ, ಹೆಬ್ಬಾಳದಲ್ಲಿ ಒಂದು ಕಛೇರಿ ಇದ್ದರೆ ಮತ್ತೊಂದು ಕಛೇರಿ ಜಯನಗರದಲ್ಲಿ ಇರುತ್ತದೆ. ಒಂದು ಕಛೇರಿ ಜಯನಗರದಲ್ಲಿದ್ದರೆ, ಇನ್ನು ಯಾವುದೋ ಕಛೇರಿ ವಿಜಯನಗರದಲ್ಲಿ ಇರುತ್ತದೆ. ಜನ ಇಲ್ಲಿಂದ ಅಲ್ಲಿಗೆ ಓಡಾಡುತ್ತಾ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಸ್ತಿಯಾಗುತ್ತದೆಯೇ ಹೊರತು ಟ್ರಾಫಿಕ್ ಕಡಿಮೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕೋಸ್ಕರ ಟ್ರಾಫಿಕ್ ಏನಾದರೂ ಕಡಿಮೆ ಮಾಡಬೇಕೆನ್ನುವ ದೃಷ್ಟಿಕೋನ ಇದ್ದರೆ ಬೆಂಗಳೂರು ನಗರವನ್ನು ಪ್ರೀತಿ ಮಾಡತಕ್ಕಂಥ ಎಲ್ಲರೂ ಕೂಡ ಆ ಒಂದು ಪ್ರಾಜೆಕ್ಟ್‌ಗೆ

ಸಹಮತವನ್ನು ವ್ಯಕ್ತಪಡಿಸುತ್ತಾರೆ ಎನ್ನುವ ಭಾವನೆ ನನಗಿದೆ ಎಂದು ಹೇಳಬಯಸುತ್ತಿದ್ದೇನೆ. ಮಾನ್ಯ ವೆಂಕಟೇಶ್‌ರವರೇ, ನೀವು ಕೇಳಬೇಕು ಅಷ್ಟೆ, ನೋಡುವ ಹಾಗೆ ಇಲ್ಲ.

**ಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ಅವರಿಗೆ ಏನು ಹೇಳುವ ಹಾಗಿಲ್ಲ, ಅವರಿಗೆ ಹೇಳದರೆ ಮತ್ತೆ ಬೇರೆ ಹೇಳುತ್ತಾರೆ.

**ಶ್ರೀ ಕೆ.ವೆಂಕಟೇಶ್ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ನಾವು ಏನೇನು ಜ್ಞಾಪಕ ಇಟ್ಟುಕೊಳ್ಳುವುದು? ಮುಖ್ಯವಾಗಿರುವುದನ್ನು ಹೇಳದರೆ ಅದಕ್ಕೆ ಉತ್ತರ ಕೊಡಬಹುದು.

**ಸಭಾಪತಿಯವರು:–** ನೀವು ಉತ್ತರ ಹೇಳುವುದು ನಿಮ್ಮ ಕರ್ಮ, ನೀವು ಉತ್ತರ ಹೇಳ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಈಗ ನನ್ನ ಸ್ಪೀಡ್ ಕಡಿಮೆ ಮಾಡಿದ್ದೇನೆ. ಮಾನ್ಯ ರಾಮಲಿಂಗಾರೆಡ್ಡಿಯವರು ಅಲ್ಲಿಂದ ನೋಡುತ್ತಿದ್ದಾರೆ. ಏಕೆಂದರೆ, ಅವರ ಮೇಲೆ ನನಗೆ ಅಪಾರವಾದ ನಂಬಿಕೆ ಇದೆ. ನಾನು ಏಕೆ ಈ ವಿಚಾರಗಳನ್ನು ಹೇಳುತ್ತಿದ್ದೇನೆಂದರೆ, ಹಲವಾರು ಕಛೇರಿಗಳು ಹಲವಾರು ದಿಕ್ಕುಗಳಲ್ಲಿರುವಂತಹ ಸಂದರ್ಭದಲ್ಲಿ ಜನರು ಒಂದು ಜಾಗದಿಂದ ಮೆಜೆಸ್ಟಿಕ್‌ಗೆ, ಸಂಗೊಳ್ಳಿ ರಾಯಣ್ಣ ರೈಲ್ವೆ ಸ್ಟೇಷನ್‌ಗೆ ಬಂದು ಅಲ್ಲಿಂದ ಜಯನಗರಕ್ಕೆ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಗೆ ಹೋಗುತ್ತಾರೆ. ಅಲ್ಲಿಂದ ಮತ್ತೆ ಬಸವನಗುಡಿಯಲ್ಲಿರುವ ಮತ್ತೊಂದು ಕಛೇರಿಗೆ ಹೋಗಬೇಕಾಗುತ್ತದೆ. ಅಲ್ಲಿಂದ ಕೃಷಿ ವಿಶ್ವವಿದ್ಯಾಲಯಕ್ಕೆ ಬರಬೇಕಾದರೆ ಹೆಬ್ಬಾಳಕ್ಕೆ ಬರಬೇಕಾಗುತ್ತದೆ. ಈ ರೀತಿ ಎಲ್ಲಾ ಕಡೆ ವಾಹನಗಳು ಓಡಾಡುತ್ತಿದ್ದರೆ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ.

**ಸಭಾಪತಿಯವರು:–** ನೀವು ಯಾರಿಗೆ ಹೇಳುತ್ತಿದ್ದೀರಿ? ನನ್ನ ಕಡೆ ಮುಖ ಮಾಡಿ, ಆ ಕಡೆ ಏಕೆ ನೋಡುತ್ತೀರಿ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಮಂತ್ರಿಗಳೆಲ್ಲರೂ ಕೇಳಸಿಕೊಳ್ಳುತ್ತಿದ್ದಾರೆ. ನಾನು ಸದನಕ್ಕೆ ಹೇಳುತ್ತಿದ್ದೇನೆ. ನಾನು ತಮಗೆ ಕ್ಷಮೆ ಕೇಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ಹಲವಾರು ಕಡೆಗಳಲ್ಲಿ ಬೆಂಗಳೂರಿನ ಕಛೇರಿಗಳು ಡಿವೈಡ್ ಆಗಿರುವ ಸಂದರ್ಭದಲ್ಲಿ ಜನರು ಬೆಂಗಳೂರು ನಗರಕ್ಕೆ ಬಸ್ಸುಗಳಲ್ಲಿ ರೈಲ್ವೆ ನಿಲ್ದಾಣಕ್ಕೆ ಬರುತ್ತಾರೆ. ಅಲ್ಲಿಂದ ಮತ್ತೆ ಟ್ಯಾಕ್ಸಿ, ಆಟೋ, ದ್ವಿಚಕ್ರ ವಾಹನಗಳಲ್ಲಿ ಬರುತ್ತಾರೆ.

**ಸಭಾಪತಿಯವರು:–** ಏನು ಮಾಡಬೇಕು ಎಂಬುದನ್ನು ಹೇಳ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಬಗ್ಗೆ ಮಾತನಾಡುವುದಕ್ಕೆ ಸ್ವಲ್ಪ ಸಮಯ ಕೊಡಬೇಕು. ನಾನು ಮಾತನಾಡುವಂತಹ ವಿಚಾರಗಳು ಹಲವಾರು ಇರುತ್ತವೆ. ಅದಕ್ಕೆ ನಾನು ಫಾಸ್ಟ್ ಆಗಿ ಮಾತನಾಡುತ್ತೇನೆ. ಈಗ ಸ್ಲೋ ಆಗಿ ಮಾತನಾಡುತ್ತಿರುವುದರಿಂದ ಇನ್ನು 5 ನಿಮಿಷ ಕಾಲಾವಕಾಶ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಸಭಾಪತಿಯವರು:–** ನೀವು ಬೆಳಗಾವಿಯಾದರೆ ಜಾಸ್ತಿ ಆಸಕ್ತಿ ತೆಗೆದುಕೊಳ್ಳಿ, ಬೆಂಗಳೂರಿಗೆ ಏಕೆ ಆಸಕ್ತಿ ತೆಗೆದುಕೊಳ್ಳುತ್ತಿದ್ದೀರಿ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಹುಟ್ಟಿರುವುದು ಇಲ್ಲೇ, ನಾನು ಮದುವೆಯಾಗಿರುವುದು ಅಲ್ಲಿ. ತವರು ಮನೆಗೆ ಸ್ವಲ್ಪ ಪ್ರೀತಿ ಇರಬೇಕಲ್ಲವೇ? ತಪ್ಪಿದ್ದರೆ ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಹೆಂಡತಿ ಊರನ್ನು ಬಿಡುವ ಹಾಗಿಲ್ಲ, ಆದರೆ ಹುಟ್ಟಿರುವಂಥದ್ದು ಬೆಂಗಳೂರು ಆಗಿರುವುದರಿಂದ ಅದನ್ನು ಬಿಡುವುದಕ್ಕಾಗುವುದಿಲ್ಲ. ಅದರಲ್ಲೂ ಮಾನ್ಯ ರಾಮಲಿಂಗಾರೆಡ್ಡಿಯವರ ವಿಚಾರ ಬಂದಾಗ ಮಾತನಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತಿದ್ದೇನೆಂದರೆ, ಈ 32 ಎಕರೆ ಜಮೀನಿಗೆ ಮಾರ್ಕೆಟ್ ವ್ಯಾಲ್ಯೂ ಇರುವಂಥದ್ದು ಸುಮಾರು ಸಾವಿರಾರು ಕೋಟಿ ರೂಪಾಯಿಗಳು. ಸುಮಾರು 25,000 ಕೋಟಿ ರೂಪಾಯಿಗಳಿಂದ 30,000 ಕೋಟಿ ರೂಪಾಯಿಗಳವರೆಗೆ ಇರುವಂಥದ್ದನ್ನು monetize ಮಾಡಿ ಕೆ.ಎಸ್.ಆರ್.ಟಿ.ಸಿ., ಮತ್ತು ಬಿ.ಎಂ.ಟಿ.ಸಿ. ಸಂಸ್ಥೆಗಳಿಗೆ ಸುಮಾರು 10,000 ಕೋಟಿ ರೂಪಾಯಿಗಳ ವರಮಾನ ಬಂದಿದ್ದೇ ಆದರೆ ಸರ್ಕಾರಕ್ಕೆ ಹೋಗಿ ಬೇಡುವಂತಹ ಅವಶ್ಯಕತೆ ಇರುವುದಿಲ್ಲ. ಆ ಸಂಸ್ಥೆಗಳು, ಕಾರ್ಪೊರೇಶನ್‌ಗಳು autonomous ಆಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಯಸುತ್ತಿದ್ದೇನೆ. Unless and until we modernize and unless and until monetize that particular land, we cannot survive ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಬೆಂಗಳೂರು ನಗರ ಎಷ್ಟು ವೇಗವಾಗಿ ಬೆಳೆಯುತ್ತಿದೆ ಎಂದರೆ traffic congestion ಅನ್ನು ಕಡಿಮೆ ಮಾಡಬೇಕೆಂದರೆ ಇಂತಹ ಒಂದು Transport Hub ಅನ್ನು ಅಭಿವೃದ್ಧಿಗೊಳಿಸಬೇಕಾಗುತ್ತದೆ. ಅದಕ್ಕೆ P.P.P model ನಲ್ಲಿ ಅಲ್ಲದೆ ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಅವರ ಬೆಂಬಲವನ್ನು ಕೇಳಬೇಕಾಗುತ್ತದೆ. ಏಕೆಂದರೆ, ಇವತ್ತಿನ ದಿವಸ more than forty percent of the I.T exports will be done from Bengaluru ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹಾಗಾಗಿ ಕೇಂದ್ರ ಸರ್ಕಾರಕ್ಕೆ ನಮ್ಮಿಂದ ಬಹಳಷ್ಟು ತೆರಿಗೆ ಬರುತ್ತಿರುವುದರಿಂದ ಇಂತಹ ಯೋಜನೆಗೆ ಕೇಂದ್ರ ಸರ್ಕಾರಕ್ಕೂ ಕೂಡ ಮನವಿ ಮಾಡಿ ಸಾವಿರಾರು ಕೋಟಿ ರೂಪಾಯಿಗಳ ಬೆಂಬಲ, ಸಹಾಯವನ್ನು ತೆಗೆದುಕೊಂಡು ನಾವು ಇದನ್ನು ಬಳಸಿದ್ದೇ ಆದರೆ ವಿಶ್ವದಲ್ಲಿ ಮಾದರಿಯಾಗಿರುವಂತಹ ಸಿಂಗಾಪುರ ಮಾದರಿಯಲ್ಲಿ ಯಾವುದಾದರೊಂದು ಬಸ್ ನಿಲ್ದಾಣವನ್ನು ಮಾಡಿದ್ದೇ ಆದರೆ ಬೆಂಗಳೂರು ನಗರದ ನಾಗರಿಕರು ಖಂಡಿತವಾಗಿಯೂ ಖುಷಿ ಪಡುತ್ತಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅಲ್ಲಿ Administrative Office, Corporate Office and Software Office ಗಳು ಬರಬೇಕಾಗುತ್ತದೆ. ಏಕೆಂದರೆ ಅಲ್ಲಿ ಸುಮಾರು 32 ಎಕರೆ ಜಮೀನಿನಲ್ಲಿ ನಾವು ಏನೆಲ್ಲಾ ಮಾಡಬಹುದು ಎಂದು ಯೋಚನೆ ಮಾಡಿ. ಅಲ್ಲಿ ಆಕರ್ಷಣೀಯವಾದ ಜಾಗವನ್ನು ಮಾಡಬೇಕಾಗುತ್ತದೆ. ನಾವು ಇವತ್ತಿನ ದಿವಸ ವಿಶ್ವದಲ್ಲೇ

ಮಾದರಿಯಾಗಿರುವಂತಹ 'ಟರ್ಮಿನಲ್-2' ಮಾಡಿ ನಾವೆಲ್ಲರೂ ಹೆಮ್ಮೆಯಿಂದ ನಮ್ಮ ಬೆಂಗಳೂರು ನಗರದಲ್ಲಿರುವಂತಹ 'ಟರ್ಮಿನಲ್-2' ಎಂದು ಹೇಳುತ್ತೇವೆ. ಆ ರೀತಿಯಾದಂತಹ ಒಂದು ಬಸ್ ಟರ್ಮಿನಲ್ ಮಾಡಿದ್ದೇ ಆದರೆ ಖಂಡಿತವಾಗಿಯೂ ಜನರು ದ್ವಿಚಕ್ರ ವಾಹನಗಳನ್ನು, ಕಾರುಗಳನ್ನು ಬದಿಗೊತ್ತಿ ಬಸ್‌ಗಳಲ್ಲಿ ಓಡಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾವು ಬಸ್‌ಗಳ ಸಂಖ್ಯೆಯನ್ನು ಇಂಕ್ರೀಸ್ ಮಾಡಬೇಕಾಗುತ್ತದೆ. ರಸ್ತೆಗಳಲ್ಲೂ ಬಸ್‌ಗಳ ಸಂಖ್ಯೆ ಹೆಚ್ಚು ಮಾಡಿ ಖಾಸಗಿ ಕಾರುಗಳನ್ನು, ದ್ವಿಚಕ್ರ ವಾಹನಗಳನ್ನು ಕಡಿಮೆ ಮಾಡಬೇಕು ಎನ್ನುವುದಾದರೆ we have to give quality Bus Stations and Buses ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅದರ ಜೊತೆಗೆ pollution rate ಅನ್ನು ಕಡಿಮೆ ಮಾಡಬೇಕಾದರೆ, ಟ್ರಾಫಿಕ್ ಅನ್ನು ಕಡಿಮೆ ಮಾಡಬೇಕು ಎನ್ನುವುದಾದರೆ we have to concentrate and invest money in the public transport, that becomes the lifeline of the Bengaluru ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಬೆಂಗಳೂರಿನ ಜೀವನಾಡಿಯಾಗಿರುವಂತಹ ಬಿ.ಎಂ.ಟಿ.ಸಿ. ಬಸ್ ಅನ್ನು ಅಭಿವೃದ್ಧಿಪಡಿಸಬೇಕಾದರೆ ಅದಕ್ಕೆ ವರಮಾನ ಬರುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಯಾವಾಗಲೂ ಸರ್ಕಾರ ಅಥವಾ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಸಂಸ್ಥೆಯನ್ನು ನಡೆಸುವುದಕ್ಕೆ ಸಾಧ್ಯವೇ ಇಲ್ಲದಿರುವ ಕಾರಣಕ್ಕೋಸ್ಕರ ಬಿ.ಎಂ.ಟಿ.ಸಿ.ಯಲ್ಲಿ ಸುಮಾರು 1,000 ಎಕರೆ ಜಮೀನು ಇರತಕ್ಕಂಥ ಒಂದು ಸಂಸ್ಥೆಯಾಗಿರುವುದರಿಂದ ಆ ಮೆಜೆಸ್ಟಿಕ್ ಜಾಗವನ್ನು ಸೇರಿಸಿಕೊಂಡು ಅದನ್ನೆಲ್ಲಾ ಅಭಿವೃದ್ಧಿಪಡಿಸಿದ್ದೇ ಆದರೆ ಖಂಡಿತವಾಗಿಯೂ ಆ ಬಿ.ಎಂ.ಟಿ.ಸಿ. ಸಂಸ್ಥೆ ಉನ್ನತ ಸ್ಥಿತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಹಾಗಾಗಿ ಕೊನೆಯದಾಗಿ ಹೇಳುವುದಾದರೆ, ಅಲ್ಲಿರುವಂತಹ 3-4 ಟವರ್‌ಗಳನ್ನು tallest towers ಮಾಡಿ ಭಾರತದಲ್ಲೇ ಉದ್ದನೆಯ ಮತ್ತು ಎತ್ತರದ ಟವರ್‌ಗಳನ್ನು ಕಟ್ಟಿದ್ದೇ ಆದರೆ it can become one of the attractive places in the State of Karnataka ಎಂದು ಹೇಳುತ್ತೇನೆ. Commercially also it will become viable ಎಂದು ಹೇಳುತ್ತೇನೆ. ಸರ್ಕಾರದಲ್ಲಿ ಹಣ ಇಲ್ಲದೆ P.P.P. model or Foreign Direct Investment ತಂದು ಇದನ್ನು ವಿಶ್ವಮಾನ್ಯ ನಗರದಲ್ಲಿ ವಿಶ್ವಮಾನ್ಯ ಕಟ್ಟಡವನ್ನು ಕಟ್ಟತಕ್ಕಂಥ ಕೆಲಸ ಮಾನ್ಯ ರಾಮಲಿಂಗಾರೆಡ್ಡಿಯವರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಮೆಜೆಸ್ಟಿಕ್ ಏರಿಯಾವನ್ನು ಅಭಿವೃದ್ಧಿಪಡಿಸುವಂತಹ ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆಯೊಂದಿಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ನಾನು ಉಪ ಪ್ರಶ್ನೆ ಕೇಳುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಾಗರಾಜುರವರು ಹಿಂದೆ ಬಿ.ಎಂ.ಟಿ.ಸಿ. ಸಂಸ್ಥೆಯ ಅಧ್ಯಕ್ಷರಾಗಿದ್ದರು. ಅವರು ಪ್ರಶ್ನೆ ಕೇಳಿದ್ದಾರೆ, ಉತ್ತರವನ್ನು ಪೂರ್ತಿ ಅವರೇ ಕೊಟ್ಟುಬಿಟ್ಟಿದ್ದಾರೆ. ನಾನೇನು ಉತ್ತರ ಕೊಡುವ ಹಾಗಿಲ್ಲ. 40 ಎಕರೆ ಜಾಗ ಇದೆ. ಅದರಲ್ಲಿ 8

ಎಕರೆ ಬಿಟ್ಟರೆ ಇನ್ನೂ 32 ಎಕರೆ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ.,ಯಲ್ಲಿ ಇದೆ. ಪ್ರತಿ ದಿನ ಅಲ್ಲಿಂದ ಹನ್ನೊಂದೂವರೆ ಸಾವಿರ ಟ್ರಿಪ್ಸ್ ಹೋಗುತ್ತದೆ. ಹಿಂದೆ ಕಟ್ಟಿ ಸುಮಾರು 40-50 ವರ್ಷಗಳಾಗಿವೆ. ಶ್ರೀ ಆರ್. ಗುಂಡೂರಾವ್‌ರವರು ಉದ್ಘಾಟನೆಯನ್ನು ಮಾಡಿದ್ದರು. ಅದಕ್ಕಿಂತ ಮುಂಚೆ ಅದನ್ನು ಪ್ರಾರಂಭ ಮಾಡಿದ್ದರು. ಹಾಗೆಲ್ಲಾ 2000-3000 ಟ್ರಿಪ್ಸ್ ಇತ್ತು. ಈಗ ಜಾಸ್ತಿಯಾಗಿದೆ. ಆದ್ದರಿಂದ ನಮ್ಮ ಅವಶ್ಯಕತೆಗೆ ತಕ್ಕ ಹಾಗೆ ಈಗ ಹೊಸದಾಗಿ ಒಂದು ಟವರ್ ಮಾಡಬೇಕು. ಹಿಂದೆ ನಾನು ಇದೇ ಇಲಾಖೆಯ ಸಚಿವನಾಗಿದ್ದಾಗ ಪ್ರಯತ್ನ ಮಾಡಿದ್ದೆ. ಆದರೆ ಆಗಲಿಲ್ಲ. ಈಗ ಅದು ಖಂಡಿತವಾಗಿಯೂ ಆಗಲೇಬೇಕಾಗಿದೆ. ಈಗಾಗಲೇ Transaction Advisor-M/S Resurgent India Limited ರವರನ್ನು ಕೂಡ ತೆಗೆದುಕೊಂಡಿದ್ದೇವೆ. ಅವರು ದಿನಾಂಕ 15.11.2025 ರಂದು ಕಾರ್ಯಾದೇಶ ಪತ್ರವನ್ನು ಕೊಟ್ಟಿದ್ದೇವೆ. ಅವರಿಗೆ 42 ವಾರಗಳ ಸಮಯ ಕೊಟ್ಟಿದ್ದೇವೆ. ಅವರು ದಿನಾಂಕ 15.09.2026ಕ್ಕೆ ಅವರು ವರದಿ ಕೊಡುತ್ತಾರೆ. ಅವರ ವರದಿ ಬಂದ ಮೇಲೆ ನಗರದ ಮಂತ್ರಿಗಳು, ಶಾಸಕರು, ಟ್ರಾನ್ಸ್‌ಪೋರ್ಟ್ ನಲ್ಲಿ ಯಾರ್ಯಾರು ತಜ್ಞರು ಇರುತ್ತಾರೆ ಅವರೆನ್ನೆಲ್ಲಾ ಕರೆಸಿ, ಅವರೇನು ವರದಿ ಕೊಟ್ಟಿದ್ದಾರೆ ಆ ವರದಿ ಆಧಾರದ ಮೇಲೆ ಎಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಆಮೇಲೆ ಅದನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗುತ್ತೇವೆ. ಸಿಂಗಾಪುರಕ್ಕಿಂತ ಚೆನ್ನಾಗಿ ಕಟ್ಟುವಂತಹ ಪ್ರಯತ್ನ ಖಂಡಿತವಾಗಿಯೂ ಮಾಡುತ್ತೇವೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪೂರಕವಾಗಿ ಹೇಳುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿತ್ತು. ನಾನು ಕೇಳುತ್ತಿರುವುದೇನೆಂದರೆ, its already late. ಏಕೆಂದರೆ, ಬೆಂಗಳೂರು ನಗರ suffer ಆಗುತ್ತಿರುವಂಥದ್ದು ಮೂಲತಃ ಸಮಸ್ಯೆಗಳು ಬೆಂಗಳೂರಿನಲ್ಲಿ ನಾವು ಎಷ್ಟೇ ಇನ್ವೆಸ್ಟ್ ಮಾಡಿದರೂ, ಎಷ್ಟೇ ರಸ್ತೆಗಳನ್ನು ಮಾಡಿದರೂ, ಎಂಥದ್ದೇ ಮೇಲ್ಸೇತುವೆಗಳನ್ನು ಮಾಡಿದರೂ, ಎಂಥದ್ದೇ ಅಂಡರ್‌ಪಾಸ್‌ಗಳನ್ನು ಮಾಡಿದರೂ, unless and until you strengthen the public transport, you cannot improve this Bengaluru City ಎನ್ನುವ ಮಾತನ್ನು ಹೇಳುತ್ತಿದ್ದೇನೆ. Pollution rate ಕಡಿಮೆಯಾಗಬೇಕಾದರೆ ಇಂತಹ ಹಬ್‌ಗಳಿಗೆ ಇನ್ವೆಸ್ಟ್ ಮಾಡುವಂತಹ ಕೆಲಸಗಳಾಗಬೇಕಾಗುತ್ತದೆ. ಇದಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ಎನ್ನುವ ವಿಚಾರವನ್ನು ಹೇಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಏಕೆಂದರೆ, ಸಾವಿರಾರು ಕೋಟಿ ರೂಪಾಯಿಗಳು ಬೆಲೆ ಬಾಳುವಂತಹ ಜಾಗದಲ್ಲಿ, 30,000 ಕೋಟಿ ರೂಪಾಯಿಗಳು ಬೆಲೆ ಬಾಳುವಂತಹ ಜಾಗವನ್ನು ನಾವು ಅಭಿವೃದ್ಧಿಪಡಿಸದಿದ್ದರೆ, ಅದನ್ನು ನಾವು ಉಪಯೋಗ ಮಾಡಿಕೊಳ್ಳದಿದ್ದರೆ, ಆ ಸಂಸ್ಥೆಗಳು ನಷ್ಟವಾಗುತ್ತಿದ್ದರೆ it is completely a loss to the people of Bengaluru ಎನ್ನುವ ಮಾತನ್ನು ಹೇಳುತ್ತಿದ್ದೇನೆ.

(ಮುಂದು)

**ಶ್ರೀ ಎಂ.ನಾಗರಾಜು (ಮುಂದು):**

ಬೆಂಗಳೂರು ನಗರಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಮಾಡುವುದಕ್ಕೋಸ್ಕರ ಸಚಿವರು ಎಷ್ಟು ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಾರೆ ಹಾಗೂ ಯಾವ ಮಾಡಲ್ ಅನ್ನು ಮಾಡುತ್ತಾರೆ ಎನ್ನುವುದರ ಬಗ್ಗೆ ಸದನದಲ್ಲಿ ತಿಳಿಸಿದರೆ ಬಹಳ ಸಂತೋಷವಾಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):–** ಮಾನ್ಯ ಸಭಾಪತಿಯವರೆ, "ಪ್ರಾಜೆಕ್ಟ್ ಮೆಜೆಸ್ಟಿಕ್" ಎನ್ನುವುದು ಯೋಜನೆಯ ಹೆಸರು ಆಗಿದ್ದು, 2025–26 ನೇ ಸಾಲಿನಲ್ಲಿ ಮುಖ್ಯಮಂತ್ರಿಗಳು ಇದರ ಘೋಷಣೆಯನ್ನು ಮಾಡಿದ್ದರು. ಇದು ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದಲ್ಲಿ ನಡೆಯುತ್ತಿರುವುದು. ಎಷ್ಟು ಹಣ ಖರ್ಚು ಆಗುತ್ತದೆ ಎನ್ನುವುದರ ಬಗ್ಗೆ ಇನ್ನೂ ನಮ್ಮ ಬಳಿ ತಕ್ಷಣಕ್ಕೆ ಮಾಹಿತಿ ಇಲ್ಲ. ಏಕೆಂದರೆ, ಅದರ ಅಡ್ವೈಸರ್ ವರದಿಯನ್ನು ನೀಡಿದ ನಂತರದಲ್ಲಿ, ನಾವು ಯಾವ ರೀತಿಯಾದ ನಿರ್ಮಾಣ ಹಾಗೂ ಅಭಿವೃದ್ಧಿಗಳನ್ನು ಮಾಡಬೇಕು, ಅಲ್ಲಿ ಪಾರ್ಕಿಂಗ್ ಎಷ್ಟು ಇರಬೇಕು, ಟವರ್ಸ್ ಎಷ್ಟು ಬರಬೇಕು, ಕೆ.ಎಸ್.ಆರ್.ಟಿ.ಸಿ., ಹಾಗೂ ಬಿ.ಎಂ.ಟಿ.ಸಿ., ಸಂಸ್ಥೆಗಳಿಗೆ ಎಷ್ಟು ಮಹಡಿಗಳು ಬೇಕು ಹಾಗೂ ವಾಣಿಜ್ಯ ಸಂಕೀರ್ಣಗಳನ್ನು ಎಷ್ಟು ನಿರ್ಮಿಸಬೇಕು ಎನ್ನುವುದೆಲ್ಲವೂ ಆಮೇಲೆ ತೀರ್ಮಾನವಾಗುತ್ತವೆ. ಈ ತಕ್ಷಣಕ್ಕೆ ಈ ಮಾಹಿತಿಗಳು ಲಭ್ಯವಿಲ್ಲ. ಒಟ್ಟಿನಲ್ಲಿ ಸದಸ್ಯರು ಹೇಳಿದಂತೆ, ಸಿಂಗಾಪೂರ್ ಅಲ್ಲ ಅದಕ್ಕಿಂತಲೂ ಹೆಚ್ಚು ಚೆನ್ನಾಗಿರುವ ಬಸ್ ನಿಲ್ದಾಣದ ತರಹದ ವಾಣಿಜ್ಯ ಸಂಕೀರ್ಣವನ್ನೂ ಸಹ ಮಾಡುತ್ತೇವೆ.

**ಸಭಾಪತಿಯವರು:–** ಶ್ರೀ ಗೋವಿಂದರಾಜು ರವರೇ ನಿಮ್ಮ ಸೂಚನೆಯನ್ನು ಮಧ್ಯಾಹ್ನ ವೇಳೆಯಲ್ಲಿ ತೆಗೆದುಕೊಳ್ಳುತ್ತೇನೆ; ಈ ಬಗ್ಗೆ ಸಚಿವರು ತಿಳಿಸಿದ್ದಾರೆ. ಶ್ರೀ ಎಂ.ನಾಗರಾಜು ರವರದ್ದೂ ಇನ್ನೂ ಮುಗಿದಿಲ್ಲ. ಶ್ರೀ ನಾಗರಾಜು ರವರೇ ನೀವು ಮುಂದುವರೆಸಿ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಏತಕ್ಕಾಗಿ ಇದನ್ನು ಕೇಳಿದ್ದೇನೆ ಎಂದರೆ, ಸಿಂಗಾಪೂರ್ ಮಾಡೆಲ್‌ಗಿಂತಲೂ ಚೆನ್ನಾಗಿ ಮಾಡುತ್ತೇವೆ ಎಂದು ಸಚಿವರು ಹೇಳಿದ ಮೇಲೆ, ಅದನ್ನು ನಾನು ಸ್ವಾಗತಿಸುತ್ತೇನೆ. ನಾನು ಸದನದ ಗಮನಕ್ಕೆ ತರುವ ಅಂಶವೇನೆಂದರೆ, ಸಿಂಗಾಪೂರ್‌ನಲ್ಲಿ ಐದು ಮಹಡಿಗಳು ಕಟ್ಟಡದ ಕೆಳಗಡೆ Workshop ಮತ್ತು ಡಿಪೋಗಳನ್ನು ಮಾಡಿ, ಅಲ್ಲಿಯೇ ಬಸ್ಸುಗಳು ಬರುವ ವ್ಯವಸ್ಥೆಯನ್ನು ಮಾಡಿದ್ದು, ಅದು ಸಂಪೂರ್ಣವಾಗಿ ಹವಾನಿಯಂತ್ರಿತ ಬಸ್ ನಿಲ್ದಾಣವಾಗಿದೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದಕ್ಕಿಂತಲೂ ಉತ್ತಮವಾಗಿ ಮಾಡುವುದಾದರೆ, ಖಂಡಿತವಾಗಿಯೂ ಸಹ ಇದು ಒಳ್ಳೆಯ ಸುದ್ದಿ ಎಂದು ನಾನು ಹೇಳುತ್ತೇನೆ. 32 ಎಕರೆ ಇರುವ ಜಮೀನಿನಲ್ಲಿ the tallest building in India should be in Bengaluru Majestic ಎನ್ನುವ ಮಾತನ್ನು ನಾನು ಹೇಳುತ್ತೇನೆ. ಏಕೆಂದರೆ, ಅದು ಆಕರ್ಷಣೀಯವಾದ ಕಟ್ಟಡವಾಗಬೇಕು. ರಾಜ್ಯ ಸರ್ಕಾರದ ಹಲವಾರು ಕಛೇರಿಗಳು ಹಲವಾರು ಜಾಗಗಳಲ್ಲಿ ಇದೆ. ಹೀಗಾಗಿ ವಿಶೇಷವಾಗಿ ಸರ್ಕಾರಿ ಕಛೇರಿಗಳಿಗಾಗಿಯೇ ಒಂದು ಟವರ್ ಅನ್ನು ಮೀಸಲಿಟ್ಟು ಮಾಡಿದರೆ, ಜನರು

ಅವರ ಕೆಲಸಗಳಗೋಸ್ಕರ ಅಲ್ಲಿಗೆ ಬಂದು ಕೆಲಸವನ್ನು ಮಾಡಿಕೊಂಡು ವಾಪಸ್ಸು ಹೋಗುವುದಕ್ಕೆ ಅಲ್ಲಿಯೇ ಅನುಕೂಲವಾಗುತ್ತದೆ. ಏಕೆಂದರೆ, ಬೆಂಗಳೂರು ನಗರದಲ್ಲಿ ಎಲ್ಲಾ ಕಡೆಗಳಲ್ಲಿ ಕಾರು, ಬೈಕು, ಆಟೋಗಳನ್ನು ಹಿಡಿದುಕೊಂಡು ಓಡಾಡುವ ಅವಶ್ಯಕತೆ ಇರುವುದಿಲ್ಲ. ಇದು ಬಹಳ ದೂರದೃಷ್ಟಿಯನ್ನಿಟ್ಟುಕೊಂಡು ಮಾಡುವ ಕೆಲಸವಾಗಿದೆ. ಸುಮಾರು 50-75 ವರ್ಷಗಳ ದೂರದೃಷ್ಟಿಯನ್ನಿಟ್ಟುಕೊಂಡು ಈ ಟವರ್‌ಗಳ ನಿರ್ಮಾಣ ಮಾಡಬೇಕು. ಸ್ವಲ್ಪ ಕಷ್ಟವಾಗಬಹುದು ಹಾಗೂ ಹಣಕಾಸಿನ ತೊಂದರೆಯಾಗಬಹುದು. ಆದರೆ, ಇದಕ್ಕೆ ಅವಶ್ಯಕವಾದ ಹಣವನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತಾರೆ ಎನ್ನುವ ನಂಬಿಕೆಯೊಂದಿಗೆ I want it to be one of the best Bus Terminal of the World ಎನ್ನುವ ಮಾತುಗಳನ್ನು ಹೇಳುತ್ತಿದ್ದೇನೆ. ಸಚಿವರು ಇದರ ಬಗ್ಗೆ ಹೇಳಿದ್ದೇ ಆದರೆ, ಬಹಳ ಸಂತೋಷವಾಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಸದಸ್ಯರ ಎಲ್ಲಾ ಸಲಹೆಗಳನ್ನು ನಾನು ಪರಿಗಣಿಸುತ್ತೇನೆ.

## 7. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ: ಕರ್ನಾಟಕ ಗೇರು ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 7ನೇ ವೇತನ ಆಯೋಗದ ವರದಿ ಜಾರಿಯಾಗದ ಕಾರಣ ವೇತನ ಹಾಗೂ ಇತರೆ ಭತ್ಯೆಗಳು ಸಿಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕುರಿತು.**

– – – – –

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 7ನೇ ವೇತನ ಆಯೋಗದ ವರದಿ ಜಾರಿಯಾಗದ ಕಾರಣ ವೇತನ ಹಾಗೂ ಇತರೆ ಭತ್ಯೆಗಳು ಸಿಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕುರಿತು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಈಶ್ವರ್ ಬಿ.ಖಂಡ್ರೆ(ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಉತ್ತರದಲ್ಲಿ ಅವರೇ ಹೇಳುತ್ತಿರುವಂತೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ತಮ್ಮ ಬೋರ್ಡ್ ಮೀಟಿಂಗ್‌ನಲ್ಲಿ ಯಾರು ಖಾಯಂ ನೌಕರರು ಇದ್ದಾರೆ, ಯಾರು ಅರಣ್ಯ ಇಲಾಖೆಯಿಂದ ಅಲ್ಲಿಗೆ ವರ್ಗಾವಣೆಗೊಂಡು ಬಂದಿರುವವರು ಯಾರು ಇದ್ದಾರೆ, ಮತ್ತು ಅಲ್ಲಿರುವ ದಿನಗೂಲಿ ನೌಕರರನ್ನು ಯಾರು ರಾಜ್ಯ ಸರ್ಕಾರ ಅವರ ನೌಕರಿಯನ್ನು ಖಾಯಂಗೊಳಿಸಿದೆ, ಅವರಿಗೆ ವೇತನವನ್ನು ಅಲ್ಲಿ ಕಾಲಕಾಲಕ್ಕೆ ಬದಲಾವಣೆಯಾಗುವ ಸರ್ಕಾರಿ ವೇತನವನ್ನು ನೀಡಬೇಕೆಂದು ಹೇಳುವಂತದ್ದು ಆಗಿದೆ. ಇಲ್ಲಿ ಬೋರ್ಡ್ ತನ್ನ ಮೀಟಿಂಗ್ ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಅದು ಏನೆಂದರೆ, ನಾವು ನಮ್ಮ ಸ್ವಂತ ದುಡ್ಡಿನಿಂದ ಅವರಿಗೆ 7ನೇ ಪರಿಷ್ಕೃತ ವೇತನದ ಸೌಲಭ್ಯಗಳನ್ನು ಕೊಡಬೇಕೋ, ಅದನ್ನು ತಾವು ಕೊಡುತ್ತೇವೆ ಎಂದ ತೀರ್ಮಾನವನ್ನು ತೆಗೆದುಕೊಂಡಿದೆ. ಇಂತಹ ತೀರ್ಮಾನವನ್ನು ತೆಗೆದುಕೊಂಡ ಮೇಲೆ, ಇದರರ್ಥ ಏನಾಯಿತು? ಅವರದಲ್ಲಿ ದುಡ್ಡಿದೆ; ಅವರಿಗೆ ಸೌಲಭ್ಯಗಳನ್ನು ನೀಡುವ ವ್ಯವಸ್ಥೆ ಇದೆ, ಹೀಗಾಗಿ ಅವರು ಕೊಡುತ್ತೇವೆ ಎಂಬುದಾಗಿ ಹೇಳುತ್ತಾರೆ. ಅವರು ಸೌಲಭ್ಯಗಳನ್ನು ಕೊಡುವುದರ ಬಗ್ಗೆ ಬೋರ್ಡ್ ಮೀಟಿಂಗ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡು, ಅವರು ಏನು ಹೇಳುತ್ತಾರೆ ಎಂದರೆ, 7ನೇ ಪರಿಷ್ಕೃತ ವೇತನವನ್ನು ನೀಡುವ ಬಗ್ಗೆ ಪರಿಶೀಲಿಸಿ, ಹಾಗೂ ವಾರ್ಷಿಕ ತಗಲುವ 26,999/- ರೂಪಾಯಿಗಳನ್ನು ನಿಗಮದ ಆರ್ಥಿಕ ಸಂಪನ್ಮೂಲಗಳಿಂದ ಭರಿಸಬಹುದಾಗಿದೆ ಎನ್ನುವುದನ್ನು ಪರಿಗಣಿಸಿ, ಇದರ ಬಗ್ಗೆ ಚರ್ಚಿಸಿ, ಮಂಡಳಿ ಹಾಗೂ ನಿಗಮಗಳು ನೌಕರರಿಗೆ ನೀಡಬಹುದಾದ ಸೌಲಭ್ಯಗಳ ಬಗ್ಗೆ ಆರ್ಥಿಕ ಇಲಾಖೆಯಿಂದ ಪೂರ್ವಾನುಮತಿ ಬೇಕು ಎಂದು ಕೇಳುತ್ತಾರೆ. ಯಾವಾಗ ಅವರಲ್ಲಿಯೇ ದುಡ್ಡು ಇದೆ, ನಾವು ಕೊಡುತ್ತೇವೆ ಎಂದು ಬೋರ್ಡ್ ತೀರ್ಮಾನವನ್ನು ತೆಗೆದುಕೊಳ್ಳುತ್ತದೆಯೋ, ಮತ್ತು ಬಡ ಕೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿಯಿಂದ ಅವರು ನೇಮಕಗೊಂಡಿದ್ದಾರೆ, they are also treated as a permanent employees of the Corporation. ಸರ್ಕಾರವು ದ್ವಂದ್ವ ನೀತಿಯನ್ನು ಮಾಡುತ್ತದೆ. ಅರಣ್ಯ ಇಲಾಖೆಯಿಂದ ಬಂದ ವಾಚರ್‌ಗೆ ಸೌಲಭ್ಯವನ್ನು ನೀಡುತ್ತದೆ. ಅದು ನಿಗಮವೇ ಸಂಪಾದನೆ ಮಾಡಿದ ನಿಗಮದ ದುಡ್ಡು ಆಗಿದೆ. ಇವರೂ ಸಹ ಅದೇ ಮಾದರಿಯಲ್ಲಿಯೇ ಕೆಲಸ ಮಾಡುತ್ತಾರೆ. ಆದರೆ, ಇವರುಗಳಿಗೆ ಸೌಲಭ್ಯಗಳನ್ನು ನೀಡುವ ಮುನ್ನ ಆರ್ಥಿಕ ಇಲಾಖೆಯಿಂದ ಪೂರ್ವಾನುಮತಿ ಪಡೆದುಕೊಂಡಿಲ್ಲ, ನಿಗಮವು ನಷ್ಟದಲ್ಲಿದೆ, ಹಾಗೆ ಸೌಲಭ್ಯವನ್ನು ಕೊಡುವುದಿಲ್ಲ ಎಂದು ಹೇಳಿದರೆ, ಇಲ್ಲಿ ಮಾನವೀಯತೆಯ ಪ್ರಶ್ನೆ ಇದೆಯೇ? ಆರ್ಥಿಕ ಸೌಲಭ್ಯವನ್ನು ಸರ್ಕಾರದಿಂದ ಏನಾದರೂ ಕೊಡಬೇಕು ಎಂದು ಹೇಳಿದರೆ ಅದು ಸರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಗ ಅಲ್ಲಿ ಆರ್ಥಿಕ ಇಲಾಖೆಯಿಂದ ನಿರ್ಬಂಧವಿದೆ. ಆದರೆ, ನಿಗಮವೇ ಸಂಪಾದನೆ ಮಾಡಿದ ತನ್ನ ದುಡ್ಡಿನಿಂದಲೇ ಅವರೇ ಸೌಲಭ್ಯಗಳನ್ನು ನೀಡುತ್ತೇವೆ ಎಂದು ಹೇಳುವಾಗ, ಅವರಿಗೆ ಆರ್ಥಿಕ ಇಲಾಖೆಯ ನಿರ್ಬಂಧವನ್ನು ಹೇಳಿ, ಬಡ, ಕೂಲಿ ಕಾರ್ಮಿಕರಿಗೆ ತೊಂದರೆ ಮಾಡುವುದು ಸರಿಯಾದ ಕ್ರಮವಲ್ಲ. ಸರ್ಕಾರವು ಬೇರೆ ನಿಗಮಗಳಿಗೆ ಸೌಲಭ್ಯಗಳನ್ನು ನೀಡಲಿಲ್ಲವೇ? ಲಾಭವಿದ್ದ ನಿಗಮಗಳಲ್ಲಿ ಅಂತಹದೇ ಕೂಲಿ ನೌಕರರಿಗೆ ಈ ರೀತಿಯ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಅವರು

ಅದರ ಲಾಭವನ್ನು ಅನುಭವಿಸುತ್ತಾರೆ. ಆದರೆ, ಮೊದಲನೆಯದಾಗಿ ಇವರಿಗೆ ಇರುವ ಸಂಬಳವೇ ಕಡಿಮೆಯಾಗಿದೆ. ಅದರ ಮೇಲೆ, ನಿಗಮವು ನಷ್ಟದಲ್ಲಿರುವುದಕ್ಕೆ ಅವರ ತಪ್ಪೇನು ಇದೆ? ಸರ್ಕಾರವು ಈಗಾಗಲೇ ಈ ನಿಗಮವನ್ನು ಬೇರೆ ಕಡೆಗೆ merge ಮಾಡಿ ಆದರೂ, ಅವರಿಗೆ ನ್ಯಾಯವನ್ನು ಒದಗಿಸಿಕೊಡಬಹುದಾಗಿತ್ತು. ಆದರೆ, ಸರ್ಕಾರ ಅದನ್ನೂ ಸಹ ಮಾಡಿಲ್ಲ. ಸರ್ಕಾರವು ನಿಗಮವನ್ನು ನಡೆಸುತ್ತಿದೆ. ಅದು ನಷ್ಟದಲ್ಲಿರುವುದರಿಂದ ಇಲ್ಲಿನ ನೌಕರರಿಗೆ ಯಾವುದೇ ಸವಲತ್ತು ಇಲ್ಲವೆಂದು ಹೇಳಿದರೆ ಹೇಗೆ? ಅವರುಗಳಿಗೆ ಪಿಂಚಣಿಯೂ ಸಹ ಇಲ್ಲ. ಹೀಗಿರುವಾಗ, ಇವರ ಜೀವನ ಪರಿಸ್ಥಿತಿ ಹೇಗೆ ಇರಬೇಕು ಎನ್ನುವುದನ್ನು ಯೋಚಿಸಬೇಕು. ಸರ್ಕಾರವು ದಯಮಾಡಿ, ಇದನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸಬೇಕು. ಇದಕ್ಕೆ ಕಾನೂನಿನ ದೃಷ್ಟಿಯಿಂದ ಇದಕ್ಕೆ ಯಾವುದೇ ನಿರ್ಬಂಧವಿಲ್ಲ. ನಿಗಮವು ನಷ್ಟದಲ್ಲಿದೆ ಎಂದು ಸರ್ಕಾರವು ಹೇಳುತ್ತಿದೆ. ಆದರೆ, ಬೋರ್ಡ್‌ನಿಂದ ಸಂಬಳ ಕೊಡುವಷ್ಟು ಮತ್ತು ಹೆಚ್ಚುವರಿ ಕೊಡುವಷ್ಟು ದುಡ್ಡು ತಮ್ಮ ಬಳಿ ಇದೆ, ತಾವೇ ನೀಡುತ್ತೇವೆ ಎಂದು ಹೇಳಿ, ಅವರು ಸರ್ವಾನುಮತದಿಂದ ತೀರ್ಮಾನವನ್ನು ತೆಗೆದುಕೊಂಡರು. "ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ" ಎನ್ನುವ ನಾಣ್ಣುಡಿಯಂತೆ ಇದು ಆಗಿದೆ.

(ಮುಂದು)

(274)10-03-2026/2-00/bkp-vk (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ’ಸೋಜಾ(ಮುಂದು):-**

ಅವರ ಜೀವನದಲ್ಲಿ ತುಂಬಾ ಕಷ್ಟವಿದ್ದು, ಅವರುಗಳು ದಿನಗೂಲಿ ನೌಕರರುಗಳಾಗಿ ಕೆಲಸ ಮಾಡಿ, ಈಗ ನಿಮ್ಮ ಸರ್ಕಾರದ ಆದೇಶದ ಮೇರೆಗೆ ಕಾಯಂ ಆಗಿರುತ್ತಾರೆ. ಅವರ ಸಂಬಳವೂ ಸಹ ಕಡಿಮೆ ಇದೆ, ತಾವು ದಯವಿಟ್ಟು ಇದನ್ನು ಪರಿಗಣಿಸಿ, ಅವರುಗಳಿಗೆ ಏನು 7ನೇ ಪರಿಷ್ಕೃತ ವೇತನದ ಅಧಾರದ ಮೇಲೆ ನಿಗಮದಲ್ಲಿ ಬೇರೆ ನೌಕರರುಗಳಿಗೆ ಯಾವ ರೀತಿ ಸಂಬಳವನ್ನು ಕೊಡುತ್ತೀರಿ, ಅದೇ ರೀತಿಯಲ್ಲಿ ಇವರಿಗೂ ಕೊಡಬೇಕು. ಸರ್ಕಾರಿ ನೌಕರರು ಎಂದರೆ ನಿಮ್ಮ ನೌಕರರುಗಳು. ಅವರುಗಳು ಕೆಲಸ ಮಾಡುತ್ತಿರುವ ಕಾಯಂ ಕೂಲಿ ನೌಕರರುಗಳು ನಿಮ್ಮದು ಅಲ್ಲವೆನ್ನುವ ರೀತಿಯಲ್ಲಿ ನೀವು ಏನಾದರೂ ಪರಿಗಣಿಸಿದರೆ ಇದು ಅಸಮಂಜಸವಾಗುತ್ತದೆ, discrimination ಆಗುತ್ತದೆ ಮತ್ತು ಅವರ ಬಾಳಿಗೆ ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ, ತಾವು ಈ ನಿಗಮ ನಷ್ಟದಲ್ಲಿದೆ ಎಂದು ಕಾರಣ ಕೊಡುವುದು ಸರಿಯಾದ ಕ್ರಮವಲ್ಲವೆಂದು ಮತ್ತೊಮ್ಮೆ ಹೇಳುತ್ತಾ, ತಾವು ದಯವಿಟ್ಟು, ಇದಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಈಶ್ವರ್ ಬಿ.ಖಂಡ್ರೆ(ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಷ್ಟದಲ್ಲಿರುವಂತಹದ್ದು ಸತ್ಯದ ವಿಚಾರ. ಈ

ವಿಚಾರದಲ್ಲಿ ಆರ್ಥಿಕ ಇಲಾಖೆಯವರು ಸುತ್ತೋಲೆಯನ್ನು ಹೊರಡಿಸಿ, ನಷ್ಟದಲ್ಲಿರುವ ಯಾವುದೇ ನಿಗಮಗಳು ಇರಲಿ, ಅವುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕೆಂದರೆ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆಯಬೇಕೆನ್ನುವ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದಕ್ಕೆ ಅನುಗುಣವಾಗಿ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅವರಿಗೆ ಕೊಟ್ಟಿದ್ದು, ಅವುಗಳನ್ನು ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಪುನರ್ ಪರಿಶೀಲನೆ ಮಾಡಬೇಕೆನ್ನುವ ಒಂದು ಮನವಿಯನ್ನು ಮಾಡಿದ್ದಾರೆ. ಅದರ ಪ್ರಕಾರ ಮತ್ತೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದಿಂದ ಒಂದು ಪ್ರಸ್ತಾವನೆಯನ್ನು ಮಾಡಿದರೆ ಪುನರ್ ಪರಿಶೀಲನೆ ಮಾಡಲಿಕ್ಕೆ ಆರ್ಥಿಕ ಇಲಾಖೆಗೆ ಇದನ್ನು ಕಳುಹಿಸಿ ಕೊಡುತ್ತೇವೆ.

**ಸಭಾಪತಿಯವರು:–** ಇಲ್ಲಿ ವಿರೋಧ ಪಕ್ಷದ ನಾಯಕರು ಗಮನಿಸಬೇಕು. ನಿಮ್ಮ ಪಕ್ಷದವರು ಇಲ್ಲಿ ಪ್ರಶ್ನೆಯನ್ನು ಕೇಳುತ್ತಾರೆ. ಅವರುಗಳು ಈ ಸಮಯದಲ್ಲಿ ಸದನದಲ್ಲಿ ಇರದೆ ಹೊರಗಡೆ ಹೋಗಿರುತ್ತಾರೆ. ಸದನದಲ್ಲಿ ಈ ರೀತಿಯಾದರೆ ನಾವು ಹೇಗೆ ಕಾರ್ಯಕಲಾಪವನ್ನು ನಡೆಸಬೇಕು. ನಿಮ್ಮ ಮುಖ್ಯ ಸಚೇತಕರು ಸದಸ್ಯರಿಗೆ ಸದನದಲ್ಲಿ ಹಾಜರಿರುವಂತೆ ಹೇಳಬೇಕು. ಎಲ್ಲರೂ ಸದನದಲ್ಲಿ ಕುಳಿತುಕೊಳ್ಳಬೇಕು. ನಾನು ಬೆಳಗ್ಗೆಯಿಂದ ಕುಳಿತಿಲ್ಲವೇ? ಶ್ರೀಯತ ರವಿಯವರೇ, ನಿಮಗೆ ಮುಖ್ಯ ಸಚೇತಕರನ್ನಾಗಿ ಏತಕ್ಕೆ ಮಾಡಿದ್ದಾರೆ? ಇಲ್ಲಿ ಎಲ್ಲಾ ಕಡೆ ಸೀಟುಗಳು ಖಾಲಿ ಇರುವುದಕ್ಕಾಗಿಯೇ ನಿಮಗೆ ಮುಖ್ಯ ಸಚೇತಕರನ್ನಾಗಿ ಮಾಡಿದ್ದಾರೆಯೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಇದು ಎರಡು ಕಡೆಯ ಪರಿಪಾಠ ಇದೆ.

**ಸಭಾಪತಿಯವರು:–** ನಾನು ಎರಡು ಕಡೆಗಳಿಗೂ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ನಿಮಗಷ್ಟೆ ಹೇಳುತ್ತಿಲ್ಲ. ಎರಡು ಕಡೆಯವರಿಗೂ ಹೇಳುತ್ತಿದ್ದೇನೆ. ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ನೋಡಿ, ನಾನು ಸುಮಾರು 46 ವರ್ಷಗಳಿಂದ ಇಲ್ಲಿ ಕುಳಿತಿದ್ದೇನೆ. ನಾವು ಏನು ಮಾಡುತ್ತಿದ್ದೆವು ಎಂದರೆ ನಮ್ಮ ಪ್ರಶ್ನೆ ಇರಲಿ, ಬಿಡಲಿ. ನಾವು ಸದನ ಮುಗಿಯುವವರೆಗೂ ಕುಳಿತುಕೊಳ್ಳುತ್ತಿದ್ದೆವು. ಆದರೆ, ಇವರುಗಳು ನಡು ನಡುವೆ ಎದ್ದು ಹೊರಗಡೆ ಹೋದರೆ ಇಲ್ಲಿ ಕುಳಿತಿರುವ ಉಳಿದವರಿಗೆ ಏನು ಅನಿಸುತ್ತದೆ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ತಮ್ಮ ಅನುಮತಿ ಮೇರೆಗೆ ಹೊರಗಡೆ ಹೋಗಬಹುದು. ಹಾಗೆ ಏನಾದರೂ ಮತ್ತೆ ಇದೇ ರೀತಿಯಲ್ಲಿ ಮಾಡಿದರೆ ನೀವು ನಿರ್ದಾಕ್ಷಣ್ಯವಾಗಿ ಕ್ರಮ ಜರುಗಿಸಿ.

**ಸಭಾಪತಿಯವರು:–** ನಾವು ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರು ಮತ್ತೆ ಇದೇ ಪ್ರಶ್ನೆಗೆ ಅವಕಾಶ ಕೇಳಿದರೆ ಅವರಿಗೆ ಅವಕಾಶವನ್ನು ಕೊಡಬೇಡಿ. ಏಕೆಂದರೆ, seriousness ಎಲ್ಲರಿಗೂ ಬರಬೇಕು. ನೀವು ಈ ಬಗ್ಗೆ ಕೇಳಿದ್ದರಲ್ಲಿ ಏನು ತಪ್ಪು ಇರುವುದಿಲ್ಲ. ನಾನು ಇದರ ಬಗ್ಗೆ defend ಮಾಡುವುದಿಲ್ಲ.

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ ೩–೦೦ ಗಂಟೆಯವರೆಗೆ ಮುಂದೂಡಲಾಗಿದೆ.

**(ಮಧ್ಯಾಹ್ನ 2 ಗಂಟೆ ೩ ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ ೩–೦೦ ಗಂಟೆಗೆ ಸೇರಲು ನಿಶ್ಚಯಿಸಿತು)**

(275) 10.03.2026 03.30 LL-KS

**(ಭೋಜನಕ್ಕಾಗಿ ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**೯. ನೋಡಲ್ ತಾಲ್ಲೂಕುಗಳಲ್ಲಿ ನಡೆಯುವ ಸಮಿತಿ ಸಭೆಗಳಿಗೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರನ್ನು ಆಹ್ವಾನಿಸದಿರುವ ಬಗ್ಗೆ.**

– – – – –

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನ್ನದೊಂದು submission ಇದೆ. ಅದೇನೆಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ಆಯ್ಕೆ ಮಾಡಿಕೊಂಡಿರುವಂತಹ ನೋಡಲ್ ತಾಲ್ಲೂಕುಗಳಲ್ಲಿ, ಅನೇಕ ಸಮಿತಿಗಳಲ್ಲಿ "ಸಹ ಅಧ್ಯಕ್ಷರು" ಎಂದು ನೇಮಕ ಮಾಡಲಾಗಿರುತ್ತದೆ. ಆದರೆ, ಬಹಳಷ್ಟು ಸಮಿತಿ ಸಭೆಗಳಿಗೆ ನಮ್ಮನ್ನು ಆಹ್ವಾನ ಮಾಡುವುದೇ ಇಲ್ಲ.

**ಸಭಾಪತಿಯವರು:–** ಆ ಬಗ್ಗೆ ತಾವು ಲಿಖಿತ ರೂಪದಲ್ಲಿ ಒಂದು ಪತ್ರವನ್ನು ಬರೆದು ನನಗೆ ಕೊಡಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ, ತಾವು ಸರ್ಕಾರದ ಮುಖ್ಯ ಕಾರ್ಯದರ್ಶಿಯವರೊಂದಿಗೆ ಒಂದು ಸಭೆ ನಡೆಸಿದರೆ ಅನುಕೂಲವಾಗುತ್ತದೆ.

**ಸಭಾಪತಿಯವರು:–** ಅದನ್ನು ತಾವು ಕೇವಲ ಬಾಯಿ ಮಾತಿನಲ್ಲಿ ಹೇಳಿದರೆ ಹೇಗೆ? ಬದಲಾಗಿ, ತಾವು ಪತ್ರ ರೂಪದಲ್ಲಿ ನನಗೆ ದೂರು ನೀಡಿ.

**ಶ್ರೀ ರಮೇಶ್ ಬಾಬು:–** ಆಯಿತು, ಬರೆದುಕೊಡುತ್ತೇನೆ.

## ೯. ವಿತ್ತೀಯ ಕಾರ್ಯಕಲಾಪ

## 2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

**ಶ್ರೀ ಐವನ್ ಡಿ ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿರುವಂತಹ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ವೈಯಕ್ತಿಕವಾಗಿ 17ನೇ ಬಜೆಟ್ ಮತ್ತು ನೂತನ ಸರ್ಕಾರದ 4ನೇ ಬಜೆಟ್ ಅಂದರೆ, ಒಂದು Interim Budget ಸೇರಿದಂತೆ, ಬಹಳ ವಿಸ್ತಾರವಾಗಿ ರಾಜ್ಯದ ಆರ್ಥಿಕ ಹಿತಾಸಕ್ತಿಯನ್ನು ಮತ್ತು ರಾಜ್ಯದ ಜನರ ಸರ್ವಾಂಗೀಣ ಅಭಿವೃದ್ಧಿಯ ಹಿತದೃಷ್ಟಿಯಿಂದ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಆಯವ್ಯಯದ ಗಾತ್ರ ರೂ.4,48,000 ಕೋಟಿಗಳಾಗಿರುತ್ತದೆ. ಅದರಲ್ಲಿ ಒಟ್ಟು ವೆಚ್ಚ ರೂ.4,48,004 ಕೋಟಿಗಳಾಗಿದ್ದು, ರಾಜಸ್ವ ವೆಚ್ಚ ರೂ.3,38,007 ಕೋಟಿಗಳಾಗಿರುತ್ತದೆ. ನಿವ್ವಳ ಬಂಡವಾಳ ವೆಚ್ಚ ರೂ.74,682 ಕೋಟಿಗಳು ಮತ್ತು ಸಾಲ ಮರುಪಾವತಿಗೆ ರೂ.35,316 ಕೋಟಿಗಳ ಆಯವ್ಯಯವನ್ನು ಮಂಡಿಸಲಾಯಿತು. ಈ ಒಂದು ಬಜೆಟ್ ಅನ್ನು ಮಂಡನೆ ಮಾಡತಕ್ಕಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮುಂದಿನ ಒಂದು ಆರ್ಥಿಕ ವರ್ಷ ಅಂದರೆ, 2026-27 ನೇ ಸಾಲಿಗೆ, ಈ ಸಾಲಿನ ಏಪ್ರಿಲ್ 1 ರಿಂದ ಮುಂದಿನ ಮಾರ್ಚ್ 31 ರವರೆಗೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆದ್ಯತೆಗಳನ್ನು ನಾವು ತೋರಿಸುತ್ತೇವೆಂದು ಹೇಳುವುದನ್ನು ಈ ಬಜೆಟ್‌ನಲ್ಲಿ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಳೆದ 17 ವರ್ಷಗಳ ಒಂದು ದೊಡ್ಡ ಅನುಭವದ ಆರ್ಥಿಕತೆಯ ಬಗ್ಗೆ ರಾಜ್ಯದ ಜನರಿಗೆ ತಿಳಿಸಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣವನ್ನು ಸುಮಾರು 3 ಗಂಟೆ 30 ನಿಮಿಷಗಳ ಕಾಲ ನಿರರ್ಗಳವಾಗಿ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಮಂಡಿಸಿದ್ದಾರೆ. ಬಹುಶಃ ಒಂದು ಹಂತದಲ್ಲಿ ವಿಧಾನ ಸಭೆಯ ಸಭಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರಿಗೆ, "ತಾವು ಕುಳಿತುಕೊಂಡು ಬೇಕಾದರೆ ಬಜೆಟ್ ಮಂಡನೆ ಮಾಡಬಹುದು" ಎಂದು ಒಂದು ರೀತಿಯ ಸಲಹೆಯನ್ನು ನೀಡಿದಾಗಲೂ ಕೂಡ, ಮಾನ್ಯ ಮುಖ್ಯಮಂತ್ರಿಗಳು, "ಇಲ್ಲ, ನಾನು ಎಷ್ಟು ಹೊತ್ತು ನಿಂತು ಮಂಡನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಷ್ಟು ಹೊತ್ತು ನಿಂತುಕೊಂಡೇ ಬಜೆಟ್ ಅನ್ನು ಓದುತ್ತೇನೆ" ಎಂದು ಹೇಳಿ, ಸಂಪೂರ್ಣ ಬಜೆಟ್ ಅಂದರೆ, ಸುಮಾರು ಮೂರುವರೆ ಗಂಟೆಗಳ ಕಾಲದ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ನಿಂತುಕೊಂಡೇ ಮಂಡನೆ ಮಾಡಿರುತ್ತಾರೆ. ಅವರು ತಮ್ಮ 78 ವಯಸ್ಸಿನಲ್ಲಿ ನಿಂತುಕೊಂಡು ಬಜೆಟ್ ಮಂಡನೆ ಮಾಡಿರುವಂಥದ್ದೇ ಒಂದು ಸೊಗಸು, ಅವರ ಚಿಂತನೆ ಮತ್ತು ಬಜೆಟ್ ಮೇಲಿದ್ದಂತಹ ಪ್ರೀತಿ ಹಾಗೂ ಆರ್ಥಿಕ ವಿಷಯದ ಮೇಲೆ ಅವರಿಗೆ ಇದ್ದಂತಹ ಒಂದು ಸಂಬಂಧವನ್ನು ಅದು ತೋರಿಸುತ್ತದೆ. ಈ ರಾಜ್ಯದಲ್ಲಿ ಆರ್ಥಿಕ ವ್ಯವಸ್ಥೆಯ ಬಗ್ಗೆ ಆಗಾಗ್ಗೆ ಚರ್ಚೆಯಾಗುತ್ತಿದೆ. ಅದೇನೆಂದರೆ, ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಬಿದ್ದು ಹೋಗಿದೆ, ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ; ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿಲ್ಲ; ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರಿಯಾದ ಹಣ ಇಲ್ಲ; ಈ ರೀತಿಯ ವಿಚಾರಗಳು ಆಗಾಗ್ಗೆ ಚರ್ಚೆಯಾಗುತ್ತಿವೆ ಮತ್ತು ಪತ್ರಿಕಾ

ಮಾಧ್ಯಮಗಳಲ್ಲಿಯೂ ಸಹ ವರದಿಯಾಗುತ್ತಿವೆ. ಆದರೆ, ಇವೊತ್ತಿನ ದಿವಸ ರಾಜ್ಯದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದಂತಹ ಬಜೆಟ್, ರಾಜ್ಯದ ಆರ್ಥಿಕ ಶಿಸ್ತನ್ನು ಕಾಪಾಡುವುದರ ಜೊತೆಗೆ, ನಾವೇ ತಯಾರಿಸಿದಂತಹ ಆರ್ಥಿಕ ಶಿಸ್ತಿನ ಮಿತಿಯಲ್ಲಿ ಒಟ್ಟು ಬಜೆಟ್‌ನ ಶೇಕಡ 25 ರಷ್ಟು ಸಾಲವನ್ನು ಮಾಡಬಹುದು ಎಂದು ಹೇಳುವಂಥದ್ದಾಗಿದೆ. ಅದನ್ನು ಮೀರದಂತೆ, ಶೇಕಡ 24.94 ಸಾಲವನ್ನು ಮಿತಿಗೊಳಿಸುವುದರ ಜೊತೆಗೆ, fiscal responsibility ಯನ್ನು maintain ಮಾಡಿದ್ದಕ್ಕಾಗಿ ನಾನು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ' ಸೋಜಾರವರೇ, ಒಂದು ನಿಮಿಷ. ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ವಿತ್ತೀಯ ಕಾರ್ಯಕಲಾಪದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಎರಡೂ ಕಡೆಯಲ್ಲಿ ಸದಸ್ಯರು ಇಲ್ಲವೆಂದರೆ ಹೇಗೆ? ಅಥವಾ ಮುಂದಿನ 10 ನಿಮಿಷಗಳವರೆಗೆ ನಾನು ಸದನವನ್ನು ಮುಂದೂಡಲೇ?

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಬರುತ್ತಾರೆ. ನಾನು ಈಗಾಗಲೇ ಅವರೆಲ್ಲರಿಗೂ ಫೋನ್ ಮಾಡಿರುತ್ತೇನೆ.

**ಸಭಾಪತಿಯವರು:–** ಹಾಗಾದರೆ, ಅವರು ಬರಬೇಕಲ್ಲವೇ? ಸದನ 3–00 ಗಂಟೆಗೆ ಪ್ರಾರಂಭವಾಗುತ್ತದೆ ಎಂದು ಅವರಿಗೆ ಗೊತ್ತಿಲ್ಲವೇ? ನಾನು ಈ ದಿನ ಬೆಳಗ್ಗೆ 11–00 ಗಂಟೆಗೆ ಬಂದು, ಭೋಜನ ವಿರಾಮದವರೆಗೂ ನನ್ನ ಸ್ಥಾನದಲ್ಲಿಯೇ ಕುಳಿತಿರುತ್ತೇನೆ. ಪುನಃ ಈಗ ಬಂದು ಕುಳಿತಿರುತ್ತೇನೆ. ಈ ವಿಚಾರದಲ್ಲಿ ನಮ್ಮ ಶಾಸಕರಿಗೆ ಜವಾಬ್ದಾರಿ ಇಲ್ಲವೆಂದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಸದನವನ್ನು ಭೋಜನ ವಿರಾಮಕ್ಕಾಗಿ ಮುಂದೂಡುವಾಗಲೂ ಸಹ ಇದೇ ವಿಚಾರವನ್ನು ಹೇಳಿರುತ್ತೇನೆ. ಆದಾಗ್ಯೂ, ಸದನವನ್ನು ಈ ರೀತಿ ಖಾಲಿ ಇಟ್ಟುಕೊಂಡು ಹೇಗೆ ಸಭೆ ನಡೆಸಬೇಕು? ಸಭೆ ನಡೆಸಬೇಕಾದರೆ, ಎಲ್ಲಾ ಶಾಸಕರುಗಳಿಗೆ ಜವಾಬ್ದಾರಿ ಇರಬೇಕಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರುಗಳು ಈಗ ಬರುತ್ತಿದ್ದಾರೆ.

**ಸಭಾಪತಿಯವರು:–** ಈಗ ಬರುತ್ತಿದ್ದಾರೆ ಎಂದು ಹೇಳುವುದಲ್ಲ. ನಾಳೆಯ ದಿವಸ ಈ ವಿಚಾರ ಮಾಧ್ಯಮಗಳಲ್ಲಿ ವರದಿಯಾದರೆ, ಈ ಸದನದ ಘನತೆ ಏನಾಗಬೇಕು? ನಾನು 3–00 ಗಂಟೆಗೆ ಸದನ ಪ್ರಾರಂಭ ಮಾಡೋಣವೆಂದು ಕಾಯುತ್ತಾ ಕುಳಿತು, ಕೊನೆಗೆ 3–33 ಕ್ಕೆ ಪ್ರಾರಂಭ ಮಾಡಿರುತ್ತೇನೆ. ಅಲ್ಲದೇ, ಸದನದಲ್ಲಿ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಕೂಡ ಹಾಜರಿರುವುದಿಲ್ಲ. ಹಾಗಾಗಿ, ಸದನವನ್ನು 10 ನಿಮಿಷಗಳ ಕಾಲ ಮುಂದೂಡಲೇ? ಆದಾಗ್ಯೂ, ಸದನ ನಡೆಸಲು ಅಗತ್ಯವಿರುವ quorum ಇದೆ ಎಂದು ಹೇಳುವಂತಹ ಕಾನೂನನ್ನು ನಾನು ಕೂಡ ಒಪ್ಪುತ್ತೇನೆ. ಆದರೆ, ಸದನದಲ್ಲಿ ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ,

ಅದರಲ್ಲಿಯೂ ವಿತ್ತೀಯ ಕಾರ್ಯಕಲಾಪದ ಮೇಲೆ ಮಾತನಾಡುವಾಗ ಶಾಸಕರುಗಳು ಇಲ್ಲವೆಂದರೆ ಏನು ಮಾಡಬೇಕು? ಪ್ರಸ್ತುತ ಸದನದಲ್ಲಿ ಆಡಳಿತ ಪಕ್ಷದ 6 ಸದಸ್ಯರಿರುತ್ತಾರೆ.

(ಮುಂದು)

(276) 10.03.2026 ವೈಎಲ್-ಕೆಎಸ್ 3.40 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಬಜೆಟ್ ಬಗ್ಗೆ ಮುಂದುವರೆದು ಮಾತನಾಡುವಂತಹ ಈ ಸಂದರ್ಭದಲ್ಲಿ, ರಾಜ್ಯದಲ್ಲಿ ಇವತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವ ದೃಷ್ಟಿಯಿಂದಾಗಿ ಯಾವುದೇ ಒಂದು ಬಜೆಟ್ ಕೈಗೆತ್ತಿಕೊಂಡಾಗ ಸದಾ ಜನರು ನಿರೀಕ್ಷೆ ಮಾಡುವುದೇನೆಂದರೆ, ಸರ್ಕಾರವು ಬಜೆಟ್ ಮೂಲಕ ಹೆಚ್ಚು ತೆರಿಗೆ ವಿಧಿಸುತ್ತದೆ ಎಂದು ಬಜೆಟ್ ಪೂರ್ವದಲ್ಲಿಯೇ ಕೆಲವೊಂದು ಸ್ವತ್ತುಗಳಾದ ವಾಹನ ಖರೀದಿ ಅಥವಾ ಬೇರೆ ಬೇರೆ ವಸ್ತುಗಳನ್ನು ಖರೀದಿ ಮಾಡುತ್ತಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿರವರು ಪೀಠವನ್ನು ಅಲಂಕರಿಸಿದರು)**

ಆದರೆ, ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಈ ಬಜೆಟ್‌ನಲ್ಲಿ ಯಾವುದೇ ವಸ್ತುಗಳಿಗೆ ತೆರಿಗೆಯನ್ನು ಜಾಸ್ತಿ ವಿಧಿಸದೇ ನಿಖರವಾಗಿ ರಾಜ್ಯದ ಸಂಪನ್ಮೂಲಗಳನ್ನು ಬಳಸಿಕೊಂಡು, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯಕ್ಕೆ ಎಷ್ಟು ಸಂಪನ್ಮೂಲಗಳು ಬರುತ್ತವೆ, ಅದರ ಆಧಾರದ ಮೇಲೆ ರಾಜ್ಯದ ಒಟ್ಟಾರೆ ಅಭಿವೃದ್ಧಿ ಕೆಲಸ ಮಾಡುವುದಕ್ಕಾಗಿ ಮತ್ತು ಆರ್ಥಿಕ ತಜ್ಞರ ಸಲಹೆಯಂತೆ 17ನೇ ಬಜೆಟ್ ಮಂಡಿಸಿದಂಥ ಅನುಭವದ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಉತ್ತಮ ಬಜೆಟ್ ನೀಡಿರುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ರಾಜ್ಯದ ಬಜೆಟ್‌ನಲ್ಲಿ ಸಾಧಾರಣವಾಗಿ 3 ಹೆಡ್ಸ್ ಇರುತ್ತವೆ. ಅವುಗಳು ಯಾವುದೆಂದರೆ, Capital Expenditure, Revenue Expenditure and Committed Expenditure. Capital expenditure is normally used to build assets in the State, such as roads, bridges, schools, and later on. Revenue Expenditure ಎಂದರೆ, ಸಂಬಳ, ಬಡ್ಡಿ ಭರಿಸುವುದು; ಬೇರೆ ಬೇರೆ ರೀತಿಯ ವ್ಯಯ ಮಾಡುವಂಥದ್ದಾಗಿದೆ. Committed Expenditure ಎಂದರೆ, ಭದ್ರತಾ ವೆಚ್ಚವಾಗಿದ್ದು, ಇದನ್ನು ತಪ್ಪಿಸಲು ಸಾಧ್ಯವಿಲ್ಲದೇ ಯಾವ್ಯಾವ ವಿಚಾರದಲ್ಲಿ ಎಷ್ಟು ವೆಚ್ಚ ಮಾಡಲೇಬೇಕು ಎನ್ನುವಂಥದ್ದಾಗಿದೆ. It has to be taken on account while preparing the Budget. ಆದರೆ, ರಾಜ್ಯದ ಹಿತದೃಷ್ಟಿಯಿಂದಾಗಿ, ರಾಜ್ಯದ ಸರ್ವ ಜನರ ಏಳಿಗೆಗಾಗಿ, ಈ ಹಿಂದೆ ಯಾವುದೆಲ್ಲಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿತ್ತು, ಆ ಎಲ್ಲಾ ಕಾರ್ಯಕ್ರಮಗಳನ್ನು ಮುಂದುವರೆಸುವುದರ ಜೊತೆಗೆ ರಾಜ್ಯದಲ್ಲಿ ಉತ್ತಮ

ರೀತಿಯಾಗಿ ಸರ್ವರಿಗೂ ಕೈಗೆಟುಕುವ ಹಾಗೂ ಸರ್ವರ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವಂಥ ಬಜೆಟ್‌ನ್ನು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದಾರೆ. ಅವರು ಮಂಡಿಸಿರುವಂತಹ ಈ ಬಜೆಟ್‌ನಲ್ಲಿ ನಮಗೆ ತಕ್ಷಣವೇ ನೆನಪಾಗುವುದೇನೆಂದರೆ, ಆದಾಯದ ಮೂಲಗಳು ಯಾವುದು ಎನ್ನುವಂಥ ಪ್ರಶ್ನೆ. ಆದಾಯದ ಮೂಲಗಳು ಎಲ್ಲಿಂದ ಬರುತ್ತದೆ ಎಂಬುದನ್ನು ಮೊದಲು ಹುಡುಕಿ, ಮತ್ತೆ ಹೇಗೆ ಖರ್ಚು ಮಾಡಬಹುದು; ಹೇಗೆ ಕೊಡಬಹುದು; ಯಾವ್ಯಾವ ಕೆಲಸಕ್ಕೆ ಪ್ರಾಮುಖ್ಯತೆ ಕೊಡಬಹುದು; ಎಂಬುದನ್ನು ಈ ಬಜೆಟ್‌ನಲ್ಲಿ ತೋರಿಸಲಾಗಿದೆ.

ಈ ರಾಜ್ಯದ ಮುಂದೆ ಇರುವಂಥ ಬಜೆಟ್‌ನ್ನು ಯಾರಾದರೂ ಮಂಡನೆ ಮಾಡಬೇಕಾದರೆ, ಮೊದಲು ನಮ್ಮ ಮುಂದೆ ಬರುವಂಥ ವಿಚಾರವೇನೆಂದರೆ, ನಾವು ಜನರಿಗೆ ಚುನಾವಣಾ ಸಂದರ್ಭದಲ್ಲಿ ಏನೆಂದು ಆಶ್ವಾಸನೆ ನೀಡಿದ್ದೇವೆ ಎನ್ನುವಂಥದ್ದಾಗಿದೆ. What are the promises made by the Government to the people of the State? ರಾಜ್ಯಕ್ಕೆ ಒಳ್ಳೆಯದಾಗಬೇಕು; ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಇರಬಹುದು; ಅಥವಾ ರಾಜ್ಯದ ಬೆಳವಣಿಗೆ ಹಿತದೃಷ್ಟಿಯಿಂದಾಗಿ, ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಸಮಾಜಕ್ಕೆ ಅಥವಾ ರಾಜ್ಯದ ಜನತೆಗೆ ಭರವಸೆ ನೀಡಿರುತ್ತೇವೆ, ಆ ಭರವಸೆಯನ್ನು ಈಡೇರಿಸುವುದು ರಾಜ್ಯ ಸರ್ಕಾರದ ಪ್ರಮುಖ ಆದ್ಯತೆ ಆಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ರಾಜ್ಯದ ಜನತೆಗೆ ಕೆಲವೊಂದು ಆಶ್ವಾಸನೆಯನ್ನು ನೀಡಲಾಗಿದ್ದು, ಅದೇನೆಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಪಂಚ ಗ್ಯಾರಂಟಿಯನ್ನು ಜಾರಿಗೆ ತರುತ್ತೇವೆ; ಜನರಿಗೆ ಉದ್ಯೋಗ ದೊರಕಿಸುವಂಥ ಪ್ರಯತ್ನ ಮಾಡುತ್ತೇವೆ; ಜನರ ಅನುಕೂಲಕ್ಕಾಗಿ ಬೇಕಾದ ಸಾರಿಗೆ ವ್ಯವಸ್ಥೆ, ಶಿಕ್ಷಣ, ಆಸ್ಪತ್ರೆಗಳನ್ನು ನಿರ್ಮಾಣ ಮಾಡುತ್ತೇವೆ; ಸಮಾಜದಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುತ್ತೇವೆ ಎನ್ನುವಂತಹ ವಿಚಾರಗಳನ್ನು ಹೇಳಿ ಅಧಿಕಾರಕ್ಕೆ ಬಂದಿರುತ್ತೇವೆ. ಇವತ್ತು ನಾವು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಅಭಿನಂದಿಸಬೇಕು. ಏಕೆಂದರೆ, ಈ ರಾಜ್ಯದಲ್ಲಿ ಅವರು ಅಧಿಕಾರಕ್ಕೆ ಬಂದ ತಕ್ಷಣ ಜನರಿಗೆ ಯಾವ್ಯಾವ ಆಶ್ವಾಸನೆಯನ್ನು ನೀಡಿ, ಸರ್ಕಾರ ಅಧಿಕಾರಕ್ಕೆ ಬಂತು, ಆ ಆಶ್ವಾಸನೆಗಳನ್ನು ಈಡೇರಿಸುವಂಥ ಕೆಲಸವನ್ನು ಪ್ರಥಮವಾಗಿ ಮಾಡಿದ್ದಾರೆ.

ಪ್ರಪ್ರಥಮವಾಗಿ 5 ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದು ಕಾಂಗ್ರೆಸ್ ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಇವತ್ತು ಆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಸುಮಾರು ರೂ.57,000 ಕೋಟಿಗಳನ್ನು ಈ ಯೋಜನೆಗಳಿಗಾಗಿ ಮೀಸಲಿರಿಸಿ, ಜನರಿಗೆ ಯಾವ ರೀತಿ ಆಶ್ವಾಸನೆ ನೀಡಲಾಗಿದೆ, ಅದನ್ನು ಈಡೇರಿಸುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಇವತ್ತು ಸರ್ಕಾರದ ಮುಂದೆ ಇರುವಂಥ ಪ್ರಶ್ನೆಯೇನೆಂದರೆ, ಆ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ, ಜನರಿಗೆ ಕೊಟ್ಟಿರುವ ಮತ್ತಷ್ಟು ಆಶ್ವಾಸನೆಯನ್ನು ಈಡೇರಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಈ ದೃಷ್ಟಿಯಿಂದಾಗಿ ಆರ್ಥಿಕ

ಸಂಪನ್ಮೂಲಗಳು ಕಡಿಮೆಯಾದರೂ, ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ತೆರಿಗೆಯನ್ನು ವಿತರಣೆ ಮಾಡಿಕೊಂಡು, ಕೇಂದ್ರದ ತೆರಿಗೆ ಹಂಚಿಕೆ ಕಡಿಮೆಯಾಗಿದ್ದರೂ, ರಾಜ್ಯದ ಒಟ್ಟಾರೆ ಬೆಳವಣಿಗೆಗಾಗಿ ಏನು ಆಶ್ವಾಸನೆ ಕೊಟ್ಟಿದ್ದಾರೆ, ಅದನ್ನು ಈಡೇರಿಸುವ ನಿಟ್ಟಿನಿಂದಾಗಿ ಕಾಂಗ್ರೆಸ್ ಸರ್ಕಾರ ಈ ಬಜೆಟ್ ಜಾರಿಗೆ ತಂದಿದೆ ಎಂದು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತು G.S.T. (Goods and Services Tax) ಜಾರಿಗೆ ಬಂದಿದ್ದು, ಈ ಹಿಂದೆ sales tax ಇರಬಹುದು; excise duty ಇರಬಹುದು; ರೆವಿನ್ಯೂ ಇರಬಹುದು; motor vehicles tax ಇರಬಹುದು; ಸಾರಿಗೆ ವೆಚ್ಚ ಸೇರಿದಂತೆ ಯಾವುದೇ ತೆರಿಗೆ ಮೊತ್ತ ಇರಲಿ, ಅದು ನೇರವಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿತ್ತು. ಆದರೆ, ಈ ದೇಶದಲ್ಲಿ ಜಿ.ಎಸ್.ಟಿ. ಎಂಬುದನ್ನು ಜಾರಿಗೆ ಬಂದ ತಕ್ಷಣ ಬಹಳ popular ಆಗಿ ಹೇಳುವುದೇನೆಂದರೆ, ನಾವು 100 ರೂಪಾಯಿಗಳನ್ನು ಸಂಗ್ರಹ ಮಾಡಿದರೆ, ಅದರಲ್ಲಿ 12 ರೂಪಾಯಿಗಳನ್ನು ಮಾತ್ರ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಇವತ್ತು ಕರ್ನಾಟಕ ರಾಜ್ಯವು ಭಾರತ ದೇಶದ ದೊಡ್ಡ-ದೊಡ್ಡ ರಾಜ್ಯಗಳನ್ನೂ ಮೀರಿ, ಅಂದರೆ, ಮಹಾರಾಷ್ಟ್ರವನ್ನು ಹೊರತುಪಡಿಸಿ, 2ನೇ ಸ್ಥಾನದಲ್ಲಿ ಹೆಚ್ಚು ಜಿ.ಎಸ್.ಟಿ. ಯನ್ನು ಭರಿಸುವಂಥ ರಾಜ್ಯವಾಗಿದೆ. ಆದರೆ, ಕರ್ನಾಟಕ ರಾಜ್ಯಕ್ಕೆ ಬರಬೇಕಾಗಿರುವಂಥ ಜಿ.ಎಸ್.ಟಿ. ಮೊತ್ತ ಮಾತ್ರ ಬಹಳ ಕಡಿಮೆಯಾಗಿದೆ. ಜಿ.ಎಸ್.ಟಿ. ಮೊತ್ತವನ್ನು ಒಂದು ಆಧಾರದಲ್ಲಿ ದೇಶಕ್ಕೆ ವಿತರಣೆ ಮಾಡುವ ಸಂದರ್ಭದಲ್ಲಿ ರಾಜ್ಯಕ್ಕೆ ಬೇರೆ ಮೂಲಗಳಿಂದ ಬರುವಂಥ ಆದಾಯಗಳು ಅಥವಾ Centrally Sponsored Schemes ಅಥವಾ ಕೇಂದ್ರ ಸರ್ಕಾರ ನೀಡಿದಂಥ ಬೇರೆ ಬೇರೆ ಅನುದಾನಗಳು ಕೂಡ ರಾಜ್ಯ ಸರ್ಕಾರಕ್ಕೆ ಕಡಿಮೆ ಬರುತ್ತಿದೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾದ ವಿಚಾರವಾಗಿದೆ. ಇವತ್ತು ಜಿ.ಎಸ್.ಟಿ. ಮೊತ್ತ ರೂ.4,50,000 ಕೋಟಿಗಳು ಸಂಗ್ರಹವಾಗುತ್ತಿದ್ದು, ನಮ್ಮ ರಾಜ್ಯಕ್ಕೆ ಬರುತ್ತಿರುವ ಪಾಲು ಕೇವಲ ರೂ.73,000 ಕೋಟಿ ಮಾತ್ರ. ಕೇವಲ 12% ಬರುತ್ತಿದೆ. ಅಂದರೆ, below 15% ಜಿ.ಎಸ್.ಟಿ. ಮೊತ್ತ ಮಾತ್ರ ಬರುತ್ತಿದೆ. ಇಷ್ಟು ದೊಡ್ಡ ಮೊತ್ತ ಸಂಗ್ರಹವಾಗುತ್ತಿದ್ದರೂ ಕೂಡ ರಾಜ್ಯ ಸರ್ಕಾರಕ್ಕೆ ರೂ.73,000 ಕೋಟಿ ಮಾತ್ರ ಬರುತ್ತಿದ್ದು, ಇವತ್ತು ರಾಜ್ಯಕ್ಕೆ ಬರುವಂಥ ಜಿ.ಎಸ್.ಟಿ. percentage ಬಹಳ ಕಡಿಮೆಯಾಗಿದೆ.

(ಮುಂದು)

(277) 10.03.2026/3.50/ ಎಸ್‌ಕೆ.ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು)**

ಬಹಳಷ್ಟು ಹಿಂದೆಯೇ ಆರ್ಥಿಕವಾಗಿ ನಮಗೆ ದೊಡ್ಡ ಮಟ್ಟದ ಅನುದಾನ ಬರಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ವರ್ಷದ ಮಧ್ಯೆದಲ್ಲಿಯೇ ಆರ್ಥಿಕ ಪರಿಸ್ಥಿತಿಯಲ್ಲಿ ಜಿ.ಎಸ್.ಟಿ. ಕಡಿಮೆಯಾದಂತಹ ಸಂದರ್ಭದಲ್ಲಿ ಅದಕ್ಕೆ ಬರುವಂತಹ ಆದಾಯವು ಕೂಡ ಕಡಿಮೆಯಾಯಿತು. ಆದರೂ ಕೂಡ ಈ ರಾಜ್ಯದ ಒಟ್ಟಾರೆ ಆರ್ಥಿಕ ವ್ಯವಸ್ಥೆ ಮತ್ತು ರಾಜ್ಯದ fiscal discipline ಏನಿದೆ ಅದನ್ನು ಕಾನೂನಿನಡಿಯಲ್ಲಿ ತಂದು ಇವತ್ತು ಒಳ್ಳೆಯ ಬಜೆಟ್‌ನ್ನು

ಮಂಡನೆ ಮಾಡಿದ್ದಕ್ಕಾಗಿ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಒಂದು ಬಜೆಟ್‌ನಲ್ಲಿ ಕೆಲವೊಂದು ಮುಖ್ಯಾಂಶಗಳನ್ನು ಹೇಳಬೇಕಾಗಿದೆ. ಶಿಕ್ಷಣ, ಆಸ್ಪತ್ರೆಗಳ ಸುಧಾರಣೆ, ರಸ್ತೆಗಳ ನಿರ್ಮಾಣ, ಸಾರಿಗೆ ಇರಬಹುದು. ಜನರ ದಿನನಿತ್ಯದ ಒಟ್ಟಾರೆಯಾಗಿ ಬದುಕಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಈ ಬಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವಂತಹ 56,432 ಹುದ್ದೆಗಳಿಗೆ ಭರ್ತಿ ಮಾಡುವಂತಹ ಪ್ರಕ್ರಿಯೆಗೆ ಚಾಲನೆ ಕೊಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಅವರು ಘೋಷಣೆ ಮಾಡಿರುವುದು ಮಾತ್ರವಲ್ಲದೇ ಸಚಿವ ಸಂಪುಟದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಹುದ್ದೆಗಳನ್ನು ಭರ್ತಿ ಮಾಡಲು ಎಲ್ಲಾ reservation policy ಅನ್ನು ಅಳವಡಿಸಕೊಂಡು ಆ ಹುದ್ದೆಗಳನ್ನು ಭರ್ತಿ ಮಾಡುವ ಮುಖಾಂತರ ಉದ್ಯೋಗ ಆಕಾಂಕ್ಷೆ ಯುವಕರಿಗೆ ಒಂದು ಭರವಸೆಯನ್ನು ಮೂಡಿಸುವಂತಹ ಕೆಲಸವನ್ನು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಅದೇ ರೀತಿ ರಾಜ್ಯದ ಮುಖ್ಯಮಂತ್ರಿಗಳು ಇವತ್ತು ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ. ಹಾಗೂ ಟಿ.ಎಸ್.ಪಿ. ಅನುದಾನದ ಹಂಚಿಕೆಯಲ್ಲಿ ಸುಮಾರು 44,630 ಕೋಟಿ ರೂಪಾಯಿಗಳು. ಎಸ್.ಸಿ.ಎಸ್.ಪಿ.ಗೆ 31,804 ಕೋಟಿ ರೂಪಾಯಿಗಳು ಮತ್ತು ಟಿ.ಎಸ್.ಪಿ.ಗೆ 12,828 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡುವಂತಹ ಕೆಲಸವನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಆಯವ್ಯಯದ ಹಂಚಿಕೆಯಲ್ಲಿ ಅದೇ ರೀತಿ ಮಹಿಳೆಯರ ಸಶಕ್ತಿಕರಣ ಹಾಗೂ ಅವರ ಕಾರ್ಯಕ್ರಮಗಳು ಹಾಗೂ ಸಮಾಜದಲ್ಲಿ ಅವರ ಬೆಳವಣಿಗೆಗಾಗಿ 94,663 ಕೋಟಿ ರೂಪಾಯಿಗಳನ್ನು ಕೊಡುವಂತಹ ಪ್ರಕ್ರಿಯೆಯನ್ನು ಮಾಡಿದ್ದಾರೆ. ಅದೇ ರೀತಿ ರಾಜ್ಯದ ರಸ್ತೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಾಗಿ ಸುಮಾರು 4,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ "ಮುಖ್ಯಮಂತ್ರಿಗಳ ಸೌಕರ್ಯ ಅಭಿವೃದ್ಧಿ" ಎರಡನೇ ಹಂತದ ಕಾರ್ಯಕ್ರಮವನ್ನು ಮಾಡಿದ್ದಾರೆ. ಕಳೆದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸುಮಾರು 8,000 ಕೋಟಿ ರೂಪಾಯಿಗಳನ್ನು "ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿಗಾಗಿ" ಮೀಸಲಿಟ್ಟಿದ್ದರು. ಅದನ್ನು ಇವತ್ತು ಎರಡನೇ ಹಂತದಲ್ಲಿ ಯಾವ್ಯಾವ ಪ್ರದೇಶಗಳಲ್ಲಿ ಏನೇನು ಅಗತ್ಯವಿದೆಯೋ, ಅಲ್ಲಿ ಮುಖ್ಯಮಂತ್ರಿಗಳ ವಿಶೇಷ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಸುಮಾರು 4,000 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡುವುದಕ್ಕೆ ಸರ್ಕಾರ ಇವತ್ತು ಕ್ರಮವನ್ನು ಕೈಗೊಂಡಿದೆ. ಅದೇ ರೀತಿ ರಾಜ್ಯದ ಕೃಷಿ ಬೆಳೆಗೆ ಮೌಲ್ಯವರ್ಧನೆ ಮತ್ತು ಕೃಷಿ ತ್ಯಾಜ್ಯ ಮರುಬಳಕೆಯನ್ನು ಉತ್ತೇಜಿಸಲು ಮುಂದಿನ ಮೂರು ವರ್ಷಗಳಲ್ಲಿ "ಮುಖ್ಯಮಂತ್ರಿ ಕೃಷಿ ವಿಸ್ತಾರ" ಯೋಜನೆಯನ್ನು ಜಾರಿಗೆ ತಂದು, ಅದಕ್ಕೆ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವಂತಹ ಕಾರ್ಯಕ್ರಮವನ್ನು ಸರ್ಕಾರ ಮಾಡಿದೆ. ಅದೇ ರೀತಿ ನಬಾರ್ಡ್‌ನ ಸಹಯೋಗದೊಂದಿಗೆ 100 ಪಶುವೈದ್ಯಕೀಯ ಸಂಸ್ಥೆಗಳ ನೂತನ ಕಟ್ಟಡಗಳ ನಿರ್ಮಾಣಗಳನ್ನು ಮಾಡುವಂತಹದ್ದು. ಬೆಳಗಾವಿ ಮತ್ತು

ಗುಲ್ಬರ್ಗಾ ವಿಭಾಗಗಳಲ್ಲಿ ಕುರಿ, ಮೇಕೆ, ಹಸು ಮತ್ತು ಎಮ್ಮೆ ಖರೀದಿಗಾಗಿ ತಲಾ ಹತ್ತು ಸಾವಿರ ಫಲಾನುಭವಿಗಳಿಗೆ ಶೇಕಡಾ 25ರಷ್ಟು ಸಹಾಯಧನ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಿದೆ.

ಮಾನ್ಯ ಸಭಾಪತಿಯವರೇ, ನಾನು ಕರಾವಳಿ ಭಾಗದಿಂದ ಬಂದಂತಹವನು. ಕರಾವಳಿಯ ಅನುಭವ ತಮಗೂ ಕೂಡ ಇದೆ. ಅಲ್ಲಿ ಮುಖ್ಯವಾಗಿ ಇರುವುದೇನೆಂದರೆ ಮೀನುಗಾರಿಕೆ. ತಲಪಾಡಿಯಿಂದ ಕಾರವಾರದವರೆಗೆ ಸುಮಾರು 375 ಕಿಲೋ ಮೀಟರ್ ಕರಾವಳಿ ಭಾಗ ಇದೆ. ಅಲ್ಲಿರುವ ಜನರು ಮೀನುಗಾರಿಕೆ ವೃತ್ತಿಯಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಮೀನುಗಾರಿಕೆ ಮಾಡುವಂತಹವರಿಗೆ ಈ ಹಿಂದೆ ಕಿಟ್‌ಗಳನ್ನು ಕೊಡುತ್ತಿದ್ದರು. ಈ ಕಿಟ್‌ಗಳನ್ನು ಕೊಟ್ಟು, ಮನೆ ಮನೆಗಳಿಗೆ ಹೋಗಿ ಮೀನುಗಳನ್ನು ಮಾರುವಂತಹದ್ದು ಮತ್ತು ರಸ್ತೆಗಳ ಬದಿಯಲ್ಲಿ ಟೆಂಟ್‌ಗಳನ್ನು ಹಾಕಿ ಮೀನುಗಳನ್ನು ಮಾರುವಂತಹದ್ದು ಅಥವಾ ಮಾರುಕಟ್ಟೆಗೆ ಕೊಂಡು ಹೋಗುವಂತಹವರಿಗೆ ಪ್ರತಿ ಮಹಿಳೆಗೆ ರೂ.10,000 ಗಳನ್ನು ಕೊಡುತ್ತಿದ್ದರು. ಇದಕ್ಕೆ ಮಾನ್ಯ ಸಿದ್ದರಾಮಯ್ಯನವರು ಈ ಬಜೆಟ್‌ನಲ್ಲಿ ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ರೂ.10,000 ಗಳಿಂದ ರೂ.20,000 ಗಳವರೆಗೆ ಏರಿಕೆ ಮಾಡಿ, ಕಿಟ್ ವಿತರಣೆ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಮಂಗಳೂರಿನಲ್ಲಿ ಮೀನುಗಾರಿಕಾ ಮಹಾವಿದ್ಯಾಲಯ ಎಂಬ ಒಂದು ಕಾಲೇಜು ಇದೆ. ಇದು ಬಹಳ ಹಳೆಯದಾದ ಕಾಲೇಜು. ಆ ಕಾಲೇಜಿನಲ್ಲಿ ಕಲಿತಿರುವಂತಹ ವಿದ್ಯಾರ್ಥಿಗಳು ಪಾಸಾದ ನಂತರ ಐದು ವರ್ಷಗಳ ಮುಂಚಿತವಾಗಿ ಬೇರೆ ಬೇರೆ ಇಲಾಖೆಯವರು ಬಂದು, ಆ ವಿದ್ಯಾರ್ಥಿಗಳು ನಮ್ಮ ಸಂಸ್ಥೆಗೆ ಬೇಕು ಎಂದು ಕೇಳುವಂತಹ ಒಂದು ಒಳ್ಳೆಯ ಸಂಸ್ಥೆ ಇದು. ಅದನ್ನು University College of Fisheries ಆಗಿ ಪರಿವರ್ತಿಸಿ ಎಂದು ನಾವು ಒತ್ತಾಯ ಮಾಡಿ ಕೇಳಿದ್ದೇವೆ. ಅದನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ "Centre of Excellence" ಅನ್ನು ಸ್ಥಾಪನೆ ಮಾಡಿದರು. "Centre of Excellence" ಅನ್ನು ಸ್ಥಾಪನೆ ಮಾಡಿರುವುದು, it is on par with the I.I.T., (Indian Institute of Technology) ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಮೀನುಗಾರಿಕೆಯಲ್ಲಿ ಎಷ್ಟೊಂದು ಸುಧಾರಣೆಯಾಗಿದೆ ಎಂದರೆ ಎಷ್ಟೋ deep sea fishing ಗೆ ಹೋಗುತ್ತಾರೆ. ಮೀನುಗಾರರು ನಾಲ್ಕೈದು ದಿವಸಗಳ ಕಾಲ ಸಮುದ್ರದ ದೂರಕ್ಕೆ ಹೋಗಿ satellite ನಿಂದ ಎಲ್ಲಿ ಮೀನುಗಳು ಇವೆ. ಅಲ್ಲಿ ಬಲೆಗಳನ್ನು ಬಿಸಿ, ತಮಗೆ ಬೇಕಾದಂತಹ ಮೀನುಗಳನ್ನು ಹಿಡಿಯುವಂತಹ ತಾಂತ್ರಿಕತೆ ಇವತ್ತು ಅಭಿವೃದ್ಧಿಯಾಗುತ್ತಿದೆ. ಈ ತಾಂತ್ರಿಕತೆ ಅಭಿವೃದ್ಧಿಯಾಗಬೇಕೆಂದರೆ ಮೀನುಗಾರಿಕೆಯಲ್ಲಿ ಇವತ್ತು ಅತಿ ದೊಡ್ಡ ರೀತಿಯ ಬದಲಾವಣೆಗಳು ಮತ್ತು ಅದಕ್ಕೆ ಬೇಕಾದಂತಹ ತಾಂತ್ರಿಕ ಶಿಕ್ಷಣ ಕೊಡುವಂತಹ ಅವಶ್ಯಕತೆ ಇದೆ ಎಂದು ನಾವು ಈ ಹಿಂದೆಯೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರು ಮನಸಿಟ್ಟು ಮಾಡಿದ್ದರು. ಹಾಗಾಗಿ ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ "Centre of Excellence" ಮಾಡುವ ಮೂಲಕ ಮುಂದಕ್ಕೆ ಡಾಕ್ಟರೇಟ್ ಮಾಡುವವರು ಇರಬಹುದು. ಅದರಲ್ಲಿ ಇನ್ನೂ ಹೆಚ್ಚಿನ ಪರಿಣಿತಿಯನ್ನು ಪಡೆದವರು ಇರಬಹುದು.

ಪಿ.ಹೆಚ್‌ಡಿ., ಮಾಡುವವರು ಇರಬಹುದು. ಈ ರೀತಿಯ ಬದಲಾವಣೆಗಳನ್ನು ಕಲಿಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಬೆಳಗಾವಿ, ಧಾರವಾಡ, ದಾಣಗೆರೆ, ಹುಬ್ಬಳ್ಳಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮತ್ಸ್ಯದರ್ಶಿನಿಗಳ ಸ್ಥಾಪನೆ ಮಾಡುವಂತಹದ್ದು. ಮೀನುಗಾರಿಕಾ ಮಾರುಕಟ್ಟೆಗಳನ್ನು ಹೆಚ್ಚಿನದಾಗಿ ಮಾಡುವಂತಹದ್ದು. ಮೀನುಗಾರಿಕೆಗೆ ಹೆಚ್ಚು ಬೇಡಿಕೆ ಬರುವುದಕ್ಕೋಸ್ಕರ ಮೀನುಗಾರಿಕೆಗೆ ಸಂಬಂಧಪಟ್ಟಂತಹ Ice Plant ಗಳನ್ನು ಹೆಚ್ಚು ಮಾಡುವಂತಹದ್ದಕ್ಕೆ ಈ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ.

ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, 38 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 30,000 ಕೋಟಿ ರೂಪಾಯಿಗಳ ಕೃಷಿ ಸಾಲದ ವಿತರಣೆ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ನಮ್ಮದು ಕೃಷಿ ಪ್ರಧಾನವಾದ ದೇಶ ಮತ್ತು ರಾಜ್ಯವಾಗಿದೆ. ನಮ್ಮ ರಾಜ್ಯದಲ್ಲಿ ಇವತ್ತು ಕೃಷಿಗೆ ಹೆಚ್ಚು ಪ್ರಧಾನ್ಯತೆ ಕೊಡಬೇಕಾಗಿದೆ. ಇವತ್ತು ವೈಜ್ಞಾನಿಕವಾಗಿ ಕೃಷಿಯನ್ನು ಬೆಳೆಸಬೇಕಾಗಿದೆ. ಕರಾವಳಿಯಲ್ಲಿ ಹೆಚ್ಚು ಕೃಷಿ ಬೆಳೆಸುವುದಾದರೆ, ನಮ್ಮಲ್ಲಿ ಕಬ್ಬು ಬೆಳೆಯುವುದು ಕಡಿಮೆ ಮತ್ತು ಭತ್ತ ಕೂಡ ಕಡಿಮೆಯಾಗಿ ಹೋಗಿದೆ. ಇವತ್ತು ಕೃಷಿ ಬೆಳೆಸಬೇಕೆಂದರೆ, ಈ ಕಾಡು ಕೃಷಿಗಳಿಗೆ ಹೆಚ್ಚು ಆದ್ಯತೆಯನ್ನು ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ ತೆಂಗು ಮತ್ತು ಹಲಸು, ಗೇರುಗಳನ್ನು ಬೆಳೆಸುವಂತಹದ್ದು ಇದೆ. ಈ ಹಿಂದೆ ಗೇರು ಕೃಷಿ ಎಂದರೆ ಬರೀ ಬೊಡ್ಡೆಯಲ್ಲಿ ಎಲ್ಲಿಯಾದರೂ ಗೇರು ಬೀಜ ಬಿದ್ದಿರುತ್ತದೆ. ಅದು ಸಸಿಯಾಗಿ ಮರವಾಗಿ ಬೆಳೆಯುತ್ತದೆ. ಅದು ದೊಡ್ಡ ಮರವಾಗಿ ಬೆಳೆದರೆ, ಆ ಒಂದು ಮರದಲ್ಲಿ ಐದು–ಆರು ಕೆ.ಜಿ. ಗೇರು ಬೀಜಗಳು ಬರುತ್ತವೆ. ಆದರೆ ನಮ್ಮ ಕರಾವಳಿ ಭಾಗ ಗುಡ್ಡಗಾಡು ಪ್ರದೇಶವಾಗಿದೆ. ಕರಾವಳಿ ಭಾಗದಲ್ಲಿ ನೀರಿನ ಅಂಶ ಕಡಿಮೆ ಇರುವಂತಹ ಪ್ರದೇಶವಾಗಿದೆ. ಆ ಭಾಗದಲ್ಲಿ ಕೃಷಿ ಆಗುವುದಕ್ಕೆ ಇವತ್ತು ವೈಜ್ಞಾನಿಕವಾಗಿ ಸಂಶೋಧನೆಯ ಮೂಲಕ ಒಳ್ಳೆಯ ಬೀಜಗಳನ್ನು ಬಿತ್ತಿ ಒಳ್ಳೆಯ ಸಸಿಗಳನ್ನು ನೆಟ್ಟರೆ ಅದರ ಎತ್ತರ 5 ಅಡಿಯಲ್ಲಿ ಒಂದು ಗೇರು ಕೃಷಿಯ ಮರ 23 ರಿಂದ 24 ಕೆ.ಜಿ. ಫಸಲನ್ನು ಕೊಡುವಂತಹ ಕೃಷಿಯನ್ನು ನಾವು ಬೆಳೆಸಬೇಕಾದಂತಹ ಅವಶ್ಯಕತೆ ಇದೆ. ಇವತ್ತು ಕೇಂದ್ರ ಸರ್ಕಾರವು ಕೂಡ ಗೇರು ಕೃಷಿಯನ್ನು ಹೆಚ್ಚು ಬೆಳೆಸಬೇಕು ಎನ್ನುವ ರೀತಿಯಲ್ಲಿ ಮೊನ್ನೆ ತಾನೇ ಭಾರತ ದೇಶದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಬಜೆಟ್ ಮಂಡನೆ ಮಾಡುವಾಗ ಗೇರು ಕೃಷಿಯನ್ನು ಮೂಲ ಉದ್ದೇಶವನ್ನಾಗಿ ಮಾಡಿ. ಅದರಿಂದ ಹೆಚ್ಚು ಕೃಷಿ ಬರುವಂತೆ ಮಾಡಬೇಕು. ಅದು ರಾಷ್ಟ್ರೀಯ ಸಂಪತ್ತು ಆಗಬೇಕು. ಅದೊಂದು ಒಳ್ಳೆಯ ಕೃಷಿ ಎಂದು ಹೇಳುವ ರೀತಿಯಲ್ಲಿ ಪ್ರೋತ್ಸಾಹ ಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆ. ಅದು ಕರ್ನಾಟಕಕ್ಕೂ ತರಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಗೇರು ಕೃಷಿ ಬರೀ ಕರಾವಳಿ ಭಾಗದಲ್ಲಿ ಮಾತ್ರವಲ್ಲ. ಅದನ್ನು ಇತರ ರಾಜ್ಯದ ಭಾಗಗಳಿಗೂ ತರಬೇಕು. 1995ರಲ್ಲಿ ನಾನು ಕರ್ನಾಟಕ ಗೇರು

ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ಉಳ್ಳಾಲ-1 ಮತ್ತು ಉಳ್ಳಾಲ-2 ಗಿಡಗಳನ್ನು ನೆಟ್ಟು ಇಡೀ ರಾಜ್ಯಕ್ಕೆ ಅದು ಕೋಲಾರ ಇರಬಹುದು. Bengaluru Peripheral City ಗಳಲ್ಲಿ ಇರಬಹುದು.

**(ಮುಂದು)**

(278) 10.03.2026 4.00 ಟಿ.ಸಿ.ಹೆಚ್-ಎಂಡಿ (ವೈಸ್ ಚೇರ್ಮನ್ ರವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಬೇರೆ ಬೇರೆ ಜಿಲ್ಲೆಗಳಲ್ಲೂ ಕೂಡ ಆ ಮಣ್ಣನ್ನು ಪರೀಕ್ಷೆ ಮಾಡಿ C.S.R.I (Central Soil Salinity Research Institute)ಗಳ ಮುಖಾಂತರ ಅದನ್ನು investigate ಮಾಡಿ, ಬೇರೆ ಬೇರೆ ರಾಜ್ಯದ ಭಾಗಗಳಲ್ಲಿ ಇವತ್ತಿನ ದಿವಸ ಗೇರು ಕೃಷಿಯನ್ನು ಕೂಡ ಮಾಡುತ್ತಿದ್ದಾರೆ. ಇವತ್ತಿನ ದಿವಸ ಹಲಸಿನ ಹಣ್ಣಿನ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ತಾವು ಎಲ್ಲಾದರೂ ಕೃಷಿ ಮೇಳಗಳಿಗೆ ಹೋದಾಗ, ಅಲ್ಲಿ ಸುಮಾರು 25 ತರಹದ ಬೇರೆ ಬೇರೆ ರೀತಿಯ ಕೃಷಿ ಹಲಸಿನ ಗಿಡಗಳು ನೋಡುವುದಕ್ಕೆ ಸಿಗುತ್ತದೆ. ಥೈಲ್ಯಾಂಡ್ ಮತ್ತು ಬೇರೆ ಬೇರೆ ದೇಶದ ಸಸಿಗಳು ಸಿಗುತ್ತವೆ. ಈ ಮೊದಲು ಹಲಸಿನ ಹಣ್ಣು ವರ್ಷದಲ್ಲಿ 3 ತಿಂಗಳು ಮಾತ್ರ ಸಿಗುತ್ತಿದ್ದು, ಈಗ ವರ್ಷದ 12 ತಿಂಗಳು ತಮಗೆ ಹಲಸಿನ ಹಣ್ಣುಗಳು ನೋಡುವುದಕ್ಕೆ ಸಿಗುತ್ತದೆ. ಇವತ್ತಿನ ದಿವಸ ವರ್ಷದ ಹನ್ನೆರಡು ತಿಂಗಳು ಕೂಡ ಮಾವಿನ ಹಣ್ಣುಗಳು ನಮಗೆ ನೋಡುವುದಕ್ಕೆ ಸಿಗುತ್ತದೆ. ಇದು ವೈಜ್ಞಾನಿಕವಾಗಿ ಬೆಳೆದಿರತಕ್ಕಂಥದ್ದು. ಹಾಗೆಯೇ ನಾನು ಸನ್ಮಾನ್ಯ ಮುಖ್ಯಮಂತ್ರಿಯಗಳಿಗೆ ವಿನಂತಿ ಮಾಡುತ್ತೇನೆ. ಅವರು ಸುಮಾರು 38 ಲಕ್ಷ ರೈತರಿಗೆ ಶೂನ್ಯ ಬಡ್ಡಿದರಲ್ಲಿ ಸುಮಾರು ರೂ.30,000 ಕೋಟಿಗಳ ಕೃಷಿ ಸಾಲವನ್ನು ವಿತರಣೆ ಮಾಡುತ್ತಿದ್ದು, ಈ ವಿತರಣೆ ಮಾಡತಕ್ಕಂಥ ಈ ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರು ವೈಜ್ಞಾನಿಕವಾಗಿ ಬೆಳೆಯನ್ನು ಬೆಳೆಸುವುದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕಾಗುತ್ತದೆ. ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಸಬೇಕು ಎಂದು ಹೇಳುವುದನ್ನು ನಿರ್ಧಾರ ಮಾಡಿ, ಅವರಿಗೆ ಅಲ್ಲಿ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ತಾವು ಮಂಗಳೂರಿಗೆ ಬಂದು ಕಬ್ಬು ಬೆಳೆಸುತ್ತೇನೆಂದರೆ ಅಲ್ಲಿ ಬೆಳೆಸುವುದಕ್ಕೆ ಬರುವುದಿಲ್ಲ. ಆ ಕಬ್ಬು ಬೆಳೆದರೂ ಸರಿಯಾದಂತಹ ಸಿಹಿ ಇರುವುದಿಲ್ಲ ಮತ್ತು ಅದು ಬೇಕಾದಂತಹ ಸೈಜ್‌ಗೆ ಬರುವುದಿಲ್ಲ. ಏಕೆಂದರೆ ನಮ್ಮಲ್ಲಿ salt ಅಂಶ ಇರುತ್ತದೆ. ಹಾಗಾಗಿ, ಯಾವ ಯಾವ ಭಾಗದಲ್ಲಿ ಯಾವ ಯಾವ ಕೃಷಿ ಬೆಳೆಸಬೇಕು ಎಂದು ಹೇಳುವುದನ್ನು ವೈಜ್ಞಾನಿಕವಾಗಿ ಚಿಂತನೆ ಮಾಡುವುದು ಇಂದಿನ ಅವಶ್ಯಕತೆ ಇದೆಯೆಂದು ನಾನು ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ರೂ.30,000 ಕೋಟಿಗಳಷ್ಟು ಕೃಷಿ ಸಾಲ ನೀಡುತ್ತಿದ್ದು, ಅವರಿಗೆ ಕೊಡುವಂತಹ ಸಂದರ್ಭದಲ್ಲಿ ಅವರಿಗೆ ಸರಿಯಾದಂತಹ ವಿಚಾರಗಳನ್ನು ತಿಳಿಸಿ, ಒಂದೊಂದು ಭಾಗಕ್ಕೆ ಒಂದೊಂದು ರೀತಿಯ ಬೆಳೆಗಳನ್ನು ಬೆಳೆಯಲು ಕೊಟ್ಟರೆ ಬಹುಶಃ ಅದು ಹೆಚ್ಚು ಸಹಕಾರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಜಲಸಂಪನ್ಮೂಲದ ವಿಚಾರಣೆಯಾಗುತ್ತಿದ್ದು, ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ concurrent subject. ನೀರು ಎಂದು ಹೇಳುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜೊತೆಯಲ್ಲೇ ಇರತಕ್ಕಂಥ subject. ಇವತ್ತಿನ ದಿವಸ ನೀರಾವರಿಗೆ ಕೇಂದ್ರ ಸರ್ಕಾರವು ಬಹಳಷ್ಟು ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಅದು interstate ಗೆ ಸಂಬಂಧಿಸಿದ್ದಾಗಿದ್ದು, ನಮ್ಮ ನೀರು ತಮಿಳುನಾಡು, ಗೋವಾ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಕ್ಕೂ ಹೋಗುತ್ತದೆ. ಇವತ್ತಿನ ದಿವಸ ನೀರು ಎಂದು ಹೇಳುವಂತಹ ಸಂಪತ್ತು central subject ನಲ್ಲಿ ಇದೆ. ಹಾಗಾಗಿ, ಹೆಚ್ಚುವರಿ ನೀರು ಸಂಗ್ರಹಣೆಗಾಗಿ ಇವತ್ತಿನ ದಿವಸ 'ಎತ್ತಿನ ಹೊಳೆ' ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ನಮ್ಮ ಊರಿನಲ್ಲೇ ಅದಕ್ಕೆ ದೊಡ್ಡ ಗಲಾಟೆಯಾಯಿತು. ಎತ್ತಿನ ಹೊಳೆ ಎನ್ನುವುದಕ್ಕಿಂತ ಅದನ್ನು 'ತಿರುಗಿಸುವುದು' ಎಂದು ಹೇಳಬಿಟ್ಟರು. ಅದು 'ನೇತ್ರಾವತಿ ತಿರುವು' ಎಂದು ಹೇಳುವಂಥ ಯೋಜನೆಯಾಗಿದೆ. ನೀರು ಕೊಡುವುದಿಲ್ಲ ಎಂದು ಅದಕ್ಕೆ ಬಹಳ ದೊಡ್ಡ ಗಲಾಟೆ ಕೂಡ ಆಯಿತು., ನೇತ್ರಾವತಿ ತಿರುವು ಮಾಡುವುದರಿಂದ ನಮಗೆ ಕುಡಿಯುವುದಕ್ಕೆ ನೀರು ಇಲ್ಲದಂತೆ ಮಾಡುತ್ತೀರಿ ಎಂದು ಹೇಳಿದರು. ಆ ಸಂದರ್ಭದಲ್ಲಿ ಈ ಎತ್ತಿನ ಹೊಳೆ ಯೋಜನೆಗೆ ನಮ್ಮ ಸರ್ಕಾರ ಬಹಳಷ್ಟು ದೊಡ್ಡ ರೀತಿಯಲ್ಲಿ ಕುಡಿಯುವ ನೀರಿಗೆ ಆದ್ಯತೆ ಕೊಟ್ಟಿದೆ. ಎತ್ತಿನ ಹೊಳೆ ಯೋಜನೆಯಡಿ ಕೊರಟಗೆರೆ ತಾಲ್ಲೂಕಿನ ವಡೇರಹಳ್ಳಿ ಸಮೀಪ 1.2 ಟಿ.ಎಂ.ಸಿ ಸಾಮರ್ಥ್ಯದ ಸಮತೋಲನ ಜಲಾಶಯ ನಿರ್ಮಾಣ ಮಾಡಿ, ಈ ಯೋಜನೆ ಎರಡನೇ ಹಂತದಲ್ಲಿ ಕುಡಿಯುವ ನೀರಿಗೋಸ್ಕರ ಆದ್ಯತೆ ಕೊಟ್ಟು ಶೀಘ್ರವಾಗಿ ಪೂರ್ತಿಗೊಳಿಸುವುದಕ್ಕೆ ಈ ಯೋಜನೆಯನ್ನು ಹಾಕಿಕೊಂಡಿತ್ತು. ಅದೇರೀತಿ ಭದ್ರಾ ಮೇಲ್ದಂಡೆ ಯೋಜನೆಗೆ ಚಿತ್ರದುರ್ಗದ ಶಾಖಾ ಕಾಲುವೆ ಮತ್ತು ಇದರಡಿ ಬರುವ ಫೀಡರ್ ಕಾಮಗಾರಿಗಳನ್ನು 2027ನೇ ಸಾಲಿನಲ್ಲಿ ಪೂರ್ಣಗೊಳಿಸಿ, ಸುಮಾರು 157 ಕೆರೆಗಳನ್ನು ತುಂಬಿಸತಕ್ಕಂಥ ಕಾರ್ಯಕ್ರಮವನ್ನು ಮಾಡಿದೆ. ಇವತ್ತಿನ ದಿವಸ ಚಾಮರಾಜನಗರದ ಹನೂರು ತಾಲ್ಲೂಕಿನಲ್ಲಿ ಅಂತರ್ಜಲವನ್ನು ಹೆಚ್ಚಿಸಿ ಸುಮಾರು 12,000 ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು 'ಉಡುತೊರೆ ಹಳ್ಳ' ಯೋಜನೆಗಾಗಿ ರೂ.490 ಕೋಟಿಗಳನ್ನು ಮೀಸಲಿಟ್ಟಿದ್ದಾರೆ. ಅಂದರೆ ಜಲ ಸಂಪನ್ಮೂಲ ನಿರ್ವಹಣೆ ಕೂಡ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಇವತ್ತಿನ ದಿವಸ ರೈತರಿಗೆ ನೀರನ್ನು ಅವರ ಕೃಷಿಗಳಿಗೆ ಬೇಕಾದ ಹಾಗೆ ದೊರಕಿಸಿ ಕೊಡತಕ್ಕಂಥದ್ದು. ಇವತ್ತಿನ ದಿವಸ ರೈತರಿಗೆ ಜಾಸ್ತಿ ದುಡ್ಡು ಕೊಡುವುದಕ್ಕಿಂತ ಮತ್ತು ಸಾಲ ಕೊಡುವುದಕ್ಕಿಂತ ಜಾಸ್ತಿ ನೀರು ಕೊಟ್ಟರೆ ಅವರು ತಮ್ಮ ಬೆಳೆಗಳನ್ನು ಫಲವತ್ತಾಗಿ ಬೆಳೆಸುವ ಮೂಲಕ ಇಡೀ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಮತ್ತು ಒಳ್ಳೆಯ ರೀತಿಯ ಕೃಷಿಯ ಬೆಳವಣಿಗೆಗೆ ಸಾಧ್ಯವಾಗುತ್ತದೆ. ಅದೇರೀತಿ ಇವತ್ತಿನ ದಿವಸ ರಾಜ್ಯ ಸರ್ಕಾರ ಸಣ್ಣ ನೀರಾವರಿ ಯೋಜನೆಗೆ ಒತ್ತು ಕೊಟ್ಟು ರೂ.257 ಕೋಟಿಗಳಲ್ಲಿ ಹೆಬ್ಬಾಳ-ನಾಗವಾರ ಕಣಿವೆಯ ಮೂರನೇ ಹಂತದಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥದ್ದು. ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಹೆಚ್.ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಯೋಜನೆಯನ್ನು

ಸುಮಾರು ರೂ.140 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುವುದು. ಸುಮಾರು ರೂ.650 ಕೋಟಿ ಮೊತ್ತದಲ್ಲಿ ಬೆಂಗಳೂರು ನಗರದ ವೃಷಭಾವತಿ ವ್ಯಾಲಿಯಿಂದ ದ್ವಿತೀಯ ಹಂತದಲ್ಲಿ ಕೆರೆ ತುಂಬಿಸುವ ಯೋಜನೆ ಅನುಷ್ಠಾನಕ್ಕೆ ತರುವಂಥದ್ದು. ಕೆರೆಗಳ ಸಂರಕ್ಷಣೆಗೆ ಕೆರೆ ಬಳಕೆದಾರರ ಸಂಘಗಳ ಬಲವರ್ಧನೆ ಮಾಡುವಂಥದ್ದು. ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಕುಕನೂರು ಮತ್ತು ಕಲಬುರಗಿ ಜಿಲ್ಲೆಯ ಅಳಂದ ತಾಲ್ಲೂಕಿನ ಜಿಡಗಾದಲ್ಲಿ ರೂ.25 ಕೋಟಿ ವೆಚ್ಚದಲ್ಲಿ ಅಂತರ್ಜಲ ಹೆಚ್ಚಿಸಲು ಕೆರೆಗಳ ಆಧುನೀಕರಣ, ಅಣೆಕಟ್ಟು ಮತ್ತು ಪಿಕ್-ಅಪ್ ಹಾಗೂ ಚೆಕ್ ಡ್ಯಾಂ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ಮಾನ್ಯ ಸಣ್ಣ ನೀರಾವರಿ ಸಚಿವರು ಕೂಡ ಇಲ್ಲೇ ಕುಳಿತುಕೊಂಡಿದ್ದಾರೆ. ಇವತ್ತಿನ ದಿವಸ ದೊಡ್ಡ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಚಿವರೇ, ಇವತ್ತಿನ ದಿವಸ ಈ ನೇತ್ರಾವತಿ ತಿರುವು ಅಥವಾ ತಾವು ಎತ್ತಿನ ಹೊಳೆ ಯೋಜನೆ ಜಾರಿಗೆ ಬರುತ್ತದೆ ಎಂದಾಗ ನಮ್ಮ ಜಿಲ್ಲೆಯಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಯಿತು. ಆಗ ಕರಾವಳಿ ಭಾಗಕ್ಕೆ ಸೇರಿದವರೆಲ್ಲಾ ಬಂದು ಈ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿದಾಗ 'ಪಶ್ಚಿಮ ವಾಹಿನಿಯ ಯೋಜನೆ'ಯನ್ನು ಜಾರಿಗೆ ತಂದರು. ಪಶ್ಚಿಮ ವಾಹಿನಿಯನ್ನು ಜಾರಿಗೆ ತಂದಂಥ ಉದ್ದೇಶವೇನೆಂದರೆ, ಪಶ್ಚಿಮಾಭಿಮುಖವಾಗಿ ಹರಿಯುವಂಥ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು ಹಾಕಿ, ನೀರಿನ ಮಟ್ಟವನ್ನು ಏರಿಸುವಂಥ ಯೋಜನೆಗಳನ್ನು ಮಾಡುವುದಾಗಿತ್ತು. ಪ್ರಥಮ ಹಂತದಲ್ಲಿಯೇ ಸುಮಾರು ರೂ.400 ಕೋಟಿಗಳ ಬೃಹತ್ ಮೊತ್ತವನ್ನು ಮೀಸಲಿಟ್ಟಿದ್ದಾರೆ. ಹಂತ ಹಂತವಾಗಿ ಇದಕ್ಕೆ ದುಡ್ಡನ್ನು ಕೊಡತಕ್ಕಂಥ ಕಾರ್ಯಕ್ರಮಗಳಾಯಿತು. ಈ ಯೋಜನೆಗಳು ಬಹಳಷ್ಟು ಯಶಸ್ವಿಯಾಯಿತು. ಕಿಂಡಿ ಅಣೆಕಟ್ಟುಗಳನ್ನು ಕಟ್ಟಿ, ಅಲ್ಲಲ್ಲಿ ನೀರಿಗೆ ಬ್ಯಾರೇಜ್‌ಗಳನ್ನು ಕಟ್ಟಿ, ನೀರನ್ನು ಸಂಗ್ರಹ ಮಾಡತಕ್ಕಂಥದ್ದು ಆಯಿತು. ಎಲ್ಲಾ ರೀತಿಯಲ್ಲಿ ದೊಡ್ಡಮಟ್ಟದ ಬೆಳವಣಿಗೆ ಆಯಿತು.

ಮಾನ್ಯ ಸಭಾಪತಿಯವರೇ, ಮಾನ್ಯ ಸಣ್ಣ ನೀರಾವರಿ ಸಚಿವರು ಕೂಡ ಇಲ್ಲೇ ಇದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಪಶ್ಚಿಮ ವಾಹಿನಿ ಯೋಜನೆಗೆ ಯಾವುದೇ ರೀತಿಯ ಹಣವನ್ನು ಮೀಸಲಿಟ್ಟಿರುವುದು ನನಗೆ ಕಾಣುತ್ತಿಲ್ಲ ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.. ಇವರು Rs. 100 crore ಎಂದು ಹೇಳುತ್ತಾರೆ ಆದರೆ ಎಲ್ಲೂ ಕಾಣುತ್ತಿಲ್ಲ. ಇವತ್ತಿನ ದಿವಸ ನಾವು ಪಶ್ಚಿಮ ವಾಹಿನಿ ಯೋಜನೆ ನಮ್ಮ ಕನಸಿನ ಯೋಜನೆ. ಇವತ್ತಿನ ದಿವಸ ಇದರಿಂದ ಎಷ್ಟೋ ರೈತರಿಗೆ ಉಪಯೋಗವಾಗಿದೆ. ಈ ಯೋಜನೆಯ ಮೂಲಕ ಇಡೀ ರೈತ ಬಳಗ ಅಥವಾ ರೈತ ಸಮೂಹ ಬೆಳೆ ಬೆಳೆಯುವುದು ಮಾತ್ರವಲ್ಲದೇ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅತ್ಯಂತ ಪ್ರಮುಖವಾಗಿರತಕ್ಕಂಥ ಯೋಜನೆ. Rs. 100 crore ಕೊಟ್ಟಿದ್ದಾರೆ ಆ ಹಣವನ್ನು ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನೀವು ಅದನ್ನು ಮಾಡಬೇಕೆಂದು ಮಾನ್ಯ ಸಚಿವರಿಗೆ ಮಾನ್ಯ ಸಭಾಪತಿಯವರ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶಾಲಾ ಶಿಕ್ಷಣ ಮತ್ತು ಸಾಕ್ಷರತೆಯ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಇಲ್ಲೇ ಕುಳಿತುಕೊಂಡಿದ್ದಾರೆ. ಸುಮಾರು ೮೦೦ ಹೊಸ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶಃ ಇವತ್ತಿನ ದಿವಸ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ, ಅದನ್ನು ಹೆಚ್ಚಿಗೆ ಮಾಡಿ ಆ ಶಾಲೆಗಳ ಉನ್ನತೀಕರಣ ಮಾಡುವುದಕ್ಕಾಗಿ, ಶಾಲಾ ಶಿಕ್ಷಕರನ್ನು ನೇಮಕ ಮಾಡುವ ಕಾರ್ಯಕ್ರಮದಿಂದ ಹಿಡಿದು ಇವತ್ತಿನ ದಿವಸ ರಾಜ್ಯದಲ್ಲಿ ಒಳ್ಳೆಯ ಬೆಳವಣಿಗೆ ಆಗಿದೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುತ್ತಿದ್ದಾರೆಂದರೆ, ಬಹುಶಃ ಹಿಂದೆ ಮತ್ತು ಈಗ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇತ್ತೀಚೆಗೆ ಮಾನ್ಯ ಸಚಿವರ ಭಾಷಣವನ್ನು ನಾನು ಕೇಳಿದ್ದೇನೆ. ನಾವು ಇಷ್ಟೊಂದು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟರೂ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗೆಯೇ ಸಂಖ್ಯೆ ಜಾಸ್ತಿ ಮಾಡಲು ಸಮಾಜಕ್ಕೆ, ಎಲ್ಲಾ ಸಚಿವರು ಮತ್ತು ಮಾನ್ಯ ಶಾಸಕರುಗಳಿಗೆ ಸಹಕಾರ ಮಾಡಬೇಕು ಎಂದು ವಿನಂತಿ ಮಾಡಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ಆದರೆ ಇವತ್ತಿನ ದಿವಸ ಸರ್ಕಾರ ಸುಮಾರು ೮೦೦ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಪ್ರಾರಂಭ ಮಾಡುತ್ತಿದೆ ಎಂದು ಹೇಳಿದ್ದಾರೆ. ಅದು ಯಾವ ಕಾರಣಕ್ಕಾಗಿ ಗೊತ್ತಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಅಂದರೆ ನೀವು ಸತ್ಯವನ್ನು ಒಪ್ಪಿದ್ದಿರಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, It's a universal fact. ಅದು ಒಪ್ಪಿಕೊಳ್ಳುವ ಪ್ರಶ್ನೆ ಎಲ್ಲಿ ಬರುತ್ತದೆ? ಮಾನ್ಯ ರವಿಕುಮಾರ್‌ರವರೇ, ನಿಮ್ಮ ಪಕ್ಷದ ಆಡಳಿತದಲ್ಲಿನ examples ನ್ನು ನೀವು ತೆಗೆದುಕೊಳ್ಳಿ. ನಾನು ರಾಜಕಾರಣ ಮಾತನಾಡುವುದಿಲ್ಲ. ನಿಮ್ಮ ಆಡಳಿತದ ಅವಧಿಯಲ್ಲಿ ನೀವು statistics ತೆಗೆದುಕೊಂಡಾಗ ಆಗಲೂ ಕೂಡ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಾ ಹೋಗುತ್ತಿತ್ತು. ಅದನ್ನು ಮಾಡಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಮಾನ್ಯ ಸಚಿವರು ಎಲ್ಲಿಯವರೆಗೆ ಹೇಳಿದ್ದಾರೆಂದರೆ, ತಾವೇ debate ನಲ್ಲಿ ಭಾಗವಹಿಸಿದ್ದೀರಿ. ಒಬ್ಬರು ವಿದ್ಯಾರ್ಥಿ ಇದ್ದರೂ ಕೂಡ ನಾವು ಆ ಶಾಲೆಯನ್ನು ಮುಚ್ಚುವುದಿಲ್ಲ ಎಂದು ಹೇಳಿದ್ದಾರೆ. That is the commitment of the Government. ಇವತ್ತಿನ ದಿವಸ ಸುಮಾರು ೮೦೦ ಇಂಗ್ಲೀಷ್ ಮಾಧ್ಯಮದ ಹೊಸ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಪ್ರಾರಂಭ ಮಾಡುವಂಥ ಕೆಲಸ ಚಿಕ್ಕ ವಿಚಾರ ಅಲ್ಲ. ಮಾನ್ಯ ಸಚಿವರೇ, ಒಂದು ವರ್ಷಕ್ಕೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ರೂ. 4 ಕೋಟಿ ಅಥವಾ 5 ಕೋಟಿ ಖರ್ಚಾಗುತ್ತದೆಯೇ?

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, On an average ರೂ. 4 ಕೋಟಿಗಳು ಖರ್ಚಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಇಷ್ಟು ದೊಡ್ಡ ಮೊತ್ತವನ್ನು ಖರ್ಚು ಮಾಡುತ್ತಿದ್ದಾರೆ. ಒಂದು ಬಾರಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾರಂಭವಾಯಿತೆಂದರೆ ಆ

ಶಾಲೆಯ ಮಕ್ಕಳಿಗೆ ಬಹಳ ದೊಡ್ಡ ಬಲವನ್ನು ಕೊಟ್ಟಂತೆ ಆಗುತ್ತದೆ. ಏಕೆಂದರೆ ಅಲ್ಲಿ ಎಲ್.ಕೆ.ಜಿ ಮತ್ತು ಯು.ಕೆ.ಜಿಯಿಂದ ಹಿಡಿದು upto 12th standard ರವರೆಗೆ ಆ ಮಗು ಬೇರೆ ಎಲ್ಲಿಗೂ ಹೋಗಬೇಕಾಗಿಲ್ಲ. ಆ ವಿದ್ಯಾರ್ಥಿಗೆ ಸರ್ವತೋಮುಖವಾದಂತಹ excellence of education ಸಿಗುವುದಕ್ಕೆ ಪ್ರಾರಂಭವಾಗುತ್ತದೆ. ಹಾಗಾಗಿ, ಈ ಒಂದು ಕೆಲಸವನ್ನು ಮಾಡಿರುವುದಕ್ಕೆ ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಶಾಲಾ ಕಾಲೇಜುಗಳಿಗೆ ಹೆಚ್ಚುವರಿ ಕೊಠಡಿ, ಶೌಚಾಲಯ ನಿರ್ಮಾಣ ಮತ್ತು ದುರಸ್ಥಿ ಕಾರ್ಯಗಳಿಗೆ ಸುಮಾರು ರೂ.640 ಕೋಟಿಗಳು, ಪೀಠೋಪಕರಣ ಖರೀದಿಗೆ ರೂ.25 ಕೋಟಿಗಳಷ್ಟು ಅನುದಾನವನ್ನು ಕೊಟ್ಟಿದ್ದಾರೆ. ಅದೇ ರೀತಿ ಶಾಲಾ ಕಾಲೇಜ್‌ಗಳಲ್ಲಿ ಇರುವ ಸುಮಾರು 15,000 ಬೋಧಕರ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥದ್ದು.

**(ಮುಂದು)**

(279)10.3.2026/4.10/ಎಂ.ಎಂ-ಎ.ಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಐವನ್ ಡಿಸೋಜಾ (ಮುಂದು):-**

ಅದೇ ರೀತಿ ಶಾಲಾ-ಕಾಲೇಜುಗಳಲ್ಲಿರುವ 15,000 ಬೋಧಕರ ಹುದ್ದೆಯನ್ನು ಭರ್ತಿ ಮಾಡುವುದು, ಅದಕ್ಕಿಂತಲೂ ಜೋರಾಗಿ ಸರ್ಕಾರ ಒಂದು ದೊಡ್ಡ ಹೆಜ್ಜೆಯನ್ನಿಟ್ಟಿದೆ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧ ಮಾಡಬೇಕು. ಮಾನ್ಯ ಸಭಾಪತಿಯವರೇ, ತಾವು ಇದನ್ನು ಮಕ್ಕಳ ಹಕ್ಕುಗಳ ವಿಚಾರದಲ್ಲಿ ಇದೇ ಸದನದಲ್ಲಿ ಮಾತನಾಡುವಾಗ ಮಾನ್ಯ ಸಭಾಪತಿಯವರು ಮಾನ್ಯ ರವಿಕುಮಾರ್‌ರವರ ಬದಿಯಲ್ಲಿ ಕುಳಿತುಕೊಂಡು ಒಂದು ಭಾಷಣವನ್ನು ಮಾಡಿದರು. ಮಕ್ಕಳಿಗೆ ಸಾಮಾಜಿಕ ಜಾಲತಾಣದ ಮಿತಿಯನ್ನು ಹಾಕದೇ ಇದ್ದರೆ ಇಂದಿನ ಮಕ್ಕಳು ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾದೀತು ಎಂಬ ಮಾತನ್ನು ಹೇಳಿದಿರಿ. ಆ ಮಾತಿನ ಜೊತೆಗೆ ತಾವು ಎಲ್ಲಾ ಶಾಲೆಗಳಿಗೆ Moral Science class ಗಳನ್ನು ಮಾಡಬೇಕೆಂದು ಹೇಳಿದಿರಿ. ತಾವು ಹೇಳಿದಂತಹ ಎರಡು ಸಲಹೆಗಳನ್ನು ಮಾನ್ಯ ಸಚಿವರು ಈ ವರ್ಷದಿಂದ ಜಾರಿಗೆ ತಂದಿದ್ದಾರೆ. ಈ ವರ್ಷದಿಂದ Moral Science class ಗಳನ್ನು ಪ್ರತಿ ಶಾಲೆಗಳಲ್ಲಿ ಮಾಡುವಂತಹ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಕೆಲವು ವಿಚಾರಗಳು ಸಮಾಜದ ಹಿತದೃಷ್ಟಿಯಿಂದ ಮಾಡುವಂತದ್ದು ಮಕ್ಕಳ; ಈ ದೇಶದ ಭವಿಷ್ಯವನ್ನು ನಿರ್ಮಾಣ ಮಾಡುವಂತಹ ಮಕ್ಕಳಿಗೆ ಈ ರೀತಿಯ ಶಿಕ್ಷಣ ಕೊಡುವಂಥದ್ದು ಇಂದಿನ ಅವಶ್ಯಕತೆಯಾಗಿದೆ. ಅದೇ ರೀತಿ ಇವತ್ತು 16 ವರ್ಷದ ಮಕ್ಕಳಿಗೆ ಜಾಲತಾಣಗಳ ಬಳಕೆ ಬಗ್ಗೆ ಒಂದು ರೀತಿಯ ಒಳ್ಳೆಯ ಯೋಜನೆಗಳನ್ನು ಜಾರಿಗೆ ತರುವಂಥದ್ದು ಮತ್ತು ಮಕ್ಕಳಿಗೆ ಒಳ್ಳೆಯ ರೀತಿಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರುವ ಅವಶ್ಯಕತೆ ಇದೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳಲ್ಲಿ 1,000 ಬೋಧಕರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಅದೇ ರೀತಿ ಕಲ್ಯಾಣ ಕರ್ನಾಟಕದಲ್ಲಿರುವ 75 ಸರ್ಕಾರಿ ಪದವಿ ಕಾಲೇಜುಗಳಿಗೆ, 23 ಪಾಲಿಟೆಕ್ನಿಕ್ ಹಾಗೂ 5 ಇಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಈ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಕಾರವನ್ನು ಒದಗಿಸಿರುವಂಥದ್ದು ಒಂದು ಸಂತೋಷದ ಬೆಳವಣಿಗೆಯಾಗಿದೆ. ಜಾತಿ ಆಧಾರದ ಮೇಲೆ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಮತ್ತು ಸಾಮಾಜಿಕ ದೌರ್ಜನ್ಯ ತಡೆಗೆ 'ರೋಹಿತ್ ವೇಮುಲ ಕಾಯಿದೆ' ಜಾರಿ ಮಾಡಿದೆ. ನಿನ್ನೆ ಮೊನ್ನೆಯಷ್ಟೇ ನಾನು ಪತ್ರಿಕೆಯಲ್ಲಿ ಒಬ್ಬನು ಸಹಪಾಠಿಯೊಬ್ಬನನ್ನು ಕೊಂದು ಹಾಕಿರುವುದನ್ನು ಓದಿದೆನು. ಸಹಪಾಠಿಗಳ ಜೊತೆ ಪಾರ್ಟಿಯಲ್ಲಿ ಜಗಳವಾಗುತ್ತದೆ. They are all minors. ಜಗಳವಾಗಿ ಒಬ್ಬ ವಿದ್ಯಾರ್ಥಿ ಸತ್ತೇ ಹೋಗುತ್ತಾನೆ. ಇಂತಹ ಸಂದರ್ಭಗಳಲ್ಲಿ ಬಹುಶಃ ಇಂತಹ ಕಾನೂನು ತರುವಂಥದ್ದು ಒಂದು ಉತ್ತಮ ಉದಾಹರಣೆ ಎಂದು ಹೇಳಬಯಸುತ್ತೇನೆ. ಜಾತಿ ಆಧಾರದ ಮೇಲೆ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಮತ್ತು ಸಾಮಾಜಿಕ ದೌರ್ಜನ್ಯ ತಡೆಗೆ 'ರೋಹಿತ್ ವೇಮುಲ ಕಾಯಿದೆ'ಯನ್ನು ಜಾರಿ ತರುವಂಥದ್ದು, ಅದೇ ರೀತಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ನಡೆಸುವುದು. ಬಹುಶಃ ಇಡೀ ಕರ್ನಾಟಕ ರಾಜ್ಯದಲ್ಲಿ ನಾನಾಗಿರಬಹುದು, ಮಾನ್ಯ ಮಂಜುನಾಥ್ ಭಂಡಾರಿಯವರಾಗಿರಬಹುದು, ಮಾನ್ಯ ಕಿಶೋರ್ ಕುಮಾರ್‌ರವರು ಇರಬಹುದು ನಾವೆಲ್ಲಾ ವಿದ್ಯಾರ್ಥಿ ನಾಯಕರಾಗಿ ಇವತ್ತು ಈ ವಿಧಾನ ಪರಿಷತ್ತಿಗೆ ಬಂದಿರುವಂಥದ್ದು. ನಾನು ಸರ್ವ ಕಾಲೇಜು ವಿದ್ಯಾರ್ಥಿ ಸಂಘದಲ್ಲಿರಬಹುದು, ನಾನು ಕಲಿತಿರುವ ಪ್ರತಿಯೊಂದು ಕಾಲೇಜುಗಳಲ್ಲಿ ಚುನಾವಣೆಗೆ ನಿಂತು ವಿದ್ಯಾರ್ಥಿ ಸಂಘಗಳಲ್ಲಿ ಚುನಾವಣೆಯನ್ನು ಎದುರಿಸಿ ಸಮಾಜಕ್ಕೆ ನಾಯಕತ್ವವನ್ನು ಕೊಟ್ಟಿರುವಂಥವನು. ಅಂತಹ ಬಹಳಷ್ಟು ಜನರನ್ನು ನಾನು ಕಂಡಿದ್ದೇನೆ. ಯಾರು ಯಾರು ಕಾಲೇಜಿನ ದಿನಗಳಲ್ಲಿ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಚುರುಕಾಗಿರುತ್ತಾರೆ, ಯಾರ್ಯಾರು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾರೆ, ಯಾರು ನಾಯಕತ್ವವನ್ನು ತೆಗೆದುಕೊಂಡಿರುತ್ತಾರೆ ಅವರು ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ನಾನು ಶ್ರೀ ಎಂ. ವೀರಪ್ಪ ಮೊಯಿಲಿಯವರ ಉದಾಹರಣೆಯನ್ನು ಕೊಡಬಲ್ಲೆ. ಮಾನ್ಯ ವೀರಪ್ಪ ಮೊಯಿಲಿಯವರು ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದರು. ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದಂಥವರು ಈ ರಾಜ್ಯದ ಮುಖ್ಯಮಂತ್ರಿಗಳಾದರು. ಈ ದೇಶದ ಕಾನೂನು ಸಚಿವರಾದರು, ಪೆಟ್ರೋಲಿಯಂ ಸಚಿವರಾದರು. ಎರಡು ಬಾರಿ ಪಾರ್ಲಿಮೆಂಟ್ ಸದಸ್ಯರಾಗಿ ಗೆದ್ದು ಬಂದರು. 8 ಬಾರಿ ಶಾಸಕರಾಗಿ ಗೆದ್ದು ಬಂದರು, ಸಾಹಿತಿಗಳಾದರು. ನಾಯಕತ್ವವನ್ನು ಬೆಳೆಸುವಂಥದ್ದರಲ್ಲಿ ನಮ್ಮ ದೇಶದಲ್ಲಿ ಇವತ್ತು ಏನಾದರೂ ಸ್ವಲ್ಪ ಕೊರತೆ ಇದೆಯೆಂದರೆ, ನನಗೆ ಅನಿಸುವುದು we need the best leader in the country. ನಾವು ದೇಶಕ್ಕೆ ಕೊಡುವಂತಹ ದೊಡ್ಡ ಕೊಡುಗೆಗಳೇನಾದರೂ ಇದ್ದರೆ ಈ ಸಮಾಜ, ಈ ದೇಶಕ್ಕೆ ಉತ್ತಮ ನಾಯಕತ್ವವನ್ನು ಕೊಡುವ ಒಂದು ಅವಶ್ಯಕತೆ ಇದೆ. ಎಲ್ಲಿಯೋ ಒಂದು ಕಡೆ ಅದರ ಕೊರತೆ ಇದೆಯೆಂದು

ನಮಗೆ ಪಾರ್ಲಿಮೆಂಟ್ ನೋಡಿದಾಗ ಗೊತ್ತಾಗುತ್ತದೆ. ಡಿಬೇಟ್‌ಗಳನ್ನು ನೋಡಿದಾಗ, ನಮ್ಮ ನಡವಳಿಕೆಗಳನ್ನು ನೋಡಿದಾಗ ಗೊತ್ತಾಗುತ್ತದೆ. ಹಾಗಾಗಿ ಇವತ್ತಿನ ಸಮಾಜದ ಜವಾಬ್ದಾರಿ ಒಳ್ಳೆಯ ನಾಯಕತ್ವವನ್ನು ರೂಪಿಸಿಕೊಳ್ಳಬೇಕಾದ ಅವಶ್ಯಕತೆ ಈ ದೇಶಕ್ಕೆ ಇದೆ. ಈ ದೃಷ್ಟಿಯಲ್ಲಿ ಇದು ಬಹಳ ಕಷ್ಟದ ಕೆಲಸ. ಎಲ್ಲಾ ವೈಸ್ ಛಾನ್ಸಲರ್‌ಗಳನ್ನು ಕರೆದು ಕೇಳಿದರೆ, ಐ.ಎ.ಎಸ್. ಅಧಿಕಾರಿಗಳನ್ನು ಕರೆದು ಕೇಳಿದರೆ ಬೇಡಪ್ಪಾ, ಚುನಾವಣೆಗಳು ಬೇಡ ಅಲ್ಲಿ ಗಲಾಟೆಗಳಾಗುತ್ತವೆ ಎನ್ನುತ್ತಾರೆ. ಚುನಾವಣೆಗಳಾದರೆ ವಿದ್ಯಾರ್ಥಿಗಳನ್ನು ಎದುರಿಸುವುದು ಕಷ್ಟ. ಕಾಲೇಜಿನಲ್ಲಿ ಅಶಾಂತಿ ನಿರ್ಮಾಣವಾಗುತ್ತದೆ ಎಂದು ಹೇಳುವಂತಹ ಈ ಸಂದರ್ಭದಲ್ಲಿ ಕೂಡ ನಾಯಕತ್ವದ ಬೆಳವಣಿಗೆ, ನಾಯಕತ್ವದ ಬೆಳಕು, ನಾಯಕತ್ವದ ಪ್ರಾರಂಭ ಅದು ಕಾಲೇಜಿನಲ್ಲಿ ಪ್ರಾಥಮಿಕ ಹಂತದಲ್ಲಿಯೇ ಆಗಬೇಕು ಎಂದು ಹೇಳುವ ದೃಷ್ಟಿಯಿಂದ ಇವತ್ತು ರಾಜ್ಯದಲ್ಲಿ ಕಾಲೇಜು ಶಿಕ್ಷಣದಲ್ಲಿ ವಿದ್ಯಾರ್ಥಿ ಚುನಾವಣೆಗಳು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಸುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದೇ ರೀತಿ ಆರೋಗ್ಯ ಇಲಾಖೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ೨೦೦ ಕೋಟಿ ರೂಪಾಯಿಗಳು, ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ 2500 ಹುದ್ದೆಗಳ ಭರ್ತಿ, ಕಾರವಾರ ಮತ್ತು ಯಾದಗಿರಿಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತಲಾ 100 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದು, ಮುನಿರಾಬಾದ್-ಟಿ.ಬಿ. ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆಯ ಸ್ಥಾಪನೆ, ವಿಕ್ಟೋರಿಯಾ ಆಸ್ಪತ್ರೆಯನ್ನು ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಎಂದು ಮರುನಾಮಕರಣ ಮಾಡುವುದಕ್ಕೆ ಸರ್ಕಾರ ನಿರ್ಧಾರಗಳನ್ನು ಕೈಗೊಂಡಿದೆ.

**ಶ್ರೀ ಎನ್. ರವಿಕುಮಾರ್ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವರು ಕಾಲೇಜು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಚುನಾವಣೆ ನಡೆಸುತ್ತೇವೆಂದು ಹೇಳುತ್ತಿದ್ದಾರೆ. ಮತ್ತೆ ನೀವು ನಿಲ್ಲಿಸಿದ್ದೇಕೆ?

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ರವಿಕುಮಾರ್‌ರವರೇ, ಆಗ ಬೇರೆ ಕಾಲ ಇತ್ತು ಈಗ ಬೇರೆ ಕಾಲ ಇದೆ. ಏತಕ್ಕೆ ಸುಮ್ಮನೆ ಅಡ್ಡ ಬರುತ್ತೀರಿ? ಕಾಲಕಾಲಕ್ಕೆ ತಕ್ಕಂತೆ ನಡೆಯುತ್ತದೆ, ಬಿಡುತ್ತದೆ. ನೀವೂ ಲೀಡರ್ ಆಗಿದ್ದಿರಿ, ನಾವೂ ಲೀಡರ್ ಆಗಿ ಬಂದವರು ತಾನೇ? (ಗೊಂದಲ) ಒಂದೇ ಜಿಲ್ಲೆಯಲ್ಲಿ;

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು, ಮಂಜುನಾಥ್ ಭಂಡಾರಿಯವರನ್ನು ಕೇಳಿ. ಮಾನ್ಯ ಮಂಜುನಾಥ್ ಭಂಡಾರಿಯವರೇ, ನೀವು ಹೇಳಿ. ಚುನಾವಣೆಯನ್ನು ನಿಲ್ಲಿಸಿದ್ದು ಯಾರು?

**ಶ್ರೀ ಮಂಜುನಾಥ್ ಭಂಡಾರಿ:-** ಮತ್ತೆ ಪ್ರಾರಂಭ ಮಾಡಿದ್ದೇವಲ್ಲಾ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಇದೇ ವಿಷಯವನ್ನು ಹೇಳುತ್ತಿದ್ದೆವು. ನೀವು ನಿಲ್ಲಿಸಿದಿರಿ. ನೀವೂ ಚುನಾವಣೆಗೆ ನಿಂತವರು.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಪ್ರಾರಂಭ ಮಾಡಿರುವುದು.

**ಶ್ರೀ ಎನ್. ರವಿಕುಮಾರ್:–** ನಿಮ್ಮ ಸರ್ಕಾರವೇ ನಿಲ್ಲಿಸಿತು. ನಾವು ಬೇಡವೆಂದು ಎಷ್ಟು ಹೋರಾಟ ಮಾಡಿದ್ದೆವು. ಈಗ ಚುನಾವಣೆ ನಡೆಸಬೇಕೆಂದು ಹೇಳುತ್ತಾರೆ.

**ಶ್ರೀ ಮಂಜುನಾಥ್ ಭಂಡಾರಿ:–** ಅದಕ್ಕೆ ತಾನೇ ಮತ್ತೆ ಅದನ್ನು ಪ್ರಾರಂಭ ಮಾಡಿ welcome ಮಾಡಿ ಎಂದು ಹೇಳುತ್ತಿದ್ದೇವೆ. ಅದನ್ನು ಸ್ವಾಗತಿಸಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇವರನ್ನು ಕೇಳಿ. ಕುವೆಂಪು ವಿಶ್ವವಿದ್ಯಾಲಯಕ್ಕೆ, ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಚುನಾವಣೆ ನಡೆಯುತ್ತಿತ್ತು.

**ಡಾ: ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಅವರು ಹಿರಿಯರು . . .

**ಉಪ ಸಭಾಪತಿಯವರು:–** ಅವರು ಯೀಲ್ಡ್ ಆಗಿದ್ದಾರೆ, ನಾನೇನು ಮಾಡಲಿ. ಇಲ್ಲದಿದ್ದರೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಇರಲಿಲ್ಲ. ಈಗ ಅವರು ಯೀಲ್ಡ್ ಆಗಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರ point ಏನಿದೆ, ಅದು well taken. ನಾನು ಹೇಳುತ್ತೇನೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, J.N.U (Jawaharlal Nehru University) ಗೆ ಚುನಾವಣೆ ನಡೆಯುತ್ತಿತ್ತು. D.U.S.U (Delhi University Students' Union) ಗೆ ಚುನಾವಣೆ ನಡೆಯುತ್ತಿದೆ. ಕರ್ನಾಟಕದಲ್ಲಿ ಏತಕ್ಕೆ ಬಂದ್ ಮಾಡಿದಿರಿ? ಇಡೀ ದೇಶದಲ್ಲಿ ವಿದ್ಯಾರ್ಥಿಗಳಿಗೆ ಚುನಾವಣೆಯನ್ನು ಬಂದ್ ಮಾಡಿದವರು ನೀವು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ರವಿಕುಮಾರ್‌ರವರೆ, ನೀವು ಹೇಳಿದಂತಹ point ಅನ್ನು it is well taken. ಏತಕ್ಕೆ ನಿಲ್ಲಿಸಿದಿರಿ ಎಂದು ಕೇಳಿದಿರಿ.

**ಶ್ರೀ ಎನ್. ರವಿಕುಮಾರ್:–** ಅಂದರೆ ಜಗತ್ತಿಗೆ ಅರ್ಥವಾದ ಮೇಲೆ ಇವರಿಗೆ ತಡವಾಗಿ ಅರ್ಥವಾಗುತ್ತದೆ ಏನು ಮಾಡುವುದು? ಇವರ ಪಕ್ಷ ಹಾಗಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವರು ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಲಿಲ್ಲ, ನಿಮ್ಮ ಕಾಲದಲ್ಲಿ ನೀವು ಮಾಡಿಲ್ಲ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, 25 ವರ್ಷವಾದ ಮೇಲೆ ಇವರ ಪಕ್ಷಕ್ಕೆ ಅರ್ಥವಾಗಿದೆ.

**ಉಪಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ನೀವಿಬ್ಬರೇ ಮಾತನಾಡಬೇಡಿ, ನೀವು ಪೀಠಕ್ಕೆ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಇಷ್ಟನ್ನು ನಿಮ್ಮಿಂದ ತಿಳಿದುಕೊಳ್ಳುತ್ತೇನೆ, ಇದನ್ನು ಪ್ರಾರಂಭ ಮಾಡಿದ್ದನ್ನು ನೀವು ಸ್ವಾಗತ ಮಾಡುತ್ತೀರಿ. You welcome this decision taken by the government. ಅಷ್ಟು ಜನರಿಗೆ ಬೇಕಾಗಿತ್ತು. ಅದು ಸಂತೋಷವಾಯಿತು.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, welcome ಮಾಡಿದ್ದೇವೆಂದು ನಿಮಗೆ ಹೇಳಿದ್ದೇವೆ. ಆದರೆ ನೀವು ಲಾಠಿ ಚಾರ್ಜ್ ಮಾಡಿದಿರಿ. ಹೋರಾಟ ಮಾಡಿದ ವಿದ್ಯಾರ್ಥಿಗಳನ್ನು ಜೈಲಿಗೆ ಕಳುಹಿಸಿದಿರಿ.

**ಉಪ ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಅವರು ಯೀಲ್ಡ್ ಆದರೆ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳಿಗೆ ವಿದ್ಯುದೀಕರಣಕ್ಕೆ ಪಾವತಿಸುವುದನ್ನು 1.5 ಲಕ್ಷ ರೂಪಾಯಿಗಳಿಗೆ ಹೆಚ್ಚಳ ಮಾಡಿದ್ದೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ನಿಗಮಗಳಿಗೆ 1,500 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟು ಆ ನಿಗಮಗಳ ಬೆಳವಣಿಗೆ ಮತ್ತು ಆ ನಿಗಮದಿಂದ ಸಿಗುವ ಸವಲತ್ತುಗಳನ್ನು ಜನರಿಗೆ ಬಿಡುಗಡೆ ಮಾಡುವಂತಹ ದೊಡ್ಡ ಯೋಜನೆಯನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಇಲಾಖೆಗಳಲ್ಲಿ ಖಾಲಿ ಇರುವ 2500 ಹುದೆಗಳನ್ನು ಭರ್ತಿ ಮಾಡುವುದು ಅದೇ ರೀತಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ, ಗುಲ್ಬರ್ಗ, ದಾವಣಗೆರೆ, ಶಿವಮೊಗ್ಗ ಹಾಗೂ ಬಳ್ಳಾರಿಯಲ್ಲಿ 150 ಸಂಖ್ಯಾ ಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ನಾನು ಅಭಿನಂದಿಸುತ್ತೇನೆ. ಈ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು ಪ್ರಥಮ ಬಾರಿಗೆ 2013 ರಿಂದ 2018ರವರೆಗೆ ಮುಖ್ಯಮಂತ್ರಿಗಳಾಗಿದ್ದಾಗ ಈ ರಾಜ್ಯಕ್ಕೆ ಕೊಟ್ಟಂಥ ದೊಡ್ಡ ಕೊಡುಗೆ ಏನಾದರೂ ಇದ್ದರೆ ಅದು ಹಾಸ್ಟೆಲ್‌ಗಳ ನಿರ್ಮಾಣ ಮತ್ತು ವಿದ್ಯಾಸಿರಿ ಯೋಜನೆ. ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡುವ ಮೂಲಕ ಯಾರು ಮನೆಯಲ್ಲಿ ಶಿಕ್ಷಣವನ್ನು ಪಡೆಯಲು ಆಗುವುದಿಲ್ಲ ಎಂದು ಮನೆಯಲ್ಲಿ ಉಳಿದಿದ್ದರು ಅವರನ್ನು ಶಾಲೆಗೆ ಕರೆತಂದು ಉಚಿತ ಶಿಕ್ಷಣ ಕೊಟ್ಟು ಊಟ, ತಿಂಡಿ, ಷೂ, ಬಕೆಟ್, ದಿಂಬು, ಪೇಸ್ಟ್ ಮತ್ತು ಸೋಪುಗಳನ್ನು ಕೊಟ್ಟು ಈ ರಾಜ್ಯಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿರುವಂಥವರು ಶ್ರೀ ಸಿದ್ದರಾಮಯ್ಯನವರು. ಅಷ್ಟು ಮಾತ್ರವಲ್ಲ ಪ್ರತಿ ವರ್ಷ ಹಾಸ್ಟೆಲ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿ ಯಾರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಸಿಗುವುದಿಲ್ಲ ಅವರಿಗೆ ರೂ. 1,500/–ಗಳನ್ನು ಅವರ ಖಾತೆಗೆ ನೇರವಾಗಿ ಕಳುಹಿಸಿಕೊಟ್ಟು ಪ್ರೋತ್ಸಾಹ ಕೊಡುವ ಕೆಲಸವನ್ನು ಮಾಡಿದರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):–** ಮಾನ್ಯ ಐವನ್ ಡಿ'ಸೋಜಾರವರೆ, ಬಕೆಟ್ ಬಗ್ಗೆ ಮಾತ್ರ ಹೇಳಿದಿರಿ ಚಂಬಿನ ಬಗ್ಗೆ ಹೇಳಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಚಂಬನ್ನು ನಿಮಗೇ ಇರಲಿ ಎಂದು ಬಿಟ್ಟಿದ್ದೇನೆ. ನಾನು ಬಕೆಟ್ ಎಂದು ಹೇಳುತ್ತೇನೆ.

(ಮುಂದು)

(280) 10-03-2026 4-20 KH/AK (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರು ಚೊಂಬು ಬಗ್ಗೆ ಹೇಳಲಿಲ್ಲ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸದಸ್ಯರೇ, ಅದು ತಮಗೆ ಇರಲಿ ಎಂದು ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸದಸ್ಯರೇ, ತಮಗೆ ಚೊಂಬು ಬೇಡವೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸದಸ್ಯರೇ, ತಾವು ಕೊಟ್ಟು ಕೊಟ್ಟು ಅದರ ಬಗ್ಗೆ ನಾವು ಮರೆತು ಬಿಟ್ಟಿದ್ದೇವೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸದಸ್ಯರೇ, ಚೊಂಬು ಚಿಕ್ಕದಾಗುತ್ತದೆ. ಬಕೆಟ್ ಬೇಕು.

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ರವರೇ, ಈಗಾಗಲೇ 50 ನಿಮಿಷಗಳು ಆಗಿವೆ. ಇನ್ನು ಎಷ್ಟು ನಿಮಿಷಗಳು ಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇನ್ನು 30 ನಿಮಿಷಗಳು ಬೇಕು.

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ರವರೇ, ಇನ್ನು 15 ನಿಮಿಷದೊಳಗೆ ಮಾತನಾಡಿ ಮುಗಿಸಿ. ಇನ್ನು ಸುಮಾರು ದೊಡ್ಡ ಪಟ್ಟಿ ಇದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಆಯಿತು. ಇವತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಒತ್ತನ್ನು ಕೊಟ್ಟು ಪ್ರತಿವರ್ಷದಂತೆಯೇ ಈ ಬಾರಿಯೂ ಕೂಡ ಹಾಸ್ಟೆಲ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿ, ನಮ್ಮ ಮಂಗಳೂರಿಗೆ ಶಿಕ್ಷಣಕ್ಕೆ ಬರುವಂತಹ ಅನೇಕ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ಸೀಟ್ ಸಿಗುವಂತಹದ್ದನ್ನು ಮಾಡಿದ್ದೇವೆ. ವಿದ್ಯಾರ್ಥಿಗಳು ದೂರದಿಂದ ಬರುತ್ತಾರೆ. ಯಾರಿಗೆ ಹಾಸ್ಟೆಲ್ ಸೀಟ್ ಸಿಗುವುದಿಲ್ಲ, ಅವರಿಗೆ ನೇರವಾಗಿ

'ವಿದ್ಯಾಸಿರಿ' ಯೋಜನೆಯ ಮೂಲಕ 1,500 ರೂಪಾಯಿಗಳಂತೆ 10 ತಿಂಗಳಿಗೆ 15,000 ರೂಪಾಯಿಗಳನ್ನು ಅವರ ಅಕೌಂಟ್‌ಗೆ ಕಳುಹಿಸಿ, ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನು ಕೊಡುವಂತಹದ್ದನ್ನು ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಮಾಡಿದೆ. ಇದೊಂದು ಉತ್ತಮವಾದ ಯೋಜನೆಯಾಗಿದ್ದು, ಇದರಿಂದ, 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡುವಂತಹದ್ದು. ಅದೇ ರೀತಿ 250 ಇಂಜಿನಿಯರಿಂಗ್ ಪದವೀಧರರಿಗೆ ಡಿ.ದೇವರಾಜು ಅರಸು ಅಭಿವೃದ್ಧಿ ನಿಗಮದ ವತಿಯಿಂದ ಎನ್.ಐ.ಟಿ., ಐ.ಐ.ಟಿ., ಐ.ಐ.ಎಮ್., ಮತ್ತು ಎ.ಐ. ತರಬೇತಿ ಪಡೆಯಲು ತಲಾ 2 ಲಕ್ಷ ರೂಪಾಯಿಗಳ ಸಾಲವನ್ನು ಒದಗಿಸಿಕೊಡುವಂತಹದ್ದು ಆಗಿದೆ. ಇವತ್ತಿನ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಹಿಂದೆ ಮೆಕಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಅನ್ನು ವಿದ್ಯಾರ್ಥಿಗಳು ಓದುತ್ತಿದ್ದರು. ಇವತ್ತು ಯಾವುದೇ ಕಾಲೇಜುಗಳಲ್ಲಿ ಸಿವಿಲ್, ಎಲೆಕ್ಟ್ರಿಕಲ್, E & C, ಯಾವುದೇ ಕೋರ್ಸ್‌ಗಳಿಗೆ ಬೇಡಿಕೆ ಇಲ್ಲದಂತಹ ಸಂದರ್ಭ ಬಂದೊದಗಿದೆ. ಒಂದೇ ಕಂಪ್ಯೂಟರ್ ಅಥವಾ A.I. ಅಂದರೆ Artificial Intelligence ಗೆ ಸಂಬಂಧಪಟ್ಟಂತಹ ಕೋರ್ಸ್‌ಗಳು ಇವೆ. ಈ ಸಂದರ್ಭದಲ್ಲಿ ಇವತ್ತು 250 ಇಂಜಿನಿಯರಿಂಗ್ ಕಾಲೇಜುಗಳನ್ನು ಡಿ.ದೇವರಾಜು ಅರಸು ಅಭಿವೃದ್ಧಿ ನಿಗಮದ ವತಿಯಿಂದ ಉನ್ನತೀಕರಣ ಮಾಡಿ, ಈ ಶಿಕ್ಷಣದ ಬಗ್ಗೆ ತರಬೇತಿ ಪಡೆಯಲು ತಲಾ 2 ಲಕ್ಷ ರೂಪಾಯಿಗಳಂತೆ ಸಾಲ ನೀಡುವಂತಹದ್ದು ಆಗಿದೆ. ರಾಜ್ಯದ ಮುಖ್ಯಮಂತ್ರಿಗಳ ಮುಂದಿನ ಚಿಂತನೆ ಮತ್ತು ಈ ರಾಜ್ಯದ ಭವಿಷ್ಯದ ಬಗ್ಗೆ ಮಾಡಿರುವಂತಹ ಆಲೋಚನೆ ಅತ್ಯಂತ ಅದ್ಭುತವಾಗಿರುವಂತಹದ್ದು. ಹಾಗಾಗಿ ಈ ಬಜೆಟ್ ಕೊಟ್ಟಿರುವುದಕ್ಕೆ ವಿದ್ಯಾರ್ಥಿಗಳ ಪರವಾಗಿ ಮಾನ್ಯ ಸಿದ್ಧರಾಮಯ್ಯನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ 25 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಪ್ರಾರಂಭ. ಸಿ.ಬಿ.ಎಸ್.ಇ. ಪಠ್ಯ ಕ್ರಮದ ಅಡಿಯಲ್ಲಿ 10 ಕೋಟಿ ರೂಪಾಯಿಗಳ ಅನುದಾನದಡಿಯಲ್ಲಿ 10 ಹೊಸ ಸಂತ ಶಿಶುನಾಳ ಷರಿಪರ ವಸತಿ ಶಾಲೆಗಳು ಪ್ರಾರಂಭ. 25 ಹೊಸ ಸಂತ ಶಿಶುನಾಳ ಷರಿಪರ ವಸತಿ ಶಾಲೆಗಳು ಪ್ರಾರಂಭ. ಮೌಲನಾ ಅಜಾದ್ ಉರ್ದು ಮಾದರಿ ಶಾಲೆಗಳಿಗೆ 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೆ.ಪಿ.ಎಸ್. ಮಾದರಿಯಲ್ಲಿ ಶಿಕ್ಷಣಗಳನ್ನು ಪಡೆಯಲು ಉನ್ನತೀಕರಣ. ಮೊನ್ನೆಯ ದಿವಸ ಮಾನ್ಯ ಸದಸ್ಯರು ಸದನದಲ್ಲಿ ಮಾತನಾಡುತ್ತಿರುವಾಗ ಮಾನ್ಯ ಶಿಕ್ಷಣ ಸಚಿವರನ್ನು ಕೇಳುತ್ತಿದ್ದರು. ಅಲ್ಲಿ ಇರುವಂತಹ ಕನ್ನಡ ಮಾಧ್ಯಮ ಶಾಲೆಗಳಂತೆ ಅಲ್ಪಸಂಖ್ಯಾತರ ಉರ್ದು ಶಾಲೆಗಳು ಇರುತ್ತವೆ, ಅದನ್ನು ಕೂಡ ಉನ್ನತೀಕರಣ ಮಾಡಿ, ಕೆ.ಪಿ.ಎಸ್. ಶಾಲೆಗಳನ್ನಾಗಿ ಮಾಡಿ ಎಂದು ಅವರು ಹೇಳುತ್ತಿದ್ದರು. ಅದೇ ಮಾದರಿಯಲ್ಲಿ ಇವತ್ತು 100 ಉರ್ದು ಶಾಲೆಗಳನ್ನು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೆ.ಪಿ.ಎಸ್. ಮಾದರಿಯಲ್ಲಿ ಉನ್ನತೀಕರಿಸಲು ಸರ್ಕಾರ ಕ್ರಮ

ಕೈಗೊಂಡಿರುವಂತಹದ್ದು. 25 ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಪಿ.ಯು.ಸಿ.ಯಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಿರುವಂತಹದ್ದು. ಅಲ್ಪಸಂಖ್ಯಾತರ 4 ವಸತಿ ಗೃಹಗಳನ್ನು ಮಾಡಿ Centre of Excellence ಅನ್ನಾಗಿ ಸ್ಥಾಪನೆ ಮಾಡಿ, 20 ವಸತಿ ಶಾಲೆಗಳ ಮಕ್ಕಳಿಗೆ ಕೆ.ಸಿ.ಇ.ಟಿ., ಜೆ.ಇ.ಇ., ನೀಟ್ ಪರೀಕ್ಷೆಗಳಿಗೆ ತರಬೇತಿ ಕೊಡುವಂತಹದ್ದು ಆಗಿದೆ. ಇವತ್ತು ಗ್ರಾಮೀಣ ಮಕ್ಕಳಿಗೆ ನೀಟ್ ಪರೀಕ್ಷೆ ಎಂದು ಹೇಳಿದರೆ ನುಂಗಲಾರದ ತುತ್ತಾಗಿದೆ. ಗ್ರಾಮೀಣ ಭಾಗದಲ್ಲಿ ನೀಟ್ ಪರೀಕ್ಷೆ ಬರೆದು ವೈದ್ಯರಾಗಬೇಕು. Ayurvedic doctor ಆಗಬೇಕು ಅಥವಾ Veterinary doctor ಆಗಬೇಕೆಂದರೆ, NEET exam is compulsory. ಇವತ್ತು ನೀಟ್ ಪರೀಕ್ಷೆಗಳಿಗೆ ತರಬೇತಿಯನ್ನೇ ಕೊಡುವುದಿಲ್ಲ. ಗ್ರಾಮೀಣ ಭಾಗದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಇದ್ದು, ಆ ಶಾಲೆಗಳಲ್ಲಿ ಓದಿ, ಪಿ.ಯು.ಸಿ., ಗೆ ಹೋದ ಮೇಲೆ ಆಂಗ್ಲ ಮಾಧ್ಯಮದಲ್ಲಿ ಓದುವುದಕ್ಕೆ ಕಷ್ಟವಾಗುತ್ತದೆ. ಇದ್ದರಿಂದ, ಆ ವಿದ್ಯಾರ್ಥಿಗಳು ಪಾಸ್ ಆಗುವುದೇ ಕಷ್ಟ ಎಂದಾಗ ನೀಟ್ ಪರೀಕ್ಷೆ ಅಥವಾ ಉನ್ನತ ಶಿಕ್ಷಣವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಪಡೆಯುವುದಕ್ಕೆ ಕಷ್ಟವಾಗುತ್ತಿದೆ. ಹಾಗಾಗಿ ಅವರಿಗೆ ನೀಟ್ ಶಿಕ್ಷಣದ ಬಗ್ಗೆ ತರಬೇತಿ ಕೊಡಲು Centre of Excellence ಅನ್ನು ಸ್ಥಾಪನೆ ಮಾಡಿ, 20 ವಸತಿ ಶಾಲೆಗಳ ಮಕ್ಕಳಿಗೆ ನೀಟ್ ಪರೀಕ್ಷೆಯ ತರಬೇತಿಯನ್ನು ಕೊಡುವಂತಹದ್ದು. ಅದೇ ರೀತಿ ಬೆಂಗಳೂರಿನ 100 ಸಂಖ್ಯಾಬಲದ 4 ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳನ್ನು ಆರಂಭ ಮಾಡಿರುವಂತಹದ್ದು. ಅನೇಕ ವಿದ್ಯಾರ್ಥಿಗಳು ಗ್ರಾಮೀಣ ಭಾಗದಲ್ಲಿ ಶಿಕ್ಷಣವನ್ನು ಪಡೆದ ಮೇಲೆ ಅವರು ಐ.ಟಿ. ಮತ್ತು ಬಿ.ಟಿ., ಉದ್ಯೋಗಕ್ಕಾಗಿ ಬೆಂಗಳೂರಿಗೆ ಬರುತ್ತಾರೆ. ನಮ್ಮ ಮಂಗಳೂರಿನಿಂದ 33 ಸಾವಿರ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಐ.ಟಿ. ಮತ್ತು ಬಿ.ಟಿ. ಕಂಪನಿಯ ಕೆಲಸಕ್ಕೆ ಬಂದಿದ್ದಾರೆ. ಅವರು ಉಳಿಯುವುದಕ್ಕೆ ಹಾಸ್ಟೆಲ್‌ಗಳ ವ್ಯವಸ್ಥೆ ಇರುವುದಿಲ್ಲ. ವ್ಯಾಸ್ತವ್ಯ ಹೂಡುವುದೇ ದೊಡ್ಡ ಸವಾಲು ಆಗಿದೆ. ಹಾಗಾಗಿ ಅವರಿಗೆ ವಾಸ್ತವ್ಯವನ್ನು ಒದಗಿಸಿಕೊಡುವುದಕ್ಕೆ ಇವತ್ತು ಸರ್ಕಾರ 4 ದೊಡ್ಡ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿ, ಅವರಿಗೆ ಪ್ರಾರಂಭಿಕ ಹಂತದಲ್ಲಿ ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಎನ್ನುವುದು ಸಾಮಾನ್ಯ ವಿಚಾರ ಅಲ್ಲ. ಇದೊಂದು ದೊಡ್ಡ ವಿಚಾರ. ಬೆಂಗಳೂರಿನಲ್ಲಿ 100 ಸಂಖ್ಯಾಬಲದ 4 ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳನ್ನು ಪ್ರಾರಂಭ ಮಾಡಿರುವಂತಹದ್ದು this is not a small matter. ಇದೊಂದು ದೊಡ್ಡ ವಿಚಾರ. ಹಾಗಾಗಿ ಅವರ ಉದ್ಯೋಗಕ್ಕಾಗಿ ಈ ಸೌಲಭ್ಯವನ್ನು ಮಾಡಿದ್ದಾರೆ.

ಅದೇ ರೀತಿ ಅನ್ನ ಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆ.ಜಿ., ಬದಲಾಗಿ ಇಂದಿರಾ ಆಹಾರ ಕಿಟ್ ಯೋಜನೆಯನ್ನು ಜಾರಿಗೆ ತರುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ಪಂಚ ಗ್ಯಾರಂಟಿಯಲ್ಲಿ ಅನ್ನ ಭಾಗ್ಯ ಯೋಜನೆಯಲ್ಲಿ 5 ಕೆ.ಜಿ., ಅಕ್ಕಿ ಬದಲಾಗಿ 10 ಕೆ.ಜಿ., ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದ್ದೆವು. 5 ಕೆ.ಜಿ., ಅಕ್ಕಿ

ಕೇಂದ್ರ ಸರ್ಕಾರದಲ್ಲಿ ಆಹಾರ ಭದ್ರತೆ ಕಾಯ್ದೆ ಅಡಿಯಲ್ಲಿ ಬರುವುದೇ ಆಗಿದ್ದರೆ, ರಾಜ್ಯದಿಂದ 5 ಕೆ.ಜಿ.,ಯನ್ನು ಸೇರಿಸಿ 10 ಕೆ.ಜಿ., ಅಕ್ಕಿಯನ್ನು ಕೊಡುತ್ತಿದ್ದೆವು. ಆದರೆ, ಅದರಲ್ಲಿ ಆದಂತಹ ರಾಜಕೀಯದಿಂದ 5 ಕೆ.ಜಿ., ಅಕ್ಕಿಗೆ ದುಡ್ಡು ಕೊಡುತ್ತೇವೆ ಎಂದು ಅಡ್ವಾನ್ಸ್ ಕೊಟ್ಟು ಬಂದರೂ ಗೋಡೌನ್‌ನಲ್ಲಿ ಅಕ್ಕಿ ಇಲ್ಲ. ಕೊಡುವುದಕ್ಕೆ ಬರುವುದಿಲ್ಲ ಎಂದು D.D. (Demand Draft) ಯನ್ನು ಹಿಂದೆ ಕಳುಹಿಸಿರುವುದನ್ನು ನಾವು ನೋಡಿದ್ದೇವೆ. ಇದರಿಂದ, ನಾವು ಎಲ್ಲೋ ಒಂದು ಕಡೆ ದ್ವೇಷಕ್ಕೆ ಬಲಿಯಾಗಬೇಕಾಯಿತು. ಆಗ ರಾಜ್ಯ ಸರ್ಕಾರವು ಒಂದು ತೀರ್ಮಾನವನ್ನು ತೆಗೆದುಕೊಂಡಿತು. ನಾವು 5 ಕೆ.ಜಿ., ಅಕ್ಕಿಯನ್ನು ಕೊಡುತ್ತೇವೆ ಎಂದು promise ಮಾಡಿದ್ದೇವೆ, ವಾಗ್ದಾನ ಮಾಡಿದ್ದೇವೆ. ಅಕ್ಕಿ ಕೊಡುವುದಕ್ಕೆ ಆಗದೇ ಇದ್ದರೆ, ನಾವು 5 ಕೆ.ಜಿ., ಅಕ್ಕಿಗೆ ಸಿಗುವಂತಹ ದರ ಏನಿದೆ, ಆ ದರವನ್ನು ತಮ್ಮ ಅಕೌಂಟ್‌ಗೆ ನೇರವಾಗಿ ಡಿ.ಬಿ.ಟಿ. ಮುಖಾಂತರ ಕಳುಹಿಸಿಕೊಡುತ್ತೇವೆ ಎಂದು ಹೇಳಿದ ಪ್ರಕಾರ ನಾವು ಆ ದುಡ್ಡನ್ನು ಕಳುಹಿಸಿ ಕೊಟ್ಟಿದ್ದೇವೆ. ಇವತ್ತು ಸರ್ಕಾರ ಬದಲಾದ ಪರಿಸ್ಥಿತಿಯಲ್ಲಿ ಇಂದಿರಾ ಆಹಾರ ಕಿಟ್ ಯೋಜನೆಯನ್ನು ತರುವ ಮೂಲಕ ಇದರಲ್ಲಿ ಪೌಷ್ಠಿಕ ಆಹಾರ ಇರಬಹುದು, ಅಡುಗೆ ಎಣ್ಣೆ ಇರಬಹುದು ಮತ್ತು ಬೇರೆ ಬೇರೆ ರೀತಿಯ ವಸ್ತುಗಳನ್ನು ಹಾಕುವ ಮೂಲಕ 5 ಕೆ.ಜಿ., ಅಕ್ಕಿಯ ಬದಲಾಗಿ ಇಂದಿರಾ ಆಹಾರ ಕಿಟ್ ಕೊಡಲು ಕ್ರಮ ತೆಗೆದುಕೊಂಡಿದೆ. ಅದು ಮುಂದಿನ ತಿಂಗಳಿನಿಂದ ಪ್ರಾರಂಭವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ.

3 ವರ್ಷಗಳಲ್ಲಿ 'ಯುವನಿಧಿ' ಯೋಜನೆಗೆ ಒಟ್ಟು 3,08,267 ಅರ್ಹ ಫಲಾನುಭವಿಗಳಿಗೆ 913 ಕೋಟಿ ರೂಪಾಯಿಗಳ ಮೊತ್ತದ ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡಲಾಗಿದೆ. ವಿದೇಶಗಳಲ್ಲಿ ಕಾಲೇಜು ವಿದ್ಯಾರ್ಥಿಗಳ ಬಿ.ಕಾಂ., ಡಿಗ್ರಿ ಶಿಕ್ಷಣ ಮುಗಿದ ಕೂಡಲೇ ಉದ್ಯೋಗವನ್ನು ಸರ್ಕಾರ ಕೊಡಬೇಕು. ಸರ್ಕಾರ ಉದ್ಯೋಗವನ್ನು ಕೊಡುವುದಕ್ಕೆ ವಿಫಲವಾದರೆ ಅವರಿಗೆ Unemployment Allowance ಕೊಡುವಂತಹದ್ದು ಆಗಬೇಕು. ಅವರಿಗೆ ಬೇಕಾಗಿರುವಂತಹ support ಮಾಡುವಂತಹದ್ದು ಆಗಬೇಕು. ಕೆಲವು ದೇಶಗಳಲ್ಲಿ ಈ ಕಾರ್ಯಕ್ರಮ ಜಾರಿಯಲ್ಲಿ ಇದೆ. ಆದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಅನೇಕ ಯುವಕರು ಬಿ.ಎ., ಬಿ.ಕಾಂ., B.Sc. ಓದಿ, ಶಿಕ್ಷಣ ಪಡೆಯುವುದಕ್ಕೆ ಮತ್ತು ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಮುಂದಿನ ಶಿಕ್ಷಣಕ್ಕಾಗಿ . . .

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, I will just complete it.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಅಂಶವನ್ನು ಹೇಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸದಸ್ಯರೇ, ಕಂಪ್ಲೀಟ್ ಆದ ಮೇಲೆ ಹೇಳಿ. ವರ್ಷಕ್ಕೆ 3 ಸಾವಿರ ರೂಪಾಯಿಗಳಂತೆ 3 ವರ್ಷಗಳ ಕಾಲ ಅವರಿಗೆ ಸಪೋರ್ಟ್ ಮಾಡುವಂತಹದ್ದು, ಡಿಪ್ಲೋಮಾ ವಿದ್ಯಾರ್ಥಿಗಳಿಗೆ 1,500 ರೂಪಾಯಿಗಳ ಪ್ರಕಾರ ಅವರಿಗೆ 3 ವರ್ಷಗಳಿಗೆ ಸಪೋರ್ಟ್ ಮಾಡಿ ಉದ್ಯೋಗ ಸಿಗುವುದಕ್ಕೆ ಪ್ರೇರೆಪಣೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ.

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಒಳ್ಳೆಯ ಅಂಶವನ್ನು ಹೇಳಿದ್ದಾರೆ. ಈಗ 'ಯುವನಿಧಿ' ಯೋಜನೆಯನ್ನು ನಿಲ್ಲಿಸಿದ್ದಾರೆ. ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಗೊತ್ತಿಲ್ಲದೇ ಇರಬಹುದು,

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ಈಲ್ಡ್ ಆದರೆ ಅವಕಾಶ ಕೊಡಬಹುದು. ಆದರೆ, ಅವರು ಈಲ್ಡ್ ಆಗದೇ ಇದ್ದರೆ ಅವಕಾಶ ಕೊಡುವುದಿಲ್ಲ. ಮಾನ್ಯ ಸದಸ್ಯರು ಈಲ್ಡ್ ಆಗಿಲ್ಲ. ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಲ್ಡ್ ಆಗಿದ್ದಾರೆ. ಮಾಹಿತಿ ಕೊರತೆ ಇದೆಯೋ, ನನಗೆ ಗೊತ್ತಿಲ್ಲ. ಬಜೆಟ್‌ನಲ್ಲಿ 'ಯುವನಿಧಿ' ಯೋಜನೆಗೆ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ ಎಂದು ಹೇಳಿ ನೋಡೋಣ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸದಸ್ಯರೇ, ಹಿಂದೆ ತಾವು ಎಷ್ಟು . . .

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 'ಯುವನಿಧಿ' ಯೋಜನೆಗೆ 913 ಕೋಟಿ ರೂಪಾಯಿಗಳು ಎಂದು ಹೇಳಿದರಲ್ಲವೇ? ರಾಜ್ಯದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ ಮತ್ತು 'ಯುವನಿಧಿ' ಯೋಜನೆಯನ್ನು ಏಕೆ ನಿಲ್ಲಿಸಿದ್ದೀರಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, 'ಯುವನಿಧಿ' ಯೋಜನೆಯನ್ನು ನಿಲ್ಲಿಸುವಂತಹ ಕ್ರಮವೇ ಇಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸದಸ್ಯರೇ, ಬಜೆಟ್‌ನಲ್ಲಿ ಎಲ್ಲಿದೆ ಎಂದು ತೋರಿಸಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, specific ಆಗಿ ಹೆಚ್ಚು ಮಾಡಿರುವ ದುಡ್ಡು ಹೇಳದೇ ಇದ್ದರೆ whichever the old grant is there, that is continued ಎನ್ನುವುದೇ ಅರ್ಥ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸದಸ್ಯರೇ, 2026-27ನೇ ಸಾಲಿನ ಬಜೆಟ್‌ನಲ್ಲಿ 'ಯುವನಿಧಿ' ಯೋಜನೆಗೆ ಎಷ್ಟು allocate ಮಾಡಿದ್ದೀರಾ ಎಂದು ತೋರಿಸಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಎನ್. ರವಿಕುಮಾರ್‌ರವರೇ, ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಯಾವುದೇ ಯೋಜನೆಯಲ್ಲಿ . . .

**ಉಪ ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೇ, ಈಗಾಗಲೇ 15 ನಿಮಿಷಗಳು ಆಯಿತು. ಮಾತನಾಡಿ ಮುಗಿಸಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸದಸ್ಯರೇ, ಈ ಯೋಜನೆಯನ್ನು ಏಕೆ ನಿಲ್ಲಿಸಿದ್ದೀರಿ ಎಂದು ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಎನ್. ರವಿಕುಮಾರ್‌ರವರೇ, ಈ ಯೋಜನೆಯನ್ನು ನಿಲ್ಲಿಸಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸದಸ್ಯರೇ, allocation ಎಲ್ಲಿದೆ ಎನ್ನುವುದನ್ನು ತೋರಿಸಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಎನ್. ರವಿಕುಮಾರ್‌ರವರೇ, ನಾನು ಹೇಳುವವರೆಗೂ ಅವಕಾಶ ಕೊಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಐವನ್ ಡಿ'ಸೋಜಾರವರೇ, ಹೇಳಿ.

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಹೇಗೆ ಎಂದರೆ, ಹಿಂದಿನ ಯೋಜನೆಗೆ ಎಷ್ಟು ದುಡ್ಡನ್ನು ಗ್ರಾಂಟ್ ಮಾಡಿತ್ತು. ಅದಕ್ಕೆ ಹೆಚ್ಚುವರಿ ಮಾಡಿದರೆ ಮಾತ್ರ ಬಜೆಟ್‌ನಲ್ಲಿ ಹೇಳಬೇಕಾಗುತ್ತದೆ. ಒಂದು ವೇಳೆ ಹೆಚ್ಚುವರಿ ದುಡ್ಡನ್ನು ಅದಕ್ಕೆ ಕೊಡದೇ ಇದ್ದರೆ ಹಿಂದೆ ಇರುವಷ್ಟು ದುಡ್ಡನ್ನೇ ಕೊಡುವುದಾದರೆ, it is presumed that it is continued; that is implied.

(ಮುಂದು

(281) 10.3.2026 4.30 ಪಿಕೆ:ಆರ್‌ಎನ್ (ಉಪ ಸಭಾಪತಿಗಳ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್:-** ಹಾಗಾದರೆ "ಗೃಹಲಕ್ಷ್ಮಿ" ಯೋಜನೆಗೆ ಸಂಬಂಧಪಟ್ಟಂತೆ ಏನು ಮಾಡಿದ್ದಾರೆ ದಯವಿಟ್ಟು ನೋಡಿ. ನಾನು ಇಡೀ ಬಜೆಟ್ ಪುಸ್ತಕವನ್ನು ಓದಿದ್ದೇನೆ.

**ಉಪ ಸಭಾಪತಿಯವರು:-** ನೀವುಗಳೇ ಚರ್ಚೆ ಮಾಡಬೇಡಿ. ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಹೇಳಿ.

**ಶ್ರೀ ಎನ್.ರವಿಕುಮಾರ್:-** . . . **(ಗೊಂದಲ)** "ಗೃಹಲಕ್ಷ್ಮಿ"ಯೋಜನೆಗೆ ಕಡಿಮೆ ಇದೆ. ಹಾಗಾದರೆ ಏಕೆ ತೋರಿಸಿದಿರಿ?

**ಶ್ರೀ ಐವನ್ ಡಿ'ಸೋಜಾ:-** ನಾವು ಕಡಿಮೆ ಮಾಡಿಲ್ಲ, ಜಾಸ್ತಿ ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಬಜೆಟ್ ಪುಸ್ತಕದಲ್ಲಿ ಅದನ್ನು ತೋರಿಸುತ್ತೇನೆ.

**(ಗೊಂದಲ)**

**ಶ್ರೀ ಐವನ್ ಡಿಸೋಜಾ:-** ಆಯಿತು, you come with that old ಎಷ್ಟು? ಈಗಿನದು ಎಷ್ಟು? ನೀವು ಹೇಳಿ. Now, please allow me to speak. ನೀವು ಮಾತನಾಡುವಾಗ ಅದನ್ನು ಹೇಳಿ.

**ಉಪ ಸಭಾಪತಿಯವರು:-** ನೀವು ಪರಸ್ಪರ ಒಬ್ಬರನ್ನೊಬ್ಬರು ಉದ್ದೇಶಿಸಿ ಮಾತನಾಡಬೇಡಿ. ಪೀಠಕ್ಕೆ ವಿಷಯಗಳನ್ನು ಹೇಳಿ.

**ಶ್ರೀ ಐವನ್ ಡಿಸೋಜಾ:-** ಮಾನ್ಯ ಸಭಾಪತಿಗಳೆ, ಜಲ ಜೀವನ್ ಮಿಷನ್ ಯೋಜನೆಯಡಿ ರೂ. 69,488 ಕೋಟಿ ಕಾಮಗಾರಿಗೆ ಅನುಮೋದನೆ ಕೊಟ್ಟಿದ್ದು, ಕೇಂದ್ರದ ಪಾಲು ರೂ. 30,888 ಕೋಟಿ, ರಾಜ್ಯದ ಪಾಲು ರೂ. 38,600 ಕೋಟಿಗಳಾಗಿವೆ. ಕೇಂದ್ರದಿಂದ ಇದುವರೆಗೆ ಬಿಡುಗಡೆ ಆಗಿರುವುದು ರೂ. 11,786 ಕೋಟಿ ಮತ್ತು ರೂ. 19,102 ಕೋಟಿ ಬಾಕಿ ಇದೆ. ರಾಜ್ಯದಿಂದ ಬಿಡುಗಡೆ ಆಗಿರುವುದು ರೂ. 27,098 ಕೋಟಿಗಳು. ಅಲ್ಲದೇ ರಾಜ್ಯದಿಂದ ರೂ. 15,500 ಕೋಟಿ ಹಣ ಹೆಚ್ಚುವರಿ ಬಿಡುಗಡೆಯಾಗಿದೆ. ಪ್ರಸಕ್ತ ಸಾಲಿಗೆ ಜಲ ಜೀವನ್ ಮಿಷನ್‌ಗೆಂದು ರೂ. 10,433 ಕೋಟಿಗಳನ್ನು ಒದಗಿಸಿ ಕೊಡಲಾಗಿದೆ.

ಮಾನ್ಯ ಸಭಾಪತಿಗಳೆ, ಎಲ್ಲಾ ಗ್ರಾಮ ಪಂಚಾಯಿತಿಗಳನ್ನು 'ಮಹಾತ್ಮ ಗಾಂಧಿ ಗ್ರಾಮ ಪಂಚಾಯಿತಿ' ಎಂದು ನಾಮಕರಣ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ. ಮಹಾತ್ಮ ಗಾಂಧಿಯವರು ಗ್ರಾಮ ರಾಜ್ಯವೇ ರಾಮ ರಾಜ್ಯ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿಯೇ ಈ ದೇಶದ ಅಭಿವೃದ್ಧಿ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೇ ದೇಶದ ಅಭಿವೃದ್ಧಿ ಆಗಲು ಸಾಧ್ಯವಿಲ್ಲವೆಂದು, ಗ್ರಾಮದಲ್ಲಿ ಒಂದು ಸರ್ಕಾರ ಇರಬೇಕೆಂದು ಹೇಳಿದ್ದರು. ಗ್ರಾಮ ಪಂಚಾಯಿತಿಗೆ ಅಧಿಕಾರಗಳು ಜಾಸ್ತಿ ಆದ ಕಾರಣಕ್ಕಾಗಿ, ಗ್ರಾಮ ಪಂಚಾಯಿತಿಗಳಿಗೆ 'ಮಹಾತ್ಮ ಗಾಂಧಿ ಗ್ರಾಮ ಪಂಚಾಯಿತಿ' ಎಂದು ನಾಮಕರಣ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಮಹಾತ್ಮಾ ಗಾಂಧಿಯವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸ್ವಾತಂತ್ರ್ಯವನ್ನು ತಂದು ಕೊಟ್ಟು, ತಾವು ಏನನ್ನೂ ಬಯಸದೇ, ಯಾವರೀತಿ ತಮ್ಮ ದೇಹತ್ಯಾಗ ಮಾಡಿದರು ಎನ್ನುವುದು ಈ ದೇಶದ ಜನರಿಗೆ ಗೊತ್ತಿದೆ. ಹಾಗಾಗಿ ಸರ್ಕಾರ ಅವರ ಹೆಸರನ್ನು ಗ್ರಾಮ ಪಂಚಾಯಿತಿಗಳಿಗೆ ಇಡುವಂತಹ ಅತ್ಯಂತ ಸೂಕ್ತ ತೀರ್ಮಾನವನ್ನು ಕೈಗೊಂಡಿದೆ. ಇದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ರೂ. 4,291

ಕೋಟಿ ಮೀಸಲಿಟ್ಟು, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ರೂ. 5,000 ಕೋಟಿಗಳ ಕ್ರಿಯಾ ಯೋಜನೆಯನ್ನು ಮಂಡಳಿಯ ವಿವೇಚನಾ ಮತ್ತು ಮ್ಯಾಕ್ರೋ ಅನುದಾನಗಳಲ್ಲಿ ಶೇಕಡ 40ರಷ್ಟು ಆರೋಗ್ಯ, ಶಿಕ್ಷಣ ಮತ್ತು ಅಪೌಷ್ಠಿಕತೆ ನಿವಾರಣೆಗೆ ಮೀಸಲಿಟ್ಟಿದ್ದಾರೆ. ಜೇವರ್ಗಿಯಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾನದ ಅಡಿ Knowledge Park ಸ್ಥಾಪನೆ ಮಾಡುವ ಕೆಲಸ ಕೈಗೊಂಡಿದೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ರೂ. 7,000 ಕೋಟಿ ಅನುದಾನ ಇಡಲಾಗಿದೆ. ಬೆಂಗಳೂರಿನಲ್ಲಿ ರಾಜ್ಯದ ನಾಲ್ಕನೆ ಒಂದರಷ್ಟು ಜನಸಂಖ್ಯೆ ಇದೆ. ರಾಯಚೂರು, ಬೀದರ್ ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ-2.0 ಅಡಿ ತಲಾ ರೂ. 200 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇದು ನಗರಗಳ ಅಭಿವೃದ್ಧಿಗೆ ಹಿಡಿದಂತಹ ಕನ್ನಡಿಯಾಗಿದೆ.

ಮಾನ್ಯ ಸಭಾಪತಿಗಳೆ, ನೀರಾವರಿ ಪಂಪ್‌ಸೆಟ್ ವಿದ್ಯುತ್ ಸಹಾಯ ಧನದ ಅಡಿ 36 ಲಕ್ಷ ಪಂಪ್‌ಸೆಟ್‌ಗಳಿಗೆ ರೂ. 19,290 ಕೋಟಿ, ಗೃಹಜ್ಯೋತಿ ಯೋಜನೆಗೆ ರೂ. 10,578 ಕೋಟಿ ಇಟ್ಟಿದ್ದಾರೆ. ಹಿಂದೆ ಎಷ್ಟೋ ಜನರು ವಿದ್ಯುತ್ ಬಿಲ್ ಅನ್ನು ಕಟ್ಟದೇ ಇದ್ದಾಗ ಲೈನ್‌ಮೆನ್ ಬಂದು ಫ್ಯೂಸ್ ಕಟ್ ಮಾಡಿಕೊಂಡು ಹೋಗುತ್ತಿದ್ದರು. ಇವತ್ತು 200 ಯೂನಿಟ್‌ಗಿಂತ ಕಡಿಮೆ ಯಾರು ಬಳಕೆ ಮಾಡುತ್ತಾರೋ ಅವರಿಗೆ ಉಚಿತವಾಗಿ ವಿದ್ಯುತ್ ಯೋಜನೆ ಕೊಡಲಾಗುತ್ತದೆ. ಇದರಿಂದ ಯಾರೂ ಕೂಡ ಕತ್ತಲೆಯಲ್ಲಿ ಇರುವಂತಹ ಪ್ರಸಂಗ ಉದ್ಭವಿಸುತ್ತಿಲ್ಲ. KUSUM-C ಯೋಜನೆ ಅಡಿಯಲ್ಲಿ 2,777 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ವಿದ್ಯುತ್ ಉತ್ಪಾದನೆ ಯೋಜನೆ ಮಾಡಲಾಗಿದೆ. ಬಹುಶಃ Solar is a God gift given to us. ಈ ಯೋಜನೆ ಅಡಿ ಎಲ್ಲರ ಮನೆಗಳ Rooftop Solar ಗಳಲ್ಲಿ ಸೋಲಾರ್ ಬಳಕೆ ಮಾಡಿ, ತನಗೆ ಬೇಕಾದ ವಿದ್ಯುತ್ತನ್ನು ತಾನೇ ತಯಾರು ಮಾಡುವ ಯೋಜನೆಯನ್ನು ಜಾರಿಗೆ ತರುವಂಥದ್ದು ಆಗುತ್ತಿದೆ. ಅದೇರೀತಿ ಕೇಂದ್ರದಿಂದ 'ಸೂರ್ಯ ಘರ್' ಎನ್ನುವ ಯೋಜನೆಯನ್ನು ತಂದಿದ್ದಾರೆ. ಇದರಿಂದ ಎಲ್ಲರ ಮನೆ ಬೆಳಗುವಂತಹ ಕೆಲಸ ಆಗುತ್ತಿದೆ. ಎಲ್ಲಿ ವಿದ್ಯುಚ್ಛಕ್ತಿ ತಲುಪುತ್ತಿರಲಿಲ್ಲವೋ ಅಂತಹ ಕಡೆ rooftop ನಲ್ಲಿ ವಿದ್ಯುತ್ ಉತ್ಪಾದನೆ ಯೋಜನೆಯನ್ನು ಜಾರಿಗೆ ತರಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ರೂ. 2,000 ಕೋಟಿ ಮೊತ್ತದಲ್ಲಿ ಸೇತುವೆಗಳ ನಿರ್ಮಾಣ, Asian Development Bank ನೆರವಿನಿಂದ ರೂ. 5,736 ಕೋಟಿ ವೆಚ್ಚದಲ್ಲಿ 857 ಕಿ.ಮೀ. ಉದ್ದದ ರಸ್ತೆ ನಿರ್ಮಾಣ ಮಾಡುವ ಯೋಜನಾ ವರದಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೊಡಲು ಸಾಧ್ಯವಾಗಿದೆ. ರಾಜ್ಯದಲ್ಲಿ 7 ದೇಶಿಯ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ರೂ. 200 ಕೋಟಿ ಅನುದಾನ ಮೀಸಲಿಡಲಾಗಿದೆ. ಪ್ರತಿಯೊಂದು ಜಿಲ್ಲೆಗಳಲ್ಲಿಯೂ ನಮಗೂ ವಿಮಾನ ನಿಲ್ದಾಣ ಬೇಕು ಎಂದು ಹೇಳುವ ಸಂದರ್ಭದಲ್ಲಿ, ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ರಾಜ್ಯದಲ್ಲಿ ರೈಲ್ವೆ ಮಾರ್ಗಗಳ ಅಭಿವೃದ್ಧಿ ಮಾಡುವುದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾಗಿದ್ದರೂ, ಇದಕ್ಕೆಂದು ರಾಜ್ಯ ರೂ. 600 ಕೋಟಿ ಬಿಡುಗಡೆ ಮಾಡಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ

ಮತ್ತು ತಂತ್ರಜ್ಞಾನದಲ್ಲಿ ಕೂಡ ಅನೇಕ ರೀತಿಯ ಐ.ಟಿ. ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವುದಿರಬಹುದು, ಡ್ರೋನ್ ಪರೀಕ್ಷಾ ಸೌಲಭ್ಯ ಕೇಂದ್ರಗಳಿರಬಹುದು, ಕ್ವಾಂಟಮ್ ರೋಡ್ ಮ್ಯಾಪ್ ಮಾಡುವ ಅನುಷ್ಠಾನ ಇರಬಹುದು, ಆರು ಹೊಸ ತಾರಾಲಯಗಳನ್ನು ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ಯಾದಗಿರಿ, ಕೊಪ್ಪಳ ಹಾಗೂ ಬೀದರ್ ಜಿಲ್ಲೆಗಳಲ್ಲಿ ರೂ. 24 ಕೋಟಿ ವೆಚ್ಚದಲ್ಲಿ ಸ್ಥಾಪನೆ ಮಾಡಿರುವಂಥದ್ದು ದೊಡ್ಡ ಸಾಧನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶಿವಕುಮಾರ್‌ರವರು ಮಾನವ-ವನ್ಯ ಜೀವಗಳ ಸಂಘರ್ಷದ ಬಗ್ಗೆ ಹೇಳಿದರು. ನಮ್ಮ ಕೊಡಗಿನ ಶಾಸಕರೂ ಕೂಡ ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷ ಆಗುತ್ತಿದೆ ಎನ್ನುವುದರ ಬಗ್ಗೆ ಹೇಳಿದರು. ಇದನ್ನು ತಪ್ಪಿಸಲು ಅರಣ್ಯ, ಜೀವಿಶಾಸ್ತ್ರ ಪರಿಸರಕ್ಕೆಂದು ಸುಮಾರು ರೂ. 1,500 ಕೋಟಿ ವೆಚ್ಚದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನ್ಯ ಸಭಾಪತಿಗಳೆ, ಕಂದಾಯ ಇಲಾಖೆಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಎಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎನ್ನುವುದು ಗೊತ್ತಿದೆ. ಒಳಾಡಳಿತ ಮತ್ತು ಸಾರಿಗೆ ವಿಚಾರಕ್ಕೆ ಸಂಬಂಧಪಟ್ಟಂತೆ ಕೂಡ ರಾಜ್ಯದಲ್ಲಿ ಸೂಕ್ತ ರೀತಿಯ ಬದಲಾವಣೆಗಳನ್ನು ತರಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಮಾನ್ಯ ಸಭಾಪತಿಗಳೆ, ನಾನು ಕರಾವಳಿ ಭಾಗದಿಂದ ಬರುತ್ತೇನೆ. ನನ್ನ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರದಲ್ಲಿ ಇವತ್ತು ಒಳಚರಂಡಿ ವ್ಯವಸ್ಥೆ ತೊಂದರೆಯಲ್ಲಿದೆ. ಒಳಚರಂಡಿ ನೀರು ರಸ್ತೆಗಳಲ್ಲಿ, ತೋಟಗಳಲ್ಲಿ ಹರಿಯುವಂತಹ ಪರಿಸ್ಥಿತಿ ಇದೆ. ನೀರು ಹರಿಯುವಂತಹ ರಾಜಕಾಲುವೆಗಳು ಎಲ್ಲಿತ್ತೋ, ಅಲ್ಲಿ ಸುಮಾರು 75 ವರ್ಷಗಳ ಹಿಂದೆ ಹಾಕಿದ್ದ ಚರಂಡಿಯ stoneware pipes ಗಳು ಕರಗಿ ಹೋಗಿವೆ. ಕೆಂಪು ಕಲ್ಲಿನಲ್ಲಿ ಕಟ್ಟಿದಂಥ ಡ್ರೈನೇಜ್‌ಗಳು ಕೂಡ ಕರಗಿ ಹೋಗಿವೆ. ನಗರದ ಎಲ್ಲಾ ವಾರ್ಡ್‌ಗಳಲ್ಲಿ ಒಳಚರಂಡಿ ನೀರು ನುಗ್ಗಿ, ಕುಡಿಯುವ ನೀರಿಗೆ ಬಹಳ ತೊಂದರೆ ಆಗುತ್ತಿದೆ. ಹಾಗಾಗಿ ನಾವು, ಕನಿಷ್ಠ ರೂ. 1,250 ಕೋಟಿಗಳ ವೆಚ್ಚದಲ್ಲಿ ಇಡೀ ಮಂಗಳೂರಿನ ಒಳಚರಂಡಿ ವ್ಯವಸ್ಥೆ ಸರಿಪಡಿಸುವ ಸಂಬಂಧ ಪ್ರಸ್ತಾಪ ಮಾಡಿದ್ದೆವು. ಆದರೆ, ಬಜೆಟ್‌ನಲ್ಲಿ ಎಲ್ಲೂ ಅದರ ಉಲ್ಲೇಖ ಆಗಿಲ್ಲ. Supplementary ಬಜೆಟ್‌ನಲ್ಲಿರಬಹುದು ಅಥವಾ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ, ಎಲ್ಲಾ ಜನರ ಏಳಿಗೆಗಾಗಿ, ವಾಸನೆಯಿಂದ ಅನಾರೋಗ್ಯಕ್ಕೆ ಒಳಗಾಗುತ್ತಿರುವ ಸಂದರ್ಭದಲ್ಲಿ ರೂ. 1,250 ಕೋಟಿಗಳನ್ನು ಒಳಚರಂಡಿ ಯೋಜನೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೆ, ನಮ್ಮ ಕರಾವಳಿ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡಿದ್ದು, ಈಗ 360 ಕಿ.ಮೀ. ದೂರ ಇರುವ ಬೆಂಗಳೂರಿಗೆ ಬರಬೇಕಾದ ಪರಿಸ್ಥಿತಿ ಇದೆ. ಚಿಕ್ಕ ಚಿಕ್ಕ ಕೇಸುಗಳ ಸಂಬಂಧ ಕೂಡ ಇಲ್ಲಿಗೆ ಬರಬೇಕಿದೆ. ಸಂಜೆಗೆ ಬಂದರೆ ವಕೀಲರನ್ನು ಭೇಟಿ ಮಾಡುವುದಕ್ಕೆ ಅವಕಾಶ ಆಗುವುದಿಲ್ಲ. ಅವರಿಗೆ ಸರಿಯಾದ ವಿಷಯ ಹೇಳುವುದಕ್ಕೆ, ವಿಚಾರಣೆಗೆ ಸಹಾಯವಾಗುವಂತೆ ಮಾಹಿತಿ

ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಕರಾವಳಿ ಕರ್ನಾಟಕದಲ್ಲಿ, ದಕ್ಷಿಣ ಕನ್ನಡ, ಉಡುಪಿ, ಕೊಡುಗು , ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡದ ಭಾಗಗಳಿಗೆ ಅನುಕೂಲ ಆಗುವಂತೆ ನಮಗೆ ಹೈಕೋರ್ಟ್ ಪೀಠವನ್ನು ಕೊಡಬೇಕೆಂಬ ಭಿನ್ನಹವನ್ನು ಮಾನ್ಯ ಮುಖ್ಯಮಂತ್ರಿಗಳ ಮತ್ತು ಮುಖ್ಯ ಕಾರ್ಯದರ್ಶಿಯವರ ಹತ್ತಿರ ಮಾಡಿದ್ದೇವೆ. ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಗುಲ್ಬರ್ಗಾ ಮತ್ತು ಧಾರವಾಡದಲ್ಲಿ ಪೀಠಗಳು ಇವೆ. ಸುಪ್ರಿಂ ಕೋರ್ಟ್ ಬೆಂಚನ್ನು ಕರ್ನಾಟಕಕ್ಕೆ ತರಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ವರದಿಗಳನ್ನು ನೀಡಲಾಗಿದೆ.

(ಮುಂದು)

(282) 10-3-2026 4.40 ಡಿಎಸ್-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಹಾಗಾಗಿ decentralization and liberalization of law, ಕಾನೂನನ್ನು ಮನೆ ಬಾಗಿಲಿಗೆ ಕಡಿಮೆ ವೆಚ್ಚದಲ್ಲಿ ಕೊಂಡೊಯ್ಯಬೇಕು ಎನ್ನುವುದು ಸರ್ಕಾರದ ಆಲೋಚನೆ ಇರುವಂತಹ ಈ ಸಂದರ್ಭದಲ್ಲಿ ಮಂಗಳೂರಿಗೆ ಹೈಕೋರ್ಟ್ ಪೀಠವನ್ನು ಕೊಡಬೇಕು ಎಂದು ದೊಡ್ಡ ಒತ್ತಡವನ್ನು ತರುವುದಕ್ಕೆ ನಾವು ಬಯಸುತ್ತಿದ್ದೇವೆ. ಅದರ ಜೊತೆಯಲ್ಲಿ ಮಂಗಳೂರಿನ ಸಮಗ್ರ ಅಭಿವೃದ್ಧಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಮಂಗಳೂರು ಬೆಳೆಯುತ್ತಿರುವಂತಹ ನಗರ. ಹಾಗಾಗಿ ಕನಿಷ್ಠ 200 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಮಂಗಳೂರು ನಗರದ ರಸ್ತೆಗಳಿಗಾಗಿ, ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ ಕೊಡಬೇಕು ಎಂದು ಹೇಳುವಂಥದ್ದು. ಇತ್ತೀಚೆಗೆ ಮಂಗಳೂರಿನಲ್ಲಿ ಪ್ರವಾಸೋದ್ಯಮ ಸಮಾವೇಶ (Tourism Conclave) ಮಾಡಿದ್ದೇವೆ. ರಾಜ್ಯದ ಮುಖ್ಯಮಂತ್ರಿಗಳು ಬಂದಿದ್ದರು, ಉಪ ಮುಖ್ಯಮಂತ್ರಿಗಳು ಬಂದಿದ್ದರು, ಉಸ್ತುವಾರಿ ಮಂತ್ರಿಗಳು, ಎಲ್ಲಾ ಜಿಲ್ಲೆಗಳ ಶಾಸಕರುಗಳು ಪಕ್ಷಬೇಧ ಮರೆತು ಎಂ.ಪಿ.ಗಳು, ಎಂ.ಎಲ್.ಎ.ಗಳು ಸೇರಿ ಕರಾವಳಿ ಭಾಗದ ಪ್ರವಾಸೋದ್ಯಮ ಅಭಿವೃದ್ಧಿ ಆಗಬೇಕು. ಉದ್ದಕ್ಕೆ ತಲಪಾಡಿಯಿಂದ ಕಾರವಾರದವರೆಗೆ ರಸ್ತೆಗಳು ರಾಷ್ಟ್ರೀಯ ಹೆದ್ದಾರಿ ಏನಿದೆ ಅದಕ್ಕೆ ಒತ್ತೊತ್ತಾಗಿ ರಸ್ತೆಯನ್ನು ನಿರ್ಮಾಣ ಮಾಡಬೇಕು. ಬೈಪಾಸ್‌ಗಳನ್ನು ನಿರ್ಮಾಣ ಮಾಡಿ ಕರಾವಳಿಯ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಈಗಾಗಲೇ ಅದರ ಉಲ್ಲೇಖವನ್ನು ಬಜೆಟ್‌ನಲ್ಲಿ ಮಾಡಿದ್ದಾರೆ. ಅದನ್ನು ಶೀಘ್ರವಾಗಿ ಅನುಷ್ಠಾನಕ್ಕೆ ತರಬೇಕು ಎಂದು ಹೇಳುವುದರ ಮೂಲಕ ರಾಜ್ಯದ ಬಜೆಟ್ ಮಾನ್ಯ ಸಿದ್ದರಾಮಯಯ್ಯನವರ ಬಜೆಟ್. ಇದೊಂದು ಅತ್ಯಂತ ಅಮೂಲ್ಯವಾದ ಬಜೆಟ್. ರಾಜ್ಯದ ಎಲ್ಲಾ ಜನರ ಬೇಡಿಕೆಗಳಿಗೆ ಸರಿಯಾಗಿ ಮಾಡಿರುವಂತಹ ಬಜೆಟ್. 17 ಬಜೆಟ್ ಅನ್ನು ಮಂಡಿಸಿದಂತಹ ರಾಜ್ಯದ ಮುಖ್ಯಮಂತ್ರಿಗಳು ಆರ್ಥಿಕವಾಗಿ ಏನು ಬರೆದಿದ್ದಾರೆ ಅವೆಲ್ಲವೂ ಧಾರೆ ಎರೆದು ಇಡೀ ರಾಜ್ಯಕ್ಕೆ ಉತ್ತಮ ಬಜೆಟ್ ಅನ್ನು ಕೊಟ್ಟಿದ್ದಾರೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಿಗೆ, ಸಚಿವ ಸಂಪುಟದ ಸಚಿವರುಗಳಿಗೆ ಮತ್ತು ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳಿಗೆ, ಎಲ್ಲಾ ಜನರಿಗೆ ನಾನು

ಅಭಿನಂದನೆಯನ್ನು ಸಲ್ಲಿಸಿ, ಮಾನ್ಯ ಸಿದ್ದರಾಮಯ್ಯನವರು ಉತ್ತಮ ಬಜೆಟ್ ನೀಡಿದ್ದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು 17ನೇ ಬಾರಿಗೆ ಆಯವ್ಯಯವನ್ನು ಮಂಡಿಸಿರುವಂತಹ ಈ ಸಂದರ್ಭದಲ್ಲಿ ಅಷ್ಟು ದೀರ್ಘಾವಧಿಯ ಅನುಭವ ಅವರಿಗೆ ಇದ್ದರೂ ಕೂಡ ಬಜೆಟ್ ಮತ್ತು ನಮ್ಮ ರಾಜ್ಯದ ಒಟ್ಟು ಆರ್ಥಿಕ ವಿಷಯವನ್ನು ನಿರ್ವಹಣೆ ಮಾಡುವಂತಹ ನಿಟ್ಟಿನಲ್ಲಿ ಈ ಸಲದ ಬಜೆಟ್ ಸಂಪೂರ್ಣವಾಗಿ ತನ್ನ ಹಳಿ ತಪ್ಪಿ ಹೋಗಿ ಒಂದು ರೀತಿ ಅದಕ್ಕೆ ಆತ್ಮಾಹುತಿ ಎಂದು ಹೇಳಿದರೆ ತಪ್ಪಾಗಲಾರದು, suicidal ಎಂದು ಹೇಳಿದರೂ ತಪ್ಪಾಗಲಾರದು. ಯಾರು ಈ ಅತ್ಯಂತ ಪ್ರಮುಖವಾದ ನಿರ್ಣಯಗಳನ್ನು ಮಾಡುವಂತಹ ಸಂದರ್ಭದಲ್ಲಿ ಇಡೀ ರಾಜ್ಯದ ಆರ್ಥಿಕತೆಯನ್ನು ಒಂದು ರೀತಿ suicidal ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವಂತಹ ದೊಡ್ಡ ತಪ್ಪು ನಿರ್ಣಯವನ್ನು ಮಾಡಿರುವಂಥದ್ದು ಈ ಬಜೆಟ್‌ನಲ್ಲಿ ಎದ್ದು ಕಾಣುತ್ತಿದೆ.

ಮಾನ್ಯ ಸಭಾಪತಿಯವರೇ, ಅವರು ಪ್ರಾರಂಭದಲ್ಲೇ 11 ಜಿ ಮಾದರಿಯ ಆರ್ಥಿಕತೆ ಎಂದು ಉಲ್ಲೇಖ ಮಾಡುತ್ತಾರೆ. ಅಂದರೆ, guarantee economy, ಲಿಂಗ ಸಮಾನತೆ ಮತ್ತು ಕಲ್ಯಾಣ ಎಂದು ಹೇಳುತ್ತಾರೆ. ಬಹುಶಃ ಕಳೆದ ಮೂರು ವರ್ಷಗಳಲ್ಲಿ ಆದಂತಹ ಅಸಮತೋಲನ ನಮ್ಮ ರಾಜ್ಯದಲ್ಲಿ ಹಿಂದೆಂದು ಈ ರೀತಿಯಾದಂತಹ imbalance ಆಗಿರುವಂಥದ್ದನ್ನು ನಾವು ಗಮನಿಸಿರಲಿಲ್ಲ. ಮತ್ತೊಂದು ವಿಚಾರವನ್ನು ಅವರು ಹೇಳುತ್ತಾರೆ, good public education ಎಂದು ಹೇಳುತ್ತಾರೆ. good public education ಎಂದರೆ ಸರ್ಕಾರಿ ಶಾಲೆಗಳಲ್ಲಿ ಸಿಗುವಂತಹ ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ, ಇವತ್ತಿನ ಪರಿಸ್ಥಿತಿ ಹೇಗಿದೆ ಎಂದರೆ ಮಾನ್ಯ ಶಿಕ್ಷಣ ಸಚಿವರು ನಮ್ಮ ಸದನದಲ್ಲಿ ಇದ್ದಾರೆ. ಸುಮಾರು 79,000-80,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಅವರು ಕಳೆದ ಮೂರು ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. ಈಗ ಇವರು ಶಿಕ್ಷಕರ ಹುದ್ದೆಗಳನ್ನು ತುಂಬದೆ, ಶಿಕ್ಷರನ್ನು ನೇಮಿಸದೆ good quality education ಎನ್ನುವಂತಹ ಸಾಧನೆಯನ್ನು ಯಾವ ರೀತಿ ಮಾಡುತ್ತಾರೆ? ಒಂದು ಶಾಲೆ ಸರಿಯಾದ ರೀತಿಯಲ್ಲಿ ನಡೆಯಬೇಕೆಂದರೆ ಆ ಶಾಲೆಗೆ ಬರುವಂತಹ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ಶಿಕ್ಷಕರು ಇರಬೇಕು. ಶಿಕ್ಷಕರೇ ಇಲ್ಲದೆ good quality education ಅನ್ನು ಹೇಗೆ ತರುತ್ತಾರೆ ಮತ್ತು good health to all ಎಂದು ಹೇಳುತ್ತಾರೆ. ಇವತ್ತು ಇಡೀ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಯಾವ ರೀತಿ ಆಗಿದೆ ಎಂದರೆ ಕಳೆದ ಕೆಲವು ದಿನಗಳ ಹಿಂದೆ ಇಡೀ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಯ ದೊಡ್ಡ ಕೊರತೆಯಾಗಿದೆ ಎಂದು ಹಾಹಾಕಾರ ಎದ್ದಂತಹ ಸಂದರ್ಭದಲ್ಲಿ ಸ್ವತಃ ನಮ್ಮ ಆರೋಗ್ಯ ಸಚಿವರೇ ಅದಕ್ಕೆ ಸ್ಪಷ್ಟೀಕರಣ ಕೊಡಬೇಕಾದ ಪರಿಸ್ಥಿತಿ ಬಂದಿತು. ನಾವು ಔಷಧಿಗಳನ್ನು ಸರಿಯಾದ ರೀತಿಯಲ್ಲಿ ಕೊಡುತ್ತೇವೆಂದು ಹೇಳಿದರು. ಅಲ್ಲಿ M.R.I., C.T. Scan ಇತ್ಯಾದಿ ಮಷಿನ್‌ಗಳಿಲ್ಲ ಎಂದು ಹೇಳಿದರು. ಮಾನ್ಯ ಶಿಕ್ಷಣ ಸಚಿವರು ಸ್ವಲ್ಪ ನನ್ನ ಕಡೆ ಗಮನ

ಕೊಡಬೇಕು. ಏಕೆಂದರೆ, ಆಯವ್ಯಯದಲ್ಲಿ ಎರಡನೆಯದಾಗಿ ತಮ್ಮ ಇಲಾಖೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖ ಮಾಡಿದ್ದಾರೆ. Good public education ಸರ್ವರ ಏಳಿಗೆ ಬಯಸುವ ಸಮರ್ಥ ಸಾರ್ವಜನಿಕ ಶಿಕ್ಷಣ ಎಂದು ಹೇಳಿದ್ದಾರೆ. ಶಿಕ್ಷಣ ಇಲಾಖೆಯಲ್ಲಿರುವಂತಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡದೆ ಹೇಗೆ ಶಿಕ್ಷಣವನ್ನು ಸಮರ್ಪಕವಾಗಿ ನೀಡುವುದಕ್ಕಾಗುತ್ತದೆ? ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಮುಖ್ಯವಾದ ಮಾಹಿತಿ ಇರುವುದರಿಂದ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ರಾಷ್ಟ್ರೀಯ ಸರಾಸರಿ ಬಜೆಟ್‌ನ average ನಲ್ಲಿ ಬೇರೆ ಬೇರೆ ರಾಜ್ಯಗಳು ಶಿಕ್ಷಣಕ್ಕೆ ಎಷ್ಟು ಖರ್ಚು ಮಾಡುತ್ತಿದ್ದಾರೆ ಎಂದರೆ ನಮಗಿಂತ ಆರ್ಥಿಕವಾಗಿ ಬಹಳ ಹಿಂದುಳಿದಿರುವಂತಹ ರಾಜ್ಯಗಳು ಕೂಡ national weighted average ಅನ್ನು ತೆಗೆದುಕೊಂಡರೆ ಶೇಕಡ 14.5 ರಷ್ಟು ದೇಶದಾದ್ಯಂತ ಶಿಕ್ಷಣಕ್ಕೆ ಖರ್ಚು ಮಾಡುತ್ತಿದ್ದಾರೆ. ಶಿಕ್ಷಣಕ್ಕೆ ತಮ್ಮ ರಾಜ್ಯಗಳ ಬಜೆಟ್‌ಗಳಲ್ಲಿ ಮೀಸಲಿಟ್ಟಿರುವಂತಹ ಹಣ. ಆದರೆ ನಮ್ಮ ಸರ್ಕಾರ ಶೇಕಡ 10.8 ರಷ್ಟು ಖರ್ಚು ಮಾಡುತ್ತಿದ್ದಾರೆ. ಅಂದರೆ, ಶೇಕಡ 5 ರಷ್ಟು ವ್ಯತ್ಯಾಸ ಇದೆ. ಇವರು ಖರ್ಚು ಮಾಡದೆ good education ಎನ್ನುವಂತಹ ವ್ಯಾಖ್ಯಾನವನ್ನು ಹೇಗೆ ಮಾಡುತ್ತಿದ್ದಾರೆ? They are not providing fund in the Budget, they are not appointing teachers, ಶಿಕ್ಷಣಕ್ಕೆ ಶಿಕ್ಷರುಗಳನ್ನು ಕೊಡುತ್ತಿಲ್ಲ. ಖರ್ಚು ಮಾಡುವುದಕ್ಕೆ ಹಣ ಕೊಡುತ್ತಿಲ್ಲ. ಆದರೆ, ಇಲ್ಲಿ good public education ಎಂದು ಘೋಷಣೆಯನ್ನು ಮಾಡುತ್ತಿದ್ದಾರೆ. Good health to all ಎಂದು ಹೇಳಿದ್ದೇನಲ್ಲಾ, national weighted average ಸರ್ಕಾರದ ಆರೋಗ್ಯ ಸೇವೆಗಳಿಗೆ ಇತರೆ ರಾಜ್ಯಗಳು ಖರ್ಚು ಮಾಡುತ್ತಿರುವುದನ್ನು ನೋಡಿದರೆ, ಇವರು ಜಿ.ಎಸ್.ಟಿ. ವಿಷಯದಲ್ಲಿ 2ನೇ ಹಂತದಲ್ಲಿದ್ದೇವೆ ಎಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು, ಈಗ ಮಾನ್ಯ ಐವನ್ ಡಿ'ಸೋಜಾರವರು ಮಾತನಾಡಿದರು. 10ನೇ ಸ್ಥಾನ, 15ನೇ ಸ್ಥಾನದಲ್ಲಿರುವಂತಹ ರಾಜ್ಯಗಳು ಸೇರಿ national weighted average ಇರುವಂಥದ್ದು, ಶೇಕಡ 6.2 ರಷ್ಟು ಬಜೆಟ್‌ನ ಹಣವನ್ನು ಇಡೀ ದೇಶದಲ್ಲಿ ಆರೋಗ್ಯ ಸೇವೆಗಳಿಗೆ ಖರ್ಚು ಮಾಡುತ್ತಿದ್ದಾರೆ. ನಾವು ಶೇಕಡ 4.5 ರಷ್ಟು ಖರ್ಚು ಮಾಡುತ್ತಿದ್ದೇವೆ. ಈ ಎಲ್ಲಾ ಮಾಹಿತಿಯನ್ನು ನಾನು ಬೇರೆ ಕಡೆಯಿಂದ ತೆಗೆದಿರುವಂಥದ್ದಲ್ಲ. ಬಜೆಟ್ ಪುಸ್ತಕದಲ್ಲಿ ಏನು Graph and Pie Chart ಇದೆ ಅದರಿಂದ ಎಲ್ಲಾ ವಿವರಗಳು ಇವೆ. Grassroots economy ಎಂದು ಹೇಳಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳು. ಗ್ರಾಮೀಣಾಭಿವೃದ್ಧಿಗಾಗಿ ಇಡೀ ದೇಶದಲ್ಲಿ ಬೇರೆ ರಾಜ್ಯದವರು ಶೇಕಡ 4.9 ರಷ್ಟು ಬಜೆಟ್‌ನಲ್ಲಿ ಖರ್ಚು ಮಾಡುತ್ತಿದ್ದಾರೆ. ನಾವು ಶೇಕಡ 2 ರಷ್ಟು ಖರ್ಚು ಮಾಡುತ್ತಿದ್ದೇವೆ. Grassroots economy ಗೆ ಇಡೀ ದೇಶದಲ್ಲಿ ಶೇಕಡ 5 ರಷ್ಟು ಖರ್ಚು ಮಾಡುತ್ತಿದ್ದಾರೆ, ನಾವು ಶೇಕಡ 2 ರಷ್ಟು ಖರ್ಚು ಮಾಡುತ್ತಿದ್ದೇವೆ, ಹಾಗಾದಲ್ಲಿ ಇವರು ಹೇಗೆ ಗ್ರಾಮೀಣಾಭಿವೃದ್ಧಿಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ? Good Governance, ಜನ ಸ್ನೇಹಿ ಆಡಳಿತ. ಇವತ್ತು ನಮ್ಮ ರಾಜ್ಯದ ಜನರಿಗೆ ಆಡಳಿತ ಎಲ್ಲಿದೆ ಎಂದು ಹುಡುಕಿಕೊಂಡು ಬರುವಂತಹ

ಪರಿಸ್ಥಿತಿಯಲ್ಲಿದ್ದಾರೆ. ಏಕೆ ಹುಡುಕಿಕೊಂಡು ಬರಬೇಕು ಎನ್ನುವುದಕ್ಕೆ ಇವತ್ತು ಅರ್ಧಕ್ಕರ್ಧ ಹುದ್ದೆಗಳು ಖಾಲಿ ಇವೆ. 2,86,000 ಹುದ್ದೆಗಳು ಖಾಲಿ ಇವೆ. ಇರುವಂತಹ ಜನರಲ್ಲಿ ಇವರು ಜನ ಸ್ನೇಹಿ ಆಡಳಿತ ಎಲ್ಲಿಂದ ಕೊಡುತ್ತಾರೆ?

(ಮುಂದು)

**(283) 10/03/2026 4:50 ಎಸ್‌ಪಿಆರ್/ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್ (ಮುಂದು)**

ಯಾರು ಕೊಡುತ್ತಾರೆ? ಜನರು ಹೋಗಿ ಯಾರಿಂದ ಆಡಳಿತವನ್ನು ಪಡೆದುಕೊಳ್ಳುತ್ತಾರೆ? ಇನ್ನು ಆಡಳಿತದ ವಿಷಯಕ್ಕೆ ಬಂದರೆ, ಕಾರ್ಮಿಕ ಕಲ್ಯಾಣ ಎಂಬುದಾಗಿ ಹೇಳಿದ್ದಾರೆ. ನಾನು ಅನೇಕ ಬಾರಿ ಕಾರ್ಮಿಕ ಇಲಾಖೆಯಲ್ಲಿ ಆಗಿರುವ ಬ್ರಹ್ಮಾಂಡ ಭ್ರಷ್ಟಾಚಾರಗಳ ಬಗ್ಗೆ ಮಾಹಿತಿಯನ್ನು ಕೊಡುವುದರ ಜೊತೆಗೆ ನಾನೇ ಸ್ವತಃ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಕಾರ್ಮಿಕರು ಕಾರ್ಮಿಕ ಇಲಾಖೆಯ ಕಛೇರಿಯ ಮುಂದೆ ಶಾಮಿಯಾನವನ್ನು ಹಾಕಿ ಸುಮಾರು 25 ದಿನಗಳ ಕಾಲ ಧರಣಿ ಕುಳಿತಿದ್ದರು. ಅಲ್ಲಿ ಯಾವ ಒಬ್ಬ ಅಧಿಕಾರಿಯೂ ಸಹ ಅವರ ಕಣ್ಣು ಮುಂದೆ ಓಡಾಡಿದರೂ ಕೂಡ "ನೀನು ಏಕೆ ಇಲ್ಲಿ ಪ್ರತಿಭಟನೆಗೆ ಕುಳಿತಿದ್ದೀಯಾ" ಎಂದು ಅವರನ್ನು ಮಾತನಾಡಿಸುವುದಕ್ಕೆ ಹೋಗಲಿಲ್ಲ. ನಮ್ಮ ಊರಿಗೆ ಸ್ವತಃ ಕಾರ್ಮಿಕ ಸಚಿವರೇ ಬಂದಿದ್ದರೂ ಕೂಡ, ನಮ್ಮ ಕಾರ್ಮಿಕ ಇಲಾಖೆಯ ಮುಂದೆ ಇಷ್ಟೊಂದು ಜನ ಅಂದರೆ ಸುಮಾರು 200-300 ಜನ ಧರಣಿಗೆ ಕುಳಿತಿದ್ದಾರೆ; ಅವರಿಗೆ ಏನು ಸಮಸ್ಯೆ ಇದೆ ಕೇಳೋಣ ಎಂದು ಅಂದುಕೊಂಡರೂ ಸಹ, ಸಚಿವರು ಧರಣಿನಿರತರಾದವರ ಮುಂದೆ ಹಾದುಹೋದರೂ ಸಹ ಅವರು ನಿಲ್ಲಿಸಲಿಲ್ಲ. ಅಂದರೆ ಒಬ್ಬ ಸಚಿವರಿಗೆ ತಮ್ಮದೇ ಇಲಾಖೆಯ ಕಛೇರಿಯ ಮುಂದೆ ಪ್ರತಿಭಟನೆಗೆ ಕುಳಿತ ತಮ್ಮ ಇಲಾಖೆಯಡಿ ಬರುವ ಕಾರ್ಮಿಕರ ಪರಿಸ್ಥಿತಿ ಏನಾಗಿದೆ ಎಂದು ಕೇಳುವಷ್ಟು ಸೌಜನ್ಯ ಇಲ್ಲದಲೆ; ಕಾರ್ಮಿಕರುಗಳಿಗೆ ನೀಡುವ ಕಿಟ್ ಇತ್ಯಾದಿಗಳಲ್ಲಿ ಸಾಕಷ್ಟು ರೀತಿಯಾದ ಹಗರಣಗಳು ಆಗಿದ್ದರೂ ಕೂಡ...,

ಕಾರ್ಮಿಕರಿಗೆ ನೀಡುವ ಕಿಟ್‌ನಲ್ಲಿ Eye Glasses ಅನ್ನು ನೀಡುತ್ತಾರೆ. ಕೇವಲ 5-10 ರೂಪಾಯಿಗಳಿಗೆ ಸಿಗುವ ಪ್ಲಾಸ್ಟಿಕ್ ಗ್ಲಾಸ್‌ಗಳಾಗಿದ್ದು, ಕಾರ್ಮಿಕರು ಅದನ್ನು ಕೇವಲ ಒಂದು ಬಾರಿ ಉಪಯೋಗಿಸಿದರೆ ಅದು ಪುನಃ ಉಪಯೋಗಕ್ಕೆ ಬರಲೇ ಬಾರದು ಆ ಮಟ್ಟದ್ದಾಗಿರುತ್ತವೆ. ಆ ರೀತಿಯಾಗಿ ಇರುವ ಕಿಟ್‌ಗಳನ್ನು ವಿತರಣೆ ಮಾಡಿರುವ ಕಾರಣಕ್ಕೋಸ್ಕರ ಇವತ್ತಿನ ದಿವಸ ಕಟ್ಟಡ ಕಾರ್ಮಿಕರು ರಾಜ್ಯದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಗಾಗಿ ಬೀದಿಗೆ ಇಳಿದಿದ್ದಾರೆ. Geographical Equality ಎಂಬುದಾಗಿ ಆಯವ್ಯಯದಲ್ಲಿ ತಿಳಿಸಿದ್ದಾರೆ. Geographical Equality ಎಂದರೆ ಏನು ಎಂದು ನಾನು ಮುಖ್ಯಮಂತ್ರಿಗಳನ್ನು ಹಾಗೂ ರಾಜ್ಯ ಸರ್ಕಾರವನ್ನು ಕೇಳಲಿಚ್ಛಿಸುತ್ತೇನೆ. ಒಂದು INDEX ಬಿಡುಗಡೆಯಾಗಿದೆ. ಬಹುತೇಕ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಆ INDEX ವರದಿಯಾಗಿದೆ. ಅದರಲ್ಲಿ ನಮ್ಮ ರಾಜ್ಯದ District-wise GDP ಎಷ್ಟು ಇದೆ ಎಂಬುದನ್ನು ತಿಳಿಸಲಾಗಿದೆ. ಅಂದರೆ, ಬೆಂಗಳೂರು ಮಹಾನಗರದ 8,50,000 ತಲಾ ಆದಾಯವಿದ್ದರೆ, ಕಲಬುರಗಿಯದ್ದು 1,44,000 ಇದೆ. ರಾಜ್ಯದ ಬಹುತೇಕ ಜಿಲ್ಲೆಗಳದ್ದು 2,00,000 ಕ್ಕಿಂತಲೂ ಕಡಿಮೆ ಇದೆ. ಕೆಲವು ಜಿಲ್ಲೆಗಳಲ್ಲಿ 2,20,000 ಹಾಗೂ

2,30,000 ಗಳಷ್ಟಿದೆ. ಕೇವಲ ಬೆಂಗಳೂರು ನಗರದ್ದು ಮಾತ್ರವೇ ಸುಮಾರು 8,00,000 ಲಕ್ಷದಷ್ಟಿದೆ. ನಂತರದ ಸ್ಥಾನದಲ್ಲಿ ಬರುವ ಮೈಸೂರು ಜಿಲ್ಲೆಯದ್ದು 3,00,000 ದಷ್ಟಿದೆ. ಇನ್ನುಳಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ, several districts fall within the per capita income range of Rs.1.5 lakh to Rs.3 lakh. ಎರಡನೇ ಸ್ಥಾನದಲ್ಲಿ ಮಂಗಳೂರು ಮತ್ತು ನಂತರದ ಸ್ಥಾನದಲ್ಲಿ ಉಡುಪಿ ಜಿಲ್ಲೆಗಳಿವೆ. ಅಂದರೆ ಇಲ್ಲಿಗೆ ಪ್ರಾದೇಶಿಕ ಅಸಮಾನತೆ ನಿವಾರಣೆ... ವಾಸ್ತವವಾಗಿ ಅದು ಪ್ರಾದೇಶಿಕ ಅಸಮತೋಲನ ಆದರೆ, ಇಲ್ಲಿ ಪ್ರಾದೇಶಿಕ ಅಸಮಾನತೆ ಎಂದು ತಿಳಿಸಿದ್ದು, ಎರಡೂ ಪದಗಳ ಅರ್ಥ ಒಂದೇ ಆಗಿದೆ. ಒಟ್ಟಾರೆಯಾಗಿ ಅದು imbalance ಆಗಿದೆ. ಇದನ್ನು ಏಕಾಏಕಿಯಾಗಿ ನಾಳೆಯ ದಿನ ಬೆಳಗ್ಗೆ ಮುಖ್ಯಮಂತ್ರಿಗಳು ನಿದ್ದೆಯಿಂದ ಎದ್ದ ತಕ್ಷಣ ನಾನು ಸರಿ ಮಾಡುತ್ತೇನೆ ಎಂದು ಹೇಳಿದರೆ, ಅದನ್ನು ಸರಿ ಪಡಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇದು ಇಷ್ಟೊಂದು ಪ್ರಮಾಣದಲ್ಲಿ imbalance ಇದೆ. ಇದನ್ನು ಸರಿಪಡಿಸಬೇಕೆಂದರೆ, ಇಲ್ಲಿ ದೀರ್ಘಾವಧಿಯ ಬಂಡವಾಳ ಹೂಡಿಕೆಗಳು ಆಗಬೇಕು. ಅವರೇ ಸ್ವತಃ ಕಳೆದ ಬಾರಿಯ ಆಯವ್ಯಯದಲ್ಲಿ ತಿಳಿಸಿದಂತೆ, ಶ್ರೀ ಗೋವಿಂದರಾವ್ ರವರ ನೇತೃತ್ವದಲ್ಲಿ ಸಮಿತಿಯನ್ನು ನೇಮಕ ಮಾಡಿದ್ದೇವೆ, 177 ತಾಲ್ಲೂಕುಗಳು ಅತೀ ಹಿಂದುಳಿದ ತಾಲ್ಲೂಕುಗಳ ಪರಿಸ್ಥಿತಿಯಲ್ಲಿ ಇವೆ ಎಂಬುದಾಗಿ ತಿಳಿಸಿದ್ದರು. ನಾನೂ ಸಹ ಸದರಿ ಸಮಿತಿಯು ನಮ್ಮ ಜಿಲ್ಲೆಗೆ ಬಂದಾಗ ಸಮತಿ ಸಭೆಯಲ್ಲಿ ಭಾಗವಹಿಸಿ, ಅನೇಕ ಸಲಹೆಗಳನ್ನೂ ಸಹ ನೀಡಿದ್ದೇನೆ. Targeted ಬಂಡವಾಳ ಹೂಡಿಕೆಗಳನ್ನು ಮಾಡಲಿಲ್ಲವೆಂದಾದರೆ, ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುವುದೇ ಇಲ್ಲ. Global Trade Economy, ವ್ಯಾಪಾರ ಮತ್ತು ಕೈಗಾರಿಕಾಭಿವೃದ್ಧಿ ಎಂಬುದರ ಬಗ್ಗೆಯೂ ಸಹ ತಿಳಿಸಿದ್ದಾರೆ. ಆದರೆ, ಇವತ್ತಿನ ದಿವಸ ಏನಾಗಿದೆ, ಇವತ್ತು ನಾವು ನೋಡುತ್ತಿರುವ ಬೆಂಗಳೂರು ನಗರವು ಇಲ್ಲಿರುವ ನಾವು, ನೀವುಗಳೆಲ್ಲರೂ ಸೇರಿ ನಿರ್ಮಾಣ ಮಾಡಿರುವ ಬೆಂಗಳೂರು ನಗರವಲ್ಲ. ಕಳೆದ 25-30 ವರ್ಷಗಳ ಹಿಂದೆ ಹಾಕಿರುವ ಸರಿಯಾದ ನೀತಿ ನಿರ್ಣಯಗಳ ಪ್ರಯುಕ್ತ ಇಂದಿನ ಬೆಂಗಳೂರು ನಗರವು ಇವತ್ತಿನ ಬೆಂಗಳೂರು ನಗರವಾಗಿದೆ. ಹಾಗಾಗಿ ಇವತ್ತಿನ ದಿವಸ ಇದು ನಮಗೆ dividends ಅನ್ನು ನೀಡುತ್ತಿದೆ. ಅವತ್ತಿನ ದಿವಸ ತೆಗೆದುಕೊಂಡ ಸರಿಯಾದ ನಿರ್ಣಯದ ಕಾರಣಕ್ಕೋಸ್ಕರ ಇವತ್ತಿನ ದಿವಸ ಇದು ನಮಗೆ dividends ಅನ್ನು ನೀಡುತ್ತಿದೆ. ಆದರೆ, ಇವತ್ತಿನ ದಿವಸ ನಾವು ಏನು ಮಾಡುತ್ತಿದ್ದೇವೆ ಎಂದರೆ, Global Trade increase ಮಾಡಬೇಕೆಂದರೆ, Garden City ಇದ್ದದ್ದನ್ನು ನಾವು Garbage City ಯನ್ನಾಗಿ ಮಾಡಿ ಇಟ್ಟಿದ್ದೇವೆ. ನಮ್ಮ ನೆರೆಯ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಯವರು ನೀಡಿರುವ ಹೇಳಿಕೆಯು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಅವರು ನಿಮ್ಮದೇ ಪಕ್ಷದ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದಾರೆ. ಬೆಂಗಳೂರು ನಗರದ ಸಂಚಾರದ ದಟ್ಟಣೆಯ ಬಗ್ಗೆ ಅವರು ಯಾವ ರೀತಿಯಾದ ವ್ಯಾಖ್ಯಾನವನ್ನು ಮಾಡಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ಓದಬೇಕು. ಅಂದರೆ, other State Chief Ministers are commenting about Bengaluru Traffic. So that ಬೆಂಗಳೂರಿಗೆ ಯಾರೂ ಸಹ

ಬಂಡವಾಳವನ್ನು ಹಾಕುವುದಕ್ಕೆ ಹೋಗಬೇಡಿ, ನಮ್ಮ ರಾಜ್ಯಕ್ಕೆ ಬನ್ನಿ ಎನ್ನುವ ರೀತಿಯಲ್ಲಿ ಅವರು ತಮ್ಮ ರಾಜ್ಯಕ್ಕೆ ಕರೆಯುತ್ತಿರುವ ಕೆಲಸವನ್ನು ಮಾಡುತ್ತಿದ್ದಾರೆ. Globe-trotting Economy, ಪ್ರವಾಸೋದ್ಯಮ ಎಂಬುದಾಗಿ ಹೇಳಿದ್ದಾರೆ. ಇವತ್ತಿನ ದಿವಸ ನಾವು ಆಯವ್ಯಯದಲ್ಲಿ ನೋಡಿದರೆ, ಪ್ರವಾಸೋದ್ಯಮಕ್ಕೆ ಎಂದು ಹೇಳಿ ಅತೀ ಕಡಿಮೆ ವೆಚ್ಚವನ್ನು ತೋರಿಸಿದ್ದಾರೆ. ಆದರೆ, ಅದರ ಬದಲಾಗಿ...., ನಮ್ಮಲ್ಲಿ Temple Tourism ಬಹಳ ಇದೆ. ಉಪ ಸಭಾಪತಿಗಳು ಮಲೆನಾಡಿನ ಭಾಗದಿಂದ ಬಂದಿರುವವರಾಗಿದ್ದಾರೆ. ರಾಜ್ಯದಲ್ಲಿನ ಎಲ್ಲಾ ದೇವಸ್ಥಾನಕ್ಕೂ ಪ್ರಾಧಿಕಾರವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಏಕೆಂದರೆ, ಅದರ ಆದಾಯ ಸರ್ಕಾರಕ್ಕೆ ಬಂದರೆ, ಅದನ್ನು ವಾಪಸ್ಸು ಮಾಡಬೇಕಲ್ಲ; ಹೀಗಾಗಿ ಅದರ ಬದಲಾಗಿ ಪ್ರಾಧಿಕಾರವನ್ನು ರಚನೆ ಮಾಡಿಬಿಡಬೇಕು. ಶ್ರೀ ಕುಕ್ಕೆ ಸುಬ್ರಮಣ್ಯ ದೇವಸ್ಥಾನಕ್ಕೆ ಒಂದು ಪ್ರಾಧಿಕಾರವನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಶ್ರೀ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೂ ಸಹ ಒಂದು ಪ್ರಾಧಿಕಾರವನ್ನು ರಚಿಸಿದ್ದಾರೆ. ಸರ್ಕಾರವು ಈಗ ಇರುವ ಪ್ರವಾಸೋದ್ಯಮಕ್ಕೆ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡಿ, ಜನರು ಇಲ್ಲಿಗೆ ಬರಲಿ, ಎನ್ನುವಂಥದ್ದನ್ನು ಮಾಡುತ್ತಿಲ್ಲ. ರಾಜ್ಯದಲ್ಲಿ ಸುರಕ್ಷಿತವಾದ ವಾತಾವರಣವಿದೆ, ವಿದೇಶಿ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಬರಬಹುದು ಎನ್ನುವಂತಹ ವಾತಾವರಣ ನಿರ್ಮಾಣ ಮಾಡಿಲ್ಲ. ಹಂಪೆಯ ಹತ್ತಿರ ಒಂದು ಘಟನೆ ಆಗಿದ್ದು, ಇದರ ಬಗ್ಗೆ ತಮಗೆ ಗೊತ್ತಿದೆ. ವಿದೇಶಿ ಪ್ರವಾಸಿಗರು ಕೂತಿದ್ದವರ ಪೈಕಿ ಮಹಿಳಾ ಪ್ರವಾಸಿಗರ ಮೇಲೆ ಅತ್ಯಾಚಾರ ಮಾಡಿ, ಕೊಲೆ ಮಾಡಿರುತ್ತಾರೆ. ಅಪರಾಧ ಮಾಡಿದ ನಾಲ್ಕು ಜನ ತಪ್ಪಿತಸ್ಥರ ವಿರುದ್ಧ ವಿಚಾರಣೆ ನಡೆಸಿದ ತ್ವರಿತಗತಿ ನ್ಯಾಯಾಲಯವು ಅಪರಾಧಿಗಳಿಗೆ ಗಲ್ಲು ಶಿಕ್ಷೆಯನ್ನು ವಿಧಿಸಿರುತ್ತದೆ. ಈ ತರಹದ ಘಟನೆಗಳು ನಡೆದಾಗ, ಇದು ವಿಶ್ವದಾದ್ಯಂತ ಚರ್ಚೆಗೆ ಬಂದಾಗ, ಯಾರ ತಾನೇ ಬೆಂಗಳೂರು ಅಥವಾ ಕರ್ನಾಟಕ ರಾಜ್ಯದ ಪ್ರವಾಸೋದ್ಯಮಕ್ಕೆ ನಾವು ಹೋಗಬೇಕು ಭಾವಿಸುತ್ತಾರೆ? ಹೀಗಾಗಿ ಇದೂ ಸಹ false narrative ಕೊಡುವ ಕೆಲಸವನ್ನು Global Tourism ಎಂದು ತಿಳಿಸಿದ್ದಾರೆ. Green Economy, ನವೀಕರಿಸಬಹುದಾದ ಇಂಧನ ಸೇರಿದಂತೆ, ಪರಿಸರಪೂರಕ ಆರ್ಥಿಕ ಚಟುವಟಿಕೆಗಳ ಬಗ್ಗೆ ತಿಳಿಸಿದ್ದಾರೆ. ಇಲ್ಲಿ ನಾನು ಗಮನಕ್ಕೆ ತರುವ ಒಂದು ವಿಚಾರವೇನೆಂದರೆ, ಸರ್ಕಾರವು renewable energy ಎಂದು ಕರೆಯುತ್ತದೆ, ಅದು wind energy, solar energy ಇತ್ಯಾದಿ ಇದರ highest potential ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಸಹ ಒಂದಾಗಿದೆ. ನಾನು ಚಿತ್ರದುರ್ಗ ಜಿಲ್ಲೆಯಿಂದ ಬರುವವನಾಗಿರುವುದರಿಂದ, ತಾವು ಚಿತ್ರದುರ್ಗ ಜಿಲ್ಲೆಯನ್ನು ದಾಟಬೇಕಾದರೆ, ನೋಡಬಹುದು ಅಲ್ಲಿ ದೊಡ್ಡ ದೊಡ್ಡ wind mill ಗಳನ್ನು ಹಾಕಿದ್ದಾರೆ. ಏಷಿಯಾ ಖಂಡದಲ್ಲಿಯೇ ಇದು ಎರಡನೇ ಸ್ಥಾನದಲ್ಲಿದೆ. Uniform wind velocity ಬಿಸುವ ನಮ್ಮ ಏಷಿಯಾ ಖಂಡದಲ್ಲಿಯೇ ಇದು ಎರಡನೇ ಸ್ಥಾನದಲ್ಲಿದೆ. 13 kilometers per hour wind speed, ನೀವು ಆ ಜಾಗದಲ್ಲಿ ಎಲ್ಲಿಯೇ ಫ್ಯಾನ್ ಹಾಕಿದರೂ ಅದು electricity generation ಮಾಡುತ್ತದೆ. ಅದೇ ರೀತಿಯಾಗಿ solar ಗೂ ಸಹ ಮಧ್ಯ ಕರ್ನಾಟಕ ಬಯಲುಸೀಮೆ ಪ್ರದೇಶದಲ್ಲಿ ಸಾಕಷ್ಟು solar energy tapping ಬೇಕಾಗಿದೆ. ಆದರೆ, ಇಲ್ಲಿ ಇವರು

ಹೇಳುತ್ತಿರುವ ಎಲ್ಲದಕ್ಕೂ ಕೂಡ ಕೇಂದ್ರ ಸರ್ಕಾರ Accelerated Depreciation benefits ಕೊಟ್ಟಿದೆ. "ಪಿ.ಎಂ.ಕುಸುಮ್" (ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ ಮಹಾಭಿಯಾನ್) ಯೋಜನೆಯಲ್ಲಿ ಕೇಂದ್ರ ಸರ್ಕಾರ subsidy ಅನ್ನು ನೀಡುತ್ತಿದೆ. "ಪ್ರಧಾನ ಮಂತ್ರಿ ಸೂರ್ಯಘರ್" ಯೋಜನೆಯಲ್ಲಿ subsidy ಅನ್ನು ನೀಡುತ್ತಿದೆ. ಆ ಕಾರಣಕ್ಕೋಸ್ಕರ ಇವತ್ತಿನ ದಿವಸ ಸೌರ ವಿದ್ಯುತ್‌ನ ಬಳಕೆಯತ್ತ ಜನ ಮುಖ ಮಾಡುತ್ತಿದ್ದಾರೆ. ಹೊರತು ಇಲ್ಲಿ ರಾಜ್ಯ ಸರ್ಕಾರವು ತನ್ನ ಪ್ರಯತ್ನದಿಂದ ತಾನು ಏನೋ ಒಂದು solar ಗೆ ಜಾಗ ನೀಡಿರಬಹುದು, ಆದರೆ, ಅದಕ್ಕೆ ಬೇಕಾದಂತಹ ಬಂಡವಾಳವನ್ನು ಹಾಕುವ ಕೆಲಸವನ್ನು ಆಯವ್ಯಯದಲ್ಲಿ ಮಾಡುತ್ತಿಲ್ಲ.

ಕೊನೆಯದಾಗಿ Growing Urban Economy ಎಂಬುದಾಗಿ ಹೇಳಿದ್ದಾರೆ. ನಾನು ಇದಕ್ಕೂ ಸಹ ಒಂದು ಉದಾಹರಣೆಯನ್ನು ನೀಡುತ್ತೇನೆ. Growing Urban Economy ಎಂದರೆ, ನಗರೀಕರಣ ಅಥವಾ ನಗರಾಭಿವೃದ್ಧಿ ಎಂದು ನಾವು ತೆಗೆದುಕೊಳ್ಳಬಹುದು. ರಾಷ್ಟ್ರೀಯ weighted average on Urban Development ಎಷ್ಟು ಇದೆ ಎಂದು ಹೇಳಿದರೆ, ಅದು 3.2 % ರಷ್ಟಿದೆ. ಬೇರೆ ರಾಜ್ಯಗಳು ತಮ್ಮ ಆಯವ್ಯಯದ ಮೊತ್ತವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ, ನಾವು ಖರ್ಚು ಮಾಡುತ್ತಿರುವುದು ಎಷ್ಟಿದೆ ಎಂದರೆ, ಅದು ಕೇವಲ 0.8% ರಷ್ಟು ಮಾತ್ರವೇ ಇದೆ. ಇಡೀ ದೇಶದಲ್ಲಿ ರಸ್ತೆ ಮತ್ತು ಸೇತುವೆಗಳ ಮೇಲೆ ಬಂಡವಾಳ ವೆಚ್ಚ ಎಷ್ಟು ಮಾಡುತ್ತಿದ್ದಾರೆ ಎಂದರೆ, ಅದು 4.3% ರಷ್ಟಿದೆ. ಆದರೆ, ನಾವು ಕೇವಲ 2.3% ರಷ್ಟು ಮಾತ್ರವೇ ಖರ್ಚು ಮಾಡುತ್ತಿದ್ದೇವೆ. ಅದೇ ರೀತಿಯಾಗಿ ವಸತಿ ಬಗ್ಗೆ ನೋಡಿದರೆ, ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಮನೆಗಳ ಅವಶ್ಯಕತೆ ಇದ್ದು, ಇದರ ಸೌಲಭ್ಯವನ್ನು ನೀಡಬೇಕು. ವಸತಿಯ ಮೇಲೆ ರಾಷ್ಟ್ರದ weighted average 1.7% ರಷ್ಟಿದೆ. ಆದರೆ, ನಮ್ಮ ರಾಜ್ಯದ್ದು ಕೇವಲ 0.8% ರಷ್ಟು ಮಾತ್ರವೇ ಇದೆ. ಅಂದರೆ, Urban Economy improve ಆಗಲು ಬೇಕಾಗಿರುವ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಯಾವ ನಗರಗಳಲ್ಲಿಯೂ ಮಾಡುತ್ತಿಲ್ಲ. ಖಾಸಗಿಯವರು ಬಡಾವಣೆಗಳನ್ನು ಮಾಡುತ್ತಿದ್ದಾರೆ.

(ಮುಂದು)

(284)10-03-2026/5-00/bkp-vk **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್. ನವೀನ್ (ಮುಂದು)**

ಜನರು ಸಾಲವನ್ನು ತೆಗೆದುಕೊಂಡು, ಮನೆ ಕಟ್ಟಿ, ಅವರು ತಮ್ಮ ಜೀವನಪೂರ್ತಿ ಸಾಲವನ್ನು ಕಟ್ಟುವಂತಹ ವ್ಯವಸ್ಥೆಯಲ್ಲಿ ಸಾಲ ಮಾಡುವಂತಹದ್ದಾಗುತ್ತದೆ. ಇವರು ಕೆ.ಹೆಚ್.ಬಿ.ಯಿಂದ ಎಷ್ಟು ವಸತಿ ಬಡಾವಣೆಗಳನ್ನು ಮಾಡಿದ್ದಾರೆ, ಎಷ್ಟು ಮನೆಗಳನ್ನು ವಿತರಣೆ ಮಾಡಿದ್ದಾರೆ, ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ವಿತರಣೆ ಮಾಡಿದ್ದಾರೆ, ಎಷ್ಟು ಕಡೆ ಸೈಟ್‌ಗಳನ್ನು ಜನರಿಗೆ ವಿತರಣೆ ಮಾಡಿದ್ದಾರೆ, ಇದು ಯಾವುದೂ ಕೂಡ ಈ ಬಜೆಟ್‌ನಲ್ಲಿ ಆಗಲಿ, ಈ ಸರ್ಕಾರದ ನೀತಿ ನಿರೂಪಣೆಗಳಲ್ಲಿ ಆಗಲಿ, ಕಂಡು ಬರುತ್ತಿಲ್ಲ, ಆದರೂ ಕೂಡ

ಅವರು ಏನು ಹೇಳುತ್ತಿದ್ದಾರೆಂದರೆ ನಾವು Growing Urban Economy ಗೆ sponsor ಮಾಡುತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಅವರು ಹೆಚ್ಚುಗಾರಿಕೆಯಾಗಿ ಹೇಳಿರುವುದಕ್ಕೆ ನಾನು ಉದಾಹರಣೆಗಳ ಸಮೇತ percentage wise ಮಾಹಿತಿಯನ್ನು ಕೊಡುತ್ತಿದ್ದೇನೆ. ಆದರೆ, ಬಜೆಟ್‌ನ ವಾಸ್ತವ ಏನೆಂದು ನಾನು ಈಗ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 2015-16ನೇ ಸಾಲಿನಲ್ಲಿ Revenue Surplus Budget ಅನ್ನು ಕೊಟ್ಟಿದ್ದರು. ಅಂದರೆ, ಇವರಿಗೆ ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳಬೇಕೆನ್ನುವಂತಹ ಹೊಣೆಗಾರಿಕೆ ಮತ್ತು ಜವಾಬ್ದಾರಿ ಇವರ ಮೇಲೆ ಇದ್ದಿದ್ದರೆ, ತಾನೇ ಹಿಂದೆ ಮಂಡಿಸಿರುವ ಬಜೆಟ್‌ನಲ್ಲಿ revenue surplus ಎಂದು ಕೊಟ್ಟಂತಹ ಮುಖ್ಯಮಂತ್ರಿಗಳು ಇವತ್ತು revenue deficit ಆಗಿದೆ fiscal deficit ಸಹ ಆಗಿದೆ. ಪ್ರಸ್ತುತ ವರ್ಷದಲ್ಲಿ ಆಗಿರುವಂತಹ revenue deficit. ಇವರು ಕಳೆದ ವರ್ಷದ ಬಜೆಟ್‌ನ ಪುಸ್ತಕಗಳಲ್ಲಿ ಏನು ಹೇಳಿದ್ದರು, ಇಂತಿಂಥಹ ಮೂಲಗಳಿಂದ ಇಷ್ಟು ಆದಾಯ ಬರುತ್ತದೆ ಎಂದು ಹೇಳಿ, ಎಲ್ಲಾ ಮೂಲಗಳಲ್ಲಿಯೂ ಕೂಡ ಇವರಿಗೆ ತೀವ್ರವಾದಂತಹ ಆದಾಯ ಕೊರತೆಯಾಗಿದೆ. ಇವರ ಅಪೇಕ್ಷೆಗೆ ಸರಿಯಾಗಿರುವಂತಹ ಆದಾಯ ಯಾವ ಒಂದು ಇಲಾಖೆಯಲ್ಲಿಯೂ ಕೂಡ ಇವರಿಗೆ ಬಂದಿರುವುದಿಲ್ಲ. ವಿಶೇಷವಾಗಿ ಜಿ.ಎಸ್.ಟಿ.ಯಲ್ಲಿ ಬಂದಿಲ್ಲ. ಅಬಕಾರಿಯಲ್ಲಿ ಇವರಿಗೆ 43,000 ಕೋಟಿ ರೂಪಾಯಿಗಳ ನಿರೀಕ್ಷೆ ಇದ್ದು 41,000 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ 2,000 ಕೋಟಿ ರೂಪಾಯಿಗಳು ಅದರಲ್ಲಿ ಕಡಿಮೆ ಬಂದಿದೆ. ಈ ಬಾರಿ ಅದನ್ನು 45,000 ಸಾವಿರ ಕೋಟಿ ರೂಪಾಯಿಗಳಿಗೆ projection ಮಾಡಿದ್ದಾರೆ. ಇವು ಪ್ರಮುಖವಾದಂತಹ ಆದಾಯ ಬರುವಂತಹ ಇಲಾಖೆಗಳಿವೆ, ಎಲ್ಲದರಲ್ಲಿಯೂ ಕೂಡ ಇವರಿಗೆ revenue deficit ಇದೆ. ಅಂದರೆ, ಅವರು ಆದಾಯ ಮೂಲಗಳನ್ನು ಯಾವ ರೀತಿಯಾಗಿ ಬಜೆಟ್‌ನ ಒಂದು ಆದಾಯ ಮತ್ತು ವೆಚ್ಚಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕೋ, ಅದಕ್ಕೆ ಸರಿಯಾಗಿ ಇವರು ಬಜೆಟ್ ಮಾಡಬೇಕಾದಂತಹ ಸಂದರ್ಭದಲ್ಲಿ ಅವರು ಕೊಟ್ಟುಬಿಟ್ಟರು. ಇವತ್ತು, ಎಷ್ಟೇ ಒತ್ತಡವನ್ನು ಹಾಕಿದರೂ ಕೂಡ ನಮ್ಮ ರಾಜ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಆದಾಯ ಬಂದಿಲ್ಲ. ಹಾಗಾಗಿ, revenue deficit ಇವತ್ತು ಎಷ್ಟಾಗಿದೆ ಎಂದರೆ ಸುಮಾರು 23,000 ಕೋಟಿ ರೂಪಾಯಿಗಳಷ್ಟು revenue deficit ಆಗಿರುತ್ತದೆ. Revenue deficit ನ ಅದರ implications ಏನಾಗುತ್ತದೆ ಎಂದರೆ ನಿಮ್ಮ ಎಲ್ಲಾ ಖರ್ಚುಗಳಲ್ಲಿ ಇದು backlog ಆಗುತ್ತದೆ. Expenditure backlog ಅದ ತಕ್ಷಣ ಅದನ್ನು ನೀವು ತುಂಬಬೇಕೆಂದರೆ ಮತ್ತೆ ಹೊಸದಾಗಿ ಸಾಲ ಎತ್ತುವಳಿ ಮಾಡಬೇಕು ಮತ್ತು ಅದನ್ನು ತೀರಿಸುವಂತಹ ಕೆಲಸ ಮಾಡಬೇಕು.

ಮಾನ್ಯ ಸಭಾಪತಿಯವರೆ, ಈ ವರ್ಷದ ಬಜೆಟ್‌ನಲ್ಲಿ ಇವರ committed expenditure ನ committed ವಿಚಾರದಲ್ಲಿ ಆ ಕಡೆ ಈ ಕಡೆ ಅಲ್ಲಾಡಲಿಕ್ಕೆ ಆಗುವುದಿಲ್ಲ. ಅದು ಸುಮಾರು 1.85 ಲಕ್ಷ ಕೋಟಿ ರೂಪಾಯಿಗಳಷ್ಟು committed expenditure ಇವರ ಕಣ್ಣ ಮುಂದೆ ಇದೆ. ಅದನ್ನು ಅವರು

ಹೇಗಾದರೂ ಮಾಡಿ ಭರಿಸಲೇಬೇಕಾದಂತಹ ಅನಿವಾರ್ಯತೆ ಕೂಡ ಇವರ ಮೇಲೆ ಇದೆ. ಅದಲ್ಲದೆ, Short-term borrowing ಅನ್ನು ಇವರು ಏನು ಮಾಡಿದರು, ಇದರ ಬಗ್ಗೆ ನನ್ನ ಹತ್ತಿರ 4 ವರ್ಷಗಳ ಅಂಕಿ-ಅಂಶಗಳಿವೆ. ಅಂದರೆ, ಏನು ಈ ಒಂದು ಸರ್ಕಾರ ಬಂದ ನಂತರ ಮಾಡಿರುವ ಸಾಲಗಳ ಪಟ್ಟಿ 2023-24ಕ್ಕೆ 90,280 ಕೋಟಿ ರೂಪಾಯಿಗಳ ಸಾಲವಾಗಿದೆ. 2024-25ಕ್ಕೆ 1,03,342 ಕೋಟಿ ರೂಪಾಯಿಗಳ ಸಾಲ, 2025-26ಕ್ಕೆ 1,16,000 ಕೋಟಿ ರೂಪಾಯಿಗಳ ಸಾಲ ಮತ್ತು ಪ್ರಸ್ತುತ ಬರುವ ವರ್ಷಕ್ಕೆ 1,32,080 ಕೋಟಿ ರೂಪಾಯಿಗಳ ಸಾಲವನ್ನು ಎತ್ತುವಳಿ ಮಾಡುವಂತಹ ಕೆಲಸಕ್ಕೆ ಸರ್ಕಾರ ನಿರ್ಣಯವನ್ನು ಮಾಡಿ, ಅದಕ್ಕೆ ಮುಂದಾಗಿದೆ. ಇದರ implication ಏನೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಎರಡು ರೀತಿ ಸಾಲ ಬರುತ್ತದೆ. ಒಂದು long term loan and short term loan. Short term loan ಎಂದರೆ 5 ವರ್ಷಗಳಲ್ಲಿ ತೀರಿಸಬೇಕಾದಂತಹ ಸಾಲಗಳು. 5 ವರ್ಷಗಳಲ್ಲಿ ತೀರಿಸಬೇಕಾದಂತಹ ಸಾಲಗಳು ಎಷ್ಟು ಇದೆ ಎಂದರೆ 32.7% ಇದೆ. ಅಂದರೆ, ನಮ್ಮ ಒಟ್ಟು ಸಾಲ 32% ಇದ್ದು ಇದನ್ನು 5 ವರ್ಷಗಳಲ್ಲಿ ತೀರಿಸಬೇಕಾಗಿದೆ. ಆ ಒಂದು ಕಮಿಟ್‌ಮೆಂಟ್‌ನಲ್ಲಿ ಇವರು ಸಾಲವನ್ನು ಮಾಡಿದ್ದಾರೆ. 5 ರಿಂದ 10 ವರ್ಷದೊಳಗೆ ಅಂದರೆ, ಅದನ್ನು ಮಧ್ಯಮಾವಧಿ ಸಾಲವೆಂದು ಹೇಳಬಹುದು. ಮಧ್ಯಮಾವಧಿ ಸಾಲ 37.4% ಇದೆ. 10 ರಿಂದ 15 ವರ್ಷದೊಳಗೆ ತೀರಿಸಬೇಕಾದಂತಹ ಸಾಲ 24.6% ಇದೆ. 15 ರಿಂದ 20 ವರ್ಷದೊಳಗೆ ತೀರಿಸಬೇಕಾದಂತಹ ಸಾಲ 5.3% ಇದೆ. ಆ ಒಂದು ಸಾಲಕ್ಕೆ ನಾವು ಬರುವಂತಹ ದಿನಗಳಲ್ಲಿ ಬಡ್ಡಿಯನ್ನು ಎಷ್ಟು ಕಟ್ಟುತ್ತೇವೆಂದರೆ, 2026-27ಕ್ಕೆ 53,332 ಕೋಟಿ ರೂಪಾಯಿಗಳನ್ನು ಕೇವಲ ಬಡ್ಡಿಯಾಗಿ ಕಟ್ಟಬೇಕಾಗುತ್ತದೆ. That is not the principal and it is only the interest servicing. 2027-28ಕ್ಕೆ 60,798 ಕೋಟಿ ರೂಪಾಯಿಗಳ ಬಡ್ಡಿಯನ್ನು ಕಟ್ಟಬೇಕಾಗುತ್ತದೆ. 2028-29ಕ್ಕೆ 90,310 ಕೋಟಿ ರೂಪಾಯಿಗಳ ಬಡ್ಡಿಯನ್ನು ಕಟ್ಟಬೇಕಾಗುತ್ತದೆ, 2029-30ಕ್ಕೆ ಅಂದರೆ, ಇಲ್ಲಿಂದ 4 ವರ್ಷಗಳಿಗೆ 79,013 ಕೋಟಿ ರೂಪಾಯಿಗಳ ಬಡ್ಡಿಯನ್ನು ಕಟ್ಟಬೇಕಾಗುತ್ತದೆ. ಅಂದರೆ, ಈಗಾಗಲೇ ಕಮಿಟ್ ಆಗಿರುವಂತಹ ಬಡ್ಡಿಯನ್ನು ನಾವು ಇವತ್ತು ಕಟ್ಟಬೇಕಾಗುತ್ತದೆ. This is not the principal. ನಾವು ಸಾಲವನ್ನು ವಾಪಸ್ಸು ಕಟ್ಟುತ್ತಿಲ್ಲ, ನಾವು ಬಡ್ಡಿಯನ್ನೇ ಕಟ್ಟುತ್ತಿದ್ದೇವೆ. ಅಂದರೆ, 4 ವರ್ಷಗಳಲ್ಲಿ ಅಂದರೆ, ಇಲ್ಲಿ ಪ್ರಾರಂಭವಾಗಿ 2029-30ನೇ ಸಾಲಿನ ಒಳಗಾಗಿ ನಾವು ಸರಿ-ಸುಮಾರು ಎರಡು-ಮುಕ್ಕಾಲು ಲಕ್ಷ ಕೋಟಿ ರೂಪಾಯಿಗಳ ಬಡ್ಡಿಯನ್ನು ತೀರಿಸಬೇಕಾದಂತಹ ಹೊಣೆಗಾರಿಕೆ ಸರ್ಕಾರದ ಮೇಲೆ ಇದೆ. ಇದಕ್ಕೆ ಇಂಗ್ಲೀಷ್‌ನಲ್ಲಿ ಏನು ಹೇಳುತ್ತಾರೆಂದರೆ 'debt trap' ಎಂದು ಕರೆಯುತ್ತಾರೆ. ಕನ್ನಡದಲ್ಲಿ ಸಾಲದ ಸುಳಿ ಎಂದು ಕರೆಯುತ್ತಾರೆ. ಅದಕ್ಕೆ ವಿಶ್ವದಾದ್ಯಂತ ಅನೇಕ ದೇಶಗಳು debt trap ಗೆ ಒಳಗಾಗಿವೆ. ಪಕ್ಕದ ರಾಷ್ಟ್ರ ಶ್ರೀಲಂಕಾ debt trap ಗೆ ಒಳಗಾಗಿ 100 ರೂಪಾಯಿಗಳಿಗೆ ಸಿಗುತ್ತಿದ್ದಂತಹ ವಸ್ತುವಿನ ಬೆಲೆ 1,000 ರೂಪಾಯಿಗಳಾಗಿದೆ. ಪ್ರತಿನಿತ್ಯ ಬಳಕೆಯ ವಸ್ತುಗಳ ಮೇಲೆ ಅಷ್ಟೊಂದು ವೆಚ್ಚ

ಜಾಸ್ತಿಯಾಯಿತು ಎಂದರೆ ಅದರ ಮೊತ್ತ ಜಾಸ್ತಿಯಾಯಿತು ಎಂದರೆ ಜನರು ಬಂದು ಬೀದಿಯಲ್ಲಿ ನಿಂತು, ಅಂಗಡಿಗಳನ್ನು ದರೋಡೆ ಮಾಡಿ, ಸಾಮಾನುಗಳನ್ನು ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿಗೆ ಪಕ್ಕದ ಶ್ರೀಲಂಕಾ ರಾಷ್ಟ್ರ ಬಂತು. ಅದು ಕೂಡ debt trap ಗೆ ಒಳಗಾಗಿ ಅತಿಯಾದ ಸಾಲವನ್ನು ಮಾಡಿದ್ದರಿಂದ ಅಲ್ಲಿನ ಜನರು ತಮ್ಮ ಮೇಲೆ ಸಾಲವನ್ನು ಹೊರುವುದಕ್ಕಿಂತ ಹೆಚ್ಚು ಸಾಲವನ್ನು ಮಾಡಿದರು.

**ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಕೃಷಿ ಮಾರುಕಟ್ಟೆ ಸಚಿವರು):-** ನಮ್ಮ ದೇಶದಲ್ಲಿ ಅಂತಹ ರಾಜ್ಯ ಯಾವುದಾದರೂ ಇದ್ದರೆ ಹೇಳಿ.

**(ಈ ಹಂತದಲ್ಲಿ ಮಾನ್ಯ ಸಚಿವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿದರು)**

**ಶ್ರೀ ಕೆ.ಎಸ್. ನವೀನ್:-** ಈ ಬಗ್ಗೆ ಮಾನ್ಯ ಸಚಿವರಿಗೆ ವಿವರವಾಗಿ ಮಾಹಿತಿಯನ್ನು ಕೊಡುತ್ತೇನೆ. ನಮಗಿಂತ ಕಡಿಮೆ ಆದಾಯ ಬರುವಂತಹ ...

(ಗೊಂದಲ)

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ಈ ರೀತಿಯಲ್ಲಿ ಅದಂತಹ ಯಾವುದಾದರೊಂದು ದೇಶ ಇದ್ದರೆ ಹೇಳಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಕೇಳಿರುವುದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ಈ ಬಗ್ಗೆ ನನ್ನ ಹತ್ತಿರ ಪೂರ್ಣ ವರದಿ ಇದೆ. ನಾನು ಯಾವುದನ್ನೂ ಸಹ ನನ್ನ ಬಾಯಿ ಖುಷಿಗೆ ಹೇಳುತ್ತಿಲ್ಲ. ಇವತ್ತು ಯಾರು ಕೂಡ ಆಲೋಚನೆ ಮಾಡದೇ ಇರುವಂತಹ ಸಂದರ್ಭದಲ್ಲಿ ಕೋವಿಡ್ ಪ್ರಕರಣ ಬಂತು. ಕೋವಿಡ್ ಬಂದಂತಹ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯಗಳ ಮೇಲೆ ಒಂದು free hand ಕೊಟ್ಟರು. ನೋಡಿ, ನಿಮ್ಮ ನಿಮ್ಮ ಹಣಕಾಸಿನ ಅಗತ್ಯತೆಗಳಿಗೆ ಸರಿಯಾಗಿ ನೀವು borrowings ಮಾಡಿ, ಅದರಲ್ಲೂ ಸಹ ಇದು ಯಾರಿಗೂ ತೊಂದರೆಯಾಗದ ರೀತಿಯಲ್ಲಿ ನಿಮ್ಮ ವ್ಯವಸ್ಥೆಗಳನ್ನು ನೋಡಿಕೊಳ್ಳಿ ಎಂದು ಹೇಳಲಾಯಿತು. ನಾನು ಒಂದು ವಿಚಾರವನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮಹಾರಾಷ್ಟ್ರ ರಾಜ್ಯವು ಆ ಸಂದರ್ಭದಲ್ಲಿ ಎಷ್ಟು ಸಾಲವನ್ನು ಮಾಡಿತು ಎಂದರೆ 2020-21ನೇ ಸಾಲಿನ ಕೋವಿಡ್ ಬಂದಂತಹ ಸಂದರ್ಭದಲ್ಲಿ 26 percent of the Budget. ಸಾಲ ಮಾಡಿತು. ಅಷ್ಟೊಂದು ಸಾಲವನ್ನು ಆ ರಾಜ್ಯ ಸಾಲ ಮಾಡಿತು. ಆಗ ನಾವು ಎಷ್ಟು ಸಾಲ ಮಾಡಿದೆವು ಎಂದರೆ ನಾವು ಸಹ 26% ಸಾಲವನ್ನು ಮಾಡಿದೆವು. 5 ವರ್ಷಗಳಲ್ಲಿ ಮಹಾರಾಷ್ಟ್ರ 26% ಇದ್ದ ಸಾಲವನ್ನು ಪ್ರಸ್ತುತ ವರ್ಷ ಅವರು 19%ಗೆ ಇಳಿಸಿದರು. ತದನಂತರ 18% ಗೆ ಇಳಿಸಿದರು, ಈ ವರ್ಷ ಅವರು 17% ಗೆ ಇಳಿಸಿ ತಮ್ಮ ಸಾಲದ ಮಿತಿಯನ್ನು 26% ನಿಂದ 16%ಗೆ ತರುವಂತಹ ಕೆಲಸವನ್ನು ಮಾಡಿದ್ದಾರೆ.

**(ಮುಂದು)**

(285) 10.03.2025 05.10 ಎಸ್‌ವಿ-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-**

ಅವರು ಜಿ.ಎಸ್.ಟಿ.ಯಲ್ಲಿ ನಂ.1 ಇದ್ದಾರೆ, ನಾವು ಜಿ.ಎಸ್.ಟಿ.ಯಲ್ಲಿ ನಂ.2 ಇದ್ದೇವೆ. ಮತ್ತೊಂದು ರಾಜ್ಯ ಒಡಿಶಾ ತೆಗೆದುಕೊಳ್ಳೋಣ. ನಾನು ಕೇವಲ ಅಭಿವೃದ್ಧಿ ಹೊಂದಿದ ರಾಜ್ಯದ ಉದಾಹರಣೆಯನ್ನು ತೆಗೆದುಕೊಳ್ಳಬಾರದು ಎಂದು ನಾನು ಒಡಿಶಾದ ಉದಾಹರಣೆ ತೆಗೆದುಕೊಳ್ಳುತ್ತಿದ್ದೇನೆ. Odisha is not financially as developed as Karnataka. ಅವರು ಎಷ್ಟು borrow ಮಾಡಿದರು? ಶೇ.29 borrow ಮಾಡಿದರು. ಏಕೆಂದರೆ ಶೇ.30 cut off ಕೊಟ್ಟಿದ್ದರು. ಶೇ.29 ಮಾಡಿದರು. ಇವತ್ತು ಅವರು ಮಾಡುತ್ತಿರುವ ಸಾಲವೆಷ್ಟು ಅಂದರೆ ಶೇ.15. ನಾವೆಷ್ಟು ಮಾಡಿದ್ದೇವೆ? 2020-21ರಲ್ಲಿ ಶೇ.26 ಮಾಡಿದ್ದೇವೆ. ಆಮೇಲೆ ಶೇ.25ಕ್ಕೆ ಬಂದೆವು. ಅಲ್ಲಿಂದ ಶೇ.27ಕ್ಕೆ ಹೋದೆವು. ನಂತರದ ಎರಡು ವರ್ಷಗಳೂ ಶೇ.27 ಇದ್ದು, ಈಗಲೂ ಶೇ.27ರಲ್ಲಿಯೇ ಇದ್ದೇವೆ. ಐದು ವರ್ಷಗಳಲ್ಲಿ ಸಾಲ ಎತ್ತುವಳಿಯ ಪರ್ಸೆಂಟೇಜ್ ಅನ್ನು ಬೇರೆ ರಾಜ್ಯಗಳು ಹಂತ ಹಂತವಾಗಿ ಕಡಿಮೆ ಮಾಡಿಕೊಳ್ಳುತ್ತಾ ಬಂದವು. ನಾವು ನಮ್ಮ ಸಾಲ ಎತ್ತುವಳಿಯನ್ನು ಅದೇ standard format ನಲ್ಲಿ ಶೇ.27ರಲ್ಲಿಯೇ ಇಟ್ಟಿದ್ದೇವೆ. ಅಂದರೆ, ಯಾವ ರಾಜ್ಯದಲ್ಲಿ debt-ridden ಇಲ್ಲ ಎನ್ನುವುದು ಪ್ರಶ್ನೆಯಲ್ಲ. ಆರ್ಥಿಕವಾಗಿ ಸದೃಢವಾಗಿರುವಂಥ ರಾಜ್ಯ ಬೇರೆ ರಾಜ್ಯಗಳೊಂದಿಗೆ ಹೋಲಿಕೆ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ನಮ್ಮ ರಾಜ್ಯವನ್ನು ನಮ್ಮ ರಾಜ್ಯದೊಂದಿಗೆ ಹೋಲಿಕೆ ಮಾಡಿಕೊಳ್ಳಬೇಕು. ನಮಗೆ ನಾವೇ ಸರಿಸಾಟಿಯಾಗಿರಬೇಕು. ಇನ್ನೊಂದು ರಾಜ್ಯದಲ್ಲಿ ಏನಾಗುತ್ತದೆಯೆನ್ನುವುದು that is their headache. ನಮ್ಮ ರಾಜ್ಯದ ಜನರು ಕಷ್ಟಪಟ್ಟು ದುಡಿಯುತ್ತಿದ್ದಾರೆ. ಸರ್ಕಾರಕ್ಕೆ ಪ್ರಾಮಾಣಿಕವಾಗಿ ತೆರಿಗೆ ಪಾವತಿಸುತ್ತಿದ್ದಾರೆ. ಇವತ್ತು ನಮ್ಮ ಸಾಲದ ಪರ್ಸೆಂಟೇಜ್ ಆ ಹಂತಕ್ಕೆ ಬಂದು ನಿಂತಿದೆ.

ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ಬಹಳ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಯಾಯಿತು. ಯುವಕರು ಎಷ್ಟೇ ಪರೀಕ್ಷೆಗಳನ್ನು ಮಾಡಿದರೂ ಕೂಡ ಸರ್ಕಾರಿ ಉದ್ಯೋಗಗಳಲ್ಲಿ ಯಾವ ಒಂದೇ ಒಂದು ಹುದ್ದೆಯನ್ನು ತುಂಬುವಂಥ ಕೆಲಸವನ್ನು ಮಾಡಿಲ್ಲ ಎಂದು ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ನೇಮಕಾತಿಗೆ ಒಳಮೀಸಲಾತಿಯ ಗೊಂದಲವಿದೆ ಎಂದು ಹೇಳುತ್ತಿದ್ದರು. ಇತ್ತೀಚೆಗೆ ಧಾರವಾಡದಲ್ಲಿ ಬಹಳ ದೊಡ್ಡ ಪ್ರತಿಭಟನೆಯಾಯಿತು. ಆಗ ತರಾತುರಿಯಲ್ಲಿ ಮುಖ್ಯಮಂತ್ರಿಗಳಾದಿಯಾಗಿ ಎಲ್ಲಾ ಸಚಿವರು ನಾವು 56,000 ಹುದ್ದೆಗಳಿಗೆ ನೇಮಕಾತಿ ಮಾಡುತ್ತಿದ್ದೇವೆ ಎಂದು ಹೇಳಿದರು. 56,000 ಹುದ್ದೆಗಳಿಗೆ ನೇಮಕಾತಿ ಮಾಡುವ ಬದ್ಧತೆ ಸರ್ಕಾರಕ್ಕಿದ್ದಿದ್ದರೆ ಈ ಬಜೆಟ್ ಪುಸ್ತಕದಲ್ಲಿ ಎಲ್ಲಿಯಾದರೂ ಒಂದು ಕಡೆ ಹೇಳಬೇಕಿತ್ತಲ್ಲವೆ? 56,000 ಜನರಿಗೆ ಇಷ್ಟು ಸಂಬಳವನ್ನು ಕೊಡುವುದಕ್ಕಾಗಿ ಇಷ್ಟು ಹಣವನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಬೇಕಿತ್ತು. Fund allocation ಮಾಡದೆ 56,000 ಜನರಿಗೆ ಹೇಗೆ ಉದ್ಯೋಗ ಕೊಡುತ್ತಾರೆ? ಇದು ಕಣ್ಣೊರೆಸುವ ತಂತ್ರವಾಗಿದ್ದು, ರಾಜ್ಯದ ಜನರನ್ನು ದಿಕ್ಕು ತಪ್ಪಿಸುವ ತಂತ್ರವೂ ಆಗಿದೆ. ಈ ರಾಜ್ಯದ ಯುವಕರಿಗೆ ಅವರ ಹೋರಾಟವನ್ನು

ಹತ್ತಿಕ್ಕುವುದಕ್ಕೆ ಸಮಯಕ್ಕೆ ಸರಿಯಾಗಿ ಅಸತ್ಯವನ್ನು ಹೇಳುವಂಥ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಿಗೆ ಬದ್ಧತೆ ಇದ್ದರೆ 208 ಪುಟಗಳಿರುವ ಈ ಪುಸ್ತಕದ ಒಂದು ಪುಟದಲ್ಲಿ ಅವರು ತೋರಿಸಲಿ, ನಾವು 56,000 ಹೊಸ ನೇಮಕಾತಿಗಾಗಿ ಇಷ್ಟು ಹಣವನ್ನು ಇಂತಹ head of account ನಲ್ಲಿ ಮೀಸಲಿಟ್ಟಿದ್ದೇವೆ ಎಂಬುದನ್ನು ತೋರಿಸಲಿ. ಎಲ್ಲಿಯೂ ಕೂಡ ತೋರಿಸಿಲ್ಲ.

**ಶ್ರೀ ಎನ್. ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೆ, ಎಲ್ಲಿಯಾದರೂ ಹಿಂದಿನಿಂದಲೂ ನೋಡಿದಾಗ ಇಷ್ಟು ಮಂದಿಗೆ ಸಂಬಳವನ್ನು ಕೊಡುತ್ತೇವೆಂದು ಯಾವುದಾದರೂ head of account ನಲ್ಲಿ ತೋರಿಸಿರುತ್ತಾರೆಯೇ? ಈ ಸರ್ಕಾರ 56,284 ಮಂದಿಗೆ ನೇಮಕಾತಿ ಮಾಡಿಕೊಳ್ಳುತ್ತದೆ ಎನ್ನುವ commitment ಅನ್ನು ಹೊಂದಿದೆ. ನಾವು ಅವರನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿಂದ ಮಾಡುತ್ತಾರೆ, ಏನು ಮಾಡುತ್ತಾರೆ ಎಂದು ತೋರಿಸುವ ಅವಶ್ಯಕತೆಯಿಲ್ಲ.

**ಶ್ರೀ ಕೆ. ಎಸ್. ನವೀನ್:–** ಮಾನ್ಯ ಸಭಾಪತಿಯವರೆ, ಮಾಡುವಂಥ ಕೆಲಸಕ್ಕೆ ಅವರ ಹತ್ತಿರ ದುಡ್ಡಿಲ್ಲ. ಇನ್ನು ಅದಕ್ಕೆ ಎಲ್ಲಿಂದ ತರುತ್ತಾರೆಂದು ನಾನು ಕೇಳಿದೆನು. ಮಾಡುತ್ತೇವೆಂದರೆ ಮತ್ತೊಂದು ಹತ್ತು ಸಾವಿರ ಕೋಟಿ ಹೆಚ್ಚಿಗೆ ಸಾಲ ತರುತ್ತೇವೆಂದು ಮಾನ್ಯ ಸಭಾನಾಯಕರು ಹೇಳುತ್ತಿದ್ದಾರೆ. ಅದನ್ನು ನಾನು dispute ಮಾಡುವುದಿಲ್ಲ.

**ಶ್ರೀ ಎನ್. ಎಸ್. ಬೋಸರಾಜು:–** ಸಾಲ ಮಾಡುತ್ತಾರೆಯೋ, ಹೊಂದಾಣಿಕೆ ಮಾಡುತ್ತಾರೆಯೋ, receipts ಜಾಸ್ತಿ ಮಾಡುತ್ತಾರೆಯೋ, that is a different thing.

**ಶ್ರೀ ಕೆ. ಎಸ್. ನವೀನ್:–** ಆಗಲಿ, ಒಟ್ಟು 56,000 ಜನಕ್ಕೆ ಕೆಲಸ ಕೊಡಿ.

**Sri N.S. BOSERAJU:–** 100% it is the commitment of the Government. ಯಾವುದೇ ಸಂದೇಹವಿಲ್ಲ.

**ಶ್ರೀ ಕೆ. ಎಸ್. ನವೀನ್:–** ಆಮೇಲೆ ಅವರಿಗೆ ಸಂಬಳ ಇಲ್ಲದಂತೆ ಮಾಡಬೇಡಿ. ಸರಿಯಾಗಿ ಸಂಬಳ ಕೊಡಿ. ಏಕೆಂದರೆ ನೀವು ಬಹಳಷ್ಟು ಜನರಿಗೆ ಸಂಬಳ ಸಮಯಕ್ಕೆ ಸರಿಯಾಗಿ ಕೊಡುತ್ತಿಲ್ಲ. ಯಾವ ಇಲಾಖೆಯಲ್ಲಿಯೂ ಸಮಯಕ್ಕೆ ಸರಿಯಾಗಿ ಸಂಬಳ ಕೊಡುತ್ತಿಲ್ಲ.

**ಶ್ರೀ ಎನ್. ಎಸ್. ಬೋಸರಾಜು:–** ನಾನು ನಮ್ಮ ಸದಸ್ಯರಿಗೆ ಹೇಳುತ್ತಿರುತ್ತೇನೆ. ಆ ಭಾಗದಿಂದ ಮಾತನಾಡುವವರ ಪೈಕಿ ಅವರು ಬಹಳ ಅಧ್ಯಯನ ಮಾಡಿಕೊಂಡು ಬರುತ್ತಾರೆ. ನೀವು head of account ನಲ್ಲಿ ಇದನ್ನು ತೋರಿಸಿಲ್ಲ ಎಂದರೆ ನಾವು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕು? ಎಲ್ಲಿಯಾದರೂ ತೋರಿಸುತ್ತಾರೆಯೇ? ಹಿಂದೆ ಯಾವತ್ತಾದರೂ ತೋರಿಸಿದ್ದಾರೆಯೇ?

**ಶ್ರೀ ಕೆ. ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಂದು ರೀತಿಯ ಉದ್ವಿಗ್ನ ವಾತಾವರಣ ಇದ್ದಂಥ ಸಂದರ್ಭದಲ್ಲಿ ಅದು ಮುಖ್ಯಮಂತ್ರಿಯವರ ಆದ್ಯ ಕರ್ತವ್ಯವಾಗಿದೆ. ಮುಖ್ಯಮಂತ್ರಿಯವರು ಸ್ವತಃ

ಬಜೆಟ್‌ನಲ್ಲಿ ಇದನ್ನು ಘೋಷಣೆ ಮಾಡಿದ್ದೇನೆ ಎಂದರೆ ನನ್ನ commitment ಇದೆ ಎಂದು ಹೇಳಬೇಕೆನ್ನುವ ಅರ್ಥದಲ್ಲಿ ನಾನು ಇಲ್ಲಿ ಹೇಳಿದ್ದೇನೆಯೇ ಹೊರತು technical ಆಗಿ ಯಾವ ಇಲಾಖೆಯವರು….

**ಶ್ರೀ ಎನ್. ಎಸ್. ಬೋಸರಾಜು:–** ತಾವೇ ಹೇಳಿದಿರಿ. ಯಾವ head of account ನಲ್ಲಿ ಎಂಬುದನ್ನು ಪುಸ್ತಕದಲ್ಲಿ ತೋರಿಸಿಲ್ಲ ಎಂದು ಹೇಳಿದಿರಿ. ೫೬,೦೦೦ ಉದ್ಯೋಗಗಳನ್ನು ಕೊಡುತ್ತೇವೆನ್ನುವುದು ಸರ್ಕಾರದ commitment ಆಗಿದ್ದು, ಅದನ್ನು ನಾವು ಮಾಡುತ್ತೇವೆ.

**ಶ್ರೀ ಕೆ. ಎಸ್. ನವೀನ್:–** ಸರ್ಕಾರದ ಕೆಲವು ನಿರ್ಣಯಗಳ ಬಗ್ಗೆ ಕನ್ನಡಿ ಹಿಡಿಯಬೇಕಾದುದು ನಮ್ಮ ಕೆಲಸ. ಇಲ್ಲ, ನಾವು ಮಾಡಿರುವುದೆಲ್ಲಾ ಸರಿಯಿದೆ ಎಂದು ನೀವು ಹೇಳುವುದಾದರೆ ವೈದ್ಯರು ಸಂಬಳ ಕೊಟ್ಟಿಲ್ಲವೆಂದು ರಸ್ತೆಗೇಕೆ ಬರುತ್ತಿದ್ದರು? ಪೊಲೀಸರು ಸಂಬಳ ಕೊಟ್ಟಿಲ್ಲವೆಂದು ಅವರೇಕೆ ರಸ್ತೆಗೆ ಬರುತ್ತಿದ್ದರು? ಗುತ್ತಿಗೆದಾರರು ಬಿಲ್‌ಗಳು ಪಾವತಿ ಆಗಿಲ್ಲವೆಂದು ಅವರೇಕೆ ರಸ್ತೆಗೆ ಬರುತ್ತಿದ್ದರು? ಮಾನ್ಯ ಸಭಾನಾಯಕರ ಬಳಿ ಒಂದು ವಿಷಯವಿದ್ದರೆ, ಅವರನ್ನು counter ಮಾಡುವುದಕ್ಕೆ ನನ್ನ ಬಳಿ ಸಾವಿರ ವಿಷಯಗಳಿವೆ.

**ಶ್ರೀ ಎನ್. ಎಸ್. ಬೋಸರಾಜು:–** ನಿಮ್ಮ ಹತ್ತಿರ ಸಾವಿರ ಇದ್ದರೆ ಸರ್ಕಾರದ ಹತ್ತಿರ ಎರಡು ಸಾವಿರ ಇದೆ.

**ಶ್ರೀ ಕೆ. ಎಸ್. ನವೀನ್:–** ಇರಬಹುದು. ಹಾಗಾದರೆ ತೀರಿಸಿ. ಅವರಿಗೆ ಸಮಯಕ್ಕೆ ಸರಿಯಾಗಿ ಸಂಬಳ ಕೊಡಿ, ರಸ್ತೆ ಮೇಲೆ ಬಂದು ನಿಲ್ಲುವುದಕ್ಕೆ ಏಕೆ ಬಿಡುತ್ತೀರಿ?

**ಶ್ರೀ ಎನ್. ಎಸ್. ಬೋಸರಾಜು:–** ನಾನು ಹೇಳುವುದಿಷ್ಟೆ. ಯಾವ head of account ನಲ್ಲಿ ಸಂಬಳ ಕೊಡುತ್ತೀರಿ ಎನ್ನುವುದನ್ನು ತೋರಿಸಿಲ್ಲ ಎನ್ನುವುದನ್ನು ಅಂಥವರು ಮಾತನಾಡಬಾರದು. ನನ್ನಂಥವರು ಮಾತನಾಡಬಹುದು. ಅವರೆಲ್ಲಾ ಬಹಳ ಪರಿಣಿತರಿದ್ದಾರೆ ಎನ್ನುವ ಉದ್ದೇಶಕ್ಕೆ ಹೇಳಿದ್ದೇನೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾನಾಯಕರು ಸರಿಯಾಗಿ ಹೇಳಿದರು. ಸರ್ಕಾರದ ಬಳಿ ಎರಡು ಸಾವಿರ ಸಮಸ್ಯೆಗಳಿವೆ.

**ಶ್ರೀ ಕೆ. ಎಸ್. ನವೀನ್:–** ಮಾನ್ಯ ಸಭಾಪತಿಯವರೆ, ನಾನು ತುಂಬಾ ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಬೇರೆಯವರೂ ಆ ವಿಷಯದ ಬಗ್ಗೆ ಮಾತನಾಡುವವರಿದ್ದಾರೆ. ನನ್ನ ಭಾಷಣದಲ್ಲಿ ಆ ವಿಷಯ ಇರಲಿ ಎನ್ನುವ ಕಾರಣಕ್ಕಾಗಿ ತಿಳಿಸುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ನವೀನ್ ಅವರೆ, ನೀವು ಸಂಜೆ ೦೪ ಗಂಟೆ ೪೦ ನಿಮಿಷಗಳಿಗೆ ಪ್ರಾರಂಭ ಮಾಡಿದ್ದೀರಿ. ಈಗ ೦೫ ಗಂಟೆ ೨೦ ನಿಮಿಷಗಳಾಗುತ್ತಿದೆ. ಇನ್ನೂ ಎಷ್ಟು ಹೊತ್ತು ಬೇಕಾಗುತ್ತದೆ?

**ಶ್ರೀ ಕೆ. ಎಸ್. ನವೀನ್:–** ಮಾನ್ಯ ಸಭಾಪತಿಯವರೆ, ಇನ್ನು ೧೫ ನಿಮಿಷಗಳ ಸಮಯ ಕೊಡಿ.

**ಉಪ ಸಭಾಪತಿಯವರು:–** ಆಯಿತು, ೧೦ ನಿಮಿಷಗಳಲ್ಲಿ ಮುಗಿಸಿ. ಸರಿಯಾಗಿ ೦೫ ಗಂಟೆ ೩೦ ನಿಮಿಷಗಳಿಗೆ ಮುಕ್ತಾಯಗೊಳಿಸಿಬಿಡಿ.

**ಶ್ರೀ ಕೆ. ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ರೂ.4,48,000 ಕೋಟಿ ಗಾತ್ರದ ಬಜೆಟ್ ಅನ್ನು ಮಂಡನೆ ಮಾಡುತ್ತಿರುವ ಸಂದರ್ಭದಲ್ಲಿ ನಾನು ಕೇಳಬಯಸುವುದೇನೆಂದರೆ ನಮ್ಮಲ್ಲಿ ಎಸ್.ಸಿ./ಎಸ್.ಟಿ. ಮತ್ತು ಹಿಂದುಳಿದ ವರ್ಗಗಳಿಗಾಗಿಯೇ ನಿಗಮಗಳಿವೆ. ಅವರ ಅಭಿವೃದ್ಧಿಯನ್ನು ಗಮನಿಸಬೇಕೆಂದೇ, ಅವರ ಅಭಿವೃದ್ಧಿಯಲ್ಲಿ ಯಾವುದೇ ವೇಗದ ಕೊರತೆಯಾಗಬಾರದೆಂದೇ ಆ ಅಭಿವೃದ್ಧಿ ನಿಗಮಗಳನ್ನು ಹಿಂದಿನ ಅನೇಕ ಸರ್ಕಾರಗಳು ಮಾಡಿವೆ. ಆದರೆ ಇಲ್ಲಿ ರೂ.1,56,701 ಕೋಟಿಯಷ್ಟು ಹಣವನ್ನು ಕಳೆದ ನಾಲ್ಕು ವರ್ಷಗಳಲ್ಲಿ S.C.S.P./T.S.P. ಗಾಗಿ ಮೀಸಲಿಡುವ ಕೆಲಸ ಮಾಡಲಾಗಿದೆ. ನಾಲ್ಕು ವರ್ಷಗಳಲ್ಲಿ ಮಾಡಿರುವ ಹಂಚಿಕೆಗಳೆಷ್ಟು ಎಂದರೆ ರೂ.48,350 ಕೋಟಿ ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ. ಇನ್ನು ರೂ.53,059 ಕೋಟಿ S.C.S.P./T.S.P. ಹಣವನ್ನು ಇತರ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. ನೇರವಾಗಿ ಎಸ್.ಸಿ./ಎಸ್.ಟಿ. ಕಲ್ಯಾಣ ಕಾರ್ಯಕ್ರಮಗಳಿಗೆ ಹೋಗಿರುವುದು ಎಷ್ಟೆಂದರೆ ರೂ.25,291 ಕೋಟಿ. ಅದರಲ್ಲಿ ಈ ವರ್ಷದಲ್ಲಿ ಅಂಬೇಡ್ಕರ್ ನಿಗಮಕ್ಕೆ...

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಈಗ ಒಂದು ಮುಖ್ಯವಾದ ವಿಷಯವಿದ್ದು, ಮಾನ್ಯ ಗೃಹ ಸಚಿವರಿಗೆ ಬರುವುದಕ್ಕೆ ಹೇಳಿದ್ದೇನೆ. ಅವರು ಇನ್ನೂ ಬಂದಿರುವುದಿಲ್ಲ. ಮಾನ್ಯ ಸದಸ್ಯರು ಪ್ರಾರಂಭ ಮಾಡಲಿ.

**ಶ್ರೀ ಎನ್. ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ, ಕೆಳಮನೆಯಲ್ಲಿ ಗಮನ ಸೆಳೆಯುವ ಸೂಚನೆ ನಡೆಯುತ್ತಿದ್ದು, ಅದು ಮುಗಿದ ಕೂಡಲೇ ಇಲ್ಲಿಗೆ ಬರುತ್ತೇನೆಂದು ವರ್ತಮಾನವನ್ನು ಕಳುಹಿಸಿದ್ದಾರೆ.

**ಸಭಾಪತಿಯವರು:-** ಪುನಃ ನೀವು ಆಗ ಬಿಡಿ, ಈಗ ಬಿಡಿ ಎಂದರೆ ನಾನು ಬಿಡುವುದಿಲ್ಲ. ಮುಗಿಸುವವರೆಗೂ ಬಿಡುವುದಿಲ್ಲ. ಈಗಲೇ ಹೇಳುತ್ತಿದ್ದೇನೆ. ಸಿ.ಎಲ್.ಪಿ. ಸಭೆ ಏನು ಹೇಳಿದರೂ ನಾನು ಕೇಳುವುದಿಲ್ಲ. ಮುಗಿಸಿ ಹೋಗಬೇಕು. ಮಾನ್ಯ ನವೀನ್ ಅವರೆ, ಮಾತನಾಡಿ.

**ಶ್ರೀ ಕೆ. ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಇವರು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕೊಟ್ಟಿರುವುದು ರೂ.125 ಕೋಟಿ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ರೂ.75 ಕೋಟಿ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ರೂ.62.5 ಕೋಟಿ, ಕರ್ನಾಟಕ ಬೋವಿ ಅಭಿವೃದ್ಧಿ ನಿಗಮಕ್ಕೆ ರೂ.68.75 ಕೋಟಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ರೂ.31.25 ಕೋಟಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಕ್ಕೆ ರೂ.156 ಕೋಟಿ, ಡಾ: ಬಾಬು ಜಗಜೀವನರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮಕ್ಕೆ ರೂ.43 ಕೋಟಿ ಒಟ್ಟು ರೂ.562 ಕೋಟಿಯನ್ನು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. S.C.S.P./T.S.P. ಯಲ್ಲಿ ಇಷ್ಟು ದೊಡ್ಡ ಗಾತ್ರದ ಹಣವನ್ನು ನೀವು committed expenditure ರೀತಿಯಲ್ಲಿ ವಿಶೇಷ ಯೋಜನೆಯನ್ನು ರೂಪಿಸಿ ನಮ್ಮ

ರಾಜ್ಯದಲ್ಲಿ ಮಾತ್ರ ಇರುವಂಥ ಕಾರ್ಯಕ್ರಮ ಇದು, ನಮ್ಮ ಬಜೆಟ್‌ನ ಶೇಕಡಾವಾರು ಹಣವನ್ನು ತೆಗೆದಿಡುತ್ತೇವೆ ಎಂದು ಮಾತು ಕೊಟ್ಟಂಥ ಮುಖ್ಯಮಂತ್ರಿಗಳು ಈ ನಿಗಮಗಳನ್ನು ಏಕೆ ತೆರೆದಿಟ್ಟಿದ್ದಾರೆ?

**(ಮುಂದು)**

(286) 10.03.2026, 5.20, ಕೆಜಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್** (ಮುಂದು)**:-**

ಸರ್ಕಾರ ದುಡ್ಡು ಇಲ್ಲದಿರುವಂತಹ ನಿಗಮಗಳಿಗೆ ಬೀಗ ಹಾಕಿ, ಆ ನಿಗಮದ ಬೋರ್ಡ್‌ಗೆ ಒಂದು ಹಾರ ಹಾಕಿ, ಅಲ್ಲಿರುವಂತಹ ಅಧಿಕಾರಿಗಳಿಗೆ ಬೀಳ್ಕೊಡುಗೆ ಕೊಟ್ಟು ನೀವು ಮಾಡಿರುವಂತಹ ಅಭಿವೃದ್ಧಿ ಸಾಕು, ನಮ್ಮ ಹತ್ತಿರ ಕೊಡುವುದಕ್ಕೆ ಹಣ ಇಲ್ಲವೆಂದು ಅವರ ಜುಬ್ಬದ ಎರಡು ಕಡೆಯ ಖಾಲಿ ಜೇಬುಗಳನ್ನು ತೋರಿಸಿ ನಿಮ್ಮ ನಿಗಮಗಳನ್ನು ಮುಚ್ಚಿದ್ದೇವೆಂದು ನಮಸ್ಕಾರ ಮಾಡಿ ಅವರನ್ನು ಕಳುಹಿಸಿಬಿಟ್ಟರೆ,

**ಸಭಾಪತಿಯವರು:-** ಶ್ರೀ ಕೆ.ಎಸ್.ನವೀನ್‌ರವರೇ, ತಮಗೆ ಮತನಾಡುವುದಕ್ಕೆ ಇನ್ನು ಎಷ್ಟು ಸಮಯ ಬೇಕು?

ಶ್ರೀ **ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನನಗೆ ಇನ್ನು 15 ನಿಮಿಷಗಳು ಬೇಕಾಗುತ್ತದೆ.

**ಸಭಾಪತಿಯವರು:-** ಶ್ರೀ ಕೆ.ಎಸ್.ನವೀನ್‌ರವರೇ, ಇನ್ನು 15 ನಿಮಿಷಗಳ ಕಾಲವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ **ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 25 ನಿಮಿಷಗಳು ಆಗಿದೆ ಅಷ್ಟೇ.

**ಸಭಾಪತಿಯವರು:-** ಶ್ರೀ ಕೆ.ಎಸ್.ನವೀನ್‌ರವರೇ, ತಾವು 4 ಗಂಟೆ 40 ನಿಮಿಷಗಳಿಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಹಾಗಾಗಿ, ಇನ್ನು 10 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಶ್ರೀ **ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಅಷ್ಟು ಕಡಿಮೆ ಅನುದಾನದಲ್ಲಿ ಇವತ್ತು ರಾಜ್ಯವ್ಯಾಪ್ತಿ ಇರುವಂತಹ ನಮ್ಮ ಎಸ್.ಸಿ./ಎಸ್.ಟಿ. ಸಮುದಾಯ ಬಂಧುಗಳಿಗೆ ಇಷ್ಟು ಕೊರತೆಯನ್ನು ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮುಂದಾಗಿದ್ದಾರೆ. ಇವತ್ತು ಬಜೆಟ್‌ನಲ್ಲಿ ಪ್ರಾರಂಭದ ಪುಟದಿಂದ ಹಿಡಿದು ಕೊನೆಯ ಪುಟದವರೆಗೂ ಎಲ್ಲಿ ನೋಡಿದರೂ ಸಹ, ಯಾವ ಯೋಜನೆಯೂ ಸಹ, ನಮ್ಮ ರಾಜ್ಯದಲ್ಲಿ ಬಹುವರ್ಷಗಳಿಂದ ನಡೆಯುತ್ತಿರುವಂತಹ ಯೋಜನೆಗಳನ್ನು ಮುಕ್ತಾಯ ಮಾಡುವುದಕ್ಕೆ ಬೇಕಾದಂತಹ ಬಂಡವಾಳ ವೆಚ್ಚವನ್ನು ನಾವು ಮಾಡುತ್ತೇವೆಂಬ ಗ್ಯಾರಂಟಿಯನ್ನು, ವಿಶ್ವಾಸವನ್ನು ತುಂಬುವಂತಹ ಕೆಲಸದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಎಡವಿದ್ದಾರೆ. ನೀರಾವರಿ ವಿಷಯಗಳು ಇರಬಹುದು, ರೈತರ ಕಲ್ಯಾಣ ವಿಷಯಗಳು ಇರಬಹುದು, ಮಹಿಳಾ ಕಲ್ಯಾಣ ವಿಷಯಗಳು ಇರಬಹುದು, ಇನ್ನು ಯಾವುದೇ ವಿಚಾರದಲ್ಲೂ ಕೂಡ ಮುಖ್ಯಮಂತ್ರಿಯವರು ಸಮರ್ಪಕವಾಗಿ ಧೀರ್ಘಾವಧಿಯಿಂದ ನೆನೆಗುದಿಗೆ ಅಥವಾ ನಡೆಯುತ್ತಿರುವಂತಹ ಯೋಜನೆಗಳು ..., ಇವತ್ತು ನಮ್ಮದ್ದು ನಿಯಮ

330 ರಡಿ ವಿಷಯ ಇತ್ತು. ಆದರೆ, ಇವತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲವೆಂದು ಆ ವಿಷಯವನ್ನು ತೆಗೆದುಕೊಳ್ಳಲಿಲ್ಲ. ನಾವು ಕುಡಿಯುವ ನೀರಿನ ಬಗ್ಗೆ ಕೇಳಿದ್ದೆವು. ಅದು ಬಯಲು ಸೀಮೆಯಲ್ಲಿ...

**ಸಭಾಪತಿಯವರು:–** ಶ್ರೀ ಕೆ.ಎಸ್.ನವೀನ್‌ರವರೇ, ಇದು ಮುಗಿದ ಮೇಲೆ ಆ ವಿಷಯವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ತೆಗೆದುಕೊಳ್ಳಿ. ಏಕೆಂದರೆ, ಮಧ್ಯ ಕರ್ನಾಟಕ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಯೋಜನೆಗಳನ್ನು ಪೂರ್ಣ ಗೊಳಿಸುವಂತಹ ಕೆಲಸ ಯಾವಾಗ ಆಗುತ್ತದೆ ಎಂದು ನಾನು ಮತ್ತು ಇತರೆ 4–5 ಜನ ಮಾನ್ಯ ಸದಸ್ಯರು ನೋಟಿಸ್ ಕೊಟ್ಟಿದ್ದೇವೆ. ಇವರು ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 2,000 ಕೋಟಿ ರೂಪಾಯಿಗಳಷ್ಟನ್ನು ನಮ್ಮ ಗುತ್ತಿಗೆದಾರರಿಗೆ ಕೊಡುವುದನ್ನು ಬಾಕಿ ಇಟ್ಟಿದ್ದಾರೆ. ಇನ್ನು ಎತ್ತಿನಹೊಳೆ ಯೋಜನೆ. ಎತ್ತಿನಹೊಳೆ ಯೋಜನೆಯನ್ನು ಗುತ್ತಿಗೆದಾರರಿಗೆ ಪೂರ್ಣ ಮಾಡುವುದಕ್ಕೆ ಬಿಟ್ಟಿಲ್ಲ. ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಭದ್ರಾ ಮೇಲ್ದಂಡೆ ಯೋಜನೆಯಲ್ಲಿ 157 ಕೆರೆಗಳಿಗೆ ನೀರು ತುಂಬಿಸಿದ್ದೇವೆಂದು ಹೇಳಿದರು. ಆದರೆ, ಒಂದೇ ಒಂದು ಕೆರೆಗೂ ನೀರನ್ನು ತುಂಬಿಸಿಲ್ಲ. ಆ ಕೆರೆಗಳಿಗೆ ಒಂದು ಹನಿ ನೀರು ಬಂದಿಲ್ಲ. ಮೊನ್ನೆ ದಿವಸ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮುಂದೆ ಬರುತ್ತದೆ ಹಾಗೂ ಇದನ್ನು ಶೀಘ್ರವಾಗಿ ಮುಗಿಸುವಂತಹ ಕೆಲಸವನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿದರು. ಆದರೆ, ನಾನು ನಿಜವಾಗಲೂ ಸತ್ಯವನ್ನು ಹೇಳುತ್ತಿದ್ದೇನೆ. ನಾನು ನಮ್ಮ ರಾಜ್ಯದ ಜನರ ದಾರಿಯನ್ನು ತಪ್ಪಿಸುವುದಕ್ಕೆ ಹೋಗುವುದಿಲ್ಲ. ಅವರು ದಾರಿ ತಪ್ಪಿಸಬಹುದು. ಆದರೆ, ನಾನು ದಾರಿ ತಪ್ಪಿಸುವುದಕ್ಕೆ ಇಷ್ಟಪಡುವುದಿಲ್ಲ. 157 ಕೆರೆಗಳಿಗೆ ಅಲ್ಲ, ಒಂದು ಸಣ್ಣ ಹಳ್ಳಕ್ಕೂ ಸಹ ಒಂದು ಲೀಟರ್ ನೀರನ್ನು ಈ ಸರ್ಕಾರ ಕೊಟ್ಟಿಲ್ಲ. ನಾನು ಇನ್ನೊಂದು ಬಹಳ ಬೇಜಾರಿನ ವಿಷಯವನ್ನು ಹೇಳಬೇಕೆಂದರೆ, ಮೊನ್ನೆ ದಿವಸ ರೈತರು ಪ್ರತಿಭಟನೆ ಮಾಡಿದರು. ಅದರಲ್ಲಿ ರೈತ ಮುಖಂಡ ಶ್ರೀ ತಿಪ್ಪೇಸ್ವಾಮಿ ಎನ್ನುವವರು ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಮಾಡುವಾಗ ತೀವ್ರ ಅನಾರೋಗ್ಯಕ್ಕೆ ತುತ್ತಾಗಿ ಅದರಿಂದ serious ಆಗಿ ಇವತ್ತು ಸಹ ಆತ ಆಸ್ಪತ್ರೆಯಲ್ಲಿ ಇದ್ದಾರೆ. ಅಂದರೆ, ಇವತ್ತು ರಾಜ್ಯದಲ್ಲಿ ಬೇಡಿಕೆ ಇರುವಂತಹ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹ ನೀರಾವರಿ ಯೋಜನೆಗಳು. ನಾನು ನಮ್ಮ ಮಧ್ಯ ಕರ್ನಾಟಕದ ಎರಡು ನೀರಾವರಿ ಯೋಜನೆಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದೇನೆ. ನಾನು ಉತ್ತರ ಕರ್ನಾಟಕದ ಅನೇಕ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ ಇರಬಹುದು ಹಾಗೂ ಇತರೆ ಬೇರೆ ಬೇರೆ ಯೋಜನೆಗಳು ಇದ್ದು, ನಾನು ಅವುಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ಈ ಸರ್ಕಾರ ನಮ್ಮ ರಾಜ್ಯದ ರೈತರ ಪಾಲಿಗೆ ಬದುಕನ್ನು ಕೊಡುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಆದರೆ, ಈ ಸರ್ಕಾರ ಅದರ ಕಡೆಗೆ ಸಂಪೂರ್ಣವಾಗಿ ನಿರ್ಲಕ್ಷ್ಯವಹಿಸುವಂತಹ ಕೆಲವನ್ನು ಮಾಡಿದೆ.

ಮಾನ್ಯ ಸಭಾಪತಿಯವರೇ, ಈ ಸರ್ಕಾರವನ್ನು ಅವರು '11G' ಎಂದು ಹೇಳಿದ್ದಾರೆ. ಆದರೆ, ನಾನು ಈ

ಸರ್ಕಾರವನ್ನು '11C' ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ಹೆಮ್ಮೆಯಿಂದ ನಮ್ಮದ್ದು 11G ಸರ್ಕಾರ ಎಂದು ಹೇಳಿದ್ದಾರೆ. ಅದಕ್ಕೆ ನಾನು 11C ಸರ್ಕಾರ ಎಂದು ಹೇಳುತ್ತೇನೆ. 11C ಅಂದರೆ ಏನೆಂದರೆ, ಮೊದಲನೆಯ 'C'ಏನೆಂದರೆ, convince. Convince ಎಂದರೆ, ಈ ರಾಜ್ಯದ ಜನರಿಗೆ ಇಲ್ಲದಿರುವಂತಹ ಕಲ್ಪನೆಗಳನ್ನು ಸೃಷ್ಟಿ ಮಾಡುವುದಾಗಿದೆ. ಅವರು ಆಗಲೇ ನಾವು 10 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದರು. ಆದರೆ, ಅವರು 10 ಕೆ.ಜಿ. ಅಕ್ಕಿಯನ್ನು ಕೊಡಲಿಲ್ಲ. ಅವರು ಎಲ್ಲರಿಗೂ ವಿದ್ಯುತ್‌ನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿದರು. ಆದರೆ, ಕೊಡಲಿಲ್ಲ. ಈ ತರಹದ convince ಮಾಡಿ ಜನರಿಂದ ಮತವನ್ನು ಪಡೆದಂತಹ ಸರ್ಕಾರ ಮೊದಲನೆ ಪ್ರಯತ್ನದಲ್ಲಿ convince ಮಾಡಿ ಅದರಲ್ಲಿ ಯಶ್ವಸಿಯಾಗಿದೆ. ಹಾಗಾಗಿ, ಇದು ಮೊದಲನೆ `C'.

ಮಾನ್ಯ ಸಭಾಪತಿಯವರೇ, ಇನ್ನು ಎರಡನೆಯ `C' ಏನೆಂದರೆ, ಈಗ ಮಾಡುತ್ತಿರುವಂತಹ confuse. ಈಗ ನಡೆಯುತ್ತಿರುವಂತಹದ್ದು, `if you cannot convince, you confuse'. Confuse ಮಾಡುವುದು ಹೇಗೆ ಎಂದರೆ, ನೀವು ಅವರಿಗೆ ಯಾವುದೇ ವಿಷಯವನ್ನು ಕೇಳಿ, 'ಹೇ ಇಲ್ಲ', 'ಇದು ಅವರ ಕಡೆ ಹೀಗೆ ಆಗಿದೆ', 'ಇದು ಇವರ ಕಡೆಯಿಂದ ಹೀಗೆ ಆಗಿದೆ' ಎಂದು ಹೇಳುತ್ತಾರೆ. ಏಕೆ ನೇಮಕಾತಿ ಮಾಡಿಲ್ಲವೆಂದರೆ, ಒಳ ಮೀಸಲಾತಿ, ಅದು ನ್ಯಾಯಾಲಯದಲ್ಲಿದೆ ಎಂದು ಹೇಳುತ್ತಾರೆ. ಸರ್ಕಾರವೇ ನ್ಯಾಯಾಲಯದಲ್ಲಿರುವುದನ್ನು ಬಗೆಹರಿಸಬೇಕು ಅಲ್ಲವೇ: ಅದನ್ನು ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಆದರೆ, ಅವರು ಅದನ್ನು confuse ಮಾಡುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಮೂರನೆಯ `C' ಯಾವುದು ಎಂದರೆ, 'confront'. 'Confront'ಎಂದರೆ, ಹತಾಶೆಗೆ ಒಳಗಾದಂತಹ ವ್ಯಕ್ತಿ, ಅದನ್ನು ಯಾರು ಕೌಂಟರ್ ಮಾಡುತ್ತಾರೆ ಅವರನ್ನು confront ಮಾಡುವಂತಹ ಕೆಲಸವನ್ನು ಮಾಡುತ್ತಾರೆ. ಏನು confront ಎಂದರೆ, ನಾವು ಇಲ್ಲಿ ಅನೇಕ ಸಾರಿ ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವ ಸಂದರ್ಭದಲ್ಲಿ, ನಾವು ಯಾರಾದರೂ ಸಹ ಅವರನ್ನು ಏನಾದರೂ ಕೇಳುವುದಕ್ಕೆ ಎದ್ದುನಿಂತರೆ, ಅವರು ಮೊದಲ ಬಾರಿಗೆ 'ರೀ ಕುಳಿತುಕೊಳ್ಳಿ' ಎಂದು ಹೇಳುತ್ತಾರೆ. 'ರೀ ಕುಳಿತುಕೊಳ್ಳಿ ಹೇಳುತ್ತೇನೆ' ಎಂದು ಹೇಳುತ್ತಾರೆ. ಎರಡನೆ ಬಾರಿಗೆ ಏನಾದರೂ ಕೇಳಿದರೆ, `ಹೇ ಕುಳಿತುಕೊಳ್ಳಪ್ಪ' ಎಂದು ಹೇಳುತ್ತಾರೆ. ಮೂರನೇ ಬಾರಿ ನಾವು ಏನಾದರೂ ಎದ್ದುನಿಂತು ಕೇಳಿದರೆ. `ಹೇ ಕುಳಿತಿಕೋ ನೀನು' ಎಂದು ಹೇಳುತ್ತಾರೆ. ಅಂದರೆ, ಅದು ಮನಸ್ಸಿನಲ್ಲಿ ಇರುವಂತಹ ಹತಾಶೆಯನ್ನು ತೋರಿಸುತ್ತದೆ. ನಾನು mono acting ಅನ್ನು ಮಾಡುತ್ತಿಲ್ಲ. ನಾನು ಸದನದಲ್ಲಿ ಇಲ್ಲಿ ಕುಳಿತುಕೊಂಡು ನೋಡಿರುವಂತಹದ್ದನ್ನು ಹೇಳುತ್ತಿದ್ದೇನೆ. ಇದು ಮೂರನೆ `C' ಆಗಿದೆ.

**ಸಭಾಪತಿಯವರು:–** ಶ್ರೀ ಕೆ.ಎಸ್.ನವೀನ್‌ರವರೇ, ತಾವು ಇನ್ನು ಮೂರು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು. ಅದರ ಮೇಲೆ ತಮಗೆ ಅವಕಾಶ ಕೊಡುವುದಿಲ್ಲ. ತಾವು 5.30ಕ್ಕೆ ಮುಗಿಸಬೇಕು. ಇಲ್ಲವೆಂದರೆ,

ತಾವು ನಾಳೆ ಮಾತನಾಡಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, 4ನೇ `C' ಏನಂದರೆ, chaos. Chaos ಎಂದರೆ, ಅರಾಜಕತೆ. ಅರಾಜಕತೆಯನ್ನು ಸೃಷ್ಟಿ ಮಾಡುವಂತಹದ್ದು ಆಗಿದೆ. 'ಹಾಗೆ ಆಗಿಬಿಡುತ್ತದೆ', 'ಹೀಗೆ ಆಗಿ ಬಿಡುತ್ತದೆ', 'ಕಾನೂನು ಸುವ್ಯವಸ್ಥೆ ಇದು ಆಗುತ್ತದೆ'. ಅವರೇ ಸ್ವತಃ ಪ್ರತಿಭಟನೆಗೆ ಇಳಿದುಬಿಟ್ಟರು. ಯಾವುದಾದರೊಂದು ಸರ್ಕಾರ ಪ್ರತಿಭಟನೆಗೆ ಇಳಿದಿರುವಂತಹದ್ದನ್ನು ನಾನು ಮೊದಲ ಬಾರಿಗೆ ನೋಡುತ್ತಿದ್ದೇನೆ. ಇಡೀ ದೇಶದಲ್ಲಿ ತಮ್ಮ ಸರ್ಕಾರ ತಾವೇ ಹೋಗಿ freedom park ನಿಂದ ಮೆರವಣಿಗೆ ಮೂಲಕ ಪ್ರತಿಭಟನೆ ಮಾಡಿದ್ದಾರೆ. This is called chaos. It is a chaotic Government.

ಮಾನ್ಯ ಸಭಾಪತಿಯವರೇ, 5ನೇಯ `C' ಏನೆಂದರೆ, ಇದೆಲ್ಲವೂ ಆದನಂತರ ಆಗುವುದು ಏನೆಂದರೆ, collapse. Because of all these, the administration of State of Karnataka has collapsed. ಯಾರಿಗೂ ಯಾರ ಮೇಲೆಯೂ ಹಿಡಿತ ಇಲ್ಲ. ಯಾವ ಇಲಾಖೆಯಲ್ಲಿಯೂ ಸಹ ಸರಿಯಾದಂತಹ ಕೆಲಸಗಳು ಆಗುತ್ತಿಲ್ಲ. ಆ ಕೆಲಸಗಳಿಗೆ ಸಮಯದ ಮಿತಿ ಇಲ್ಲ. ಹಾಗಾಗಿ, ಇವತ್ತು ಆಡಳಿತ collapse ಆಗಿದೆ. 6ನೇಯ `C' ಏನೆಂದರೆ, ಇದೆಲ್ಲಾ ಆದ ಕಾರಣ ಏನಾಗಿದೆ ಎಂದರೆ, ಈ ಸರ್ಕಾರ ಒಂದು careless ಸರ್ಕಾರ ಆಗಿದೆ. ಸಾರ್ವಜನಿಕರ ಮೇಲೆ ಯಾವುದೇ ಹಿತಾಸಕ್ತಿಯನ್ನು ಕಾಪಾಡುವಂತಹ ಮನಸ್ಸು ಇಲ್ಲದಿರುವಂತಹ careless ಸರ್ಕಾರ ಆಗಿದೆ. 7ನೇ `C' ಏನೆಂದರೆ, ಈ ಸರ್ಕಾರ controversial ಸರ್ಕಾರ ಆಗಿದೆ. ಎಲ್ಲಾ ಹಂತಗಳಲ್ಲಿಯೂ controversy ಅನ್ನು ತಂದು ಇಟ್ಟುಕೊಳ್ಳುವಂತಹ ಸರ್ಕಾರ ಆಗಿದೆ. Controversy ಯೇ ಈ ಸರ್ಕಾರದ ಮನೆ ದೇವರು ಆಗಿದೆ.

ಮಾನ್ಯ ಸಭಾಪತಿಯವರೇ, ಇನ್ನು 8ನೇ 'C' ಏನೆಂದರೆ, `communal divide'. ಇವರು ಏನು ಮಾಡಿದರು ಎಂದರೆ, ನಾನು ಹಿಂದುಳಿದ ವರ್ಗಗಳ ಜನಗಣತಿಯನ್ನು ಮಾಡಿಸಿ ಬಿಡುತ್ತೇವೆಂದು ಹೇಳಿದರು. ಅದೇರೀತಿ ಮಾಡಿಸಿದರು. ಆದರೆ, ಆ ವರದಿಯನ್ನು table ಮಾಡಿಲ್ಲ. ಬೇರೆ ಬೇರೆ ಸಮುದಾಯಗಳನ್ನು ಎತ್ತಿಕಟ್ಟುವಂತಹ ಪ್ರಯತ್ನವನ್ನು ಮಾಡಿದರು. 'ಅವರ ಮೇಲೆ ಇವರು ಎದ್ದೇಳುವುದು, ಇವರ ಮೇಲೆ ಅವರು ಎದ್ದೇಳುವುದು', 'ನಮ್ಮ ಜಾತಿಯದ್ದು ಇಷ್ಟು ಜನಸಂಖ್ಯೆ ಇದೆ', 'ನಮ್ಮ ಜಾತಿಯದ್ದು ಇಷ್ಟು ಜನಸಂಖ್ಯೆ ಇದೆ' ಎಂದು ಹೇಳುವುದೇ ಆಯಿತು. ಸುಮಾರು 2-3 ತಿಂಗಳ ಕಾಲ ಜನರೆಲ್ಲರೂ ಅದರಲ್ಲಿಯೇ ಮುಳುಗಿ ಹೋದರು.

ಮಾನ್ಯ ಸಭಾಪತಿಯವರೇ, ಇನ್ನು 9ನೇಯ `C' ಏನೆಂದರೆ, corruption. ನಾನು corruption ಬಗ್ಗೆ ಮಾತನಾಡಬೇಕು ಎಂದರೆ, ನನಗೆ ಇನ್ನು ಒಂದು ಗಂಟೆಯ ಕಾಲ ಟೈಮ್ ಕೊಡಬೇಕು.

**ಸಭಾಪತಿಯವರು:–** ಶ್ರೀ ಕೆ.ಎಸ್.ನವೀನ್‌ರವರೇ, ಹಾಗಾದರೆ, ಇದನ್ನು ಇಲ್ಲಿಗೆ ಮುಗಿಸಿ. ನಾಳೆ ನೋಡೋಣ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷದಲ್ಲಿ ಮಾತನಾಡಿ

ಮುಗಿಸುತ್ತೇನೆ.

**ಸಭಾಪತಿಯವರು:–** ಶ್ರೀ ಕೆ.ಎಸ್.ನವೀನ್‌ರವರೇ, ತಾವು 5.30ಕ್ಕೆ ಮುಗಿಸಬೇಕು.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಆಯಿತು. ಮಿತಿ ಮೀರಿದ corruption ನಲ್ಲಿ ಈ ಸರ್ಕಾರ ಮುಳಗಿ ಹೋಗಿದೆ. `Collection, corruption, commission' ಈ ಮೂರು ಕೂಡ `C' ಆಗಿದೆ. ಅದಕ್ಕೆ ವ್ಯಾಖ್ಯಾನ ಬರುವಂತಹದ್ದು ಆಗಿದೆ. ಕೊನೆಯದಾಗಿ, 10 ನೇಯ 'C' ಏನೆಂದರೆ, chair fight, 'ಖುರ್ಚಿ ಕಾಳಗ'. ಇವತ್ತು ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂದರೆ, 'ನಾನು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತೇನೆ', 'ನಾನು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತೇನೆ', ನನಗೆ ಎಷ್ಟು ಜನ ಶಾಸಕರ ಬೆಂಬಲ ಇದೆ, ನಾವು ಯಾವ ಶಾಸಕರನ್ನು ವಿದೇಶಕ್ಕೆ ಕಳುಹಿಸಬೇಕು. ನಾನು ಯಾವ ಶಾಸಕರಿಗೆ ಊಟ ಹಾಕಿಸಬೇಕು ಎನ್ನುವುದಾಗಿದೆ.

ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ತಮ್ಮಿಂದ ನನಗೆ ಒಂದು ಲೇಟರ್ ಬಂತು. ಅದನ್ನು ನೋಡಿ ನನಗೆ ಬಹಳ ಆಶ್ಚರ್ಯ ಆಯಿತು. ಮಾನ್ಯ ಮುಖ್ಯಮಂತ್ರಿಯವರು ಬಜೆಟ್‌ನ ಬಗ್ಗೆ ಶಾಸಕರಿಗೆ ಪಾಠ ಮಾಡುತ್ತಾರೆ. ನಾನು ಯಾವಾಗ ಮಾನ್ಯ ಸಿದ್ಧರಾಮಯ್ಯನವರು ಮಾಸ್ಟರ್ ಆದರು ಅಂದುಕೊಂಡೆ. ಅವರು ಸದನದಲ್ಲಿ ಪಾಠ ಮಾಡಬೇಕಾಗಿದೆ. ಆದರೆ, ಇವರು ಹೋಗಿ ಶಾಸಕರ ಹತ್ತಿರ ಪಾಠ ಮಾಡುವಂತಹ ಅವಶ್ಯಕತೆ ಇಲ್ಲ. ಇವರು ಏಕೆ ಇವತ್ತು ಆ ಕೆಲಸ ಮಾಡುತ್ತಿದ್ದಾರೆಂದರೆ, ಶಾಸಕರಿಗೆ ಮಾನ್ಯ ಮುಖ್ಯ ಮಂತ್ರಿಯವರ ಮೇಲೆ ಇರುವಂತಹ ವಿಶ್ವಾಸ ಕಡಿಮೆಯಾಗಿದೆ. ಅದನ್ನು ತಿಳಿದುಕೊಳ್ಳುವುದಕ್ಕಾಗಿ ಇವತ್ತು ಮಾನ್ಯ ಮುಖ್ಯಮಂತ್ರಿಯವರು ಹೋಗಿ ಪಾಠ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

(ಮುಂದು)

**(287) 10.03.2026/5.30/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್ (ಮುಂದು):–**

ಈಗ ಕೊನೆಯದಾಗಿ, ಈ ಅಷ್ಟೂ `C' ಗಳಿಗೆ ಇರುವಂತಹ ಒಂದೇ ಒಂದು ಹೆಸರು ಏನೆಂದರೆ, ಅದು 'ಕಾಂಗ್ರೆಸ್.' ಹಾಗಾಗಿ, ಅಷ್ಟೂ `C' ಗಳನ್ನು ಸಮ್ಮಿಲನ ಮಾಡಿ ಸಿಗುವಂತಹ ಪದ ಯಾವುದು ಎಂದರೆ ಅದು 'ಕಾಂಗ್ರೆಸ್.' ಹಾಗಾಗಿ, ಇವತ್ತು ಕಾಂಗ್ರೆಸ್ ಸರ್ಕಾರ ನಮ್ಮ ರಾಜ್ಯವನ್ನು ಸಂಪೂರ್ಣವಾಗಿ ಮುಂದೆ ಏನು ಮಾಡುತ್ತದೆ ಎಂಬುದನ್ನು ಕಾದು ನೋಡಬೇಕಾದಂತಹ ದುಸ್ಥಿತಿಗೆ ಹೋಗಿದ್ದೇವೆ. ನಾವು ಖಂಡಿವಾಗಿ ಸಾಲದ ಸುಳಿಯಿಂದ ಈ ರಾಜ್ಯವನ್ನು ಮೇಲಕ್ಕೆ ಎತ್ತಬೇಕೆಂದರೆ, ಈಗ ಒಂದು ವರದಿ ಇದೆ. ಅಂದರೆ, ನಾವು ಇನ್ನು ಏಳೆಂಟು ವರ್ಷ revenue surplus ಆಗುವುದಕ್ಕೆ ಸಾಧ್ಯವೇ ಇಲ್ಲ. ಈಗ ಒಂದು scheme ಕೊಡಲಿಲ್ಲವೆಂದರೂ ಕೂಡ revenue surplus ಆಗುವುದಿಲ್ಲ. ಏಕೆಂದರೆ, ಬಡ್ಡಿ ಮತ್ತು ಸಾಲ ಕಟ್ಟುವಂತಹ

ಹೊಣೆಗಾರಿಕೆ ಸರ್ಕಾರದ ಮೇಲೆ ಬಂದು ನಿಂತಿದೆ. ಹಾಗಾಗಿ, ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು 17 ಬಜೆಟ್‌ಗಳನ್ನು ನೀಡಿದ್ದೇವೆಂದು ಎದೆಗಾರಿಕೆಯಿಂದ ಹೇಳಕೊಳ್ಳುತ್ತಿದ್ದಾರೆ. ಅವರು ತಮ್ಮ ಯೋಗದಿಂದ ಆ ಬಜೆಟ್ ಅನ್ನು ನೀಡಿದ್ದಾರೆ. ಅಂದರೆ, ಅವರಿಗೆ ಸಿಕ್ಕಿದಂತಹ ಯೋಗದಿಂದ ಕೊಟ್ಟಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಯೋಗ್ಯತೆಯಿಂದ ಕೊಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಅವರು ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಸಭಾಪತಿಯವರು:–** ಈಗ ಮುಖ್ಯವಾದಂತಹ ಗಮನ ಸೆಳೆಯುವ ಸೂಚನೆ ಇದೆ. ನಂತರ ಶ್ರೀ ಗೋವಿಂದರಾಜು ವಿಷಯ ತೆಗೆದುಕೊಳ್ಳುತ್ತೇನೆ.

**ಡಾ: ಜಿ.ಪರಮೇಶ್ವರ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ. ಶಿವಕುಮಾರ್‌ರವರು ಕೇಳರುವಂತಹ ಪ್ರಶ್ನೆ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ.

**ಸಭಾಪತಿಯವರು:–** ಇದು ತಮ್ಮ ಇಲಾಖೆಗೆ ಬರುತ್ತದೆ. ನಾನು ಅದನ್ನು check ಮಾಡಿದ್ದೇನೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬರುತ್ತದೆ.

**ಸಭಾಪತಿಯವರು:–** ಅವರು ತಪ್ಪಾಗಿ ಹಾಕಿದ್ದಾರೆ. ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬರುವುದಿಲ್ಲ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ನಾನು ಒಂದು ಸೆಕೆಂಡ್ ಹೇಳುತ್ತೇನೆ. ಮಾನ್ಯ ಸದಸ್ಯರು ಕೇಳರುವ ಪ್ರಶ್ನೆ ಏನೆಂದರೆ,...

**ಸಭಾಪತಿಯವರು:–** ನಾನು ಅದನ್ನು ನೋಡಿದ್ದೇನೆ. ಮತ್ತೆ ಅದನ್ನು verify ಮಾಡಿದ ನಂತರ ಅದು ಗೃಹ ಸಚಿವರಿಗೆ ಬರುತ್ತದೆ ಎಂದ ಮೇಲೆ ನಾನು ತಮ್ಮನ್ನು ಕರೆದಿರುವುದು.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಈಗ ವೈದ್ಯಕೀಯ ಚಿಕಿತ್ಸೆ ಪೊಲೀಸ್ ಇಲಾಖೆಯಲ್ಲಿ ಹೇಗೆ ಆಗುತ್ತದೆ?

**ಸಭಾಪತಿಯವರು:–** ಅದು ಚಿಕಿತ್ಸೆಗೆ ಸಂಬಂಧಪಟ್ಟಿರುವುದು ಅಲ್ಲ. ಅವರು ಅದನ್ನು ತಪ್ಪಾಗಿ ಹಾಕಿದ್ದಾರೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ವೈದ್ಯಕೀಯ ಚಿಕಿತ್ಸೆ ಸೌಲಭ್ಯ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ ಇವುಗಳಲ್ಲಿ ಒಂದು ಸಹ ಬರುವುದಿಲ್ಲ. ಮತ್ತೆ ನಮ್ಮ ಇಲಾಖೆಗೆ ಒಂದೂ ಸಹ ಸಂಬಂಧವಿಲ್ಲ. ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧ ಇರುವುದು. ಆದರೆ, ಇದು ನಮ್ಮ ಇಲಾಖೆಗೆ ವರ್ಗಾವಣೆಯಾಗಿದೆ.

**ಸಭಾಪತಿಯವರು:–** ಅದರಲ್ಲಿ ಪೋಲೀಸ್ ಕೇಸ್‌ಗಳಿವೆ ಅದಕ್ಕೆ ತಮ್ಮ ಇಲಾಖೆಗೆ ಬಂದಿದೆ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೋಲೀಸ್ ಕೇಸ್ ಬಗ್ಗೆ ಕೇಳಿಲ್ಲ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ಮಾತನಾಡುತ್ತಾರೆ. ಆಗ ನೀವು ಯಾರಾದರೂ ಉತ್ತರ ಹೇಳಿ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಲಿ. ಈಗ ಕೇಸ್‌ಗೆ ಸಂಬಂಧಪಟ್ಟಂತಹ ಯಾವುದೇ ಪ್ರಶ್ನೆ ಇಲ್ಲವೇ ಇಲ್ಲ.

**ಸಭಾಪತಿಯವರು:–** ಅವರು ಮಾತನಾಡಿದ ಮೇಲೆ ಸರ್ಕಾರದ ಯಾರಾದರೂ ಅಥವಾ ಸಭಾನಾಯಕರು ಉತ್ತರ ನೀಡಲಿ. ಈಗ ಮಾನ್ಯ ಸದಸ್ಯರು ಮಾತನಾಡಲಿ.

**ಡಾ: ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ನಾವು ಅವರ ಬಳಿ ತೆಗೆದುಕೊಟ್ಟಿದ್ದೇವೆ ಅಷ್ಟೆ.

**ಸಭಾಪತಿಯವರು:–** ಆಯಿತು, ಸರ್ಕಾರ ಉತ್ತರ ನೀಡಿ.

10. ಗಮನ ಸೆಳೆಯುವ ಸೂಚನೆಗಳು

**ಆ) ವಿಷಯ: ಆಸಿಡ್ ದಾಳಿಗೊಳಗಾದ ಸಂತ್ರಸ್ಥೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಕುರಿತು.**

---

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕೊನೆಗೂ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಕುರಿತು ಸರ್ಕಾರದ ಗಮನ ಸೆಳೆಯುತ್ತೇನೆ.

**ಸಭಾಪತಿಯವರು:–** ಇದು ಬಹಳ ಮಹತ್ವದ ವಿಷಯವಾಗಿರುವುದರಿಂದ ತಮಗೆ ಅವಕಾಶ ನೀಡಿದ್ದೇನೆ.

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೇ, ಇವತ್ತು ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರ ಬಗ್ಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ ಎಂದು ಬಹಳಷ್ಟು ಹಾಕಿ ನೀಡಿದ್ದೆ. ಆದರೆ, ಅದರಲ್ಲಿ ಪೊಲೀಸ್ ಕೇಸ್ ಸಹ ಇತ್ತು. ಈಗ ಟೈಪ್ ಮಾಡುವಂತಹವರು ಕಡಿಮೆ ಲೈನ್ಸ್ ಇರಲಿ ಎಂದು ಅದನ್ನು ತೆಗೆದಿದ್ದಾರೆಂದು ಭಾವಿಸುತ್ತೇನೆ. ಈಗ ಗೃಹ ಇಲಾಖೆಗೆ ಇರಬಹುದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇರಬಹುದು ಮತ್ತು ವಸತಿ ಇಲಾಖೆ ಇರಬಹುದು.

**ಸಭಾಪತಿಯವರು:–** ಈಗ ತಾವು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿ. ಅದಕ್ಕೆ ಸರ್ಕಾರ ಉತ್ತರ ಹೇಳುತ್ತದೆ.

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೇ, ಹಾಗಾಗಿ, ಇಲ್ಲಿ ಇಡೀ ಸರ್ಕಾರದ ಜವಾಬ್ದಾರಿ ಇದೆ. ಇದಕ್ಕೆ ಒಬ್ಬ ಸಚಿವರು ಎಂದು ಹೇಳುವುದಕ್ಕಿಂತ ಇಡೀ ಸರ್ಕಾರದ ಜವಾಬ್ದಾರಿ ಇದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಯಾವುದೇ ಕಾರಣಕ್ಕೂ ಹೆಣ್ಣು ಮಕ್ಕಳು ಮಾಡದೇ ಇರುವಂತಹ ತಪ್ಪಿಗೆ, ಬೇರೆ ಬೇರೆ ಕಾರಣಕ್ಕೆ ಪ್ರೀತಿಯಿಂದಲೋ, ದ್ವೇಷದಿಂದಲೋ ಅಥವಾ ಪ್ರೇಮ ಪ್ರಕರಣಗಳು ಇರಬಹುದು. ಇವತ್ತು ಸುಲಭವಾಗಿ ಹೆಣ್ಣು ಮಕ್ಕಳ ಮೇಲೆ ದಾಳಿಯಾಗುತ್ತಿದೆ.

**ಸಭಾಪತಿಯವರು:–** ತಾವು ಆಸಿಡ್ ದಾಳಿ ಎಂದು ಹೇಳಿ.

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು 160 ಆಸಿಡ್ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ ಸುಮಾರು 165 ಪ್ರಕರಣಗಳಲ್ಲಿ ಬಹಳಷ್ಟು ಜನ medical emergency

ಗೆ ಹೋಗಿ, ವಾಸಿ ಮಾಡಿಸಿಕೊಂಡು ಅವರು ಬದುಕುವಂತಹ ಪ್ರಾಣವನ್ನು ವೈದ್ಯಕೀಯ ಇಲಾಖೆಯಿಂದ ನೀಡಿದ್ದಾರೆ. ವೈದ್ಯರು ಬಹಳ ಶ್ರಮಪಟ್ಟು ಅವರುಗಳನ್ನು ಉಳಿಸಿದ್ದಾರೆ. ಆದರೆ, ಇವತ್ತು ಅವರ ಪರಿಸ್ಥಿತಿ ಏನಾಗಿದೆ ಎಂದರೆ, ವೈದ್ಯರು ನಮ್ಮನ್ನು ಏಕೆ ಉಳಿಸಿದರು? ಮತ್ತೆ ಈಗ ನಾವು ಮುಂದಕ್ಕೆ ಬದುಕುವುದಕ್ಕೆ ಆಗುತ್ತಿಲ್ಲವಲ್ಲ ಹಾಗೂ ತಮಗೆ ಸಾವು ಬಂದಿದ್ದರೆ ಸಾಕಾಗಿತ್ತು ಎನ್ನುವಂತಹ ಪರಿಸ್ಥಿತಿಗೆ ಬಂದು ತಲುಪಿದ್ದಾರೆ. ಮಾನ್ಯ ಸದಸ್ಯರಾದ ಡಾ: ಉಮಾಶ್ರೀ ಮೇಡಂ ರವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅವರಲ್ಲಿ ಕೆಲವರಿಗೆ ಪರಿಹಾರ ಕೊಡಬೇಕು, ಮತ್ತೆ ಅವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಬೇಕೆಂದು ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಬಂದು ಒಂದಷ್ಟು ಜನರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿದ್ದರು. ಮಾನ್ಯ ಸುಪ್ರೀಂ ಕೋರ್ಟ್‌ನ ರೂಲಿಂಗ್ ಪ್ರಕಾರ 10,00,000/- ರೂಪಾಯಿಗಳ ಪರಿಹಾರ ಕೊಡಬೇಕೆಂದು ಇದ್ದರೂ ಸಹ ಸರ್ಕಾರ ಸುಮಾರು 165 ಪ್ರಕರಣಗಳಲ್ಲಿ 40 ರಿಂದ 45 ಜನರಿಗೆ ಮಾತ್ರ 2,00,000/- ರೂಪಾಯಿಗಳ ಪರಿಹಾರ ಕೊಟ್ಟಿದೆ. ಅದೇ ರೀತಿ 3,000/- ರೂಪಾಯಿಗಳ ಪರಿಹಾರ ಇತ್ತು. ಹಿಂದಿನ ಸರ್ಕಾರದ ಮೇಲೆ ಒತ್ತಡಗಳನ್ನು ತಂದಿದ್ದಕ್ಕೆ 10,000/- ರೂಪಾಯಿಗಳ ಪರಿಹಾರ ಮಾಡಿದ್ದು, ಇದರಿಂದ 30 ರಿಂದ 35 ಜನ ಸಂತ್ರಸ್ತರಿಗೆ ಪರಿಹಾರ ಸಿಗುತ್ತಿದೆ. ಆದರೆ, 165 ಪ್ರಕರಣಗಳಲ್ಲಿ ಕೇವಲ 30 ರಿಂದ 35 ಜನರಿಗೆ ಮಾತ್ರ ಸಿಗುತ್ತಿದೆ. ಈಗ ಆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪರಿಹಾರವನ್ನು claim ಮಾಡುವುದಕ್ಕೆ ಹೋದರೆ, ತಮ್ಮ ಬಳಿ ಯು.ಡಿ.ಐ.ಡಿ. (Unique Disability Identity) ಕಾರ್ಡ್ ಇದೆಯಾ? ಎಫ್.ಐ.ಆರ್. ಆಗಿರುವಂತಹ ರೆಕಾರ್ಡ್ ತೆಗೆದುಕೊಂಡು ಬನ್ನಿ, ಅದೇ ರೀತಿ ಬೇರೆ ಬೇರೆ ರೀತಿಯ ರೆಕಾರ್ಡ್‌ಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಅವರಿಗೆ ಆಸಿಡ್ ದಾಳಿಯಾಗಿ ಅವರು ಸಾಯಬೇಕಾದರೆ, ಅವರುಗಳು ಬದುಕುವುದೇ ಬಹಳ ಕಷ್ಟ. ಆಗ ಅವರಿಗೆ ಕಣ್ಣು ಕಾಣಿಸುವುದಿಲ್ಲ, ಅವರ ಚರ್ಮ ಸುಟ್ಟು ಹೋಗಿರುತ್ತದೆ. ಪಾಪ ಅವರುಗಳು ಆಸ್ಪತ್ರೆಗೆ ಸೇರಿಕೊಂಡು ತಿಂಗಳಾನುಗಟ್ಟಲೆ ಅಲ್ಲಿ ಇದ್ದು, ಅದು ವಾಸಿಯಾಗುವುದೇ ಕಷ್ಟ. ಅದರಲ್ಲಿ ಇವರು ಯು.ಡಿ.ಐ.ಡಿ. ಕಾರ್ಡ್ ತೆಗೆದುಕೊಂಡು ಬನ್ನಿ, ಎಫ್.ಐ.ಆರ್. ತೆಗೆದುಕೊಂಡು ಬನ್ನಿ ಮತ್ತೆ ತಮ್ಮ ಎಲ್ಲಾ ದಾಖಲೆಗಳ ವರದಿಗಳನ್ನು ತೆಗೆದುಕೊಂಡು ಬನ್ನಿ ಎಂದರೆ, ಅವರು ಎಲ್ಲಿಂದ ತೆಗೆದುಕೊಂಡು ಬಂದು ಕೊಡುತ್ತಾರೆ. ಈ ರೀತಿಯಲ್ಲಿ ರೆಕಾರ್ಡ್ಸ್ ಇಲ್ಲದೇ ಇರುವುದರಿಂದ ಮತ್ತೆ ಈ ರೀತಿಯ conditions ಹಾಕಿರುವುದರಿಂದ ಸುಮಾರು ನೂರು ಜನರಿಗಿಂತ ಹೆಚ್ಚಿಗೆ ಇದರ ಪರಿಹಾರ ಸಿಕ್ಕಿಲ್ಲ. ಈಗ ಸದನದಲ್ಲಿ ಮಾನ್ಯ ಗೃಹ ಸಚಿವರು ಇರುವುದರಿಂದ ಇದನ್ನು ಹೇಳುತ್ತಿದ್ದೇನೆ. The conviction rate in these cases is less than 3%. ಬಹಳಷ್ಟು ಸಂತ್ರಸ್ತರು ಇಲ್ಲಿಗೆ ಬಂದಿದ್ದಾರೆ. ಈಗ ಅವರುಗಳು ಹೊರಗಡೆ ಇದ್ದಾರೆ. ಅವರಿಗೆ ಆಸಿಡ್ ಹಾಕಿ 10 ವರ್ಷವಾಗಿದೆ, ಅವರು ಸರ್ಜರಿ ಮಾಡಿಸಿಕೊಂಡು, ಎಲ್ಲಾ ರೀತಿ ಆಗಿದ್ದರೂ ಸಹ ಈಗ ಯಾರು ಆಸಿಡ್ ಹಾಕಿದ್ದಾರೆ ಅವರಿಗೆ punishment ಆಗಿಲ್ಲ. ಆಮೇಲೆ ಯಾವ ರೀತಿಯಲ್ಲಿ acid availability ಯನ್ನು ಮಾನಿಟರ್ ಮಾಡಬೇಕಾಗಿತ್ತು ಅದರ ಬಗ್ಗೆ serious ಆದಂತಹ ಕ್ರಮವನ್ನು ತೆಗೆದುಕೊಂಡಿಲ್ಲ. ಹಾಗಾಗಿ, acid ಬಹಳ

ಸುಲಭವಾಗಿ ಸಿಗುತ್ತಿದೆ. ಈ ರೀತಿಯ ಪ್ರಕರಣಗಳು ಹೆಚ್ಚಿಗೆ ಆಗುತ್ತಿವೆ. ಇದನ್ನು ತಪ್ಪಿಸುವಂತಹ ಕೆಲಸವನ್ನು ಇಲಾಖೆಯವರು ಮಾಡಬೇಕೆಂದು ನನ್ನ ನಿವೇದನೆ. ಮತ್ತೊಂದು ಏನೆಂದರೆ, ಅವರುಗಳು housing facility ಯನ್ನು ಕೇಳಿದ್ದಾರೆ. ಈ housing facility ಗೆ ಅವಕಾಶ ಮಾಡಿಕೊಡಿ ಎಂದು 2010ರಲ್ಲಿ ಅಂದಿನ ಮುಖ್ಯಮಂತ್ರಿಗಳು ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ವಸತಿ ಸೌಲಭ್ಯ ಒದಗಿಸಬೇಕು ಎಂದು ಒಂದು ಆದೇಶ ಮಾಡಿದ್ದಾರೆ. ಅವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಸಭೆ ಮಾಡಿದ್ದಾರೆ. ಮತ್ತೆ ಅವರಿಗೆ 2,00,000/- ರೂಪಾಯಿಗಳನ್ನು ಕೊಡಬೇಕೆಂದು ಇದೆ. ನಾನು ಈ ಸದನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಇವರು ಮತ್ತೆ 2015ರಲ್ಲಿ housing facility ಅನ್ನು ಕೊಡಿ ಎಂದು ಬಂದಿದ್ದಾರೆ. ಆಗ 2015ರಲ್ಲಿ ಇದೇ ಆದೇಶ ಮಾಡಿಕೊಟ್ಟಿದ್ದಾರೆ. ಅದೇ ರೀತಿ 2022ರಲ್ಲಿ ಬಂದಿದ್ದಾರೆ. 2022ರಲ್ಲಿ ಅದರ ದಿನಾಂಕವನ್ನು ಬದಲಾವಣೆ ಮಾಡಿ, ಇದೇ ಆದೇಶವನ್ನು ನೀಡಿದ್ದಾರೆ. ಇವತ್ತು ನನಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಒಂದು ಆದೇಶವನ್ನು ಮಾಡುತ್ತಿರುವ ಬಗ್ಗೆ WhatsApp ನಲ್ಲಿ ಕಳುಹಿಸಿದ್ದಾರೆ. ಇವತ್ತು ಅದರ ದಿನಾಂಕವನ್ನು ಬದಲಾಯಿಸಿ ಅದೇ ಆದೇಶವನ್ನು ನೀಡಿದ್ದಾರೆ. ನಾನು ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ ಕೇಳಿದಾಗ, ಇದಕ್ಕೆ ಸುಮಾರು 15 ದಿನಗಳ ಸಮಯವನ್ನು ತೆಗೆದುಕೊಂಡಿದ್ದರು. ಅವರು 15 ದಿನಗಳ ಸಮಯ ತೆಗೆದುಕೊಂಡು ಏನು ಮಾಡಿದ್ದಾರೆಂದರೆ, ಫೆಬ್ರವರಿ 28, 2026ರ ದಿನಕ್ಕೆ ಒಂದು ಆದೇಶವನ್ನು ಕಳುಹಿಸಿದ್ದಾರೆ. ಈಗ Slum Development Board ವತಿಯಿಂದ ಸಾವಿರಾರು ಮನೆಗಳನ್ನು ಕಟ್ಟುತ್ತಿದ್ದಾರೆ. ಈಗ ಬಡವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಆವಾಸ್ ಯೋಜನೆ ಅಡಿಯಲ್ಲಿ ಮನೆಗಳನ್ನು ಕೊಡುತ್ತಿದ್ದಾರೆ. ಮತ್ತೆ ಬಸವ ವಸತಿ ಯೋಜನೆ ಅಡಿಯಲ್ಲಿ ಮನೆಗಳನ್ನು ಕೊಡುತ್ತಿದ್ದಾರೆ. ಆದರೆ, ಇವರುಗಳಿಗೆ ಇದುವರೆವಿಗೂ ಏಕೆ ಮನೆಗಳನ್ನು ಕೊಡುವುದಕ್ಕೆ ಆಗಿಲ್ಲ? ಆಮೇಲೆ ಇವರಿಗೆ ಬಹಳಷ್ಟು ಕಡೆಗಳಲ್ಲಿ ಬಾಡಿಗೆ ಮನಗಳು ಸಿಗುವುದಿಲ್ಲ. ಅವರಿಗೆ ಬಾಡಿಗೆ ಮನೆಗಳು ಸಿಗದೇ ಇದ್ದರೆ, ಅವರುಗಳು ವಾಸ ಮಾಡುವುದು ಹೇಗೆ? ಇವತ್ತು ಬಹಳಷ್ಟು ಪ್ರಕರಣಗಳು ಇವೆ. ಇವತ್ತು ನನಗೆ ಆನೇಕಲ್‌ನಿಂದ ಶ್ರೀಮತಿ ಅಕ್ಕಯಮ್ಮ ಎಂಬ ಹೆಣ್ಣು ಮಗಳು phone ಮಾಡಿದ್ದರು. ಅವರು ಏನು ಹೇಳುತ್ತಿದ್ದರು ಎಂದರೆ, ನಾವು ಮನೆ ಖಾಲಿ ಮಾಡುತ್ತಿದ್ದೇವೆ. ಆದರೆ, ಅವರು ನಮಗೆ ಅಡ್ವಾನ್ಸ್ ಕೊಡುತ್ತಿಲ್ಲವೆಂದು. ಮತ್ತೊಬ್ಬರು ಶ್ರೀಮತಿ ಮಂಜುಳ ಎಂಬುವವರು ನಮಗೆ ಮನೆಯೇ ಸಿಗುತ್ತಿಲ್ಲ ಆದರೆ ಮನೆ ಖಾಲಿ ಮಾಡಿಸುತ್ತಿದ್ದಾರೆಂದು ಎಂದು ಫೋನ್ ಮಾಡುತ್ತಾರೆ. ಈಗ ಏನಾಗಿದೆ ಎಂದರೆ, ನಮಗೆ ಏನಾದರೂ black patch ಬಂದರೆ immediate ಆಗಿ Dermatologist ಬಳಿಗೆ ಹೋಗಿ, skin specialist ಬಳಿಗೆ ಹೋಗಿ ನಾವು ಇದು ಏನೋ ಕಪ್ಪಾಗುತ್ತಿದೆ ನೋಡಿ ಎಂದು ನಮ್ಮ ಮುಖ ಚೆನ್ನಾಗಿ ಕಾಣಿಸಬೇಕೆಂದು ನಾವುಗಳು ಸರಿಪಡಿಸಿಕೊಳ್ಳುತ್ತೇವೆ. ಆದರೆ, ಅವರ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, ಅವರ ಮೂಗು ಒಂದು ಕಡೆ ಇದೆ. ಅವರ ಕಣ್ಣು ಎಲ್ಲಿಗೋ ಬಂದಿದೆ. ಅವರ ತಲೆಯಲ್ಲಿ ಕೂದಲು ಇಲ್ಲ. ಅವರಲ್ಲಿ ಎಲ್ಲರಿಗೂ ಸಹ ಕಣ್ಣಿನ ಸಮಸ್ಯೆ ಇದೆ. ಅವರು ಪ್ರತಿದಿನ eye drops ಹಾಕಿಕೊಳ್ಳಬೇಕು. ಅವರು ತಿಂಗಳಿಗೊಮ್ಮೆ Ophthalmologist ಬಳಿಗೆ

ಹೋಗಬೇಕು. ಈ ರೀತಿ ಎಲ್ಲಾ ಆದರೂ ಸಹ ಅವರುಗಳು ಅಂಗನವಾಡಿಗಳಿಗೆ ಹೋದರೆ, ಅವರ ಮುಖ ನೋಡಿದರೆ ಮಕ್ಕಳು ಬರುವುದಿಲ್ಲವೆಂದು ಹೇಳುತ್ತಾರೆ. ಅವರಿಗೆ backend ನಲ್ಲಿ ಕೆಲಸ ಕೊಡಿ ಎಂದರೆ, backend ನಲ್ಲಿ ಕೆಲಸ ಕೊಡುತ್ತಿಲ್ಲ. ಇವತ್ತಿನ ದಿವಸ ಅವರಿಗೆ ಮನೆ ಕೊಡದೇ ಇದ್ದರೆ, ಅವರ ಪರಿಸ್ಥಿತಿ ಏನಾಗಬೇಕು? ಅದಕ್ಕೆ ಇವತ್ತು ನಾನು ಸರ್ಕಾರಕ್ಕೆ ಏನು ಹೇಳುವುದು ಏನೆಂದರೆ, ದಯಮಾಡಿ ಮತ್ತೊಂದು ಆದೇಶವನ್ನು ಇಶ್ಯೂ ಮಾಡುವುದಕ್ಕೆ ಹೋಗುವುದು ಬೇಡ. ಆರ್ಡರ್ ಇಶ್ಯೂ ಮಾಡುವುದಾದರೆ ಅವರಿಗೆ allotment letter ಅನ್ನು ಕೊಡಬೇಕು. ಅವರ allotment letter ನಲ್ಲಿ ಅವರಿಗೆ Karnataka Slum Development Board ನ apartment ನಲ್ಲಿ ಕೊಡುತ್ತಾರೋ ಅಥವಾ independent house ಕೊಡುತ್ತಾರೋ ಗೊತ್ತಿಲ್ಲ. ದಯಮಾಡಿ ಅವರಿಗೆ ಕೊಡಬೇಕು. ಆ ನಂತರ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಬಂದಿದ್ದಾರೆ. ಅಂದರೆ, ಅವರಿಗೆ 5,00,000/- ರೂಪಾಯಿಗಳವರೆಗೆ financial benefit ಕೊಟ್ಟು ಅವರನ್ನು entrepreneurs ಮಾಡಬೇಕೆಂದು ಹೇಳಿದ್ದಾರೆ. ಈಗ 5,00,000/- ದವರೆಗೆ ಮಾಡಬೇಕೆಂದು ಅವರಿಗೆ ಕೊಟ್ಟಿರುವುದು ಕೇವಲ 4 ಜನರಿಗೆ ಮಾತ್ರ. ಇವತ್ತು ಸೇರಿಸಿಕೊಂಡರೆ 9 ಜನರಿಗೆ ಕೊಟ್ಟಿದ್ದಾರೆ. ನಾನು ಹೇಳುತ್ತಿರುವುದು ಅವರು ಸುಮಾರು 165 ಜನರು ಇದ್ದಾರೆ. ಈಗ 5,00,000/- ರೂಪಾಯಿಗಳಲ್ಲಿ ಸರ್ಕಾರ ಸಬ್ಸಿಡಿಯನ್ನು ಕೊಡುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಶೇಕಡಾ 50ರಷ್ಟು ಸಬ್ಸಿಡಿ ಕೊಡುತ್ತೇವೆಂದು announce ಮಾಡಿದ್ದಾರೆ. ಆದರೆ, ಅವರಿಗೆ ಕೊಡುತ್ತಿಲ್ಲ.

(ಮುಂದು)

(288) 10.03.2026 05.40 LL-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ. ಶಿವಕುಮಾರ್ (ಮುಂದು):-**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಈ ಸಂತ್ರಸ್ಥೆಯರಿಗೆ ಎರಡು ಕೋಟಿ ರೂಪಾಯಿ ಹಣ ಮೀಸಲಿಡಲಾಗಿದೆ. ಆ ಎರಡು ಕೋಟಿ ರೂಪಾಯಿಗಳ ಹಣದಲ್ಲಿ ಅವರು ಏನು ಮಾಡಿದ್ದಾರೆ? ಆ ಹಣದಲ್ಲಿ ಆಸಿಡ್ ದಾಳಿಗೊಳಗಾದ ಸಂತ್ರಸ್ಥರಿಗೆ ಏತಕ್ಕೆ ಪರಿಹಾರ ಕೊಡಬಾರದು? ಅಥವಾ ಇವರಿಗೆ ಕಾರ್ಯಕ್ರಮಗಳನ್ನು ಏತಕ್ಕೆ ಮಾಡುತ್ತಿಲ್ಲ. ಹಾಗಾಗಿ, ಇವೊತ್ತಿನ ದಿವಸ ಅವರಿಗೆ ಕೆಲಸ ಕೂಡ ಸಿಗದೇ ಅವರ ಜೀವನ ನಿರ್ವಹಣೆಗೆ ಕೂಡ ತೊಂದರೆಯಾಗಿರುತ್ತದೆ. ಆದುದರಿಂದ, ಎಲ್ಲಿಯಾದರೂ ಒಂದು ಕಡೆ backend ನಲ್ಲಿ ಇವರಿಗೆ ಕೆಲಸ ಕೊಡುವಂಥದ್ದನ್ನು ಮಾಡಬೇಕಾಗಿರುತ್ತದೆ. ಅಲ್ಲದೇ, ಇವರಿಗೆ ಮೀಸಲಾತಿಯನ್ನು ಕೊಡಬೇಕೆಂದು ಹೇಳುವುದಕ್ಕಾಗುವುದಿಲ್ಲ. There are about 165 acid attack survivors, ಅಷ್ಟೇ. ಹಾಗಾಗಿ, ಇವರಿಗೆ ಆದ್ಯತೆ ಮೇರೆಗೆ, ಮಾನವೀಯತೆ ಆಧಾರದ ಮೇರೆಗೆ (humanitarian grounds) ಎಲ್ಲಿಯಾದರೂ ಕೆಲಸ ಕೊಟ್ಟರೆ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರವೇನೆಂದರೆ, ಆಸಿಡ್ ದಾಳಿ ಪ್ರಕರಣಗಳಲ್ಲಿ ಪೊಲೀಸ್ ಠಾಣೆಗೆ ಸಂತ್ರಸ್ಥೆಯರು ಹೋದಾಗ, ಪೊಲೀಸರು ಅವರಿಗೆ ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ಪೊಲೀಸರು ಯಾವ ರೀತಿ ಪ್ರತಿಕ್ರಿಯೆ ನೀಡುತ್ತಿಲ್ಲವೆಂದು ಹೇಳುವುದಾದರೆ, ಒಬ್ಬ ಸಂತ್ರಸ್ಥೆ 2014ರಲ್ಲಿ ನನಗೆ ಆಸಿಡ್ ದಾಳಿಯಾಗಿರುತ್ತದೆ. ನಾನು ಪಿಂಚಣಿ ಪಡೆಯುವುದಕ್ಕೆ ಈ ಎಲ್ಲಾ ಮಾಹಿತಿಗಳನ್ನು ಕೊಡಬೇಕು. ಇಲ್ಲವಾದರೆ, ನನಗೆ ಮಾಸಿಕ ರೂ.10,000 ಪಿಂಚಣಿ ಸಿಗುವುದಿಲ್ಲವೆಂದು ಹೇಳಿದರೆ, ಪೊಲೀಸರು ಅದಕ್ಕೆ, "ಇಲ್ಲ, 10 ವರ್ಷಗಳ ಹಳೆಯ ಕಡತಗಳನ್ನು ನಾವು ನಾಶ ಮಾಡುತ್ತೇವೆ. ಹಾಗಾಗಿ, ನಿಮಗೆ ಹಳೆಯ ದಾಖಲೆಗಳು ಸಿಗುವುದಿಲ್ಲ" ಎಂದು ಹೇಳುತ್ತಾರೆ. ಆಗ ಈ ಸಂತ್ರಸ್ಥೆಯರು ಎಲ್ಲಿಗೆ ಹೋಗಬೇಕು? ಹಾಗಾಗಿ, ಮಾನ್ಯ ಗೃಹ ಮಂತ್ರಿಗಳು ಏನಾದರೂ ಒಂದು ತೀರ್ಮಾನಕ್ಕೆ ಬಂದು, ಈ ಆಸಿಡ್ ಸಂತ್ರಸ್ಥೆಯರಿಗೆ U.D.I.D. (Unique Disability Identity) Card, F.I.R. (First Information Report) ದಾಖಲೆಗಳನ್ನು ನೀಡುವುದರಿಂದ ವಿನಾಯಿತಿ ನೀಡಿ, ಇವರಿಗೆ ಮಾಸಿಕ ರೂ.10,000 ಗಳ ಪಿಂಚಣಿ ಪಡೆಯುವಂತೆ ಮಾಡಬೇಕು. ಅಲ್ಲದೇ, ಈಗ ಬಜೆಟ್ ಸಮಯ ಆಗಿದ್ದು, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಿ ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿರುತ್ತಾರೆ. ಅದೇ ರೀತಿ, ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಮಾಸಿಕ ರೂ.10,000 ಗಳ ಪಿಂಚಣಿ ಇರುವುದನ್ನು ರೂ.15,000 ಗಳಿಗೆ ಏರಿಸಿದರೆ ಇವರಿಗೆ ಅನುಕೂಲವಾಗುತ್ತದೆ. ಈ ದಿನ ಶ್ರೀಮತಿ ಧನಲಕ್ಷ್ಮಿ ಎನ್ನುವವರು ನನ್ನನ್ನು ಭೇಟಿ ಮಾಡುವುದಕ್ಕಾಗಿ ವಿಧಾನಸೌಧಕ್ಕೆ ಬಂದಿದ್ದು, ಈಗ ಅವರು ಸದನದ ಹೊರಗಡೆ ಇದ್ದಾರೆ. ಅವರು ಕೂಡ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯಾಗಿದ್ದು, ಅವರು ತಮ್ಮ ಮೂಗನ್ನು ಸರಿಪಡಿಸಿಕೊಳ್ಳುವ ಚಿಕಿತ್ಸೆಗಾಗಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ಹಣ ಖರ್ಚು ಮಾಡಿರುತ್ತಾರೆ. ಅದೇ ರೀತಿ, ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಲ್ಲಿ ಒಬ್ಬರಿಗೆ 19 ಸರ್ಜರಿ, ಇನ್ನೊಬ್ಬರಿಗೆ 17 ಸರ್ಜರಿ ಮತ್ತೊಬ್ಬರಿಗೆ 14 ಸರ್ಜರಿಗಳು ಆಗಿರುತ್ತವೆ. ಅವರುಗಳು ತಮ್ಮ ಮುಖವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ತಮ್ಮ ಕಾಲಿನಲ್ಲಿರುವ ಚರ್ಮವನ್ನು grafting ಮಾಡಿ ಮುಖಕ್ಕೆ ಹಾಕುತ್ತಾರೆ. ಇದರಿಂದಾಗಿ, ಅವರಿಗೆ ಬಹಳ ಸಮಸ್ಯೆಯಾಗಿರುತ್ತದೆ. ಅವರುಗಳು ಬಿಸಿಲಿನ ಸಮಯದಲ್ಲಿ ಹೊರಗಡೆ ಬರುವುದಕ್ಕೆ ಆಗುವುದಿಲ್ಲ. ಅಲ್ಲದೇ, ಇವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ಲಾಸ್ಟಿಕ್ ಸರ್ಜರಿ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ಆದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ಲಾಸ್ಟಿಕ್ ಸರ್ಜರಿಗಳನ್ನು ಮಾಡಿಸಿಕೊಂಡರೆ, ಒಂದು ವರ್ಷ ಅಥವಾ ಎರಡು ವರ್ಷ ಕೂಡ ಬಾಳಿಕೆ ಬರುತ್ತಿಲ್ಲ. ಹಾಗಾಗಿ, ಅವರು ಸೇಂಟ್ ಜಾನ್ಸ್ ಆಸ್ಪತ್ರೆ ಇರಬಹುದು ಅಥವಾ ಇತರೆ ಖಾಸಗಿ ಮೆಡಿಕಲ್ ಕಾಲೇಜುಗಳು ಅಥವಾ ಆಸ್ಪತ್ರೆಗಳಿಗೆ ಹೋಗಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಬೇಕಾಗಿರುತ್ತದೆ. ಅದಕ್ಕಾಗಿ ಅವರಿಗೆ ಸುಮಾರು ರೂ.8,00,000 ದಿಂದ ರೂ.9,00,000 ಹಣ ಖರ್ಚಾಗುತ್ತದೆ. ಇದರಲ್ಲಿ ಸಾವಿರಾರು ಪ್ರಕರಣಗಳೇನು ಇರುವುದಿಲ್ಲ. ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಲ್ಲಿ ಶೇಕಡ 60ಕ್ಕಿಂತಲೂ ಹೆಚ್ಚು ಏನು ಸುಟ್ಟ ಗಾಯಗಳಾಗಿರುತ್ತದೆ, ಅವರು ಒಟ್ಟಾರೆ ಸಂತ್ರಸ್ತೆಯರಲ್ಲಿ ಶೇಕಡ 50 ರಿಂದ 60 ರಷ್ಟು ಇರಬಹುದು. ಹಾಗಾಗಿ, ಅವರಿಗೆ ಸರ್ಕಾರ ಒಂದು ಪ್ಯಾಕೇಜ್

ಎಂದು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈ ರೀತಿಯಾದಂತಹ ಆಸಿಡ್ ದಾಳಿ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಪ್ರಮಾಣ ಜಾಸ್ತಿಯಾಗಬೇಕು. ಏಕೆಂದರೆ, ಇತ್ತೀಚೆಗೆ ಚಾಮರಾಜಪೇಟೆಯಲ್ಲಿ ಒಬ್ಬ ಹೆಣ್ಣುಮಗಳು ಬೆಳಗಿನ ಜಾವ ತಮ್ಮ ಮನೆಯ ಮುಂದೆ ರಂಗೋಲಿ ಹಾಕುತ್ತಿರುವಾಗ, ಯಾವನೋ ಒಬ್ಬ ಬಂದು ಆಕೆಗೆ ಆಸಿಡ್ ಎಸೆದು ಹೋಗಿರುತ್ತಾನೆ. ಇದು ಆಕೆ ಮಾಡಿದಂತಹ ತಪ್ಪಲ್ಲ. ಆದರೆ ಇದರಿಂದಾಗಿ, ಆಕೆ ಹೊರಗಡೆ ಓಡಾಡುವುದಕ್ಕೆ ಆಗುತ್ತಿಲ್ಲ. ಅದು ಯಾವ ಮಟ್ಟಕ್ಕೆ ಇದೆಯೆಂದರೆ, ಸ್ವಂತ ತಾಯಂದಿರು ತಮ್ಮ ಮಕ್ಕಳಿಗೆ ಮುಖ ತೋರಿಸದೇ ಇರುವಂತಹ ಪರಿಸ್ಥಿತಿ ಇದೆ. ಡಾ॥ ವಾಸುರವರ ಶ್ರೀಮತಿಯವರಾದ ಮಲ್ಲಿಗೆ ಅವರು ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರ ಮಕ್ಕಳನ್ನು ಬೇರೆಯವರಿಗೆ ದತ್ತು ಕೊಡಿಸುವಂತಹ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ, ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರ ಪರವಾಗಿ ನ್ಯಾಯಾಲಯಗಳಿಗೆ ಯಾವ ವಕೀಲರು ಹಾಜರಾಗುತ್ತಿದ್ದಾರೆ, ಅವರು ಕೂಡ ಈ ಸಂತ್ರಸ್ತೆಯರ ಕಷ್ಟವನ್ನು ನೋಡಿ, ನ್ಯಾಯಾಲಯಗಳಿಗೆ ಉಚಿತವಾಗಿ ಹಾಜರಾಗುತ್ತಿದ್ದಾರೆ ಮತ್ತು ಅವರ ಮಕ್ಕಳಿಗೆ ವಕೀಲರೇ ಶಿಕ್ಷಣ ಕೊಡಿಸುವಂತಹ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಈ ಸಂತ್ರಸ್ತೆಯರ ಮಕ್ಕಳಿಗೆ ಸರ್ಕಾರದಿಂದ ಉಚಿತ ಶಿಕ್ಷಣ ಕೊಡಿಸುವಂತಹ ವ್ಯವಸ್ಥೆ ಆಗಬೇಕು. ಇಂತಹ ವ್ಯವಸ್ಥೆಗಳು ಆಗದೇ ಇದ್ದರೆ, ಈ ರೀತಿ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರು ಇನ್ನು ಎಷ್ಟು ವರ್ಷಗಳ ಕಾಲ ಹೋರಾಟ ಮಾಡಿದರೆ ಏನು ಪ್ರಯೋಜನ? ಈಗಾಗಲೇ ಇವರಿಗೆ 35 ರಿಂದ 45 ವರ್ಷ ವಯಸ್ಸು ದಾಟಿರುತ್ತದೆ. ಈ ವಿಚಾರದಲ್ಲಿ ನ್ಯಾಷನಲ್ ಲೀಗಲ್ ಅಥಾರಿಟಿಯವರು ಈ ಸಂತ್ರಸ್ಥೆಯರಿಗೆ ಪರಿಹಾರ ಕೊಡಬೇಕಾಗಿತ್ತು. ಆ ಪರಿಹಾರವನ್ನು ದೊರಕಿಸಿಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹಾಗಾಗಿ, ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಕೇಂದ್ರ ಸರ್ಕಾರದಲ್ಲಿ ಒಂದು ಯೋಜನೆ ಇದೆ. ಅಲ್ಲದೇ, ಈ ವಿಷಯದ ಬಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ಆದೇಶ ಏನಿದೆ, ಅದನ್ನು ಅನುಷ್ಠಾನ ಮಾಡಬೇಕು. ಇವೊತ್ತಿನ ದಿವಸ ಸರ್ಕಾರದ ಶಕ್ತಿ ಯೋಜನೆಯಲ್ಲಿ ಎಲ್ಲಾ ಮಹಿಳೆಯರಿಗೂ ಸಾರಿಗೆ ಬಸ್‌ನಲ್ಲಿ ಉಚಿತ ಸಂಚಾರ ವ್ಯವಸ್ಥೆ ಸಿಗುತ್ತಿದೆ. ಅದೇ ರೀತಿ, ಆ ಯೋಜನೆಯನ್ನು ರೈಲ್ವೇ ಇಲಾಖೆಯಲ್ಲಿಯೂ ತರುವುದು ಅವಶ್ಯವಾಗಿರುತ್ತದೆ. ಬೇರೆ ರಾಜ್ಯಗಳಲ್ಲಿ ಯಾವ ರೀತಿ avail ಮಾಡುತ್ತಿದ್ದಾರೆ, ಆ ರೀತಿಯ ಒಂದು ಯೋಜನೆಗಳನ್ನು ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಜಾರಿಗೆ ತರುವುದು ಅವಶ್ಯಕವಾಗಿರುತ್ತದೆ. ಅಲ್ಲದೇ, ಆಸಿಡ್ ದಾಳಿ ಮಾಡಿದಂತಹ ಅಪರಾಧಿಗೆ, ಮುಂದಿನ 3 ಅಥವಾ 4 ವರ್ಷಗಳಲ್ಲಿ ಶಿಕ್ಷೆ ವಿಧಿಸಲೇಬೇಕು. ಏಕೆಂದರೆ, ಈ ರೀತಿ ಆಸಿಡ್ ದಾಳಿ ಮಾಡಿದಂತಹ ಬಹಳಷ್ಟು ಅಪರಾಧಿಗಳಿಗೆ ಶಿಕ್ಷೆ ಆಗದೇ ಇರುವುದರಿಂದ, ಈ ರೀತಿಯ ಕೃತ್ಯಗಳನ್ನು ಮಾಡುವಂತಹ ಅಪರಾಧಿಗಳಿಗೆ ಭಯ ಇರುವುದಿಲ್ಲ. ಇದರಿಂದಾಗಿ, ಇವೊತ್ತಿನ ದಿವಸ ಆಸಿಡ್ ದಾಳಿ ಮಾಡುವಂತಹ ಬಹಳ ಕ್ರೂರವಾದಂತಹ ಕೃತ್ಯಗಳು ನಡೆಯುತ್ತಿದ್ದು, ಇದೊಂದು ದೊಡ್ಡ ಸಾಮಾಜಿಕ ಪಿಡುಗಾಗಿರುತ್ತದೆ. ಇದು ಆಗಬಾರದು ಎಂದು ಸರ್ಕಾರಕ್ಕೆ ನಾನು ನಿವೇದನೆ ಮಾಡುತ್ತೇನೆ. ಇದರ ಜೊತೆಗೆ, ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ವಸತಿ ಯೋಜನೆಯಡಿಯಲ್ಲಿ ನಿವೇಶನ ಸೌಲಭ್ಯವನ್ನು ಆದಷ್ಟು ಬೇಗ ಒದಗಿಸಬೇಕು ಹಾಗೂ ಸರ್ಕಾರದಿಂದ ಅಥವಾ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈ ಸಂತ್ರಸ್ತೆಯರಿಗೆ ಒಂದು ಹೆಲ್ತ್ ಕಾರ್ಡ್ ಇಶ್ಯೂ ಮಾಡಿ, ಅವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವಂತಹ ಸೌಲಭ್ಯ ಕಲ್ಪಿಸಬೇಕು. ಇದರಿಂದಾಗಿ, ಆ ಸಂತ್ರಸ್ಥೆಯರು ಆಸಿಡ್ ದಾಳಿಯಿಂದ ಹಾನಿಯಾದ ದೇಹದ ಎಲ್ಲಾ ಭಾಗವನ್ನು ಅಲ್ಲದೇ ಇದ್ದರೂ, ಕನಿಷ್ಠ ಪಕ್ಷ ತಮ್ಮ ಮುಖವನ್ನಾದರೂ ಸರಿಪಡಿಸಿಕೊಂಡು ಸಾರ್ವಜನಿಕವಾಗಿ ಓಡಾಡುವಂತೆ ಮಾಡಿದರೆ, ಸರ್ಕಾರಕ್ಕೆ ಹಾಗೂ ನಾಗರಿಕ ಸಮಾಜಕ್ಕೆ ಒಂದು ಗೌರವ ಬರುತ್ತದೆ ಎಂದು ಹೇಳುತ್ತೇನೆ. ಅಲ್ಲದೇ, ಈ ವಿಚಾರ ಬಹಳ ಗಂಭೀರವಾಗಿರುವುದರಿಂದ, ನಾನು ಇಡೀ ಸದನಕ್ಕೆ ಕೈಮುಗಿದು ವಿನಂತಿ ಮಾಡುವುದೇನೆಂದರೆ, ಈ ವಿಚಾರಕ್ಕೆ ಸಂಬಂಧಿಸಿದ ನಿರ್ಣಯಕ್ಕೆ ತಾವೆಲ್ಲರೂ ಬೆಂಬಲ ನೀಡಬೇಕು. ಇಂತಹ ಕೆಲಸಗಳನ್ನು ಸರ್ಕಾರಗಳು ಮಾಡಬೇಕು. ಏಕೆಂದರೆ, 2010ರಿಂದ 2026ರವರೆಗೂ ಈ ವಿಚಾರದ ಬಗ್ಗೆ ಚರ್ಚೆಯಾಗುತ್ತಿದ್ದು, ಈಗಲೂ ಸಹ ನಾನು ವಿಚಾರವನ್ನು ಹೇಳುವುದಕ್ಕೆ ಅಸಹ್ಯ ಎನಿಸುತ್ತಿದೆ. ಸರ್ಕಾರಗಳು ಯಾವುದೇ ಇರಬಹುದು. ಆದರೆ, ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ಉಚಿತ ನಿವೇಶನಗಳನ್ನು ಕೊಡುತ್ತೇವೆಂದು 4-5 ಸರ್ಕಾರಿ ಆದೇಶಗಳನ್ನು ಮಾಡಿ, ಅವರಿಗೆ ಮೋಸ ಮಾಡಿ, ಅವರಿಗೆ ಯಾವುದೇ ರೀತಿಯ ವ್ಯವಸ್ಥೆಗಳು ಇಲ್ಲದೇ ಇರುವಂತೆ ಮಾಡಿರುವುದು ದುರದೃಷ್ಟಕರವಾಗಿರುತ್ತದೆ. ಇವೊತ್ತಿನ ದಿವಸ ಆ ಸಂತ್ರಸ್ಥೆಯರು ವಿಧಾನಸೌಧಕ್ಕೆ ಬಂದರೆ, ಅವರನ್ನು ನೋಡಿ ವಿಧಾನಸೌಧ ಭದ್ರತಾ ಪೊಲೀಸ್‌ನವರು ಸಹ ಹೆದರುಕೊಂಡು, "ಏಯ್, ಏನಮ್ಮ ನೀವು ಇಲ್ಲಿಗೆ ಬಂದಿದ್ದೀರಿ? ಹೊರಗಡೆ ಹೋಗಿ" ಎಂದು ಹೇಳಿ ಅವರನ್ನು ಗೇಟ್ ಬಳಿ ತಡೆದಿರುತ್ತಾರೆ. ನಂತರ, ನಾನು ನನ್ನ ಕಾರನ್ನು ಕಳುಹಿಸಿ ಅವರನ್ನು ವಿಧಾನಸೌಧದ ಒಳಗಡೆ ಕರೆಯಿಸಬೇಕಾಗಿರುತ್ತದೆ. ವಿಧಾನಸೌಧದ ಪೊಲೀಸರಿಗೆ ಆ ಸಂತ್ರಸ್ಥೆಯರನ್ನು ನೋಡುವಂತಹ ಧೈರ್ಯ ಇಲ್ಲದೇ ಇದ್ದರೆ, ಇನ್ನು ಅವರ ಮಕ್ಕಳಿಗೆ ಹೇಗೆ ಧೈರ್ಯ ಬರುತ್ತದೆ ಅಥವಾ ಸಾರ್ವಜನಿಕರಿಗೆ ಹೇಗೆ ಧೈರ್ಯ ಬರುತ್ತದೆ? ಇನ್ನೊಂದು ವಿಚಾರವೇನೆಂದರೆ, ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರು ತಾವು ಹೆತ್ತಂತಹ ಮಕ್ಕಳೇ ಅವರನ್ನು, "ಅಮ್ಮ ನಿನ್ನನ್ನು ನೋಡುವುದಕ್ಕೆ ನಮಗೆ ಭಯವಾಗುತ್ತದೆ. ಹಾಗಾಗಿ, ನೀನು ಬೇರೆ ಕಡೆ ಇರು. ನಾವು ಬೇರೆ ಕಡೆ ಇರುತ್ತೇವೆ" ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ಯಾರಿಗೂ ಬರಬಾರದು. ಈ ಸಂತ್ರಸ್ಥೆಯರು ತಾವು ಹೆತ್ತಂತಹ ಮಕ್ಕಳೇ ನನ್ನನ್ನು ನೋಡುತ್ತಿಲ್ಲ. ನನ್ನನ್ನು ಪ್ರತ್ಯೇಕವಾಗಿ ಇರಿಸಿದ್ದಾರೆ, ನನ್ನ ಪರಿಸ್ಥಿತಿ ಏನಾಗಬೇಕು ಎಂದು ಹೇಳುತ್ತಾರೆ. ಈ ಸಂತ್ರಸ್ಥೆಯರ ವಿಚಾರ ಬಹಳ ಕಠಿಣವಾಗಿದ್ದು, ಇದು ನಾನು ಹೇಳುವಷ್ಟು ಸರಳವಾಗಿರುವುದಿಲ್ಲ. ಹಾಗಾಗಿ, ಇಡೀ ಸದನ ದಯಮಾಡಿ ಈ ವಿಚಾರಕ್ಕೆ ಬೆಂಬಲ ನೀಡಬೇಕು. ಸರ್ಕಾರ ಕೂಡ ಬಹಳಷ್ಟು ಒಳ್ಳೆಯ ಕಲ್ಯಾಣ ಕಾರ್ಯಕ್ರಮಗಳನ್ನು ಕೊಟ್ಟಿರುತ್ತದೆ. ಅಲ್ಲದೇ, ಈ ಸರ್ಕಾರ ಕೊಟ್ಟಷ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಯಾವ ಸರ್ಕಾರ ಕೂಡ ಕೊಟ್ಟಿರುವುದಿಲ್ಲ. ಅದರಲ್ಲಿ ಎರಡನೇ ಮಾತಿಲ್ಲ. ಕೊನೆಯದಾಗಿ, ಈ ಸಂತ್ರಸ್ತೆಯರ ವಿಚಾರವನ್ನು ಕೂಡ ಸರ್ಕಾರ ಕಣ್ತೆರದು ನೋಡಿ, ಇವರಿಗೆ ಸಹಾಯ ಮಾಡಬೇಕು. ಮಾನ್ಯ ಗೃಹ ಸಚಿವರು ಈ ವಿಚಾರಕ್ಕೆ ಸಂಬಂಧಿಸಿದಂತೆ, ಎಲ್ಲಾ ಪೊಲೀಸ್ ಠಾಣೆಗಳಿಗೆ ಒಂದು ನಿರ್ದೇಶನ ನೀಡಬೇಕು. ಅದೇನೆಂದರೆ, ಈ ಸಂತ್ರಸ್ಥೆಯವರು ಪೊಲೀಸ್

ಠಾಣೆಗಳಿಗೆ ಹೋದಾಗ, ಅವರನ್ನು ಸಂಯಮದಿಂದ ನೋಡಬೇಕು. ಜೊತೆಗೆ, ಇವರ ವಿಚಾರದಲ್ಲಿ prosecution failure ಆಗಬಾರದು. Prosecution failure ಆಗುವುದರಿಂದಲೇ, ಆಸಿಡ್ ದಾಳಿ ಮಾಡಿದಂತಹ ಅಪರಾಧಿಗಳಿಗೆ ಶಿಕ್ಷೆ ಆಗುತ್ತಿಲ್ಲ. ಅಲ್ಲದೇ, ಆಸಿಡ್ ದಾಳಿ ಮಾಡಿದಂತಹ ಅಪರಾಧಿಗಳಿಗೆ 8–10 ವರುಷಗಳಾದರೂ ಯಾವುದೇ ಶಿಕ್ಷೆ ಆಗಿರುವುದಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಆಸಿಡ್ ದಾಳಿಗೊಳಗಾದ ಸಂತ್ರಸ್ಥೆಯೊಬ್ಬರು ಈ ದಿನ ಮಧ್ಯಾಹ್ನ ತಮ್ಮ ಬಳಿ ಕೂಡ ಮಾತನಾಡಿ, "ಸರ್, ನನ್ನ ಮೇಲೆ ಆಸಿಡ್ ದಾಳಿಯಾಗಿ 10 ವರ್ಷಗಳಾಗಿರುತ್ತದೆ. ಆದರೆ, ಅಪರಾಧಿಗೆ ಯಾವುದೇ ಶಿಕ್ಷೆ ಆಗದೇ ಆರಾಮಾಗಿ ಓಡಾಡಿಕೊಂಡಿದ್ದಾನೆ. ನಾನು ನೋಡಿದರೆ ಇಂತಹ ಪರಿಸ್ಥಿತಿಯಲ್ಲಿದ್ದೇನೆ" ಎಂದು ಹೇಳಿರುತ್ತಾರೆ. ಹಾಗಾಗಿ, ಈ ರೀತಿಯ ಘಟನೆಗಳು ಎಲ್ಲಿಯೂ ಆಗಬಾರದು. ಅದಕ್ಕೋಸ್ಕರ ಈ ವಿಚಾರದಲ್ಲಿ ಬಹಳ ಗಂಭೀರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಇಂತಹ ಪ್ರಕರಣಗಳ ತನಿಖಾ ಹಂತದಲ್ಲಿ, ಅಪರಾಧಿಗಳಿಗೆ ಯಾವ ರೀತಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಪೋಲೀಸರು ತಮ್ಮ ಇಚ್ಛಾಶಕ್ತಿ ತೋರಿಸದರೆ ಮತ್ತು ನ್ಯಾಯಾಂಗ ವ್ಯವಸ್ಥೆ ಕೂಡ ಅದಕ್ಕೆ ಪ್ರತಿಕ್ರಿಯೆ ನೀಡಿದರೆ ಅನುಕೂಲವಾಗುತ್ತದೆ. ಈ ರೀತಿ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರನ್ನು ಅಂದಿನ ಸರ್ಕಾರಗಳು ಹಾಗೂ ಅವರಿಗೆ ಚಿಕಿತ್ಸೆ ನೀಡಿದಂತಹ ವೈದ್ಯರುಗಳು ಅವರನ್ನು ಬದುಕಿಸಿರುತ್ತಾರೆ. ಆದರೆ, ಇವೊತ್ತಿನ ದಿವಸ ಅವರು ಬದುಕುವುದಕ್ಕೂ ಆಗುತ್ತಿಲ್ಲ, ಸಾಯುವುದಕ್ಕೂ ಆಗುತ್ತಿಲ್ಲ. ಹಾಗಾಗಿ, ಅವರನ್ನು ಬದುಕಿಸುವಂತಹ ಕೆಲಸಕ್ಕೆ ಇಡೀ ಸದನ ಬೆಂಬಲ ನೀಡಿ, ಈ ವಿಚಾರಕ್ಕೆ ಸಂಬಂಧಿಸಿದ ನಿರ್ಣಯ ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ. ಸರ್ಕಾರ ಕೂಡ ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಜೊತೆಗೆ, ಪೀಠ ಕೂಡ ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ನಿರ್ದೇಶನ ನೀಡಬೇಕು. ಇನ್ನು ಮುಂದೆ ಈ ವಿಚಾರವನ್ನು ಪದೇ ಪದೇ ಈ ಸದನದಲ್ಲಿ ತಂದು ಮಾತನಾಡುವುದು ವ್ಯರ್ಥ. ಏಕೆಂದರೆ, ಆ ಸಂತ್ರಸ್ತೆಯರು ಕೂಡ ಈ ವಿಚಾರವನ್ನು ನೋಡಿ, ಕೊನೆಗೆ ಒಂದು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾರೆ. ಅವರ ಸಾವಿಗೆ ಪರೋಕ್ಷವಾಗಿ ನಾವೇ ಹೊಣೆಯಾಗಬೇಕಾಗುತ್ತದೆ. ಇದರಲ್ಲಿ ಕೇವಲ ಸರ್ಕಾರ ಮಾತ್ರ ಅಲ್ಲ, ನಾವೆಲ್ಲರೂ ಕೂಡ ಹೊಣೆಗಾರರಾಗಬೇಕಾಗುತ್ತದೆ. ಆದುದರಿಂದ, ದಯಮಾಡಿ ಈ ಸಂತ್ರಸ್ತೆಯರ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳದೇ, ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಮಾತನಾಡಬೇಕೆಂದು ಕೋರುತ್ತೇನೆ. ಏಕೆಂದರೆ, ಮಾನ್ಯ ಗೃಹ ಮಂತ್ರಿಗಳು ಆಗಲೇ ಮಾತನಾಡುತ್ತಾ, "ಈ ವಿಚಾರ ನನ್ನ ಇಲಾಖೆಗೆ ಬರುವುದಿಲ್ಲ" ಎಂದು ಹೇಳುತ್ತಿದ್ದರು. ಹೌದು, ನಿಜ. ಈ ವಿಚಾರದಲ್ಲಿ ಮಾನ್ಯ ಗೃಹ ಮಂತ್ರಿಗಳಿಗೆ ಕೆಲವು ವಿಷಯಗಳು ಮಾತ್ರ ಬರುತ್ತವೆ. ಆದರೆ, ಈ ವಿಚಾರದಲ್ಲಿ ವಸತಿ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಗೂ ಸಹ ಬರುತ್ತದೆ. ಬಹಳಷ್ಟು ಕಡೆಗಳಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಸಾವಿರಾರು ಮನೆಗಳನ್ನು ಕಟ್ಟಲಾಗುತ್ತಿದೆ. ಈ ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರಲ್ಲಿ ಕೇವಲ 169 ಜನರಿರುತ್ತಾರೆ. ಅವರಿಗೆ ಎಲ್ಲೆಲ್ಲಿ ಬೇಕೋ ಅಲ್ಲಿ ಅವರಿಗೆ ಉಚಿತ ನಿವೇಶನ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರದಿಂದ ಮಾಡಬೇಕು.

ಹುಳಿಯಾರು ಪ್ರದೇಶದಲ್ಲಿ 3 ಜನ ಇದ್ದಾರೆ. ತುಮಕೂರಿನಲ್ಲಿ ಸಹ ಕೆಲವು ಜನ ಇದ್ದಾರೆ. ಅವರೆಲ್ಲರಿಗೂ ಸಹ ಆದಷ್ಟು ಬೇಗ ಸರ್ಕಾರದ ವಸತಿ ಯೋಜನೆಗಳಡಿ ಉಚಿತ ನಿವೇಶನ ನೀಡಬೇಕು. ಇದರ ಜೊತೆಗೆ, ಈ ಸಂತ್ರಸ್ಥೆಯರಿಗೆ ಸರ್ಕಾರದಿಂದ ಸಿಗುವಂತಹ ಮಾಸಿಕ ರೂ.10,000 ಪರಿಹಾರ ಹಣವನ್ನು ರೂ.15,000 ಕ್ಕೆ ಏರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರ ವಿಚಾರಕ್ಕೆ ಸಂಬಂಧಿಸಿದಂತೆ, ಬಹಳಷ್ಟು ವಿವರಣೆಗಳನ್ನು ಮಾನ್ಯ ಶಿವಕುಮಾರ್‌ರವರು ಕೊಟ್ಟಿರುತ್ತಾರೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಈ ವಿಚಾರದಲ್ಲಿ ನಾಲ್ಕು ಇಲಾಖೆಗಳು ಜೋಡಣೆಯಾಗುತ್ತವೆ. ಅವುಗಳೆಂದರೆ, ವಸತಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಗೃಹ ಇಲಾಖೆ ಬರುತ್ತವೆ. ಈ ವಿಚಾರದಲ್ಲಿ ಎಲ್ಲಾ ಇಲಾಖೆಗಳಿಗಿಂತಲೂ ಗೃಹ ಇಲಾಖೆಯೇ ಮುಖ್ಯವಾಗಿ ನಮಗೆ ಬೇಕಾಗಿರುತ್ತದೆ. ಏಕೆಂದರೆ, ಆಸಿಡ್ ಇಷ್ಟು ಸುಲಭವಾಗಿ ಸಿಗುವಂತಹ ವಸ್ತು ಅಲ್ಲ. ನಮಗೆ ಬೇಕಾದರೆ ಆಸಿಡ್ ಅಷ್ಟು ಸುಲಭವಾಗಿ ಸಿಗುವುದಿಲ್ಲ. ಅಷ್ಟು ಸುಲಭವಾಗಿ ಆಸಿಡ್ ಸಿಗುವಂತಹ ವಿಚಾರದಲ್ಲಿ ನಿಯಂತ್ರಣ ಆಗಬೇಕು. ಬಹುಶಃ ಆಸಿಡ್ ದಾಳಿ ಮಾಡಿದಾಗ ಆಗುವಂತಹ ವಿಚಾರದ ಬಗ್ಗೆ ವಿವರಣೆಗೆ ನಾನು ಹೋಗುವುದಿಲ್ಲ. ನಾನು ಕೂಡ ಬಹಳಷ್ಟು ಪ್ರಕರಣಗಳನ್ನು ಕಣ್ಣಾರೆ ನೋಡಿರುತ್ತೇನೆ. ಆಸಿಡ್ ಹಾಕಿದಂತಹ ಅಪರಾಧಿಗಳಿಗೆ ಮಾನ್ಯ ನ್ಯಾಯಾಲಯ ಅಬ್ಬಬ್ಬಾ ಅಂದರೆ, ಎಷ್ಟು ವರ್ಷಗಳ ಕಾಲ ಶಿಕ್ಷೆ ನೀಡಬಹುದು. ಅದರಲ್ಲಿ ಗರಿಷ್ಠ ಶಿಕ್ಷೆ ಎಂದರೆ, 12 ವರ್ಷ ಕಾಲ ಅಥವಾ ದೊಡ್ಡ ಶಿಕ್ಷೆ ಎಂದರೆ, ಜೀವಾವಧಿ ಶಿಕ್ಷೆ ಆಗಿರುತ್ತದೆ. 20 ರಿಂದ 22 ವಯಸ್ಸಿನ ಒಬ್ಬ ವ್ಯಕ್ತಿ ಆಸಿಡ್ ದಾಳಿ ಮಾಡಿ, ಆತನಿಗೆ ಶಿಕ್ಷೆ ಗರಿಷ್ಠ 12 ವರ್ಷಗಳ ಶಿಕ್ಷೆ ಅನುಭವಿಸಿ, ತನ್ನ 30 ಅಥವಾ 32 ನೇ ವಯಸ್ಸಿಗೆ ಹೊರಗೆ ಬರುತ್ತಾನೆ. ಆದರೆ, ಆಸಿಡ್ ದಾಳಿಗೊಳಗಾದ ಸಂತ್ರಸ್ಥೆ ತನ್ನ ಇಡೀ ಜೀವನ ಪೂರ್ತಿ ಸಾಯುವವರೆಗೂ ಕುರೂಪಿತನದಲ್ಲಿ ಬದುಕಬೇಕಾಗಿರುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 7 ಕೋಟಿ ಜನಸಂಖ್ಯೆ ಇದೆ. ಅಷ್ಟು ಜನಸಂಖ್ಯೆ ಇರುವಂತಹ ರಾಜ್ಯದಲ್ಲಿ ನಮಗೆ 170 ಜನರನ್ನು ನೋಡುವುದಕ್ಕೆ ಆಗುವುದಿಲ್ಲವೇ? ಅಬ್ಬಬ್ಬಾ ಅಂದರೆ, ಇವರು 170 ಜನ ಇರಬಹುದು. ಈ ಹಿಂದೆ ನಾನು ಆಡಳಿತ ಪಕ್ಷದ ಸದಸ್ಯೆಯಾಗಿ ಸರ್ಕಾರವನ್ನು ಪ್ರಶ್ನೆ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಆಸಿಡ್ ದಾಳಿಗೊಳಗಾದ ಸಂತ್ರಸ್ಥೆಯರಿಗೆ ಯಾವುದೇ ಪರಿಹಾರ ಹಣ ನೀಡುತ್ತಿರಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರು. ಆಗ ಅವರು ಮೊದಲು ರೂ.1,000 ಮಾಸಿಕ ಪರಿಹಾರ ಹಣ ಎಂದು ಹೇಳಿದರು. ನಂತರ, ಅದನ್ನು ರೂ.3,000 ಕ್ಕೆ ಏರಿಸಿದರು. ತದನಂತರದಲ್ಲಿ, ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದರಂತಹ ಸಂದರ್ಭದಲ್ಲಿ ಆ ಪರಿಹಾರ ಹಣವನ್ನು ರೂ.15,000 ಕ್ಕೆ ಏರಿಸಬೇಕೆಂದು ಕೋರಿದ್ದೆನು. ಆದರೆ, ಅವರು ರೂ.10,000 ಮಾಸಿಕ ಪರಿಹಾರ ಹಣ ನೀಡುವುದಕ್ಕೆ ಒಪ್ಪಿಗೆ

ನೀಡಿದರು. ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ರೂ.10,000 ಅಥವಾ ರೂ.15,000 ಪರಿಹಾರ ಹಣ ಅವರಿಗೆ ಸಾಕಾಗುವುದಿಲ್ಲ. ಏಕೆಂದರೆ, ಈ ಸಂತ್ರಸ್ಥೆಯರಿಗೆ ಉದ್ಯೋಗ ನೀಡುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ಆ ಸಂತ್ರಸ್ಥೆಯರ ರೂಪ ನೋಡಿ backend ನಲ್ಲಿ ಕೆಲಸ ಕೊಡಿ ಎಂದು ಹೇಳಿದರು. ಈ ಸಂತ್ರಸ್ಥೆಯರಿಗೆ ಉದ್ಯೋಗ ಕೊಡುವಂತಹ ತಾಕತ್ತು ನಮ್ಮಿಂದ ಆಗದೇ ಇದ್ದಾಗ, ಅವರನ್ನು ಸಾಕುವಂತಹ ತಾಕತ್ತನ್ನು ನಾವು ಪಡೆಯಬೇಕು. ಅವರಿಗೆ ಪ್ರತಿ ತಿಂಗಳು ಜೀವನಾಂಶ ಎಂದು ಕೊಡಬೇಕು. ಅವರ ಬದುಕಿಗೆ ಎಷ್ಟು ದುಡ್ಡು ಬೇಕು. ಅವರ ಬದುಕಿಗೆ ಮಾಸಿಕ ರೂ.25,000 ಪರಿಹಾರ ಹಣ ನೀಡಬೇಕೇ? ಅವರಿಗೆ ಮನೆ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅದು ಯಾವುದೇ ಸರ್ಕಾರ ಆಗಿರಲಿ. ಅಲ್ಲದೇ, ಅವರು ಬಹಳ ಹೆಚ್ಚಿನ ಸಂಖ್ಯೆಯಲ್ಲಿಯೂ ಸಹ ಇರುವುದಿಲ್ಲ. ಹಾಗಾಗಿ, ಈ ಸಂತ್ರಸ್ಥೆಯರಿಗೆ ಪರಿಹಾರ ನೀಡುವುದನ್ನು ಈ ಬಜೆಟ್‌ನಲ್ಲಿಯೇ ಮಾಡಬೇಕಾಗಿರುತ್ತದೆ.

(ಮುಂದು)

(289) 10.03.2026 ವೈಎಲ್-ಕೆಎಸ್ 5.50 (ಸಭಾಪತಿಯವರ ಉಪಸ್ಥಿತಿ)

ಶ್ರೀಮತಿ ಭಾರತಿ ಶೆಟ್ಟಿ (ಮುಂದು):-

ಈ ಸಾಲಿನ ಬಜೆಟ್‌ನಲ್ಲಿಯೇ ಅವರಿಗೆ ಗೌರವಧನ ಹೆಚ್ಚಿಸುವುದು ಜೋಡಣೆ ಮಾಡಬೇಕು. ನಾವೆಲ್ಲರೂ ಒಟ್ಟಾಗಿ ಸೇರಿಕೊಂಡು ಆಸಿಡ್ ದಾಳಿಗೆ ಒಳಗಾಗಿರುವವರಿಗೆ ನ್ಯಾಯ ಒದಗಿಸುವಂಥ ಕೆಲಸವನ್ನು ಖಂಡಿತ ಮಾಡಿಕೊಡಬೇಕು. ಇಲ್ಲದಿದ್ದರೆ ಅವರು ಬದುಕಲು ಸಾಧ್ಯವೇ ಇಲ್ಲ. ಕೆಲವು ಮಹಿಳೆಯರನ್ನು ನೋಡಿದರೆ ಕರುಳು ಹಿಂಡಿ ಬರುತ್ತದೆ. ಕೆಲವರಿಗೆ ಸ್ವಲ್ಪ ಪ್ರಮಾಣದಲ್ಲಿ ಅಂದರೆ ಕೈಗೆ ಮಾತ್ರ ಆಸಿಡ್ ದಾಳಿ ಆಗಿರುತ್ತದೆ. ಜೊತೆಗೆ ಯಾರು ಆಸಿಡ್ ದಾಳಿ ಮಾಡಿರುತ್ತಾನೆ, ಆತ ಏನು ಪರಿಹಾರ ಕೊಡುವುದಿಲ್ಲ. ಕೆಲವರು ಕಾನೂನಿನ ನ್ಯೂನತೆಯಿಂದ ನಾನು ಆಸಿಡ್ ದಾಳಿ ಮಾಡಿಲ್ಲ, ನನ್ನನ್ನು provoke ಮಾಡಿದರೂ, use ಮಾಡಿದರೂ, ಎಂದು ಹೇಳಿ ತಪ್ಪಿಸಿಕೊಂಡು ಹೋಗುವಂಥ ಬಹಳಷ್ಟು ಮಂದಿ ಇದ್ದಾರೆ. ಆದ್ದರಿಂದ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲಾಗುತ್ತದೆಯೇ, ಇಲ್ಲವೇ ಎಂಬುದು ಗೊತ್ತಿಲ್ಲ. ಆದರೆ, ನಮ್ಮ ಕಣ್ಣ ಮುಂದೆ ಇರುವ ಜೀವಗಳಿಗೆ ನ್ಯಾಯವನ್ನು ಒದಗಿಸುವಂಥ ಶಕ್ತಿ ನಮ್ಮ ಸರ್ಕಾರಕ್ಕೆ ಇದೆ. ಆ ನ್ಯಾಯ ಒದಗಿಸುವಂಥ ಕೆಲಸವನ್ನು ಮಾಡಬೇಕು.

ಸರ್ಕಾರವು ಕಣ್ಣು ಒರೆಸುವ ಸಲುವಾಗಿ ರೂ.10,000 ನೀಡುವಂಥ ಪರಿಹಾರ ಏನಿದೆ, ಅದು ಅವರ ಬದುಕಿಗೆ ಸಾಕಾಗುವುದಿಲ್ಲ. ಅವರ ಮಕ್ಕಳನ್ನು ಯಾರು ಸಹ ನೋಡುವುದಿಲ್ಲ. ಆಸಿಡ್ ದಾಳಿಗೆ ಒಳಗಾದವರಿಗೆ ಉಚಿತವಾಗಿ ಮನೆ ಕಲ್ಪಿಸಬೇಕು; ಆರೋಗ್ಯದ ವೆಚ್ಚ ಭರಿಸಬೇಕು; ಪ್ಲಾಸ್ಟಿಕ್ ಸರ್ಜರಿಗಾಗಿ ಹಣ ಭರಿಸಬೇಕು. ಏಕೆಂದರೆ, ಆ ಹೆಣ್ಣು ಮಗಳು ತನ್ನ ಮುಖವನ್ನು ಕೋಣೆಯೊಳಗೆ ಮೀಸಲಿರಿಸಿ ಇಡೀ ಜೀವನ ಬದುಕಲು

ಸಾಧ್ಯವಿಲ್ಲ. ಆಕೆ ಹೊರಗೆ ಬಂದಾಗ ಆಕೆಯ ಮುಖವನ್ನು ಸ್ವಲ್ಪವಾದರೂ ನೋಡುವ ಸ್ಥಿತಿಯಲ್ಲಿದ್ದರೆ ಉತ್ತಮ. ಅದಕ್ಕಾಗಿ ಎಷ್ಟು ವೆಚ್ಚವಾದರೂ ಭರಿಸುವಂಥ ಕೆಲಸವನ್ನು ಸರ್ಕಾರ ಮಾಡಿದರೆ, ನಿಜವಾಗಿ ನಾವು ಮಾನವೀಯತೆಯಿಂದ ಸ್ಪಂದಿಸಿದಂತಾಗುತ್ತದೆ. ಮಾನ್ಯ ಸಭಾನಾಯಕರ ವಿಚಾರದಲ್ಲಿ ನನಗೆ ಧೈರ್ಯ ಇದೆ. ಏಕೆಂದರೆ, ಇಂತಹ ಪ್ರಕರಣಗಳು ಬೆಳಕಿಗೆ ಬಂದರೆ ಅವರು ಸುಮ್ಮನೆ ಬಿಡುವುದಿಲ್ಲ. ಹಾಗೆಯೇ ಮಾನ್ಯ ಗೃಹ ಸಚಿವರು ಇಂತಹ ಕೆಲಸದಲ್ಲಿ ಮುಂಚೂಣಿಯಲ್ಲಿದ್ದಾರೆ. ಹಾಗಾಗಿ, ಈ ಸಾಲಿನ ಬಜೆಟ್‌ನಲ್ಲಿಯೇ ಆಸಿಡ್ ದಾಳಿಗೊಳಗಾದ ಎಲ್ಲರಿಗೂ ನ್ಯಾಯ ಒದಗಿಸುವಂಥ ಕೆಲಸ ಆಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಆಸಿಡ್ ದಾಳಿಗೊಳಗಾದ ಮಹಿಳೆಯರನ್ನು ತುಂಬಾ ಹತ್ತಿರದಿಂದ ನೋಡಿದ್ದೇನೆ. ಕಳೆದ ಸುಮಾರು 10 ರಿಂದ 15 ವರ್ಷಗಳ ಹಿಂದೆ ಅಂಗನವಾಡಿ ಶಿಕ್ಷಕಿ ಆಸಿಡ್ ದಾಳಿಗೆ ಒಳಗಾಗಿದ್ದು, ಆಕೆಯ ಪರಿಸ್ಥಿತಿಯನ್ನು ನೋಡಿ ಬಹಳ ಚಿಂತಾಜನಕವಾಗಿತ್ತು. ಏಕೆಂದರೆ, ಆಕೆ ತಕ್ಷಣವೇ ತನ್ನ ವೃತ್ತಿಯನ್ನು ಬಿಟ್ಟು ಮನೆಯೊಳಗೆ ನೆಲೆಸಿದಳು. ಆಕೆಯ ಜೀವನವು ತೀರಾ ಕಿತ್ತು ತಿನ್ನುವಂಥ ಬಡತನವಾಗಿದ್ದು, ಆಗಿನ ಪರಿಸ್ಥಿತಿ ಹೇಗೆ ಇತ್ತೋ, ಈಗಲೂ ಹಾಗೆಯೇ ಇದೆ. ದುರಂತದ ಸಂಗತಿಯೇನೆಂದರೆ, ಆಕೆಗೆ ಆಸಿಡ್ ದಾಳಿ ಮಾಡಿದಂಥ ವ್ಯಕ್ತಿ ರಾಜರೋಷವಾಗಿ ಆಕೆಯ ಮುಂದೆಯೇ ಓಡಾಡುತ್ತಿದ್ದಾನೆ. ಈ ಸಂಬಂಧ ಎಲ್ಲಾ ಗುರು-ಹಿರಿಯರು ಕುಳಿತುಕೊಂಡು ಮಾತನಾಡಿದರೂ ಒಂದು ಪೈಸೆ ಸಹ ಪರಿಹಾರ ಬರಲಿಲ್ಲ. ಸರ್ಕಾರದ ಸಹಾಯಧನದಲ್ಲಿ ಬದುಕುತ್ತಿರುವಂಥ ಕುಟುಂಬವೂ ಆಗಿಲ್ಲ. ಆದರೆ, ತೀರಾ ಕಳಪೆ ಮಟ್ಟದಲ್ಲಿ ಬದುಕುವಂಥ ಜೀವನ ಆಕೆಯದ್ದಾಗಿದೆ. ಇವತ್ತಿನ ದಿವಸ ಹೇಳುವುದೇನೆಂದರೆ, ಹೆಣ್ಣು ಮಕ್ಕಳಿಗೆ ಬಹಳಷ್ಟು ಉತ್ತಮವಾದ ಅವಕಾಶವನ್ನು ಎಲ್ಲಾ ವಿಷಯದಲ್ಲಿಯೂ ಸರ್ಕಾರ ಮಾಡಿಕೊಟ್ಟಿದೆ. ಈ ಗ್ಯಾರಂಟಿ ಯೋಜನೆ ಜಾರಿಗೆ ಬರುವುದರ ಜೊತೆಗೆ ಎಲ್ಲಾ ಹೆಣ್ಣು ಮಗಳಿಗೂ ಅನುಕೂಲವಾಗಿದೆ. ಏಕೆಂದರೆ, ಹೆಣ್ಣು ಎಂದರೆ, ನಮಗೂ ಒಂದು ರೀತಿ ಕಕ್ಕಲಾತಿ ಇರತಕ್ಕದ್ದಾಗಿದ್ದು, ಆ ಹೆಣ್ಣು ಮಗಳು ಕೆಲಸ ಇಲ್ಲದೇ ಮನೆಯಲ್ಲಿಯೇ ಕುಳಿತಿದ್ದಾಳೆ. ಇಡೀ ರಾಜ್ಯದಲ್ಲಿ ಆಸಿಡ್ ದಾಳಿಗೆ ಒಳಗಾದ ಹೆಣ್ಣು ಮಕ್ಕಳ ಸಂಖ್ಯೆಯನ್ನು ನೋಡಿದರೆ, ಸುಮಾರು 150 ಕ್ಕಿಂತ ಹೆಚ್ಚು ಹೆಣ್ಣು ಮಕ್ಕಳು ಇಲ್ಲವೆಂದು ಹೇಳಲಾಗುತ್ತಿದೆ. ಅಷ್ಟು ಹೆಣ್ಣು ಮಕ್ಕಳಿಗೆ ಕೇವಲ ರೂ.25,000 ಕೊಟ್ಟರೆ ಹೇಗೆ? ಸಹಾಯಧನವಾಗಿ ದಿಕ್ಷುತವಾಗಿ ರೂ.50,000 ಕೊಡಲಿ. ಇಂದಿನ ದಿನಮಾನಗಳಲ್ಲಿ ಮನೆ ಮಾಡಿಕೊಂಡು, ಆರೋಗ್ಯವನ್ನು ನೋಡಿಕೊಳ್ಳಬೇಕೆಂದರೆ, ರೂ.25,000 ಯಾವುದಕ್ಕೂ ಸಾಕಾಗುವುದಿಲ್ಲ. ಹಾಗಾಗಿ, ರೂ.50,000 ಸಹಾಯಧನ ಕೊಡಬೇಕು ಮತ್ತು ಉಚಿತವಾಗಿ ವಾಸಿಸಲು ಮನೆ ಕೊಡಬೇಕು ಹಾಗೂ ಅವರಿಗೆ ಯಾವುದೇ ಅನುಕೂಲ ಸಿಕ್ಕಿದರೆ ಅದಕ್ಕೆ ಸ್ಪಂದಿಸುವಂಥ ಕೆಲಸ ಮಾಡಬೇಕು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಿಗುವಂಥ ಎಲ್ಲಾ ಸೌಲಭ್ಯಗಳು ಆ ಮಹಿಳೆಯರಿಗೆ ದೊರಕಬೇಕು. ಏಕೆಂದರೆ, ಈ ಸಮಾಜದಲ್ಲಿ ಅವರು ಮನೆ ಬಿಟ್ಟು ಹೊರಗೆ ಬಂದಾಗ ಅವರನ್ನು ನೋಡಲು ಮನಸ್ಸು ಬರುವುದಿಲ್ಲ. ಅವರ

ಮನೆಯವರೆ ಅವರೊಂದಿಗೆ ಸೇರಲಾರದ ಪರಿಸ್ಥಿತಿ ಇದ್ದು, ಆ ರೀತಿ ಆಗಬಾರದು. ನಾವು ಸಹ ಮಹಿಳೆಯರಾಗಿದ್ದು, ಆಸಿಡ್ ದಾಳಿಗೆ ಒಳಗಾದ ಮಹಿಳೆಯರು ಧೈರ್ಯವಾಗಿ ಬದುಕಬೇಕು. ನಾನು ಆಕೆಯ ಮನೆಗೆ ಹೋದಾಗ ಮುಖವನ್ನು ಮುಚ್ಚಿಕೊಂಡೇ ಮಾತನಾಡಿದಳು. ಸುಮಾರು 6 ತಿಂಗಳ ಕಾಲ ಆ ಗಾಯ ಮಾಸಲೇ ಇಲ್ಲ. ಆಕೆ ನೋಡಿದಾಗ ಎಷ್ಟು ವಿಚಿತ್ರವಾಗಿದಳು ಎಂದರೆ, ಎಲ್ಲಿಯೋ ತಲೆ, ಎಲ್ಲಿಯೋ ಕಿವಿ ಇತ್ತು. ನಿಜವಾಗಿ ಆಕೆಯನ್ನು ನೋಡಿದಾಗ ಹೇಗೆ ಅನಿಸಿತ್ತು ಎಂದರೆ,... ನಿಜವಾಗಿ ಆಸಿಡ್ ಸಿಗುವುದನ್ನು ಕಡಿಮೆ ಮಾಡಬೇಕು. ಎರಡನೆಯದಾಗಿ, ಮಾನ್ಯ ಭಾರತಿ ಶೆಟ್ಟಿಯವರು ಹೇಳಿದ ಹಾಗೆ ಕೇವಲ ರೂ.25,000 ಸಹಾಯಧನ ನೀಡುವುದು ಸಾಕಾಗುವುದಿಲ್ಲ. ಏಕೆಂದರೆ, ಅವರ ಬದುಕು ಯಾವ ರೀತಿ ಇದೆ ಎಂದರೆ, ತಮ್ಮನ್ನು ತಾವೇ ಸಂರಕ್ಷಣೆ ಮಾಡಿಕೊಳ್ಳಬೇಕು. ಇವತ್ತಿನ ದಿನಮಾನಗಳಲ್ಲಿ ಎಲ್ಲಾ ವಸ್ತುಗಳು ಬಹಳ ಗಗನಕ್ಕೇರಿರುವುದರಿಂದ ಸುಮಾರು ರೂ.50,000 ಗಳಾದರೂ ಸಹಾಯಧನ ನೀಡಲೇಬೇಕು, ಮನೆ ಸೌಲಭ್ಯ ಕಲ್ಪಿಸಬೇಕು.

ಯಾವುದಾದರೂ ಉದ್ಯೋಗ ಒದಗಿಸುವಂಥ ಕೆಲಸವಾಗಬೇಕು. ಸರ್ಕಾರದಡಿ ಸಿಗುವಂಥ ಯಾವುದಾದರೂ ಪರಿಹಾರ ಕೇಳಿದರೆ, ಎಲ್ಲಾ ಕಾರ್ಡ್ ಕೊಡುವಂಥ ವ್ಯವಸ್ಥೆ ಮಾಡಬೇಕು. ಕೊನೆಪಕ್ಷ ಆಧಾರ್ ಕಾರ್ಡ್ ಮಾಡಿಸಿಕೊಳ್ಳುವ ಸಲುವಾಗಿ ಮನೆ ಬಿಟ್ಟು ಬರಲು ಧೈರ್ಯ ಇರುವುದಿಲ್ಲ. ಆಧಾರ್ ಕಾರ್ಡ್ ಮಾಡಿಸಲು ಕಣ್ಣು ಸ್ಕ್ಯಾನ್ ಮಾಡಿಸಬೇಕೆಂದರೆ, ಆಕೆಗೆ ಕಣ್ಣೇ ಇರುವುದಿಲ್ಲ. ಹಾಗೆಯೇ ಹೆಬ್ಬೆಟ್ಟು ತೆಗೆದುಕೊಳ್ಳಲು ಹೋದರೆ, ಕೈ ಸಹ ಸುಟ್ಟು ಹೋಗಿದ್ದೆ. ಇಂತಹ ವಿರೂಪವಾದ ದೇಹವನ್ನು ನೋಡಿದರೆ ಕರುಳು ಕಿತ್ತು ಬರುತ್ತದೆ. ದಯವಿಟ್ಟು ಮಾನ್ಯ ಗೃಹ ಸಚಿವರು ಮಹಿಳೆಯರ ಬಗ್ಗೆ ಬಹಳಷ್ಟು ಕಾಳಜಿವಹಿಸಿ, ನಾವು ಕೇಳಿದಂಥ ಅನುದಾನವನ್ನು ಒದಗಿಸುವಂಥ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಡಾ: ಉಮಾಶ್ರೀ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಕೆ.ಶಿವಕುಮಾರ್‌ರವರು ಬಹಳ ಗಂಭೀರವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಒಂದು ರೀತಿ ಮಾನಸಿಕ ಪಿಡುಗು ಎಂದು ಹೇಳಬಹುದು. ಯಾವ್ಯಾವ ಕಾರಣಕ್ಕಾಗಿ, ಯಾವ ಸಂದರ್ಭದಲ್ಲಿ ಮಹಿಳೆಯರ ಮೇಲೆ ಹೇಗೆ ದಾಳಿಯಾಗುತ್ತದೆ ಎಂಬುದನ್ನು ನೋಡಿದಾಗ ಇದು ಒಂದು ಅಮಾನವೀಯವಾದ ಮತ್ತು ಅತೀ ಕ್ರೂರವಾದ ನಡವಳಿಕೆ ಎಂದು ಹೇಳಬಯಸುತ್ತೇನೆ. ಇಂತಹ ನಡವಳಿಕೆಗೆ ಬಲಿ ಪಶು ಆಗುತ್ತಿರುವುದು ಮಹಿಳೆಯರು ಮಾತ್ರ. ಆದರೆ, ಆ ಮಹಿಳೆರಿಗೆ ಪರ್ಯಾಯವಾಗಿ ಬದುಕನ್ನು ನಿರ್ವಹಣೆ ಮಾಡಿಕೊಳ್ಳಲು ಯಾವುದೇ ರೀತಿಯ ಅವಕಾಶವನ್ನು ಕಲ್ಪಿಸಿಕೊಡಲು ಸಮಾಜಕ್ಕಾಗಲೀ ಅಥವಾ ಸರ್ಕಾರಕ್ಕಾಗಲೀ ಆಗಿಲ್ಲವೆಂದರೆ, ಇದೊಂದು ವಿಷಾದನೀಯ ಸಂಗತಿ ಎಂದು ಹೇಳಬಯಸುತ್ತೇನೆ.

ಮಾನ್ಯ ಕೆ.ಶಿವಕುಮಾರ್‌ರವರು ಮಾತನಾಡಿದಂಥ ಸಂದರ್ಭದಲ್ಲಿ ಆಸಿಡ್ ದಾಳಿಗೊಳಗಾದ ಮಹಿಳೆ ಎಫ್.ಐ.ಆರ್. ದಾಖಲಿಸಿದ ಮೇಲೆ ಅದರ ರಸೀದಿ ಪಡೆದುಕೊಳ್ಳಲು ಪೊಲೀಸ್ ಠಾಣೆಗೆ ಓಡಾಡಬೇಕು ಅಥವಾ ಬೇರೆ ಏನಾದರೂ ದಾಖಲೆ ಪಡೆದುಕೊಳ್ಳಲು ಓಡಾಡಬೇಕಾಗುತ್ತದೆ ಎಂದು ಹೇಳಿದ ಮಾತನ್ನು ಕೇಳಿ ನನಗೆ ಬಹಳ

ಆಶ್ಚರ್ಯವಾಗುತ್ತದೆ. ನನಗೆ ನೆನಪಿರುವ ಹಾಗೆ ಪ್ರತಿಯೊಂದು ಜಿಲ್ಲೆಗಳಲ್ಲಿ ವಿಶೇಷ ಚಿಕಿತ್ಸಾ ಘಟಕವನ್ನು ತೆರೆದಿದ್ದೇವೆ. 2013 ರಿಂದ 2018 ರವರೆಗೂ ವಿಶೇಷ ಚಿಕಿತ್ಸಾ ಘಟಕವನ್ನು ಏನು ತೆರೆದಿದ್ದೇವೆ, ಅದನ್ನು ದೌರ್ಜನ್ಯಕ್ಕೊಳಗಾದ, ಆಸಿಡ್ ದಾಳಿಗೊಳಗಾದ ಹಾಗೂ ಅತ್ಯಾಚಾರಕ್ಕೊಳಗಾದ ಮಹಿಳೆಯರ ಸಲುವಾಗಿಯೇ ಮಾಡಿರುವುದು. ಆ ಮಹಿಳೆಯರನ್ನೆಲ್ಲಾ ತತಕ್ಷಣವೇ ಕರೆದುಕೊಂಡು ಹೋಗಿ, ಆ ಆಸ್ಪತ್ರೆಗಳಲ್ಲಿಯೇ ಅದರದೇ ಆದ್ದಂತಹ ಘಟಕಗಳನ್ನು ಸ್ಥಾಪನೆ ಮಾಡಿ, ಆ ಘಟಕದ ಮೂಲಕ ಎಲ್ಲಾ ರೀತಿಯ ಸವಲತ್ತನ್ನು ಕೊಡಲಾಗಿದೆ. ಜೊತೆಗೆ ಪೋಲೀಸ್‌ನವರು ಎಫ್.ಐ.ಆರ್. ದಾಖಲಿಸುವಾಗ ದೌರ್ಜನ್ಯಕ್ಕೊಳಗಾದ ಮಹಿಳೆಯರ ಹತ್ತಿರವೇ ಹೋಗಿ ಸ್ವತಃ ಹೇಳಿಕೆ ಪಡೆದುಕೊಳ್ಳಬೇಕಾಗಿತ್ತೇ ವಿನಃ ಪೋಲೀಸ್ ಠಾಣೆಗೆ ಹೋಗುವಂತಹ ಅಗತ್ಯ ಇರಲಿಲ್ಲ ಮತ್ತು counselling ಸಹ ಆ ಆಸ್ಪತ್ರೆಯಲ್ಲಿಯೇ ಆಗುತ್ತಿತ್ತು. ಜೊತೆಗೆ ವೈದ್ಯಕೀಯ ಚಿಕಿತ್ಸೆಯನ್ನು ಸಹ ಅದೇ ಆಸ್ಪತ್ರೆಯಲ್ಲಿಯೇ ಮಾಡುವಂಥ ವ್ಯವಸ್ಥೆ ಇತ್ತು. ತದನಂತರ ಕೇಂದ್ರ ಸರ್ಕಾರದವರು ‘ಸಖಿ’ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತಂದು, ಕೆಲವೊಂದು ವ್ಯವಸ್ಥೆಗಳನ್ನು ಬದಲಾವಣೆ ಮಾಡಿದ್ದಾರೆ. ಆದರೆ, ಈಗ ಆ ರೀತಿಯಾಗಿ ಎಫ್.ಐ.ಆರ್. ದಾಖಲಿಸಿ ಅಂದರೆ, case registration ಮಾಡುವುದು; ಹೇಳಿಕೆ ಪಡೆದುಕೊಳ್ಳುವುದು; ಈ ರೀತಿಯ ಕೆಲಸಗಳು ಆಗುತ್ತಿದೆಯೇ, ಇಲ್ಲವೇ ಎನ್ನುವುದು ನಮ್ಮ ಪ್ರಶ್ನೆ. ಏಕೆಂದರೆ, ದೌರ್ಜನ್ಯಕ್ಕೊಳಗಾದ ಮಹಿಳೆಯರು ಎಫ್.ಐ.ಆರ್. ಕಾಪಿ ಪಡೆಯಲು ಏತಕ್ಕೆ ಪೋಲೀಸ್ ಠಾಣೆಗೆ ಹೋಗಬೇಕು? ಅವರಿಗೆ ತಕ್ಷಣವೇ F.I.R copy provide ಮಾಡುವಂಥ ವ್ಯವಸ್ಥೆ ಇದ್ದರೂ ಸಹ ಏತಕ್ಕೆ ಬಳಕೆಯಾಗುತ್ತಿಲ್ಲ? ಜೊತೆಗೆ ಅವರು ಎಲ್ಲಿಗೆ ಹೋಗಿ ನೆಲೆಸಬೇಕು? ಜೊತೆಗೆ ಮನೆಯಲ್ಲಿರುವಂಥ ಕುಟುಂಬಸ್ಥರೇ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಮನೆಯಲ್ಲಿರಬೇಡಿ! ದಯವಿಟ್ಟು ಮನೆಯಿಂದ ಹೊರಗೆ ಹೋಗಿ, ನಮಗೆ ನಿಮ್ಮ ಜೊತೆ ಜೀವಿಸಲು ಕಷ್ಟವಾಗುತ್ತದೆ’ ಎನ್ನುವಂಥ ಸ್ಥಿತಿಯನ್ನು ನೋಡಿದಾಗ, ಕರುಳು ಹಿಂಡಿ ಬರುತ್ತದೆ. ಅವರು ಎಲ್ಲಿಗೆ ಹೋಗಿ ನೆಲೆಸಬೇಕು? ಯಾರ ಆಶ್ರಯವನ್ನು ಪಡೆಯಬೇಕು? ಇವತ್ತು ಸಮಾಜವು ಅವರಿಗೆ ಆಶ್ರಯ ನೀಡುವುದಿಲ್ಲ, ಕುಟುಂಬದವರು ಆಶ್ರಯ ನೀಡುವುದಿಲ್ಲ ಎಂದಾಗ ಮುಂದಿನ ಪರ್ಯಾಯ ಮಾರ್ಗವೇನೆಂದರೆ, ಸರ್ಕಾರವೇ ಅವರಿಗೆ ತಾಯಿಯಾಗಿ ಆಶ್ರಯಕ್ಕೆ ಬರಬೇಕು. ರೂ.10,000 ಪರಿಹಾರ ಏನಿದೆ, ಅದು ಪರಿಹಾರವಾಗಿಲ್ಲ. ಪ್ರತಿ ತಿಂಗಳು ಅವರಿಗೆ ನೀಡುವಂಥ ಗೌರವಧನವಾಗಿದೆ. We can call it pension. ಹಾಗಾಗಿ, ಕೇವಲ ರೂ.10,000/- ತೆಗೆದುಕೊಂಡು, ಅವರು ಹೇಗೆ ಜೀವನ ನಡೆಸಲು ಸಾಧ್ಯ? ಅವರು ಏನಾದರೂ ಒಂದು ಬಿಸಿನೆಸ್ ಮಾಡಬೇಕೆಂದರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳಡಿ ವ್ಯವಸ್ಥೆ ಕಲ್ಪಿಸಿ ಕೆಲಸ ಮಾಡಿಸಬಹುದು. ಹೆಚ್.ಐ.ವಿ. ರೋಗಕ್ಕೊಳಗಾದ ಹೆಣ್ಣು ಮಗಳಿಗೆ ಮತ್ತು ದೇವದಾಸಿಯರಿಗೆ ಹಣವನ್ನು ನೀಡಿದರೆ ವ್ಯಾಪಾರ, ವ್ಯವಹಾರ ಮಾಡಲು ಅವಕಾಶ ಇದೆ. ಆದರೆ, ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಹಣವನ್ನು ನೀಡಿದರೂ ಸಹ ಹೊರಗೆ ಹೋಗಿ, ಸಣ್ಣ ಅಂಗಡಿಯನ್ನಿಟ್ಟುಕೊಂಡು ವ್ಯಾಪಾರ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಆ ಅಂಗಡಿಗೆ ಯಾರು ಹೋಗುವುದಿಲ್ಲ; ಅವರೊಂದಿಗೆ ಯಾರು ಸೇರುವುದಿಲ್ಲ; ಒಪ್ಪಿಕೊಳ್ಳಲು

ತಯಾರಿಲ್ಲ. ಮೊದಲು ಸಮಾಜ ಒಪ್ಪಿಕೊಳ್ಳಬೇಕಲ್ಲವೇ? ಒಪ್ಪಿಕೊಳ್ಳಲು ತಯಾರಿಲ್ಲದೇ ವರ್ಜಿತವಾದಂತಹ ಒಂದು ಮಾನವ ಸಮುದಾಯದ ಗುಂಪಿನಲ್ಲಿರುವಂಥ ಜೀವಗಳಾಗಿದ್ದಾರೆ. ಹಾಗಾಗಿ, ಅವರಿಗೆ ಎಲ್ಲಾ ಸವಲತ್ತನ್ನು ಕೊಡಬೇಕು. ಈಗಾಗಲೇ ಹೇಳಿದ ಹಾಗೆ ಆಸಿಡ್ ದಾಳಿಯಾದ ಸಂದರ್ಭದಲ್ಲಿ ಯಾವ ಪರ್ಸೆಂಟೇಜ್‌ನಲ್ಲಿ ಅವರ ದೇಹಕ್ಕೆ ಹಾನಿಯಾಗಿದೆ ಎಂಬುದರ ಮೇಲೆ ಅವಲಂಬಿತವಾಗುತ್ತದೆ.

(ಮುಂದು)

(290) 10.03.2026/6.00/ ಎಸ್‌ಕೆ.ಎಂಡಿ (ಸಭಾಪತಿಯವರ ಉಪಸ್ಥಿತಿ)

**ಡಾ॥ ಉಮಾಶ್ರೀ (ಮುಂದು):**

ನಾವು ಕೆಲವು ಪ್ರಕರಣಗಳಲ್ಲಿ ಕೆಲವರನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಒಂದು ಹುಡುಗಿ ನನ್ನ ಟಚ್‌ನಲ್ಲಿ ಇದ್ದಾಳೆ. ಸರ್ಕಾರಿ ಆಸ್ಪತ್ರೆ ಮತ್ತು ಬೇರೆ ಬೇರೆ ಆಸ್ಪತ್ರೆಗಳಲ್ಲಿ Plastic surgery ಯನ್ನು ಮಾಡಿಸಿರುವುದು. ಅವಳು ಒಂದು ಕೆಲಸವನ್ನು ಕೇಳಿಕೊಂಡು ಬಂದಿದ್ದಳು. ಅಂತಹ ಸಂದರ್ಭದಲ್ಲಿ ಅವಳಿಗೆ ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡಿದೆ. ಸರ್ಕಾರಿ ಕೆಲಸ ತಕ್ಷಣದಲ್ಲಿ ಆಗುವುದಿಲ್ಲ ಎಂದರೆ, outsourcing ಗಳಲ್ಲಿ reservation ಇರುವುದನ್ನು ಕೇಳಿದ್ದೇನೆ. ಆ reservation ಕೊಡಿ. ಯಾವುದೇ ಕಾರಣಕ್ಕೂ ಕೂಡ ಕಡ್ಡಾಯವಾಗಿ outsourcing ನಲ್ಲಿಯಾದರೂ ಕೂಡ ಈ ಹೆಣ್ಣು ಮಕ್ಕಳಿಗೆ ಕೆಲಸ ಕೊಡುವುದಕ್ಕೆ ಮೊದಲ ಆದ್ಯತೆಯನ್ನು ಕೊಡುವಂತಹದ್ದಕ್ಕೆ ಅವರುಗಳಿಗೆ guide ಮಾಡಿ. ಕೆಲಸ ಕೊಡುವಂತಹ ವ್ಯವಸ್ಥೆಯನ್ನು create ಮಾಡಿ. Atleast ಅವರು ಬದುಕುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಶಿಕ್ಷಾ ಪರಿಸ್ಥಿತಿಯನ್ನು ಯಾರು ನಿರ್ಮಾಣ ಮಾಡಿದ್ದಾರೋ, ಅವರಿಗೆ ಶಿಕ್ಷೆಯಾಗುತ್ತಿಲ್ಲ. ಜೀವನ ಪರ್ಯಂತವಾಗಿ ಅನುಭವಿಸುವ ಶಾಪವೋ ಏನೆಂಬುದು ಗೊತ್ತಿಲ್ಲ. ಇದನ್ನು ಹೆಣ್ಣುಮಕ್ಕಳು ಅನುಭವಿಸಬೇಕಾಗಿರುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ, ಇನ್ನೂ ಬೇರೆ ರೀತಿಯ plastic surgery treatment ಮತ್ತೊಂದು ಖಾಸಗಿ ಆಸ್ಪತ್ರೆಯಲ್ಲಿ ಸಿಗುವಂತಹದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಆ ಸೌಲಭ್ಯವಿಲ್ಲ. ಖಾಸಗಿ ಆಸ್ಪತ್ರೆಯಲ್ಲಿ ಆ ಸೌಲಭ್ಯ ಸಿಗುವಂತಹದ್ದಕ್ಕೆ ಎಷ್ಟೇ ಹಣವಾಗಲೀ, ಆ ಸಂದರ್ಭದಲ್ಲಿ ಅವರದೇ ಆದಂತಹ ಒಂದು ನಿಧಿಯನ್ನು ಸ್ಥಾಪನೆ ಮಾಡಬೇಕು. ಸದನ ಬೇಜಾರು ಮಾಡಿಕೊಳ್ಳಬಾರದು. ನಮಗಾಗಲೀ ಅಥವಾ ಮಂತ್ರಿಗಳು, ಮಾಜಿ ಮಂತ್ರಿಗಳು, ಶಾಸಕರುಗಳಿಗೆ ಆರೋಗ್ಯದಲ್ಲಿ ಏನಾದರೂ ತೊಂದರೆಯಾದಾಗ, ಅವರಿಗೆ ಹತ್ತು ಲಕ್ಷ ರೂಪಾಯಿಗಳು, ಐವತ್ತು ಲಕ್ಷ ರೂಪಾಯಿಗಳು ಅಥವಾ ಕೋಟಿ ರೂಪಾಯಿಗಳವರೆಗೂ ಚಿಕಿತ್ಸೆ ಪಡೆಯುವುದಕ್ಕಾಗಿ ಅವಕಾಶವಿದ್ದು, ಅವರನ್ನು ಹೊರ ದೇಶಕ್ಕೆ ಕಳುಹಿಸಿ, ಬಿಲ್‌ನ್ನು ಸರ್ಕಾರ ಪಾವತಿ ಮಾಡಿರುವ ವ್ಯವಸ್ಥೆ ಇರುವುದನ್ನು ನಾವು ನೋಡಿದ್ದೇವೆ. ಆದರೆ ಇವರದೇ ಆದಂತಹ ನಿಧಿಯನ್ನು ಏತಕ್ಕೆ ಸ್ಥಾಪನೆ ಮಾಡಬಾರದು? ಒಂದಿಷ್ಟು ನಿಧಿಯನ್ನು ಸ್ಥಾಪನೆ ಮಾಡಿ, ಪ್ರತಿಯೊಬ್ಬರಿಗೂ ಅಂತಹ ಸಂದರ್ಭ ಬಂದಾಗ ಆ ನಿಧಿಯನ್ನು ಆಸ್ಪತ್ರೆಗೆ ನೇರವಾಗಿ ಕಳುಹಿಸುವಂತಹದ್ದು ಆಗಬೇಕು. ಮುಖ್ಯಮಂತ್ರಿಗಳ

ಪರಿಹಾರ ನಿಧಿ ಇದೆ. ಇದಕ್ಕಾಗಿಯೇ ವಿಶೇಷವಾಗಿ ನಿಧಿಯನ್ನು ಮೀಸಲಿಟ್ಟು, ಅದರ ಮೂಲಕವಾಗಿ ಖಾಸಗಿ ಆಸ್ಪತ್ರೆಗಳಿಗೆ ಕೊಟ್ಟರೆ, ಅದು ಕೂಡ ಅವರಿಗೆ ಸಹಾಯವಾಗುತ್ತದೆ. ಅದಕ್ಕೆ ಅಷ್ಟೊಂದು ಹಣ ಬೇಕಾಗುವುದಿಲ್ಲ ಹತ್ತು ಲಕ್ಷ, ಇಪ್ಪತ್ತು ಲಕ್ಷ ಅಥವಾ ಇಪ್ಪತ್ತೈದು ಲಕ್ಷ ರೂಪಾಯಿಗಳಾಗಲಿ, ಅವರ ಮುಖ ಸುಂದರವಾಗಿಯಾದರೆ atleast socially accepted ಎನ್ನುವಂತಾಗುತ್ತಾರೆ. ಅವರು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರು ಎಲ್ಲಿಯಾದರೂ ಹೋಗಿ ದುಡಿದುಕೊಂಡು ತಿನ್ನುವುದಕ್ಕೆ ಅನುಕೂಲವಾಗುತ್ತದೆ. ಇಂತಹ ಕಾರ್ಯಕ್ರಮಗಳನ್ನು ಇವತ್ತಿನ ದಿವಸ ಅನಿವಾರ್ಯವಾಗಿ ಕೊಡಲೇಬೇಕೆಂಬ ಒತ್ತಾಯಿಸುತ್ತಾ, ನಾನು ಕೂಡ ಮಾನ್ಯ ಶಿವಕುಮಾರ್ ಕೆ ಅವರು ತಂದಿರುವಂತಹ ಪ್ರಸ್ತಾವಕ್ಕೆ ಬೆಂಬಲಿಸುತ್ತೇನೆ. ನಾನು ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, ಆ ಹಿಂದೆ ಏನು ವಿಶೇಷ ಘಟಕದಲ್ಲಿ ಪೋಲೀಸರು ಅವರಿದ್ದಲ್ಲಿಗೆ ಬಂದು ಹೇಳಿಕೆಯನ್ನು ತೆಗೆದುಕೊಳ್ಳುವುದು, ರೆಕಾರ್ಡ್ ಮಾಡಿಕೊಳ್ಳುವುದು ಇತ್ತು. ಅದನ್ನು ಈಗಲೂ ಬಹುಶಃ ಮಾಡಿಸಬಹುದು. ಅದು ಏಕೆ ಆಗುತ್ತಿಲ್ಲ. ಒಂದು ವೇಳೆ ಹೇಳಿಕೆ ತೆಗೆದುಕೊಳ್ಳಬಹುದು. ಆದರೆ ಎಫ್.ಐ.ಆರ್.,ಗೆ ಏಕೆ ಹೋಗಬೇಕು. ಅವರುಗಳಿಗೆ ತಕ್ಷಣವೇ ಎಫ್.ಐ.ಆರ್. ನ ಪ್ರತಿ ಸಿಗುವ ಹಾಗೇ ಮಾಡುವಂತಹದ್ದು. ಆ ಶಿಕ್ಷೆಗೆ ಒಳಪಡಬೇಕಾದಂತಹ ವ್ಯಕ್ತಿಗಳನ್ನು ಯಾವುದೇ ಕಾರಣಕ್ಕೂ ಕೂಡ ಅವರು ತಪ್ಪಿಸಿಕೊಳ್ಳುವುದಕ್ಕಾಗಬಾರದು. ಅಂತಹ ಒಂದು ವ್ಯವಸ್ಥೆಯನ್ನು ಕಾನೂನು ಗಟ್ಟಿ ಮಾಡಬೇಕು. ಈಗಾಗಲೇ ಕಾನೂನು ಗಟ್ಟಿಯಾಗಿದೆ. ಅವನನ್ನು ಸಿಕ್ಕಿ ಹಾಕಿಸುವಂತಹ ಕೆಲಸವನ್ನು ಪೋಲೀಸರು ಮಾಡಬೇಕಾಗಿದೆ. ಆ ದೋಷಾರೋಪಣಾ ಪಟ್ಟಿಯಾಗುವಂತಹ ಸಂದರ್ಭದಲ್ಲಿ ಸಾಕ್ಷಿಗಳು ನಾಶವಾಗದೇ, ಅದು ಸಡಿಲವಾಗದೇ ಅದನ್ನು ಗಟ್ಟಿಯಾಗಿ ಮಾಡಿದರೆ ಅವರುಗಳಿಗೆ ಶಿಕ್ಷೆಯಾಗಿಯೇ ಆಗುತ್ತದೆ ಎನ್ನುವಂತಹ ನಂಬಿಕೆ ನನಗೆ ಇದೆ. ದಯವಿಟ್ಟು, ಕಾನೂನು ಮತ್ತು ಸಂವಿಧಾನದ ಮೇಲೆ ನಂಬಿಕೆಯನ್ನಿಟ್ಟುಕೊಂಡು ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಬಂದಿದ್ದೇವೆ. ಅದು ಹೌದು, ಅದು ಸತ್ಯ ಮತ್ತು ಅದಕ್ಕೆ ಬೆಲೆ ಬರಬೇಕು ಎನ್ನುವುದಾದರೆ ಅಂತಹವರಿಗೆ ಶಿಕ್ಷೆಯಾಗಬೇಕು. ಶಿಕ್ಷೆಯ ಪ್ರಮಾಣ ಬಹಳ ಕಡಿಮೆ ಇದೆ. ಅವರಿಗೆ ದೊಡ್ಡ ರೀತಿಯಲ್ಲಿ ಸಹಾಯಕ್ಕೆ ಸರ್ಕಾರ ಬರಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಮಸ್ಕಾರಗಳು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾಗಿರುವ ಶ್ರೀ ಶಿವಕುಮಾರ್ ಅವರು ತಂದಿರುವ ಗಮನ ಸೆಳೆಯುವ ಸೂಚನೆಯನ್ನು ನಾನು ಕೂಡ ಬೆಂಬಲಿಸುತ್ತೇನೆ. ಆಸಿಡ್ ದಾಳಿಗೊಳಗಾದ ಸಂತ್ರಸ್ತೆಯರ ವಿಚಾರದಲ್ಲಿ ನಾವು ಯಾರು ವಿವರಿಸುವುದಕ್ಕಾಗದ ರೀತಿಯಲ್ಲಿ ಅವರು ವಿವರಣೆಯನ್ನು ಕೊಟ್ಟಿದ್ದಾರೆ. ಒಂದು ರೀತಿಯಲ್ಲಿ ಮಾನ್ಯ ಶಿವಕುಮಾರ್ ಅವರು ಇಷ್ಟೊಂದು ತೀಕ್ಷ್ಣವಾಗಿ ತೆಗೆದುಕೊಂಡಿದ್ದಾರೆಂದರೆ, ಅವರದು ತಾಯಿ ಕರುಳು ಎಂದು ನಾನು ಭಾವಿಸುತ್ತೇನೆ. ಇದೊಂದು ರೀತಿಯಲ್ಲಿ ಕರುಳು ಕಿತ್ತು ಬರುವಂತಹ ಒಂದು ರೀತಿಯ ಸಮಸ್ಯೆ. ಯಾರೋ ಆಸಿಡ್ ಹಾಕುತ್ತಾರೆ. ಸುಂದರವಾಗಿರುವ ಹೆಣ್ಣು ಮಕ್ಕಳಿಗೆ ಈ ರೀತಿ ಆಗಬಹುದು. ಇದೊಂದು ರೀತಿ ವಿಪರ್ಯಾಸ. ಆಸಿಡ್

ಹಾಕಿದವನಿಗೆ ಶಿಕ್ಷೆಯಾಗುತ್ತದೆಯೋ ಗೊತ್ತಿಲ್ಲ. ಅವರು ಜೀವನ ಪರ್ಯಂತ ಶಿಕ್ಷೆಯನ್ನು ಅನುಭವಿಸುವಂತಹ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ತಾವು ಎತ್ತ ಮಕ್ಕಳೇ, ಆ ತಾಯಿಯನ್ನು ದೂರವಿಡಿ ಎನ್ನುವಂತಹ ಮಾತು ಬಂದರೆ, ಯಾವ ರೀತಿ ಆಗುತ್ತದೆ? ಬಹುಶಃ ನಮಗೆ ಈ ರೀತಿ ಏನಾದರೂ ಆದಾಗ, ನಾವು ಕೂಡ ಇದನ್ನು ಯೋಚನೆ ಮಾಡಬೇಕೆಂಬ ವಿಚಾರವಾಗಿದೆ. ಆ ಕಾರಣದಿಂದ ಅವರು ಕೇಳಿರುವಂತಹದ್ದು ಬೇರೆ ಏನಿಲ್ಲ. ಅವರಿಗೆ ವಸತಿ ಕೊಡಬೇಕು. ವೈದ್ಯಕೀಯ ಚಿಕಿತ್ಸೆಗೆ ಸಹಕಾರಿಯಾಗುವಂತಹದ್ದಕ್ಕೆ ಒಂದು ವ್ಯವಸ್ಥೆಯಾಗಬೇಕು. ಇದು ಅವರಿಗೆ ಸಿಗುವಂತಹ ಒಂದು ಮಾನಸಿಕ ಪರಿಹಾರವಷ್ಟೆ. ಅವರು ಸೌಂದರ್ಯದಿಂದ ಹೊರಗೆ ಹೋಗಿ ಕುರೂಪಿಗಳಾದರೆ, ಸರ್ಕಾರವೇ ಆಗಿರಬಹುದು ಅಥವಾ ನಾವೇ ಆಗಿರಬಹುದು. ನಾವು ಅವರಿಗೆ ಆ ಸೌಂದರ್ಯವನ್ನು ಮರಳಿ ವಾಪಸ್ಸು ತರುವುದಕ್ಕೆ ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಅವರ ಜೀವನೋಪಾಯಕ್ಕೆ ಸರ್ಕಾರ ಮುಂದೆ ಬರಬೇಕಾಗುತ್ತದೆ. ಲಕ್ಷಾಂತರ ಜನರಿಗೆ ವಸತಿಯನ್ನು ಸರ್ಕಾರ ಕಲ್ಪಿಸುತ್ತದೆ ಆದರೆ ಈ 170 ಜನರಿಗೆ ಇಷ್ಟೊಂದು ಸಮಯ ಕಳೆದರೂ, ಅವರಿಗೆ ವಸತಿ ಒದಗಿಸಿಕೊಡದೇ ಸತಾಯಿಸುತ್ತಿರುವುದು ಇದೆಯೆಲ್ಲಾ, ಇದನ್ನೂ ಕೂಡ ಸಹಿಸುವುದಕ್ಕಾಗುವುದಿಲ್ಲ. ಮಾನ್ಯ ಶಿವಕುಮಾರ್‌ರವರು ಅವರು ಹೇಳಿದಾಗೇ ಹಿಂದೆ ಒಂದು ಆದೇಶ ಹೊರಡಿಸಿದರು. ಅದೇ ಆದೇಶವನ್ನು ನಾಲ್ಕು ವರ್ಷಗಳಾದ ಮೇಲೆ ಆ ದಿನಾಂಕವನ್ನು ಬದಲಾಯಿಸಿ, ಅದೇ ಆದೇಶವನ್ನು ಕೊಟ್ಟರು. ಈಗ ಕೇಳಿದಾಗ, ನಾಲ್ಕು ವರ್ಷಗಳಾದ ಮೇಲೆ ಮತ್ತೆ ಅದೇ ಆದೇಶ ಬಂದಿದೆ. ಆದರೆ ಪರಿಹಾರ ಏನಾಗಿದೆ? ಆ ಕಾರಣದಿಂದ ನಾನು ಕೇಳುವುದೇನೆಂದರೆ, ಮಾನ್ಯ ಗೃಹ ಸಚಿವರು ಇರಬಹುದು ಅಥವಾ ಮಾನ್ಯ ಮಹಿಳಾ ಮಕ್ಕಳ ಕಲ್ಯಾಣ ಸಚಿವರಾಗಿ ಇರಬಹುದು. ವಸತಿ ಸಚಿವರು ಇರಬಹುದು. ಇದು ಒಬ್ಬರ ಕೆಲಸವಲ್ಲ. ಇದಕ್ಕೆ ಸರ್ಕಾರದಿಂದ ಸರ್ಕಾರದ ಕೆಲಸ ಆಗಬೇಕು. ಆ ಕಾರಣದಿಂದ ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಇದಕ್ಕೆ ಪರಿಹಾರ ಕೊಡಬೇಕು. ಅವರು ಮನುಷ್ಯರಾಗಿ ಬಾಳುವುದಕ್ಕಾಗಿ ಸರ್ಕಾರ ಇದನ್ನು ಕೈಗೆತ್ತಿಕೊಂಡು ಪರಿಹಾರವನ್ನು ತಕ್ಷಣಕ್ಕೆ ಜಾರಿಗೆ ತರುವಂತಹ ಕೆಲಸವನ್ನು ಮಾಡಬೇಕು. ಇದು ಬಹು ದೊಡ್ಡ ವಿಷಯವಲ್ಲ. ಕೇವಲ ಪಟ್ಟಿಯಲ್ಲಿ 170 ಜನರು ಇರುವಂತಹದ್ದಾಗಿದ್ದು, ಈ 170 ಜನರಿಗೆ ನಾವು ಸಹಕಾರ ಕೊಡಲಿಲ್ಲ ಎಂದರೆ, ಇದರ ಬಗ್ಗೆ ಕೇವಲ ಭಾಷಣ ಮಾಡುವುದು ಸರಿಯಲ್ಲ. ಇದಕ್ಕೆ ತುತ್ತಾಗಿರುವಂತಹವರೆಲ್ಲರೂ ಕೂಡ ಹೆಣ್ಣುಮಕ್ಕಳು. ಅವರು ತಾಯಂದಿರು. ಅದರಿಂದಾಗಿ ದಯವಿಟ್ಟು, ಇದನ್ನು ವಿಶೇಷ ಆದ್ಯತೆಯ ಮೇರೆಗೆ ಸರ್ಕಾರ ತೆಗೆದುಕೊಳ್ಳಬೇಕು. ಆ ವಿಚಾರಕ್ಕೆ ಸದನ ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ನಮಸ್ಕಾರಗಳು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ಈಗಾಗಲೇ ಅವರಿಗೆ ಕಳುಹಿಸಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಎಲ್ಲರೂ ಕೂಡ ಸಹಿ ಮಾಡಿದ್ದಾರೆ. ಅದರ ಜೊತೆಗೆ ಆಸಿಡ್ ದಾಳಿಗೊಳಗಾದಂತಹವರಿಗೆ.....

**ಸಭಾಪತಿಯವರು:-** ತಾವು ಕುಳಿತುಕೊಳ್ಳಿ. ತಾವು ಹೇಳುವ ಮುಂಚೆಯೇ ಕಳುಹಿಸಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಧನ್ಯವಾದಗಳು

**ಸಭಾಪತಿಯವರು:-** ನಾನು ಈಗಾಗಲೇ ಅವರಿಗೆ ಹೇಳಿದ್ದೇನೆ.

**ಡಾ॥ ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ನಾನು ಸದನಕ್ಕೆ ತಡವಾಗಿ ಬಂದಿದ್ದಕ್ಕೆ ತಾವು ಕ್ಷಮಿಸಿದ್ದೀರಾ ಎಂದು ನಾನು ಭಾವಿಸುತ್ತೇನೆ. ಕೆಳಗಿನ ಮನೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇಬ್ಬರೇ ಮುಂದಿನ ಸಾಲಿನಲ್ಲಿ ಇರಬೇಕಾದಂತಹ ಅನಿವಾರ್ಯತೆ ಇದ್ದುದರಿಂದ, ನಾನು ಅಲ್ಲಿ ಇರಬೇಕಾಯಿತು. ಹಾಗಾಗಿ, ನಾನು ಸದನಕ್ಕೆ ತಡವಾಗಿ ಬಂದಿದ್ದೇನೆ. ಮಾನ್ಯ ಶಿವಕುಮಾರ್ ಅವರು ಬಹಳ ಗಂಭೀರವಾದಂತಹ, ಮಾನವೀಯತೆಯ ದೃಷ್ಟಿಯಿಂದ ಈ ಒಂದು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ. ಬಹುಶಃ ಸದನದಲ್ಲಿರುವ ಸದಸ್ಯರೆಲ್ಲರೂ ಕೂಡ ಮಾತನಾಡಿದಂತಹವರು ಮತ್ತು ಮಾತನಾಡದೇ ಇರುವ ಸದಸ್ಯರು ಇರಬಹುದು. ಅವರೆಲ್ಲರೂ ಕೂಡ ಇದಕ್ಕೆ ಒಪ್ಪಿಗೆ ಸೂಚಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಮೂರು ನಾಲ್ಕು ಇಲಾಖೆಗಳ ಪರವಾಗಿ ನಾನು ಇದಕ್ಕೆ ಉತ್ತರ ಕೊಡುವಂತಹದ್ದರ ಜೊತೆಗೆ, ಸರ್ಕಾರ ಎನ್ನುವುದರ ಜೊತೆಯಲ್ಲಿ ನಾನೊಬ್ಬ ಸಹೋದರನಾಗಿ ಉತ್ತರವನ್ನು ಕೊಡುತ್ತಿದ್ದೇನೆ. ಇವತ್ತು ಯಾವ ಯಾವ ಕಾರಣಕ್ಕೆ ಈ ರೀತಿಯ ಆಸಿಡ್ ದಾಳಿಗಳು ನಡೆಯುತ್ತದೆ ಎಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ.

**(ಮುಂದು)**

(291) 10.03.2026 6.10 ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ.ಜಿ.ಪರಮೇಶ್ವರ (ಮುಂದು)**

ನಾವು ಅನೇಕ ಘಟನೆಗಳನ್ನು ನೋಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅವರ ಸೌಂದರ್ಯಕ್ಕೋ ಅಥವಾ ಅವರ ಕುಟುಂಬದ ಕಲಹಕ್ಕೋ ಅಥವಾ ಬೇರೆ ಬೇರೆ ಕಾರಣಗಳಿಂದ ಇಂತಹ ದಾಳಿಗಳು ಮತ್ತು ಘಟನೆಗಳು ನಡೆದಿರುವುದನ್ನು ನಾವು ನೋಡಿದ್ದೇವೆ. ಇವತ್ತಿನ ದಿವಸ ಮಾನ್ಯ ಶಿವಕುಮಾರ್.ಕೆ ರವರು ಏನು ಪ್ರಸ್ತಾಪ ಮಾಡಿದ್ದಾರೆ. 2023ನೇ ಸಾಲಿನಲ್ಲಿ ಆಸಿಡ್ ದಾಳಿಗೆ ಸಂಬಂಧಪಟ್ಟಂತೆ ಮತ್ತು ಜೊತೆಯಲ್ಲಿ ಇಡೀ ರಾಜ್ಯದಲ್ಲಿ ಇಲ್ಲಿಯವರೆಗೂ ಈ ಘಟನೆಯಲ್ಲಿ ಸಿಕ್ಕಿಹಾಕಿಕೊಂಡಂತಹ ಸಹೋದರಿಯರು, ತಾಯಂದಿರು ಒಟ್ಟು 169 ಜನ ಇದ್ದಾರೆ ಎಂದು ಅಂಕಿ-ಅಂಶಗಳಿಂದ ಗೊತ್ತಾಗುತ್ತಿದೆ. ಸರ್ಕಾರ ತನ್ನ ಇತಿಮಿತಿಯಲ್ಲಿ ಅನೇಕ ಆದೇಶಗಳನ್ನು ಹೊರಡಿಸಿ ಆಗಿಂದಾಗ್ಗೆ ಅವರಿಗೆ ಸಹಾಯವನ್ನು ಮಾಡತಕ್ಕಂಥ ಪ್ರಯತ್ನವನ್ನು ಕೂಡ ಮಾಡಿದೆ. ನಾವು ಮಾಡಿಲ್ಲವೆಂದೇನಿಲ್ಲ. ಆದರೆ ಅವರಿಗೆ ಜೀವನ ನಡೆಸುವುದಕ್ಕೆ. ಒಂದುವೇಳೆ ಅವರು ಸತ್ತುಹೋಗಿದ್ದರೆ ಬೇರೆ

ವಿಷಯ. ಆದರೆ ಈಗ ಅವರು ಜೀವ ಇದ್ದು, ಜೀವನವನ್ನು ನಡೆಸುವುದಕ್ಕೆ ಅವರಿಗೆ ಸಮಾಜವಾಗಲೀ ಅಥವಾ ಸರ್ಕಾರವಾಗಲೀ ಅಥವಾ ನಾವಾಗಲೀ ಕೈಚಾಚಬೇಕಾದಂಥದ್ದು ಬಹಳ ಮುಖ್ಯ. ಹಾಗಾಗಿ ಇವತ್ತಿನ ದಿವಸ ನಾನು ಈಗಾಗಲೇ ವಿವರವಾದ ಉತ್ತರವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ವತಿಯಿಂದ ತೆಗೆದುಕೊಂಡು ವಿವರವಾಗಿ ಉತ್ತರ ಕೊಟ್ಟಿದ್ದೇನೆ. ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಸಮಸ್ಯೆಗಳೇನಿವೆಯೆಂದರೆ, ದಿನಾಂಕ 11.04.2022ರ ಆದೇಶದ ಪ್ರಕಾರ ಅವರಿಗೆ ರೂ. 10,000 ಗಳು ಪಿಂಚಣಿ ಕೊಡಲಾಗುವುದು ಎಂದು ಈಗಾಗಲೇ ಪ್ರಕಟಣೆ ಮಾಡಿ ಸುಮಾರು 59 ಜನರಿಗೆ ಕೊಟ್ಟಿದ್ದಾರೆ. ಇನ್ನೂ ಬೇರೆಯವರಿಗೆ ಕೊಡುವುದು processನಲ್ಲಿದೆ. ಆದರೆ ಈಗಿನ ಈ ಚರ್ಚೆಯನ್ನು ಅರ್ಥ ಮಾಡಿಕೊಂಡು ನಾನು ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರಿಗೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಈ ರೂ. 10,000 ಗಳು ಪಿಂಚಣಿಯನ್ನು ರೂ. 50,000 ಗಳಿಗೆ ಪಿಂಚಣಿಯನ್ನು ಹೆಚ್ಚಳ ಮಾಡುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರ ಮನವನ್ನು ಒಲಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, ಮಾನ್ಯ ಸಹೋದರಿ ಶ್ರೀಮತಿ ಭಾರತಿ ಶೆಟ್ಟಿಯವರು ಆಸಿಡ್ ಸುಲಭವಾಗಿ ಸಿಗುತ್ತದೆ. ಆಸಿಡ್ purchase ಮಾಡುವುದು ಹೇಗೆ ಸಾಧ್ಯವಾಗುತ್ತದೆ ಎಂದು ಕೇಳಿದರು. ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಆದರೂ ಕೂಡ ಅದರ ಮಾಹಿತಿಯನ್ನು ತೆಗೆದುಕೊಂಡು ಯಾವ ರೀತಿ ಈ ಆಸಿಡ್ ಅನ್ನು purchase ಮಾಡುವುದಕ್ಕೆ regulate ಮಾಡಬಹುದು. ಏಕೆಂದರೆ laboratory ಗಳಲ್ಲಿ purchase ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಆದರೆ ಒಂದುವೇಳೆ ಯಾರಾದರೂ private ನವರು ಅಂಗಡಿಗೆ ಹೋಗಿ ಆಸಿಡ್ purchase ಮಾಡುವುದಕ್ಕೆ ಅವಕಾಶ ಇದ್ದರೆ, ಅದನ್ನು ನಿಲ್ಲಿಸುವಂಥ ಪ್ರಯತ್ನವನ್ನು ಕೂಡ ನಾನು ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಅವರಿಗೆ ವಾಸಸ್ಥಳ ಮತ್ತು ವಸತಿ ಸೌಲಭ್ಯ ಕೊಡುವ ವಿಚಾರದಲ್ಲಿ ಈಗಾಗಲೇ Karnataka Slum Development Board ನವರು ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಮನೆಗಳನ್ನು ಕೊಡುವುದಕ್ಕೆ ಅವರಿಗೆಲ್ಲಾ recommendations ಮಾಡಿದ್ದಾರೆ. ಆದರೆ ಆದಷ್ಟು ಶೀಘ್ರವಾಗಿ ಎಲ್ಲೆಲ್ಲಿ ಅವರು ಯಾವ್ಯಾವ ಊರಿನಲ್ಲಿ ಇದ್ದಾರೆ ಅಲ್ಲಿ ಅವರಿಗೆ ಉಚಿತವಾಗಿ Karnataka Slum Development Board ನವರು ಇರಬಹುದು ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅವರಿಗೆ ಮನೆಗಳನ್ನು ಕೊಡುವುದಕ್ಕೆ ಏರ್ಪಾಟು ಮಾಡುತ್ತೇವೆ. ಸುಮಾರು 169 ಜನರಿಗೂ ಕೂಡ ಮನೆಗಳನ್ನು ಕೊಡುವುದಕ್ಕೆ ಏರ್ಪಾಟು ಮಾಡುತ್ತೇವೆಂದು ಈ ಸಂದರ್ಭದಲ್ಲಿ ನಾನು ಈ ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಮಾನ್ಯ ಸದಸ್ಯರಾದ ಶಿವಕುಮಾರ್.ಕೆ ರವರು ಪೋಲೀಸ್ ಇಲಾಖೆಯಲ್ಲಿ conviction rate ಬಹಳ ಕಡಿಮೆ ಇದೆಯೆಂದು ಪ್ರಸ್ತಾಪ ಮಾಡಿದರು.

ಮಾನ್ಯ ಸಭಾಪತಿಯವರೇ, ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇತ್ತೀಚೆಗೆ ಏನಾಗಿದೆಯೆಂದರೆ, ಎಸ್.ಸಿ ಮತ್ತು ಎಸ್.ಟಿ ಕೇಸ್‌ಗಳಲ್ಲಿ ನಮ್ಮ conviction rate ಬಹಳಷ್ಟು ಕಡಿಮೆ ಇದೆ. ಶೇ.3ರಷ್ಟಿದೆ. ಇತ್ತೀಚೆಗೆ

ನಾವು ಅದನ್ನು review ಮಾಡುವಾಗ ಅದಕ್ಕೆ ಕಾರಣವನ್ನು ಕೂಡ ಹುಡುಕಿದ್ದೇವೆ. ಹಾಗಾಗಿ, ಈ cases ನಲ್ಲೂ ಕೂಡ ನಾನು ಪರಿಶೀಲನೆ ಮಾಡಿ ಯಾವ ರೀತಿ ಈ conviction ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಕೂಡ ನಾನು ಗೃಹ ಸಚಿವನಾಗಿ ನನ್ನ ಇಲಾಖೆಗೆ ಸಂಬಂಧಪಟ್ಟಿದ್ದನ್ನು ನಾನು ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಆಮೇಲೆ ಅವರಿಗೆ ಉದ್ಯೋಗ ಕೊಡತಕ್ಕಂಥದ್ದು. ಈಗಾಗಲೇ ಸುಮಾರು ರೂ. 2 ಕೋಟಿಗಳನ್ನು ಮೀಸಲಿಟ್ಟು ಬರೀ ರೂ.5 ಲಕ್ಷಗಳು ಬಡ್ಡಿ ರಹಿತ ಸಾಲವೆಂದು ಕೊಡುತ್ತಿದ್ದಾರೆ. ಅದನ್ನು ಸಾಲವೆಂದು ಕೊಡಬಾರದು. ಅದನ್ನು ಅವರಿಗೆ ಯಾವುದಾದರು ಒಂದು grant ಮೂಲಕ grant ಎನ್ನುವ ರೀತಿಯಲ್ಲಿ ಕೊಡುವುದಕ್ಕೆ ಕೂಡ ವ್ಯವಸ್ಥೆ ಮಾಡಬೇಕಿದೆ. ಏಕೆಂದರೆ ಬರೀ ರೂ.5 ಲಕ್ಷಗಳು ಸಾಲವೆಂದು ಕೊಡುವ ಬದಲು ಅದನ್ನು grant ಎಂದು ಸರ್ಕಾರದ ವತಿಯಿಂದ ಕೊಡುವುದಕ್ಕೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಈ ಒಂದು ಸಮಾಜ ತಲೆತಗ್ಗಿಸುವಂಥ ಇಂತಹ ಕೃತ್ಯಗಳು ನಡೆಯುತ್ತಿವೆ, ಈ ಘಟನೆಗಳು ನಡೆಯುತ್ತಿವೆ. ಅದನ್ನು ಆದಷ್ಟು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ಸಹೋದರಿಯಾದ ಡಾ: ಉಮಾಶ್ರೀಯವರು F.I.R ಹಾಕುವುದಕ್ಕೆ ಅವರೇ ಓಡಾಡಬೇಕು ಎಂದು ಹೇಳಿದರು. Unless there is a complaint, F.I.R register ಆಗುವುದಿಲ್ಲ. ಯಾರಾದರೂ complaint ಕೊಡಲೇಬೇಕಾಗುತ್ತದೆ. ಆದರೆ ಅವರನ್ನು ಓಡಾಡಿಸುವ ಬದಲು ಪೋಲೀಸ್‌ನವರೇ ಅವರ ಮನೆ ಬಾಗಿಲಿಗೆ ಹೋಗಿ F.I.R register ಮಾಡಿಕೊಡತಕ್ಕಂಥ ಒಂದು ಪದ್ಧತಿಯನ್ನು ಕೂಡ ಈಗಾಗಲೇ ಇದೆ. ಇಂತಹ ಸಂದರ್ಭಗಳು ಬಂದಾಗ ಪೋಲೀಸ್‌ನವರೇ ಅವರ ಮನೆಗೆ ಹೋಗಿ F.I.R register ಮಾಡುವುದು ಮಾಡುತ್ತಾರೆ.

**ಡಾ: ಉಮಾಶ್ರೀ:–** ಮಾನ್ಯ ಸಭಾಪತಿಯವರೇ, ಪೋಲೀಸ್‌ನವರು ಅವರ ಮನೆಗೆ ಹೋಗಿ ಹೇಳಿಕೆ ತೆಗೆದುಕೊಳ್ಳುತ್ತಾರಲ್ಲ ಅದರ ಬಗ್ಗೆ ಕೇಳಿದೆನು.

**ಸಭಾಪತಿಯವರು:–** ಡಾ: ಉಮಾಶ್ರೀ ತಾವು ಆಮೇಲೆ ಕೇಳಿ.

**ಡಾ.ಜಿ.ಪರಮೇಶ್ವರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, Police Department ನಲ್ಲಿ ನಾವು free and fair registration of F.I.R cases, ಅದನ್ನು mandate ಆಗಿ ಇಟ್ಟುಕೊಂಡಿದ್ದೇವೆ. ವಿಶೇಷವಾಗಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಇಂತಹ ಕೇಸ್‌ಗಳು ಬಂದಾಗ ಪೋಲೀಸ್ ಇಲಾಖೆಯಲ್ಲಿ ಇದು ಒಂದು ಘೋಷಾವಾಕ್ಯವಾಗಿದೆ. ಆದ್ದರಿಂದ ಅದಕ್ಕೇನು ತೊಂದರೆಯಾಗುವುದಿಲ್ಲ. ಅದನ್ನು ಕೂಡ ನಾವು ಮಾಡುವುದಕ್ಕೆ ಸೂಕ್ತವಾದ ಆದೇಶವನ್ನು ಮಾಡುತ್ತೇನೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ನಾವೆಲ್ಲಾ ಮನುಷ್ಯರು ಮನುಷ್ಯರಂತೆ ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಆ ಮಾನವೀಯತೆಯನ್ನು ಮನುಷ್ಯರಿಗೆ ನಾವು ಯಾವ ರೀತಿ ತಿಳಿಸುವುದಕ್ಕಾಗುತ್ತದೆ. ಅವರೇ ಅರ್ಥ ಮಾಡಿಕೊಳ್ಳಬೇಕು. ಸಂದರ್ಭ ಹೇಗೆ ಬರುತ್ತದೋ ಗೊತ್ತಿಲ್ಲ. ಯಾರೋ ಒಬ್ಬರು spur of the moment ನಲ್ಲಿ

ಆಸಿಡ್ ಎರಚಿ ಹೋಗಿಬಿಡುತ್ತಾನೆ. ಅವನು ತಪ್ಪಿಸಿಕೊಂಡು ಹೋಗಬಹುದು. ಕೊನೆಪಕ್ಷ ಆತನನ್ನು ಒಂದಷ್ಟು ವರ್ಷಗಳ ಕಾಲ ಜೈಲಿಗೆ ಹಾಕಬಹುದು. ಆದರೆ ಇಡೀ ಜೀವನವನ್ನು ಕಳೆದುಕೊಳ್ಳತಕ್ಕಂಥ ಈ ಸಹೋದರಿಯರ ಪರವಾಗಿ ನಾವೆಲ್ಲರೂ ಕೂಡ ನಿಲ್ಲಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಉಳಿದ ಯಾವುದೇ ಸಲಹೆ ಮತ್ತು ಸೂಚನೆಗಳಿದ್ದರೆ ಈಗ ನಾನು ಮಾನ್ಯ Labour Minister ರವರಿಗೆ ಅವರ ಇಲಾಖೆಯಿಂದ ಅವರಿಗೆ ಏನಾದರೂ ಅನುಕೂಲ ಮಾಡುವುದಕ್ಕೆ ಆಗುತ್ತದೆಯೇ ಎಂದು request ಮಾಡಿದೆನು. ಅವರ ಇಲಾಖೆಯಲ್ಲಿ Karnataka State Unorganized Workers Social Security Board ಇದೆ. ಆ Karnataka State Unorganized Workers Social Security Board ನಿಂದಲೂ ಕೂಡ ಅವರಿಗೆ ಸಹಾಯ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ಅಷ್ಟೂ ಜನರಿಗೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಸಂತೋಷ್ ಎಸ್.ಲಾಡ್ ರವರು ಕೂಡ ಹೇಳಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಆದ್ದರಿಂದ ನಾವೆಲ್ಲರೂ ಕೂಡ ಇದರಲ್ಲಿ ಮಾನವೀಯತೆ ದೃಷ್ಟಿಯಿಂದ ನಡೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ . . .

**ಸಭಾಪತಿಯವರು:–** ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ನವರೇ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದ ನಂತರ ತಾವು ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶಿವಕುಮಾರ್.ಕೆ ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಡೀ ಪ್ರಪಂಚದಲ್ಲೇ ಈ issue ನಡೆಯುತ್ತಿದೆ. ಮಧ್ಯೆ ಮಧ್ಯೆ ಅಲ್ಲಿ ಇಲ್ಲಿ ಈ ರೀತಿ misuse ಮಾಡುವಂಥದ್ದು ಆಗುತ್ತಿದೆ. ಅನೇಕ ಪ್ರಕರಣಗಳಲ್ಲಿ ಈ ರೀತಿ ದಾಳಿ ಮಾಡುವುದೆಲ್ಲಾ ನಡೆಯುತ್ತಿದೆ. ಈ ವಿಚಾರದಲ್ಲಿ ನಾನು full debate ಗೆ ಇರಲಲ್ಲ. ನಾನು ಇಲ್ಲಿಗೆ ಬಂದ ನಂತರ ನಮ್ಮ ಮಾನ್ಯ ಗೃಹ ಸಚಿವರಾದ ಡಾ: ಜಿ. ಪರಮೇಶ್ವರ ರವರು reply ಮಾಡುವ ವಿಚಾರ ಗೊತ್ತಾಯಿತು. ಮೊದಲು ನಾವೇ ಇದನ್ನು ಜಾಗೃತಿ ಮೂಡಿಸುವಂಥ ಕೆಲಸ ಮಾಡಬೇಕು. Initial stage ನಿಂದಲೇ ಇದನ್ನು ಖಂಡಿಸಬೇಕು. ಎಲ್ಲೆಲ್ಲಿ ಇಂತಹ ಆಸಿಡ್ ಮಾರುತ್ತಾರೆ ಇಂತಹ ಏನೇನು issues ಮಾಡುತ್ತಾರೆ ಅಂತಹವರಿಗೆಲ್ಲಾ, ಅವರು ಯಾರಿಗೆ chemicals ಕೊಡುತ್ತಿದ್ದಾರೆ ಅದನ್ನು ಮೊದಲು ನಾವು control ತೆಗೆದುಕೊಳ್ಳಬೇಕು. ಅವರು control ತೆಗೆದುಕೊಳ್ಳದಿದ್ದರೆ, ಅವರು ಏತಕ್ಕೆ ಉಪಯೋಗಿಸುತ್ತಾರೆ; ಆ ರೀತಿ ಮಾಡುತ್ತಾರೆ. ಏಕೆಂದರೆ ಈ ರೀತಿ

ಹಲವಾರು cases ಆಗಿಬಿಟ್ಟಿವೆ. ಆ ದೃಷ್ಟಿಯಿಂದ ಉಳಿದ ವಿಚಾರವನ್ನು ಮಾನ್ಯ ಗೃಹ ಸಚಿವರು ಬಹಳ clear ಆಗಿ ಹೇಳಿದ್ದಾರೆ.

**(ಮುಂದು)**

(292)10.3.2026/6.20/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಉಪಮುಖ್ಯಮಂತ್ರಿಗಳು) (ಮುಂದು):-**

ಮಾನ್ಯ ಗೃಹ ಸಚಿವರು ಸರ್ಕಾರದಿಂದ ಯಾವ ರೀತಿ ಸಹಾಯ ಮಾಡಬೇಕೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಹೆಣ್ಣುಮಕ್ಕಳು ಏನು ಮಾತನಾಡುತ್ತಿದ್ದರು ಅವರ ಕಾಳಜಿ ನನಗೆ ಅರ್ಥವಾಗುತ್ತದೆ. ಬೆಂಗಳೂರಿನಲ್ಲಿ ಹಾಗೂ ನಗರಗಳಲ್ಲಿ ವಿದ್ಯಾಭ್ಯಾಸ ಮಾಡುವವರು ಸ್ವಲ್ಪ ಜಾಸ್ತಿ ಇರುವುದರಿಂದ ಇಂತಹ ಘಟನೆಗಳು ಜಾಸ್ತಿಯಾಗುತ್ತಿವೆ. ಇಂತಹ ಪ್ರಕರಣಗಳಲ್ಲಿ ಒಂದು Special Court ಅನ್ನು ಮಾಡಿದರೆ, ದೆಹಲಿಯಲ್ಲಿ ಯಾವ ರೀತಿ Fast Track Courts ಮಾಡಿದ್ದಾರೆ, ಅದನ್ನು ಮಾಡಿದರೆ ಬಹುಶಃ ಇನ್ನು ಮುಂದಕ್ಕೆ ಸ್ವಲ್ಪ ಭಯ ಇರುತ್ತದೆ. ‘ನಿರ್ಭಯ’ದಂತಹ ಕೇಸ್‌ಗಳಾದ ಮೇಲೆ ಈಗ ಸ್ವಲ್ಪ ಭಯ ಬಂದಿದೆ. ಇದನ್ನು ಯಾರೂ disclose ಮಾಡದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. Disclose ಮಾಡುವವರು ಯಾರಾದರೂ ಇರಲೇಬೇಕು. ಆ ದೃಷ್ಟಿಯಿಂದ ನಾವು ಸರ್ಕಾರ ಕೂಡ ಬಹಳ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶಿವಕುಮಾರ್‌ರವರು ಕೊಟ್ಟ ಸಲಹೆ ಬಹಳ emotional ಆಗಿತ್ತು. ಈಗಾಗಲೇ ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ನಮ್ಮ ಇಲಾಖೆಯ ಕಾರ್ಯದರ್ಶಿಯವರ ಜೊತೆ ಈಗ ತಾನೇ ಮಾತನಾಡಿದೆ. Initially ಆ ತರಹ ಅಪಘಾತವಾದಂತಹ ಸಂದರ್ಭದಲ್ಲಿ ಅಥವಾ ಅವರಿಗೆ ಆಸಿಡ್ ದಾಳಿಯಾದಂತಹ ಸಂದರ್ಭದಲ್ಲಿ ನಮ್ಮ ಬೋರ್ಡ್‌ನಿಂದ ಸುಮಾರು 2 ಲಕ್ಷ ರೂಪಾಯಿಗಳ ವರೆಗೆ relief ಕೊಡುವಂಥದ್ದನ್ನು ನಾವು ಮಾಡುತ್ತೇವೆ. ಸಾಹೇಬರು ಕೂಡ ಹೇಳಿದ್ದಾರೆ. ಖಂಡಿತವಾಗಿಯೂ we will look into it based on criteria. ಅಂದರೆ ಎಷ್ಟು burn ಆಗಿದೆ ಎಂಬ criteria ವನ್ನು ಚೆಕ್ ಮಾಡಿ ನಾವು 2 ಲಕ್ಷ ರೂಪಾಯಿಗಳವರೆಗೆ ಪರಿಹಾರ ಕೊಡುವುದನ್ನು ನಮ್ಮ Karnataka State Unorganized Workers Social Security Board ನಿಂದ ಮಾಡುತ್ತೇವೆಂದು ಹೇಳಬಯಸುತ್ತೇನೆ.

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಅವರಿಗೆ ಎಫ್.ಐ.ಆರ್. ಮಾಡಬೇಕೆಂದು ಹೇಳಿದರು. ನಾನು ಅದರ ಬಗ್ಗೆ ಹೇಳುತ್ತಿಲ್ಲ. ಈಗೆಲ್ಲಾ online ನಲ್ಲಿ upload ಮಾಡುತ್ತಿದ್ದಾರೆ. 10-15 ವರ್ಷಗಳ ಹಿಂದೆ ದಾಳಿಗೊಳಗಾಗಿರುವವರು ಪರಿಹಾರ ತೆಗೆದುಕೊಳ್ಳಬೇಕೆಂದರೆ ಮಾಸಾಶನ ತೆಗೆದುಕೊಳ್ಳಬೇಕಾದರೆ ಎಫ್.ಐ.ಆರ್. ಪ್ರತಿ, **Unique Disability ID** Card ಎಲ್ಲವನ್ನೂ ತೆಗೆದುಕೊಂಡು ಹೋಗಬೇಕು. ಅದನ್ನು ನಾಶಪಡಿಸಿದ್ದಾರೆ. ಅದನ್ನು ನೀವು exempt ಮಾಡಿ ಎಂದು

ಕೇಳುತ್ತಿದ್ದೇನೆ. ಎಫ್.ಐ.ಆರ್. ಅನ್ನು exempt ಮಾಡಿದರೆ; ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ Fast Track Courts ಬಂದರೆ ಇದಕ್ಕೇನಾದರೂ contain ಮಾಡಬಹುದು. ಹಾಗಾಗಿ ಇದನ್ನು ಮಾನ್ಯ ಗೃಹ ಸಚಿವರಲ್ಲಿ ನಿವೇದನೆ ಮಾಡುತ್ತಿದ್ದೇನೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವೆಲ್ಲಾ ಚರ್ಚೆಗಳನ್ನು ನೋಡಿದಾಗ complaint ಬಗ್ಗೆ confusion ಇರುವುದಿಲ್ಲ. ಅದು ಆಗುವುದಕ್ಕೆ ಸಾಧ್ಯವೇ ಇಲ್ಲ. ಇದ್ದಲ್ಲಿಯೇ ತೆಗೆದುಕೊಳ್ಳುತ್ತಾರೆ. ಆದರೆ ನನ್ನ ಒಂದು ಸಲಹೆಯೇನೆಂದರೆ, ಸಾಮಾನ್ಯವಾಗಿ ದೂರುಗಳು ಬಂದಾಗ it should be treated as a Dying Declaration. Dying Declaration ತರಹ ಅದನ್ನು treat ಮಾಡುವ ಒಂದು ವ್ಯವಸ್ಥೆ ಆಗಬೇಕೆನ್ನುವುದು ನನ್ನ ಬೇಡಿಕೆ. ಏಕೆಂದರೆ ಆಸಿಡ್ ದಾಳಿಗೊಳಗಾದವರು it is as good as social death ಎನ್ನುವಂತಹ ಪರಿಸ್ಥಿತಿಗೆ ಬಂದಿರುತ್ತಾರೆ. Dying Declaration ಒಂದು sentence ಕೊಡುವಂತಹದ್ದು ಏನು gravity ಇರುತ್ತದೆ ಅದು ಇದಕ್ಕೆ ಬರುವಂತಾಗಲಿ ಎಂದು ಹೇಳುತ್ತಿದ್ದೇನೆ. On par with a Dying Declaration of a person; ಆ ತರಹ complaint treat ಆಗಬೇಕು ಎಂಬ ವಿಚಾರ ನನ್ನದು.

**ಡಾ: ಜಿ. ಪರಮೇಶ್ವರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪೂಜಾರ್‌ರವರು ಮತ್ತು ಶಿವಕುಮಾರ್‌ರವರು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಕೂಡ ಗಂಭೀರವಾಗಿ ಪರಿಗಣಿಸಿ ಅದಕ್ಕೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ. ಏಕೆಂದರೆ ಅವರು ಐ.ಡಿ. ಕಾರ್ಡ್ ಕೇಳುತ್ತಾರೆಂದು ಹೇಳಿದರು. ಅದನ್ನೆಲ್ಲಾ ಸರಳೀಕರಣ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಶಿವಕುಮಾರ್‌ರವರೇ, ಸರ್ಕಾರ ಅವರೆಲ್ಲರ ಪರವಾಗಿದೆ ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನೀವು ಒಳ್ಳೆಯ ವಿಷಯವನ್ನು ತಂದಿದ್ದೀರಿ ಇದರಿಂದ ನಾಡಿಗೆಲ್ಲಾ ಒಳ್ಳೆಯದಾಗುತ್ತದೆ. ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕೋರ್ಟನ್ನು ಪ್ರಾರಂಭ ಮಾಡುತ್ತಾರೆ. ಅದನ್ನು ತರುವ ಪ್ರಯತ್ನಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

## 11. ನಿಯಮ ೩೩೦ರ ಮೇರೆಗೆ ಚರ್ಚೆ

**ಆ) ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯ (ಮೈಸೂರು ಬ್ಯಾಂಕ್ ಬಳಿ) ಒಂದನೇ ತಿರುವಿನಲ್ಲಿರುವ ಆಸ್ಪತ್ರೆ ರಸ್ತೆಗೆ ಹೋಗುವ ದಾರಿಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಕಾನೂನು ಬಾಹಿರವಾಗಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆಗಳ ಕುರಿತು.**

– – – – –

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯ (ಮೈಸೂರು ಬ್ಯಾಂಕ್ ಬಳಿ) ಒಂದನೇ ತಿರುವಿನಲ್ಲಿರುವ ಆಸ್ಪತ್ರೆ ರಸ್ತೆಗೆ ಹೋಗುವ ದಾರಿಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಕಾನೂನು ಬಾಹಿರವಾಗಿ ವಾಹನ ನಿಲುಗಡೆ ಮಾಡುತ್ತಿದ್ದು ಇಲ್ಲಿನ ಖಾಸಗಿ ಬ್ಯಾಂಕ್‌ನ ಹಣ ತುಂಬುವ ಕಾರ್ಯಾಲಯ ಕಟ್ಟಡದಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಶೆಡ್ ನಿರ್ಮಾಣ ಮಾಡಿರುತ್ತಾರೆ. ಈ ಕಟ್ಟಡಕ್ಕೆ ಹೊಂದಿಕೊಂಡಿರುವಂತೆ ಪಾದಚಾರಿ ಮಾರ್ಗದಲ್ಲಿ ವಾಹನಗಳನ್ನು ನಿಲುಗಡೆ ಮಾಡಿರುತ್ತಾರೆ. ಈ ಕಟ್ಟಡಕ್ಕೆ ಹೊಂದಿಕೊಂಡಂತೆ ಇನ್ನೊಂದು ಕಾಮಗಾರಿ ನಡೆಯುತ್ತಿದ್ದು ಅಲ್ಲಿಯೂ ಸಹ;

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೇ, ಅಜೆಂಡಾದಲ್ಲಿರುವುದನ್ನು ಓದಬೇಕು.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಡಾ: ಜಿ. ಪರಮೇಶ್ವರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಿದೆ)**

ಮಾನ್ಯ ರಮೇಶ್‌ಬಾಬುರವರು ಬೆಂಗಳೂರಿನಲ್ಲಿ ಪ್ರತಿಷ್ಠಿತವಾದಂತಹ ಕೆಂಪೇಗೌಡ ರಸ್ತೆ ಬಗ್ಗೆ ಹೇಳಿದ್ದಾರೆ. ಆ ರಸ್ತೆಯನ್ನು ನಾವು ಚಿಕ್ಕವರಿದ್ದಾಗಿನಿಂದಲೂ ನೋಡುತ್ತಿದ್ದೇವೆ. ಅದು ಬಹಳ ಪ್ರತಿಷ್ಠಿತವಾದ ರಸ್ತೆಯಾಗಿದೆ. ಅಲ್ಲಿ ವಾಹನಗಳ ಓಡಾಟ ಮತ್ತು ಅಲ್ಲಿನ ಜನಸಂದಣಿ ಇವತ್ತಿಗೂ ಕೂಡ ಕಡಿಮೆಯಾಗಿಲ್ಲ. ಹೆಚ್ಚಾಗುತ್ತಲೇ ಇದೆ. ನಾವು ವಿದ್ಯಾರ್ಥಿಗಳಾಗಿದ್ದಾಗಿನಿಂದಲೂ ಕೂಡ ಅಲ್ಲಿ ಹಾಗೆ ನಡೆದುಕೊಂಡು ಬಂದಿದೆ. ಅಲ್ಲಿ ಇತ್ತೀಚಿಗೆ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಫುಟ್‌ಪಾತ್‌ನಲ್ಲಿ ಶೆಡ್‌ಗಳನ್ನು ಹಾಕಿಕೊಂಡು ವ್ಯಾಪಾರ ಮಾಡುವ ಪ್ರಕ್ರಿಯೆಗಳು ನಡೆಯುತ್ತಿವೆ ಎನ್ನುವಂಥದ್ದು. ಅದಕ್ಕೆ ಈಗಾಗಲೇ ಬೆಂಗಳೂರಿನ ಹೊಸ ಜಿ.ಬಿ.ಎ. ಪ್ರಾಧಿಕಾರದ ಗಮನಕ್ಕೂ ಕೂಡ ಇದನ್ನು ತಂದಿದ್ದೇವೆ. ಅದು ಗಾಂಧಿನಗರ ವಾರ್ಡ್‌ಗೆ ಬರುತ್ತದೆ. ಆ ವಾರ್ಡಿಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಈಗಾಗಲೇ ಸೂಚನೆಗಳನ್ನು ಕೊಟ್ಟಿದ್ದಾರೆ. ಏಕೆಂದರೆ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ಆ ವಾರ್ಡಿಗೆ ಸಂಬಂಧಪಟ್ಟವರು ಇರುತ್ತಾರೆ. ಅವರಿಗೂ ಕೂಡ ಈಗಾಗಲೇ ಸೂಚನೆ ಕೊಟ್ಟು ಅದನ್ನು ತೆರವುಗೊಳಿಸುವಂತಹ ಕೆಲಸ ನಡೆಯುತ್ತಿದೆ. ಈ ಮಧ್ಯೆ ಅಲ್ಲಿ ಪಾರ್ಕಿಂಗ್ ಮಾಡುವುದು, ವಾಹನಗಳನ್ನು ಅಲ್ಲಿಯೇ ನಿಲ್ಲಿಸಿ ಬೀಗ ಹಾಕಿಕೊಂಡು ಹೋಗುತ್ತಾರೆ. ಎಲ್ಲಿಗೋ ಹೋಗಿ ಸಾಯಂಕಾಲ ವಾಹನವನ್ನು ತೆಗೆದುಕೊಂಡು ಹೋಗುವುದಕ್ಕೆ ಬರುತ್ತಾರೆ. ಅಂತಹದ್ದೆಲ್ಲಾ ಈಗ ನಡೆಯುತ್ತಿದೆ. ಅದಕ್ಕೆ ನಾವು ಅಲ್ಲಿ ಒಬ್ಬರು ಎ.ಎಸ್.ಐ. ರನ್ನು ಶಾಶ್ವತವಾಗಿ deploy ಮಾಡಿ ಅಲ್ಲಿ ವಾಹನಗಳನ್ನು ನಿಲ್ಲಿಸದ ಹಾಗೆ ಒಂದು ವೇಳೆ ನಿಲ್ಲಿಸಿದರೆ ಆ ವಾಹನಗಳನ್ನು ಎತ್ತಿಕೊಂಡು ಹೋಗುವಂತಹ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೇವೆ. ಅದು ನಡೆಯುತ್ತಿದೆ. ಇನ್ನೂ ಕೂಡ ಅದರ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಂಡು ವಾಹನಗಳನ್ನು ನಿಲ್ಲಿಸುವುದಕ್ಕೆ ಮುಕ್ತ ವಾತಾವರನವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಸದನದಲ್ಲಿ Calling Attention Notice ನಲ್ಲಿ ಇದನ್ನು ಕೇಳಿದ ಮೇಲೆ ಮಾನ್ಯ ಗೃಹ ಸಚಿವರು ನಿರ್ದೇಶನ ಕೊಟ್ಟು ಕ್ರಮ ತೆಗೆದುಕೊಂಡಿದ್ದಾರೆ. ಸಮಸ್ಯೆ ಏನೆಂದರೆ, ಕೆಂಪೇಗೌಡ ಮುಖ್ಯರಸ್ತೆಯಲ್ಲಿ ಸಮಸ್ಯೆ ಇಲ್ಲ. ಮೊದಲನೇ ಕ್ರಾಸ್‌ನಲ್ಲಿ ಬಂದು ತಿರುಗಿಕೊಂಡಾಗ ಅಲ್ಲಿ ಹೆಚ್ಚಾಗಿ ಬ್ಯಾಂಕ್ ಇದೆ, ಹೆಚ್ಚು ಲಾಯರ್‌ಗಳಿದ್ದಾರೆ. ಸಮಸ್ಯೆಯಾಗುತ್ತಿರುವುದೇನೆಂದರೆ ಅಲ್ಲಿ ಎರಡು ಬಾರ್ ಇವೆ. ಒಂದು ಬಾರ್ & ರೆಸ್ಟೋರೆಂಟ್ ಮತ್ತು ಇನ್ನೊಂದು ವೈನ್ ಶಾಪ್ ಇದೆ. ಅದರ ಪಕ್ಕದಲ್ಲಿ ಕೋಟಕ್ ಬ್ಯಾಂಕ್‌ನ Chest ಅಂದರೆ ಹಣ ಸಾಗಾಣಿಕೆ ಮಾಡುವಂತಹ ಒಂದು ಕೇಂದ್ರ ಮಾಡಿಕೊಂಡಿದ್ದಾರೆ. ಅವರು ಒಂದು Stock Room ಮಾಡಿಕೊಂಡಿದ್ದಾರೆ. ಅವರು ಇಡೀ ಫುಟ್‌ಪಾತ್ ಅನ್ನು ಒತ್ತುವರಿ ಮಾಡಿದ್ದಾರೆ. ವೈನ್ ಶಾಪ್‌ನವರದ್ದು ಮತ್ತು ಇನ್ನೊಬ್ಬರ ಲಗ್ಗೇಜ್ ಗಾಡಿ ಈ ಮೂರು ಜನರಿಂದ ಇಡೀ ರಸ್ತೆ ಬ್ಲಾಕ್ ಆಗುತ್ತಿದೆ. ಹಾಗೂ ವಯಸ್ಸಾದ ಮಹಿಳೆಯರು ಓಡಾಡಬೇಕಾದರೆ ಗಂಡಸರು ರಸ್ತೆಯಲ್ಲಿಯೇ ನಿಂತುಕೊಂಡು ಯೂರಿನ್ ಪಾಸ್ ಮಾಡುವಂತಹ ಸಮಸ್ಯೆಗಳನ್ನು ಮಾಡುತ್ತಿದ್ದಾರೆ. ಹಾಗಾಗಿ ಮಾನ್ಯ ಗೃಹ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಅಲ್ಲಿ ಅವರು ಸದನ ಮುಗಿದ ಮೇಲೆ ಏನು ಮಾಡಬೇಕೆಂದು ನಮಗೆ ಗೊತ್ತಿದೆ ಎಂದು ಹೇಳುತ್ತಾರೆ. ಸದನದಲ್ಲಿ ಪ್ರಶ್ನೆ ಬಂದು ತಾವು

ಪೋಲೀಸರನ್ನು ಕಳುಹಿಸಿಕೊಟ್ಟು ಪೋಲೀಸರು ಬಂದು ಬಿಗಿ ಮಾಡಿದ ಮೇಲೆ ಅಲ್ಲಿ already settle ಆಗಿರುವವರು ಸದನ ಮುಗಿದ ಮೇಲೆ ಮತ್ತೆ ಪಾರ್ಕಿಂಗ್ ಮಾಡುವುದು ತಮಗೆ ಗೊತ್ತಿದೆ ಎಂದು ಮಾತನಾಡುತ್ತಿದ್ದಾರೆ. ಹಾಗಾಗಿ ನಾನು ಗೃಹ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಅಲ್ಲಿ ಪ್ರೈವೇಟ್ ಬ್ಯಾಂಕ್‌ನವರು 10–12 ಗಾಡಿಗಳನ್ನು ಫುಟ್‌ಪಾತ್ ಮೇಲೆ ಉದ್ದಕ್ಕೆ ನಿಲ್ಲಿಸಿಬಿಡುತ್ತಾರೆ. ಇದು ಬಹಳ ಸಮಸ್ಯೆಯಾಗುತ್ತಿದೆ. ಅವರಿಗೆ ಕಟ್ಟುನಿಟ್ಟಾಗಿ ನಿರ್ದೇಶನ ಕೊಟ್ಟು ತೊಂದರೆಯಾಗದಂತೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಡಾ: ಜಿ. ಪರಮೇಶ್ವರ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಏನು ಕ್ರಮ ತೆಗೆದುಕೊಂಡಿದ್ದೇವೆ ಅದನ್ನು ಹಾಗೆಯೇ ಮುಂದುವರೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಏಕೆಂದರೆ ಅವರು ಹೇಳಿದ ಹಾಗೆ ತಾತ್ಕಾಲಿಕವಾಗಿ ಸದನದಲ್ಲಿ ಪ್ರಶ್ನೆ ಬಂದಾಗ ಮಾತ್ರ ಮಾಡಿದ್ದಾರೆ ಮತ್ತೆ ಮುಂದೆ ಬಿಟ್ಟು ಬಿಡುತ್ತಾರೆ ಎಂದು ಅಂದುಕೊಂಡಿರಬಹುದು. ಅಲ್ಲಿ ಶಾಶ್ವತವಾಗಿ ಒಬ್ಬರು ಎ.ಎಸ್.ಐ. ಅವರನ್ನು ಹಾಕಿದ್ದೇವೆ. ಅದನ್ನು ಮುಂದುವರೆಸುತ್ತೇವೆ. ಅಲ್ಲಿ ಏನು ಬ್ಯಾಂಕ್‌ನಿಂದ ಹಣ ತೆಗೆದುಕೊಂಡು ಹೋಗುವುದಕ್ಕೆ ವಾಹನಗಳು ಬರುತ್ತವೆ ಅಂತಹ ಸಂದರ್ಭದಲ್ಲಿ ಅವರಿಗೆ ಒಂದು ಸಮಯವನ್ನು ನಿಗದಿಪಡಿಸುವುದು ಅಥವಾ regulate ಮಾಡುವುದು ಆ ರೀತಿಯ ಏನಾದರೂ ಕ್ರಮ ಮಾಡಬೇಕಾಗುತ್ತದೆ. ಅಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇನ್ನಿತರ ಬ್ಯಾಂಕ್‌ಗಳು ಇವೆ. ಅದಕ್ಕೆಲ್ಲಾ regulate ಮಾಡುವುದಕ್ಕೆ ಎಲ್ಲಾ ಕ್ರಮವನ್ನೂ ನಾವು ತೆಗೆದುಕೊಳ್ಳುತ್ತೇವೆ.

**ಇ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ ದಟ್ಟಣೆ, ಕಾನೂನು ಸುವ್ಯವಸ್ಥೆ ಮತ್ತು ಕ್ರಿಮಿನಲ್ ಪ್ರಕರಣಗಳ ಸಮಸ್ಯೆಗಳ ಪರಿಹಾರಕ್ಕಾಗಿ ಪೊಲೀಸ್ ಆಯುಕ್ತರ ಮತ್ತೊಂದು ಹುದ್ದೆ ಹಾಗೂ ಇನ್ನಿತರ ಪೂರಕ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಪೊಲೀಸ್ ಇಲಾಖೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸುವ ಕುರಿತು.**

– – – – –

**ಡಾ. ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ ದಟ್ಟಣೆ, ಕಾನೂನು ಸುವ್ಯವಸ್ಥೆ ಮತ್ತು ಕ್ರಿಮಿನಲ್ ಪ್ರಕರಣಗಳ ಸಮಸ್ಯೆಗಳ ಪರಿಹಾರಕ್ಕಾಗಿ ಪೊಲೀಸ್ ಆಯುಕ್ತರ ಮತ್ತೊಂದು ಹುದ್ದೆ ಹಾಗೂ ಇನ್ನಿತರ ಪೂರಕ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಪೊಲೀಸ್ ಇಲಾಖೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸುವ ಕುರಿತು ಮಾನ್ಯ ಗೃಹ ಸಚಿವರಿಗೆ ಪ್ರಸ್ತಾಪಿಸಬಯಸುತ್ತೇನೆ.

**ಡಾ: ಜಿ. ಪರಮೇಶ್ವರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಿದೆ)**

ಮಾನ್ಯ ಡಾ: ಗೋವಿಂದರಾಜುರವರು ಈ ಪ್ರಶ್ನೆಯನ್ನು ಹಿಂದಿನ ಸದನದಲ್ಲಿ ಕೂಡ ಕೇಳಿದ್ದರು. ಅವತ್ತು ಕೂಡ ನಾನು ಉತ್ತರ ಕೊಟ್ಟಿದ್ದೆ. ಅವರು ಪ್ರಶ್ನೆ ಕೇಳಿದ ಮೇಲೆ ನಾನು ಒಂದು ಸಮಿತಿಯನ್ನು ಮಾಡಿ ನಮ್ಮ ಡಿ.ಜಿ., ಅವರನ್ನು, ಕಮೀಷನರ್‌ರವರನ್ನು ಹಿರಿಯ ಅಧಿಕಾರಿಗಳ ಜೊತೆ ಸಭೆ ಮಾಡಿ; ಏಕೆಂದರೆ ಜಿ.ಬಿ.ಎ ಆದ ಮೇಲೆ ಈಗ 5 ಕಾರ್ಪೋರೇಷನ್‌ಗಳನ್ನು ಮಾಡಿದ್ದಾರೆ. ಐದು Commissionerate ಮಾಡಿದ್ದಾರೆ. ಆ ಪ್ರಕಾರ ಒಂದು ವೇಳೆ ಆಗಬಹುದು ಎಂದು ಈಗಾಗಲೇ ಚರ್ಚೆ ಮಾಡಿ ನನಗೆ ವರದಿಯನ್ನು ಕೊಡುವುದಕ್ಕೆ ನಮ್ಮ ಡಿ.ಜಿ.,ಯವರಿಗೆ ಹೇಳಿದ್ದೇನೆ. ಆ ವರದಿ ಬಂದ ಮೇಲೆ ಅವರು ಯಾವ ರೀತಿ ವರದಿಯನ್ನು ಕೊಡುತ್ತಾರೆ; ಏಕೆಂದರೆ ಇದು ಒಂದು experiment. ಜಿ.ಬಿ.ಎ.ನಲ್ಲಿ ಐದು Commissionerate ಆಗುವಂಥದ್ದು ಇದು ಒಂದು ರೀತಿಯಲ್ಲಿ ಒಂದು ದೊಡ್ಡ experiment. ಇದು ಯಶಸ್ವಿಯಾದರೆ ನಾವು ಎಲ್ಲವನ್ನೂ decentralize ಮಾಡಬಹುದು.

(ಮುಂದು)

(293) 10-03-2026 6-30 KH/RN (ಸಭಾಪತಿಯವರ ಉಪಸ್ಥಿತಿ)

**ಡಾ॥ ಪರಮೇಶ್ವರ (ಮುಂದು)**

ಒಂದು ರೀತಿಯಲ್ಲಿ ಇದು ದೊಡ್ಡ experiment. ಇದು ಯಶಸ್ವಿಯಾದರೆ, ನಾವು ಎಲ್ಲವನ್ನೂ ಕೂಡ decentralize ಮಾಡಿ ಮಾಡಬಹುದು. ಪೋಲೀಸ್ ಇಲಾಖೆಯಲ್ಲಿಯೂ ಕೂಡ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ಸ್ವಲ್ಪ ಸಮಯ ಬೇಕಾಗುತ್ತದೆ. ನಾನು ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**ಡಾ॥ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಇದನ್ನು ಮಾಡಿ ಎಂದು ಕೇಳುತ್ತಿಲ್ಲ. ಸದ್ಯಕ್ಕೆ ಎರಡನ್ನಾದರೂ ಮಾಡಿ ಎಂದು ಕೇಳುತ್ತಿದ್ದೇನೆ. East, West ಎಂದು 2 ಅನ್ನು ಮಾಡಲಿ.

**ಡಾ॥ ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಆ ರೀತಿ ಒಂದು, ಎರಡು, ಮೂರು ಎಂದು ಮಾಡುವುದಕ್ಕೆ ಆಗುವುದಿಲ್ಲ. ಒಂದು scientific ಆಗಿ ಏನಾದರೂ ಅಪ್ರೋಚ್ ಇರಬೇಕಾಗುತ್ತದೆ. ಜಿ.ಬಿ.ಎ., ಮಾಡಬೇಕಾದರೆ ಈಗಲೂ ಕೂಡ ಎಷ್ಟೊಂದು ಸಮಸ್ಯೆಗಳು ಬರುತ್ತವೆ. ನಿನ್ನೆ ಮತ್ತು ಮೊನ್ನೆಯ ದಿವಸ ವಾರ್ಡ್‌ಗಳ reservation announce ಮಾಡಿದ್ದಾರೆ. ಇದರಲ್ಲಿ ಬಹಳಷ್ಟು ಗೊಂದಲ ಆಗಿದೆ. ಅದಕ್ಕೆ ನಾನು ಇದೊಂದು experiment ಇದ್ದ ಹಾಗೆ ಎಂದು ಹೇಳಿದೆ. ಈಗ ದೆಹಲಿಯಲ್ಲಿ ಮಾಡಿದರು, ವಾಪಸ್ಸು ಹೋದರು. ಈಗ ಬಾಂಬೆಯಲ್ಲಿ ಮಾಡಿದ್ದಾರೆ. ಈಗ ಅಲ್ಲಿಯೂ ಕೂಡ ಪ್ರಶ್ನೆಗಳು ಉದ್ಭವವಾಗಿದೆ. ಈ ರೀತಿ ಕಾರ್ಪೋರೇಷನ್ ಅನ್ನು ಡಿವೈಡ್ ಮಾಡಿರುವಂತಹದ್ದು ಇದೆ. ಎಲ್ಲೋ ಮಾಡಿದ್ದಾರೆ, ಈಗ ಲಂಡನ್‌ನಲ್ಲಿ ಮಾಡಿದ್ದಾರೆ ಎಂದರೆ,

ನಮಗೆ suit ಆಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ, ಆದಾದ ನಂತರ ನಾವು ನೋಡಿಕೊಂಡು ಮಾಡುತ್ತೇವೆ.

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 6 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 11ನೇ ಮಾರ್ಚ್ ಮಾಹೆ 2026ರ ಬುಧವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**